ವಿಶ್ವವಾಣಿ
ವಿಶ್ವಾಸವೇ ವಿಶ್ವ

ನ್ಯಾಯಾಲಯಕ್ಕೆ ಹಾಜರಾದ ನಟಿ ರಮ್ಯಾ

2023ರಲ್ಲಿ ಬಿಡುಗಡೆ ಆಗಿದ್ದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ತನ್ನ ಅನುಮತಿ ಇಲ್ಲದೆ ತಮ್ಮ ದೃಶ್ಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ಸಿನಿಮಾದ ನಿರ್ಮಾಪಕರು, ನಿರ್ದೇಶಕರ ವಿರುದ್ಧದ ದೂರಿನ ವಿಚಾರಣೆಗೆ ನಟಿ ರಮ್ಯಾ ಮಂಗಳವಾರ ವಾಣಿಜ್ಯ ಸಂಕೀರ್ಣ ನ್ಯಾಯಾಲಯಕ್ಕೆ ಹಾಜರಾಗಿ, ಕೆಲವು ದಾಖಲೆಗಳನ್ನು ನೀಡಿದ್ದಾರೆ.

ಪುಟ ತೆರೆದಂತೆ...

ಆ ದೆವ್ವ ಗೊತ್ತಿಲ್ಲ! ಈ ದೆವ್ವ ಇರುವುದಂತೂ ನಿಜ!!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ದೊಡ್ಡವರಾದ ಮೇಲೆ ಸಣ್ಣವರಾಗ ಬಾರದು !

ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ಈ ಹಿಂದೆ ರಾಯಣ್ಣ ಬ್ರಿಗೇಡ್ ಕಟ್ಟಿದಾಗ ದೊಡ್ಡವರ ಮಾತು ಕೇಳುವ ಅಭ್ಯಾಸ ನನಗೆ ಇತ್ತು, ಇವತ್ತು ಇಲ್ಲ. ಅಂದು ದೊಡ್ಡವರ ಮಾತು ಕೇಳಿ ರಾಯಣ್ಣ ಬ್ರಿಗೇಡ್ ನಿಲ್ಲಿಸಿದ್ದೆ. ಇಂದು ಯಾವುದೇ ಕಾರಣಕ್ಕೂ ಈ ಬ್ರಿಗೇಡ್ ನಿಲ್ಲುವುದಿಲ್ಲ.

ಕೆ.ಎಸ್.ಈಶ್ವರಪ್ಪ
ಮಾಜಿ ಸಚಿವ

ದಾರಿದೀಪೋಕ್ತಿ

ಸೂರ್ಯ ಸಾಯಂಕಾಲ ಮುಳುಗಿದಾಗ ಶಾಂತಿ ಮತ್ತು ಸಾರ್ಥಕತೆಯನ್ನು ನೀಡುತ್ತಾನೆ. ಬೆಳಗ್ಗೆ ಮೂಡಿದಾಗ ಹೊಸ ಅವಕಾಶ ಮತ್ತು ಭರವಸೆಯನ್ನು ಅರಳಿಸುತ್ತಾನೆ. ನಾವು ಏನೇ ಮಾಡಿದರೂ ಅದರಿಂದ ಬೇರೆಯವರಿಗೆ ಒಳ್ಳೆಯದಾಗಬೇಕು. ಆ ರೀತಿ ನಮ್ಮ ನಡತೆ ಇರುವಂತೆ ವರ್ತಿಸಬೇಕು.

ವಕ್ರತುಂಡೋಕ್ತಿ

ಹೆಂಡತಿಯೊಂದಿಗೆ ಆಗಾಗ ರೆಸ್ಟೋರೆಂಟಿಗೆ ಹೋಗಬೇಕು. ಕಾರಣ, ಸದಾ ಮನೆಯಲ್ಲೊಂದೇ ಜಗಳವಾಡಬಾರದು.

ಸಚಿವ ಪರಮೇಶ್ವರ ಔತಣಕೂಟ ಏರ್ಪಡಿಸಿದ್ದಕ್ಕೆ ವರಿಷ್ಠರ ಬಳಿ ಡಿಕೆ ದೂರು
ಹೈಕಮಾಂಡ್ ಸೂಚನೆ ಬೆನ್ನಲ್ಲೇ ದಲಿತ ಶಾಸಕ, ಸಚಿವರ ಔತಣಕೂಟ ರದ್ದು

ಔತಣಕೂಟಕ್ಕೆ ಹೈ ಬ್ರೇಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ 'ಡಿನ್ನರ್ ಪಾಲಿಟಿಕ್ಸ್'ಗೆ ಮತ್ತೊಮ್ಮೆ ಹೈಕಮಾಂಡ್ ಎಂಟ್ರಿಯಾಗಿದೆ. ಈ ಮೂಲಕ ಬುಧವಾರ ಗೃಹ ಸಚಿವ ಪರಮೇಶ್ವರ ಅವರು ಕರೆದಿದ್ದ ದಲಿತ ಶಾಸಕ, ಸಚಿವರ ಔತಣಕೂಟ ತಾತ್ಕಾಲಿಕವಾಗಿ ಮುಂದೂಡಿಕೆಯಾಗಿದೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ವರ್ಷಾರಂಭದ ದಿನವೇ ನಡೆಸಿದ ಡಿನ್ನರ್ ಪಾಲಿಟಿಕ್ಸ್ ವಿವಾದಕ್ಕೆ ಕಾರಣವಾಗಿತ್ತು. ಸತೀಶ್ ಜಾರಕಿಹೊಳಿ ಸಭೆಗೆ ಠಕ್ಕರ್ ಕೊಡಲು ಒಕ್ಕಲಿಗ ಸಚಿವ, ಶಾಸಕರು ಪ್ರತ್ಯೇಕ ಸಭೆ ನಡೆಸಿದ್ದರು. ಈ ಎರಡು ಪಾರ್ಟಿ ಮರೆಯುವ ಮೊದಲೇ, ಬುಧವಾರ ರಾತ್ರಿ ಖಾಸಗಿ ಹೋಟೆಲ್‌ನಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಔತಣಕೂಟಕ್ಕೆ ಆಮಂತ್ರಣ ನೀಡಿದ್ದರು. ಮೇಲ್ನೋಟಕ್ಕೆ ಇದು ದಲಿತ ಶಾಸಕ, ಸಚಿವರ ಸಭೆ ಎನಿಸಿದ್ದರೂ, ಡಿ.ಕೆ.ಶಿವಕುಮಾರ್ ವಿರುದ್ಧ ಸಭೆ ಎಂದು ರಾಜಕೀಯ ಮೊಗಸಾಲೆಯಲ್ಲಿ ಕೇಳಿಬಂದಿತ್ತು.

ಇದರ ಬೆನ್ನಲ್ಲೆ ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿಯಾದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಡಲೇ ಈ ರೀತಿಯ ಔತಣಕೂಟಗಳಿಗೆ ಬ್ರೇಕ್ ಹಾಕುವಂತೆ ಮನವಿ ಮಾಡಿದರು. ಇದರ ಬೆನ್ನಲ್ಲೇ ಡಾ.ಜಿ.ಪರಮೇಶ್ವರ ಅವರಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕರೆ ಮಾಡಿ, ಆಯೋಜಿಸಿರುವ ಪಾರ್ಟಿಯನ್ನು ರದ್ದುಗೊಳಿಸುವಂತೆ ಸೂಚನೆ ನೀಡಿದ್ದರು. ಕೂಡಲೇ ಪಾರ್ಟಿಯನ್ನು ತಾತ್ಕಾಲಿಕವಾಗಿ ರದ್ದುಪಡಿಸಿರುವುದಾಗಿ ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ. ಆದರೆ ಔತಣಕೂಟ ರದ್ದಾದರೂ, ಪಕ್ಷದೊಳಗೆ ಸದ್ಯ 'ಬೂದಿ ಮುಚ್ಚಿದ ಕೆಂಡದ' ಪರಿಸ್ಥಿತಿಯಿರುವುದು ಸ್ಪಷ್ಟವಾಗಿದೆ.

ಡಿನ್ನರ್ ಪಾರ್ಟಿಗಳಿಗೆ ಕಡಿವಾಣ ಹಾಕಬೇಕು: ಸತೀಶ್ ಜಾರಕಿಹೊಳಿ ಮನೆಯಲ್ಲಿ ನಡೆದ ಔತಣಕೂಟದ ಬೆನ್ನಲ್ಲೇ ಗೃಹ ಸಚಿವ ಪರಮೇಶ್ವರ ಅವರಿಂದಲೂ ಸಭೆ ನಡೆಸಲು ತಯಾರಿ ನಡೆಸಿಕೊಂಡ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಹೈಕಮಾಂಡ್‌ಗೆ ದೂರು ನೀಡಿದ್ದಾರೆ.

→ 8

ನಾನು ಹೊರದೇಶದಲ್ಲಿದ್ದ ಕಾರಣ ಔತಣಕೂಟದ ಬಗ್ಗೆ ಮಾಹಿತಿಯಿಲ್ಲ. ಬೆಂಗಳೂರಿಗೆ ಹೋದ ನಂತರ ಇದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ. ಪಕ್ಷದ ಕೆಲಸವಿದ್ದ ಕಾರಣ ಹಾಗೂ ದೆಹಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರದಂದು ಕರ್ನಾಟಕದ ಗೃಹಲಕ್ಷ್ಮೀ ಯೋಜನೆ ಮಾದರಿಯ ಪ್ಯಾರಿ ದೀದಿ ಯೋಜನೆ ಪ್ರಕಟಣೆಗಾಗಿ ಬಂದಿದ್ದೆ.
– **ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

ಪರಿಶಿಷ್ಟ ಜಾತಿ, ಪಂಗಡದ ಶಾಸಕ, ಸಚಿವರನ್ನು ಸಭೆಗೆ ಆಮಂತ್ರಿಸಿದ್ದೆ. ಆದರೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೂಚನೆ ಹಿನ್ನೆಲೆಯಲ್ಲಿ ಸಭೆಯನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಪರಿಶಿಷ್ಟ ಜಾತಿ ಪಂಗಡದ ಸಮಾವೇಶ ಮಾಡಬೇಕು ಎಂದುಕೊಂಡಿದ್ದೇವೆ. ಆ ಕಾರಣಕ್ಕೆ ಈ ಔತಣಕೂಟವನ್ನು ಆಯೋಜಿಸಲಾಗಿತ್ತು. ಇದಕ್ಕೆ ವಿಶೇಷ ಅರ್ಥ ಬೇಕಿಲ್ಲ.
– **ಡಾ.ಜಿ.ಪರಮೇಶ್ವರ** ಗೃಹ ಸಚಿವ

ಔತಣಕೂಟದಲ್ಲಿ ಏನು ಚರ್ಚೆಯಾಗುವುದಿತ್ತು?

- ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾದರೆ ಯಾರಿಗೂ ಸಮಸ್ಯೆಯಿಲ್ಲ, ಬದಲಾವಣೆಯಾದರೆ ಹಲವರ ಹೆಸರು ಮುನ್ನಲೆಗೆ
- ಸತೀಶ್ ಜಾರಕಿಹೊಳಿ ಹೆಸರನ್ನು ತೇಲಿಬಿಡುತ್ತಿರುವ ಸಿದ್ದರಾಮಯ್ಯ ಆಪ್ತರು
- ಸಿದ್ದು ಹೊರತಾಗಿ ಯಾರೇ ಸಿಎಂ ಆದರೂ ಅದಕ್ಕೆ ಪರಮೇಶ್ವರ ಅವರಿಂದ ಆಕ್ಷೇಪ ನಿಶ್ಚಿತ
- ಈ ಕಾರಣಕ್ಕಾಗಿಯೇ ಪರಮೇಶ್ವರ ದಲಿತ ಶಾಸಕರು, ಸಚಿವರನ್ನು ವಿಶ್ವಾಸಕ್ಕೆ ಪಡೆಯಲು ಡಿನ್ನರ್ ಪಾರ್ಟಿ
- ಡಿ.ಕೆ.ಶಿವಕುಮಾರ್ ಅವರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಿಂಪಡೆಯಲು ಒಗ್ಗಟ್ಟು ಪ್ರದರ್ಶನ

ಸತೀಶ್ ದೆಹಲಿ ಪರೇಡ್

ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಕೆಲವರು ಮುಂದಿನ ವಾರ ದೆಹಲಿಗೆ ತೆರಳಲು ಸಜ್ಜಾಗಿದ್ದಾರೆ. ಈ ಹಿಂದೆ ಬುಧವಾರ ಸಭೆ ಮುಗಿಸಿಕೊಂಡ ಬಳಿಕ ದೆಹಲಿಗೆ ತೆರಳುವುದು ನಾಯಕರ ಲೆಕ್ಕಾಚಾರವಾಗಿತ್ತು. ಆದರೀಗ ಸಭೆ ರದ್ದಾಗಿರುವುದರಿಂದ, ಆಪ್ತರ ಜತೆ ಚರ್ಚಿಸಿ ದೆಹಲಿಗೆ ತೆರಳಲಿದ್ದಾರೆ. ಸತೀಶ್ ಜಾರಕಿಹೊಳಿ ಅವರೊಂದಿಗೆ ಸಚಿವ ಮಹದೇವಪ್ಪ ಸೇರಿದಂತೆ ಹಲವು ನಾಯಕರು ದೆಹಲಿಗೆ ತೆರಳುವ ಸಾಧ್ಯತೆಯಿದೆ. ಪ್ರಮುಖವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಳಿ ಉಪಮುಖ್ಯಮಂತ್ರಿ ಹುದ್ದೆಯೊಂದಿಗೆ ಜಲಸಂಪನ್ಮೂಲ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಗಳಿವೆ. ಒಬ್ಬರಿಗೆ ಒಂದೇ ಹುದ್ದೆ ಎನ್ನುವುದು ಪಕ್ಷದ ನೀತಿ. ಹೀಗಾಗಿ, ಈ ವಿಷಯವೂ ಸೇರಿದಂತೆ ಹಲವು ವಿಚಾರಗಳ ಕುರಿತು ವರಿಷ್ಠರಿಗೆ ತಮ್ಮ ನಿಲುವು ವ್ಯಕ್ತಪಡಿಸಲು ಸಚಿವರು ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ.

7.1 ತೀವ್ರತೆಯ ಭೂಕಂಪ, ಉತ್ತರ ಭಾರತದಲ್ಲೂ ಕಂಪನ
100ಕ್ಕೂ ಹೆಚ್ಚು ಮಂದಿಗೆ ಗಾಯ, ಧರೆಗುಳಿದ ಕಟ್ಟಡಗಳು

ಟಿಬೆಟ್‌ನಲ್ಲಿ ಭೂಕಂಪನ 126 ಮಂದಿ ದುರ್ಮರಣ

ಲಾಸಾ: ನೇಪಾಳ– ಟಿಬೆಟ್ ಗಡಿಯಲ್ಲಿ ಮಂಗಳವಾರ 6.8 ರಷ್ಟು ತೀವ್ರತೆಯ ಭೂಕಂಪನ ಸಂಭವಿಸಿದ್ದು, ಕನಿಷ್ಠ 126ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ. ಕಂಪನದ ತೀವ್ರತೆಗೆ ಮನೆ, ಕಟ್ಟಡಗಳು ಧರಾಶಾಯಿಯಾಗಿದ್ದು, 100ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

- ಮೂರು ಬಾರಿ ಕಂಪಿಸಿದ ಭೂಮಿ. ಓಡಿದ ಜನರು
- ಎದೆ ಝುಲ್ಲೆನಿಸುವ ಕಟ್ಟಡಗಳು ಕುಸಿಯುವ ದೃಶ್ಯಗಳು
- 2015ರ ನಂತರ ಮಗದೊಂದು ಭೂಕಂಪನಕ್ಕೆ ನೇಪಾಳ ಸಾಕ್ಷಿ
- ಉತ್ತರ ಭಾರತದ ಹಲವು ರಾಜ್ಯಗಳಲ್ಲೂ ಕಂಪನ, ಯಾವುದೇ ಹಾನಿ ಇಲ್ಲ

ರಾಷ್ಟ್ರೀಯ ಭೂಕಂಪ ಶಾಸ್ತ್ರ ಕೇಂದ್ರದ ಪ್ರಕಾರ, ಬೆಳಗ್ಗೆ 6.35ಕ್ಕೆ ಮೊದಲ ಬಾರಿಗೆ ಭೂಮಿ ಕಂಪಿಸಿದೆ. 4.7 ತೀವ್ರತೆಯ ಎರಡನೇ ಕಂಪನ 7:02ಕ್ಕೆ 10 ಕಿಲೋ ಮೀಟರ್ ಆಳದಲ್ಲಿ ನಡೆದಿದ್ದರೆ, 4.9 ತೀವ್ರತೆಯ ಮೂರನೇ ಕಂಪನ 7:07ಕ್ಕೆ 30 ಕಿಲೋ ಮೀಟರ್ ಆಳದಲ್ಲಿ ನಡೆದಿದೆ.

ಚೀನಾ ಸ್ವಾಯತ್ತ ಟಿಬೆಟ್‌ನ ಕ್ಸಿಗಾಜ್ ನಗರದ ಡಿಂಗ್ರಿ ಕೌಂಟಿ ಭೂಕಂಪದ ಕೇಂದ್ರಬಿಂದುವಾಗಿದೆ. ಭೂಕಂಪದ ಕೇಂದ್ರವನ್ನು 28.5 ಡಿಗ್ರಿ ಉತ್ತರ ಅಕ್ಷಾಂಶ ಮತ್ತು 87.45 ಡಿಗ್ರಿ ಪೂರ್ವ ರೇಖಾಂಶ ದಲ್ಲಿ ಗುರುತಿಸಲಾಗಿದೆ. ಕಠ್ಮಂಡುವಿನಲ್ಲಿ ಬೆಳಗ್ಗೆ 6.50ರ ಹೊತ್ತಿಗೆ 7.01 ರಷ್ಟು ತೀವ್ರತೆಯ ಭೂಕಂಪವಾಗಿತ್ತು.

ಭಾರತ, ಭೂತಾನ್, ಬಾಂಗ್ಲಾದೇಶದಲ್ಲೂ ಕಂಪನ: ಭೂಕಂಪದ ತೀವ್ರತೆಗೆ ಭೂತಾನ್, ಬಾಂಗ್ಲಾದೇಶ ಹಾಗೂ ಭಾರತದ ಕೆಲ ರಾಜ್ಯಗ ಳಲ್ಲೂ ಭೂ ಕಂಪಿಸಿದ ಅನುಭವವಾಗಿದೆ. ದೆಹಲಿಯ ಎನ್‌ಸಿಆರ್ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳದಲ್ಲೂ ಭೂಕಂಪನದ ಅನುಭವ ಆಗಿದೆ.

ಟಿಬೆಟ್–ನೇಪಾಳ ಗಡಿಯಲ್ಲಿ ಸಂಭವಿಸಿದ ಭೂಕಂಪನದಿಂದಾಗಿ ಟಿಬೆಟ್‌ನಲ್ಲಿ ಕಟ್ಟಡಗಳು ನೆಲಕ್ಕುರುಳಿರುವುದು.

ಬಿಹಾರ ವಿಪತ್ತು ನಿರ್ವಹಣಾ ವಿಭಾಗದ ಪ್ರಕಾರ ಪಟ್ನಾ, ಮಧುಬನಿ, ದರ್ಭಾಂಗಾ, ಸಮಸ್ತಿಪುರ, ಮುಜಾಫರಪುರ ಸೇರಿ ಭಾರತ –ನೇಪಾಳ ಗಡಿಗೆ ಹತ್ತಿರವಿರುವ ಹಲವು ಜಿಲ್ಲೆಗಳಲ್ಲಿ ಭೂಮಿ ಕಂಪಿಸಿದೆ. ಭೂಕಂಪದಿಂದ ಭಯಗೊಂಡ ಜನರು ಮನೆಯಿಂದ ಹೊರ ಓಡಿದ್ದಾರೆ. ಬಿಹಾರ ಮಾತ್ರವಲ್ಲದೆ ಅಸ್ಸಾಂ, ಪಶ್ಚಿಮ ಬಂಗಾಳದ ಕೆಲ ಜಿಲ್ಲೆಗಳಲ್ಲೂ ಭೂಮಿ ಕಂಪಿಸಿದೆ. ಭಾರತದ ರಾಜ್ಯಗಳಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

ಜಾಲತಾಣದಲ್ಲಿ ಹರಿದಾಡಿದ ವಿಡಿಯೊ: ಭೂಕಂಪನದ ವಿಡಿಯೋಗಳನ್ನು ಜನರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಮನೆ, ಕಟ್ಟಡಗಳು ಕುಸಿಯುವ ದೃಶ್ಯಗಳು ಎದೆ ಝುಲ್ಲೆನಿಸುತ್ತಿವೆ. ನೇಪಾಳದ ಕಠ್ಮಂಡು ಹಾಗೂ ಸುತ್ತಮುತ್ತಲಿನ ಪ್ರದೇಶದ ಜಿಲ್ಲೆಗಳಲ್ಲಿ ಭೂಮಿ ದೊಡ್ಡ ಮಟ್ಟಕ್ಕೆ ಕಂಪಿಸಿದ್ದು, ಈ ಭಾಗದ ಜನರು ತಮ್ಮ ಮನೆಗಳಿಂದ ಹೊರಗೆ ಓಡಿಹೋಗುತ್ತಿರುವ ಫೋಟೋ ಹಾಗೂ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಆಗಾಗ ಭೂಕಂಪನ ಸಂಭವಿಸುವ ಪ್ರದೇಶ

ನೇಪಾಳವು ಭೌಗೋಳಿಕವಾಗಿ ಸಕ್ರಿಯವಾಗಿರುವ ಪ್ರದೇಶದಲ್ಲಿದೆ. ಇಲ್ಲಿ ಭಾರತೀಯ ಮತ್ತು ಯುರೇಷಿಯನ್ ಟೆಕ್ಟೋನಿಕ್ ಪ್ಲೇಟ್‌ಗಳು ಘರ್ಷಣೆಯಾಗಿ ಹಿಮಾಲಯ ಪರ್ವತ ರೂಪುಗೊಂಡಿದೆ. ಇಲ್ಲಿ ಆಗಾಗ ಭೂಕಂಪಗಳು ಸಂಭವಿಸುತ್ತಲೇ ಇರುತ್ತವೆ. ಈ ಹಿಂದೆ 2015ರಲ್ಲಿ ನೇಪಾಳದಲ್ಲಿ 7.8 ತೀವ್ರತೆಯ ಅತ್ಯಂತ ಭೀಕರ ಭೂಕಂಪ ಸಂಭವಿಸಿತ್ತು. ಈ ವೇಳೆ 9,000 ಜನರು ಸಾವನ್ನಪ್ಪಿದ್ದಲ್ಲದೆ 22,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಇದರಲ್ಲಿ 5 ಲಕ್ಷಕ್ಕೂ ಹೆಚ್ಚು ಜನರು ಮನೆ-ಮಠ ಕಳೆದುಕೊಂಡಿದ್ದರು. ಇದೀಗ ಮಗದೊಂದು ಕಂಪನಕ್ಕೆ ನೇಪಾಳ ಸಾಕ್ಷಿಯಾಗಿದೆ.

ಬಿಬಿಎಂಪಿ ಸಿಇಇ ಮೇಲೆ ಇಡಿ ದಾಳಿ

ಬೆಂಗಳೂರು: ಬಿಬಿಎಂಪಿ ಪ್ರಧಾನ ಅಭಿಯಂತರ ಪ್ರಹ್ಲಾದ್ ರಾವ್ ಕಚೇರಿ ಮೇಲೆ ಜಾರಿ ನಿರ್ದೇಶನಾಲಯ(ಇ.ಡಿ) ದಾಳಿ ನಡೆಸಿದೆ. ಮಂಗಳವಾರ ಬೆಳಗ್ಗೆ 11 ಗಂಟೆಗೆ ಏಳು ಅಧಿಕಾರಿಗಳ ತಂಡವು ಪ್ರಹ್ಲಾದ್ ರಾವ್ ಕಚೇರಿ ಮೇಲೆ ದಾಳಿ ಮಾಡಿದ್ದು, ಬಿಬಿಎಂಪಿ ವತಿಯಿಂದ 2016ರಲ್ಲಿ ನಡೆದ 9 ಸಾವಿರ ಕೋಟಿ ಬೋರ್‌ವೆಲ್ ಹಗರಣಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕಾಮಗಾರಿ ವೇಳೆ ಫೀಲ್ಡ್‌ನಲ್ಲಿ ಕೆಲಸ ಮಾಡಿದ್ದ ಎಂಜಿನಿಯರ್ ಹಾಗೂ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳನ್ನೂ ವಿಚಾರಣೆ ಮಾಡಲಾಗಿದೆ.

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ದಂಪತಿ ಮಂಗಳವಾರ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಇದ್ದರು.

6 ನಕ್ಸಲರು ಇಂದು ಮುಖ್ಯವಾಹಿನಿಗೆ

ಚಿಕ್ಕಮಗಳೂರು: ಆರು ನಕ್ಸಲರು ಮುಖ್ಯವಾಹಿನಿಗೆ ಬರುವ ದಿನಾಂಕ ಬಹುತೇಕ ಅಂತಿಮ ವಾಗಿದ್ದು, ಬುಧವಾರ ಈ ಪ್ರಕ್ರಿಯೆಗಳು ನಡೆಯುವ ಸಾಧ್ಯತೆ ಇದೆ. ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ಕೆ.ವಸಂತ, ಟಿ.ಎನ್.ಜೀಶ್ ಮುಖ್ಯವಾಹಿನಿಗೆ ಬರಲು ಒಪ್ಪಿದ್ದು, ಸರಕಾರ ಕೂಡ ಸಮ್ಮತಿ ಸೂಚಿಸಿದೆ. ಬೇಕಿರುವ ತಯಾರಿ ಗಳನ್ನು ಪೊಲೀಸ್ ಇಲಾಖೆ ಮಾಡಿಕೊಂಡಿದೆ. ಈ ತಂಡದಿಂದ ಬೇರ್ಪಟ್ಟಿರುವ ಜಾನ್ ಅಲಿಯಾಸ್ ಜಯಣ್ಣ ಮಾತ್ರ ಸಂಪರ್ಕಕ್ಕೆ ಸಿಕ್ಕಿಲ್ಲ ಎನ್ನಲಾಗಿದೆ. ಅವರೂ ಮುಖ್ಯವಾಹಿನಿಗೆ ಬಂದರೆ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ನಕ್ಸಲ್ ಮುಕ್ತವಾಗಲಿವೆ ಎನ್ನಲಾಗಿದೆ.

ಒಂಬತ್ತು ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ಜೀವಾವಧಿ

ಕಣ್ಣೂರು: ಕೇರಳದಲ್ಲಿ 19 ವರ್ಷಗಳ ಹಿಂದೆ ನಡೆದಿದ್ದ ಸಿಪಿಐ (ಎಂ) ಕಾರ್ಯಕರ್ತನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂಬತ್ತು ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ತಲಶ್ಶೇರಿ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಮಂಗಳವಾರ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

2005ರ ಅಕ್ಟೋಬರ್ 3ರಂದು ಕಣ್ಣಪುರಂ ಚುಂಡಾದ 25 ವರ್ಷದ ಸಿಪಿಐ(ಎಂ) ಕಾರ್ಯಕರ್ತ ರಿಜಿತ್ ಶಂಕರನ್ ಅವರ ಮೇಲೆ ಆರ್‌ಎಸ್‌ಎಸ್ ಕಾರ್ಯಕರ್ತರು ದಾಳಿ ನಡೆಸಿ ಹತ್ಯೆ ಮಾಡಿದ್ದರು.

ಪ್ರಕರಣದಲ್ಲಿ ಒಟ್ಟು 10 ಮಂದಿ ಆರೋಪಿಗಳಿದ್ದು, ಅವರಲ್ಲಿ ಒಬ್ಬರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಉಳಿದ ಒಂಬತ್ತರಲ್ಲಿ ಸುಧಾಕರನ್ (57), ಜಯೇಶ್ (41), ರಂಜಿತ್ (44), ಅಜೀಂದ್ರನ್ (51), ಅನಿಲ್‌ಕುಮಾರ್ (52), ರಾಜೇಶ್ (46), ಶ್ರೀಕಾಂತ್ (47), ಅವರ ಸಹೋದರ ಶ್ರೀಜಿತ್ (43), ಮತ್ತು ಭಾಸ್ಕರನ್ (67) ಅವರನ್ನು ಅಪರಾಧಿಗಳೆಂದು ನ್ಯಾಯಾಲಯ ಘೋಷಿಸಿದೆ.

ಐಶ್ವರ್ಯ ಕಾರು ವಿನಯ್ ಬಳಕೆ

ಬೆಂಗಳೂರು: ಡಿ.ಕೆ.ಸುರೇಶ್ ಅವರ ಸಹೋದರಿ ಎಂದು ಹೇಳಿಕೊಂಡು ಹಲವು ವಂಚನೆ ನಡೆಸಿರುವ ಐಶ್ವರ್ಯ ಗೌಡ ಹೆಸರಿನಲ್ಲಿ ನೋಂದಣಿಯಾಗಿರುವ ಐಷಾರಾಮಿ ಬೆನ್ಜ್ ಕಾರನ್ನು ಶಾಸಕ ವಿನಯ್ ಕುಲಕರ್ಣಿ ಬಳಕೆ ಮಾಡಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದ್ದು, ವಿನಯ್ ಕುಲಕರ್ಣಿಗೆ ನೋಟಿಸ್ ನೀಡಿ ಪೊಲೀಸರು ವಿಚಾರಣೆ ನಡೆಸುವ ಸಾಧ್ಯತೆಯಿದೆ.

ಐಶ್ವರ್ಯ ಗೌಡ ಕಾರು ಚಾಲಕ ಅಶ್ವಥ್ ಗೌಡ ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ 5ನೇ ಆರೋಪಿಯಾಗಿದ್ದಾನೆ. ವಿನಯ್ ಕುಲಕರ್ಣಿಯ ಆಪ್ತನಾಗಿದ್ದ ಅಶ್ವಥ್ ಗೌಡ ಐಶ್ವರ್ಯ ಕಾರಿಗೆ ಚಾಲಕನಾಗಿದ್ದು ಹೇಗೆ ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ಈ ಸಂಬಂಧ ಕುಲಕರ್ಣಿ ಅವರನ್ನು ವಿಚಾರಣೆಗೆ ಒಳಪಡಿಸುವ ಸಾಧ್ಯತೆಯಿದೆ.

ಎಚ್‌ಎಂಪಿವಿ ಸೋಂಕು: ನಿಗಾ ವಹಿಸುವಂತೆ ಕೇಂದ್ರ ಸೂಚನೆ

ದೆಹಲಿ: ದೇಶದಲ್ಲಿ ಹ್ಯೂಮನ್ ಮೆಟಾನ್ಯುಮೋ ವೈರಾಣು (ಎಚ್‌ಎಂಪಿವಿ) ಸೋಂಕಿನ ಪ್ರಕರಣ ಗಳು ಪತ್ತೆಯಾಗಿರುವ ಬೆನ್ನಲ್ಲೇ ಸೋಂಕಿಗೆ ಸಂಬಂಧಿಸಿ ನಿಗಾ ವಹಿಸುವಂತೆ ರಾಜ್ಯಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ನಿರ್ದೇಶನ ನೀಡಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ಪುಣ್ಯ ಸಲೀಲ ಶ್ರೀವಾಸ್ತವ ಅಧ್ಯಕ್ಷತೆಯಲ್ಲಿ ನಡೆದ ವರ್ಚುವಲ್ ಸಭೆಯಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಉಸಿರಾಟ ಸಂಬಂಧಿತ ಕಾಯಿಲೆಗಳು ಮತ್ತು ಎಚ್‌ಎಂಪಿವಿ ಪ್ರಕರಣಗಳ ನಿರ್ವಹಣೆಗಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಸಭೆಯಲ್ಲಿ ಆರೋಗ್ಯ ಸಂಶೋಧನಾ ಇಲಾಖೆಯ ಕಾರ್ಯದರ್ಶಿ ಡಾ.ರಾಜೀವ್ ಬಹ್ಲ್, ಆರೋಗ್ಯ ಸೇವೆಗಳ ಮಹಾನಿರ್ದೇಶಕ ಡಾ.ಅತುಲ್ ಗೋಯೆಲ್, ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ), ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್), ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿ (ಎನ್‌ಐವಿ) ಮತ್ತು ಐಡಿಎಸ್‌ಪಿಯ ರಾಜ್ಯ ಕಣ್ಗಾವಲು ಘಟಕಗಳ ತಜ್ಞರು ಉಪಸ್ಥಿತರಿದ್ದರು.

ಕೇಂದ್ರ ಸರಕಾರ ಪರಿಸ್ಥಿತಿ ಸೂಕ್ಷ್ಮವಾಗಿ ಗಮನಿಸುತ್ತಿದೆ. ಐಸಿಎಂಆರ್ ಮತ್ತು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ) ಕೂಡ ಸದ್ಯದ ಬೆಳವಣಿಗೆಗಳ ಬಗ್ಗೆ ನಿಗಾ ಇಟ್ಟಿವೆ. ದೇಶದ ಆರೋಗ್ಯ ವ್ಯವಸ್ಥೆಗಳು ಮತ್ತು ಕಣ್ಗಾವಲು ಸಂಪರ್ಕ ಜಾಲ ಜಾಗರೂಕವಾಗಿವೆ. ಹೊಸ ಆರೋಗ್ಯ ಸವಾಲುಗಳಿಗೆ ತ್ವರಿತ ಪ್ರತಿಕ್ರಿಯೆಗೆ ದೇಶ ಸಿದ್ಧವಾಗಿದೆ.
–**ಜೆ.ಪಿ.ನಡ್ಡಾ** ಕೇಂದ್ರ ಆರೋಗ್ಯ ಸಚಿವ

ನಾಗ್ಪುರದಲ್ಲಿ 2 ಶಂಕಿತ ಎಚ್‌ಎಂಪಿವಿ ಪ್ರಕರಣ ಪತ್ತೆ

ನಾಗ್ಪುರ: ಮಹಾರಾಷ್ಟ್ರದ ನಾಗ್ಪುರದಲ್ಲಿ ಎರಡು ಶಂಕಿತ ಎಚ್‌ಎಂಪಿವಿ ಪ್ರಕರಣಗಳು ಪತ್ತೆಯಾಗಿದ್ದು, ಇಬ್ಬರು ಆರೋಗ್ಯವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಬ್ಬರಿಗೂ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ. ಇಬ್ಬರ ಪ್ರಯೋಗಾಲಯ ಮಾದರಿ ಸಂಗ್ರಹಿಸಲಾಗಿದ್ದು, ಏಮ್ಸ್ ಮತ್ತು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ (ಎನ್‌ಐವಿ) ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

ನಾಡಿ ಅಂತ್ಯಕ್ರಿಯೆ

ಸಾಗರ: ಹಿರಿಯ ಸಾಹಿತಿ ನಾ.ಡಿಸೋಜ ಅವರ ಅಂತ್ಯಕ್ರಿಯೆ ಮಂಗಳವಾರ ಸಾಗರದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ನಡೆಯಿತು.

ಮಂಗಳವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಗಾಂಧಿ ಮೈದಾನದಲ್ಲಿರುವ ನಗರಸಭೆ ಬಯಲು ರಂಗಮಂದಿರದಲ್ಲಿ ತಾಲೂಕು ಆಡಳಿತ ನಾ. ಡಿಸೋಜ ಅವರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿತ್ತು. ಸಂಜೆ 4ಕ್ಕೆ ಸಂತ ಜೋಸೆಫರ ದೇವಾಲಯದ ಪಕ್ಕದಲ್ಲಿರುವ ಸಮಾಧಿ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಯಿತು.

ಫನ್‌ತರಂಗ

- ರಘುಪತಿ ಶೃಂಗೇರಿ -

ಬಾಹ್ಯಾಕಾಶದಲ್ಲಿ ಮೊಳಕೆಯೊಡೆದ ಅಲಸಂದೆ ಬೀಜ – ಇಸ್ರೋದ ಮಹತ್ವದ ಸಾಧನೆ
ಸುದ್ದಿ



ಕೇಂದ್ರ–ರಾಜ್ಯದ ನಡುವೆ ಮತ್ತೊಂದು ಸುತ್ತಿನ ಹೋರಾಟ ಸಾಧ್ಯತೆ

ಭದ್ರಾ ಮೇಲ್ದಂಡೆ ಅನುದಾನ ಕಡಿತ?

ಬೆಂಗಳೂರು: ಮಧ್ಯ ಕರ್ನಾಟಕದ ಬಹುನಿರೀಕ್ಷಿತ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ಬರಬೇಕಿದ್ದ ಅನುದಾನ ಕಡಿತವಾಗುವ ಸಾಧ್ಯತೆಯಿದೆ ಎನ್ನುವ ಇದೀಗ ವಿವಾದಕ್ಕೆ ಕಾರಣವಾಗಿದ್ದು, ಒಂದು ವೇಳೆ ನಿಜವಾದರೆ ಕೇಂದ್ರ ಹಾಗೂ ರಾಜ್ಯ ಸರಕಾರದ ನಡುವೆ ಮತ್ತೊಂದು ಸುತ್ತಿನ ಹೋರಾಟ ನಡೆಯುವುದು ನಿಶ್ಚಿತವಾಗಿದೆ.

ವಿವಿಧ ನೀರಾವರಿ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಭೇಟಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಭದ್ರಾ ಮೇಲ್ದಂಡೆಗೆ ಈ ಹಿಂದೆ ಘೋಷಿಸಿದ್ದ ಅನುದಾನ ಕಡಿತವಾಗುವ ಸಾಧ್ಯತೆಯಿದೆ ಎನ್ನುವ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಈವರೆಗೆ ಅಧಿಕೃತ ಘೋಷಣೆಯಾಗದಿದ್ದರೂ ಅನುದಾನ ನೀಡದಿದ್ದರೆ ಯೋಜನೆಗೆ ವೇಗ ನೀಡಲು ಸಮಸ್ಯೆಯಾಗುತ್ತದೆ ಎನ್ನುವ ಮಾತುಗಳು ಕೇಳಿಬಂದಿವೆ..

ದೆಹಲಿಯಲ್ಲಿ ವಿ.ಸೋಮಣ್ಣ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಭದ್ರಾ ಮೇಲ್ದಂಡೆ ಯೋಜನೆಗೆ ಈ ಹಿಂದೆ ಘೋಷಣೆ ಮಾಡಿದ್ದ 5,300 ಕೋಟಿ ಅನುದಾನ ಬಿಡುಗಡೆ ಸೇರಿದಂತೆ ಕರ್ನಾಟಕದ ನೀರಾವರಿ ಯೋಜನೆಗಳು ಹಾಗೂ ಪೆನ್ನಾರ್ ನದಿಯ ಉಪನದಿ ಮಾರ್ಕಂಡೇಯ ನದಿಗೆ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ಎತ್ತಿರುವ ತಕರಾರಿನ ಕುರಿತು ಕೇಂದ್ರ ಸಚಿವ ವಿ. ಸೋಮಣ್ಣ ಅವರ ಜತೆ ಚರ್ಚೆ ನಡೆಸಲಾಯಿತು. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ ಹಣವನ್ನು ಕಡಿತಗೊಳಿಸಲಾಗುವುದು ಎನ್ನುವ ಸುದ್ದಿಯಿದೆ. ಇದರ ಬಗ್ಗೆ ಇನ್ನೂ ಸ್ಪಷ್ಟವಾದ ಮಾಹಿತಿಯಿಲ್ಲ. ಅನುದಾನ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಯೋಜನೆಯ ವಿವರಗಳನ್ನು ಕಳುಹಿಸಲಾಗಿದ್ದು, ಇದರ ಬಗ್ಗೆ ಹೆಚ್ಚಿನ ಗಮನ ಹರಿಸಲಾಗಿದೆ ಎಂದು ಹೇಳಿದರು.

ಸರಕಾರದ ಮಟ್ಟದಲ್ಲೇ ಬಗೆಹರಿಸಿಕೊಳ್ಳುವುದು ಸೂಕ್ತ

ಪೆನ್ನಾರ್ ನದಿ ನೀರಿನ ವಿಚಾರದಲ್ಲಿ ತಮಿಳುನಾಡಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅಲ್ಲದೇ ಕೋಲಾರದ ನೀರಿನ ಸಮಸ್ಯೆ ಬಗ್ಗೆ ಎಲ್ಲರಿಗೂ ಅರಿವಿದೆ. ಕೋಲಾರದ ಕೆರೆಗಳಿಗೆ ವೃಷಭಾವತಿ ಸೇರಿದಂತೆ ಕೆ.ಸಿ.ವ್ಯಾಲಿ ಯೋಜನೆಯಿಂದ ಬಳಕೆಯಾದ ನೀರನ್ನು ಶುದ್ಧೀಕರಿಸಿ ತುಂಬಿಸಲಾಗುತ್ತಿದೆ. ಪೆನ್ನಾರ್ ನದಿ ನೀರಿನ ವಿವಾದ ಕುರಿತು ಟ್ರಿಬ್ಯೂನಲ್ ಮೂಲಕ ಹೋದರೆ ತಡವಾಗುತ್ತದೆ ಹಾಗೂ ಕೋರ್ಟ್ ಮತ್ತು ವಕೀಲರ ವೆಚ್ಚ ದುಬಾರಿಯಾಗುತ್ತದೆ. ಆದ ಕಾರಣಕ್ಕೆ ಸರಕಾರದ ಮಟ್ಟದಲ್ಲೇ ಬಗೆಹರಿಸಿಕೊಳ್ಳುವುದು ಸೂಕ್ತ. ಈ ಬಗ್ಗೆ ಇನ್ನೊಮ್ಮೆ ಬಂದು ಭೇಟಿಯಾಗುವೆ. ಇಲಾಖೆಯ ಬಜೆಟ್ ಕೆಲಸವಿರುವ ಕಾರಣಕ್ಕೆ ಕೇಂದ್ರ ಜಲಶಕ್ತಿ ಸಚಿವರೂ ಭೇಟಿಗೆ ಸಿಗಲಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಪೆನ್ನಾರ್ ನದಿ; ಅಫಿಡವಿಟ್ ಸಲ್ಲಿಕೆ: ತಮಿಳುನಾಡಿನವರು ಪೆನ್ನಾರ್ ನದಿ ನೀರಿನ ವಿಚಾರವಾಗಿ ಕಳೆದ ತಿಂಗಳು ಅಫಿಡವಿಟ್ ಸಲ್ಲಿಸಿದ್ದಾರೆ. ಮೂರು ವಾರದಲ್ಲಿ ತೀರ್ಮಾನ ಮಾಡಬೇಕಿರುವ ಕಾರಣಕ್ಕೆ ಅಫಿಡವಿಟ್ ಸಲ್ಲಿಕೆ ಮಾಡಲು ತಿಳಿಸಿದ್ದರು. ವಿಧಾನಸಭೆ ಚಳಿಗಾಲದ ಅಧಿವೇಶನವಿದ್ದ ಕಾರಣಕ್ಕೆ ನಮ್ಮಿಂದ ವಿಳಂಬವಾಯಿತು. ನಾವು ದಿನಾಂಕ ವಿಸ್ತರಣೆ ಮಾಡಿ ಎಂದು ಮನವಿ ಮಾಡಿದ್ದೇವೆ ಎಂದರು.

ಎರಡು ರಾಜ್ಯಗಳ ಪ್ರತಿನಿಧಿಗಳನ್ನು ಸೇರಿಸಿ ಮಾತುಕತೆ ನಡೆಸಬೇಕಿರುವ ಕಾರಣಕ್ಕೆ ಶೀಘ್ರದಲ್ಲೇ ಸಭೆಗೆ ಒಂದು ದಿನಾಂಕವನ್ನು ಅಂತಿಮಗೊಳಿಸುವುದಾಗಿ ಹೇಳಿದ್ದಾರೆ. ಪೆನ್ನಾರ್ ನದಿ ನೀರಿನ ವಿಚಾರವಾಗಿ ನಿಮ್ಮಲ್ಲೇ ಚರ್ಚೆ ನಡೆಸಿ ಬಗೆಹರಿಸಿಕೊಳ್ಳಿ ಎನ್ನುವ ಸುಪ್ರೀಂ ಕೋರ್ಟ್ ನಿರ್ದೇಶನವಿದೆ ಎಂದರು.

ಮತಯಂತ್ರಗಳನ್ನು ತಿರುಚಿರುವ ಆರೋಪ ಆಧಾರ ರಹಿತ: ಸಿಇಸಿ ರಾಜೀವ್ ಕುಮಾರ್

ಭಾರತದ ಮತದಾರರ ಸಂಖ್ಯೆ ಶೀಘ್ರದಲ್ಲಿ ನೂರು ಕೋಟಿ

ದೆಹಲಿ: ಭಾರತದಲ್ಲಿ ಹೊಸ ಮತದಾರರ ಸಂಖ್ಯೆ ಅತಿ ಶೀಘ್ರದಲ್ಲಿ 100 ಕೋಟಿಗೆ ತಲುಪಲಿದೆ ಎಂದು ಭಾರತೀಯ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮತದಾರರ ಪಟ್ಟಿ ಸೋಮವಾರ ಬಿಡುಗಡೆಯಾಗಿದೆ. ಸದ್ಯ ಮತದಾರರ ಸಂಖ್ಯೆ 99 ಕೋಟಿ ದಾಟಿದೆ. ಇದು ಅತಿ ಶೀಘ್ರದಲ್ಲಿ ಶತಕೋಟಿ ದಾಟಲಿದೆ ಎಂದು ಹೇಳಿದರು.

ವಿದ್ಯುನ್ಮಾನ ಮತಯಂತ್ರಗಳನ್ನು ಹ್ಯಾಕ್ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ 42 ಬಾರಿ ಹೇಳಿದೆ. ಹೀಗಾಗಿ ಮತಯಂತ್ರಗಳನ್ನು ತಿರುಚಿರುವ ಆರೋಪ ಆಧಾರ ರಹಿತ. ಚುನಾವಣಾ ಪ್ರಕ್ರಿಯೆಯಲ್ಲಿ ಬಳಸಲಾಗಿದ್ದ ಎಲೆಕ್ಟ್ರಾನಿಕ್ ಮತ ಯಂತ್ರಗಳು (ಇವಿಎಂ) ಮತ್ತು ವಿವಿಪ್ಯಾಟ್‌ಗಳ ಪರಿಶೀಲನೆ ನಡೆಸಲಾಗಿದ್ದು, ಅವುಗಳ ಮೂಲಕ ಎಣಿಸಿದ ಮತಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿಲ್ಲ. ಅವುಗಳು ವಿಶ್ವಾಸಾರ್ಹವಾಗಿವೆ ಎಂದರು.

2019ರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಐದು ವಿವಿಪ್ಯಾಟ್‌ಗಳನ್ನು ಎಣಿಕೆ ಮಾಡಬೇಕು ಎಂದು ಸುಪ್ರೀಂಕೋರ್ಟ್ ಆದೇಶಿಸಿದ ಬಳಿಕ, ಸುಮಾರು 67,000ಕ್ಕೂ ಹೆಚ್ಚು ವಿವಿಪ್ಯಾಟ್‌ಗಳನ್ನು ಪರಿಶೀಲಿಸಲಾಗಿದೆ. ಈವರೆಗೆ 4.5 ಕೋಟಿಗೂ ಹೆಚ್ಚು ವಿವಿಪ್ಯಾಟ್ ಸ್ಲಿಪ್‌ಗಳನ್ನು ಪರಿಶೀಲಿಸಲಾಗಿದ್ದು, ಇವಿಎಂಗಳ ಮತ ಎಣಿಕೆಗೆ ಅವು ಸಂಪೂರ್ಣ ತಾಳೆಯಾಗಿವೆ. 2019ರಿಂದ ಹೊಸ ಇವಿಎಂಗಳ ಮೂಲಕ ನಡೆಸಲಾದ ಚುನಾವಣೆಯಲ್ಲಿ ಒಂದೇ ಒಂದು ಮತದ ವ್ಯತ್ಯಾಸವೂ ಕಂಡುಬಂದಿಲ್ಲ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ ಎಂದು ಹೇಳಿದ್ದಾರೆ.

ಮತದಾರರ ಪಟ್ಟಿಯಿಂದ ಹಿಡಿದು ಯಂತ್ರ ನಿರ್ವಹಣೆಯವರೆಗೆ ಚುನಾವಣಾ ಪ್ರಕ್ರಿಯೆಯ ಪ್ರತಿಯೊಂದು ಅಂಶಗಳ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತದೆ ಮತ್ತು ರಾಜಕೀಯ ಪಕ್ಷಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ. ಚುನಾವಣಾ ಆಯೋಗ ನಡೆಸುವ ಚುನಾವಣೆ ಪ್ರಕ್ರಿಯೆಗಳು ಪಾರದರ್ಶಕವಾಗಿದೆ.
–**ರಾಜೀವ್ ಕುಮಾರ್**
ಮುಖ್ಯ ಚುನಾವಣಾ ಆಯುಕ್ತ

ದೆಹಲಿ ವಿಧಾನಸಭೆಗೆ ಫೆ.5ರಂದು ಮತದಾನ

ದೆಹಲಿ ವಿಧಾನಸಭೆಗೆ ಕೇಂದ್ರ ಚುನಾವಣಾ ಆಯೋಗವು ಮಂಗಳವಾರ ಚುನಾವಣೆಗೆ ದಿನಾಂಕ ಘೋಷಿಸಿದೆ. ನಾಮಪತ್ರ ಸಲ್ಲಿಸಲು ಜ.17 ಕೊನೆಯ ದಿನ. ನಾಮಪತ್ರ ಹಿಂಪಡೆಯಲು ಜ.20 ಕೊನೆಯ ದಿನವಾಗಿದೆ. ಜ.18ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಫೆ.5ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, ಫೆ.8ಕ್ಕೆ ಎಣಿಕೆ ನಡೆಯಲಿದೆ. ದೆಹಲಿಯೊಂದಿಗೆ ಉತ್ತರ ಪ್ರದೇಶದ ಮಿಲ್ಕಿಪುರ ಹಾಗೂ ತಮಿಳುನಾಡಿನ ಇರೋಡ್ ಕ್ಷೇತ್ರಗಳಿಗೆ ಉಪಚುನಾವಣೆಯೂ ಇದೇ ದಿನಾಂಕದಂದು ನಡೆಯಲಿದೆ ಎಂದು ರಾಜೀವ್ ಕುಮಾರ್ ತಿಳಿಸಿದರು.

ಪತ್ನಿಗೆ ಕ್ಷಮೆ ಕೇಳಿ ಪ್ರಾಣ ಕಳೆದುಕೊಂಡ ಉದ್ಯಮಿ

ಬೆಂಗಳೂರು: ಉದ್ಯಮಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ಘಟನೆ ನಗರದಲ್ಲಿ ನಡೆದಿದೆ.

ಹುಳಿಮಾವು ಠಾಣಾ ವ್ಯಾಪ್ತಿಯ ಅಕ್ಷಯನಗರದ ಉದ್ಯಮಿ ಕಲಾಲ್ ದತ್ತ(40) ಸೋಮವಾರ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿಟ್ಟಿದ್ದು, ಸಾಲದಿಂದ ಬೇಸತ್ತು ಬಡ್ಡಿ ಕಿರುಕುಳಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ. ಸ್ಥಳಕ್ಕೆ ಹುಳಿಮಾವು ಠಾಣೆ ಪೊಲೀಸರ ಭೇಟಿ ಪರಿಶೀಲನೆ ನಡೆಸಿದ್ದಾರೆ. ತನ್ನ ಆತ್ಮಹತ್ಯೆಗೆ ಸಾಲ ಮತ್ತು ಬಡ್ಡಿ ಟಾರ್ಚರ್ ಕಾರಣ ಎಂದು ಉಲ್ಲೇಖಿಸಿದ ಉದ್ಯಮಿ, ಡೆತ್‌ನೋಟ್‌ನಲ್ಲಿ ಪತ್ನಿಗೆ ಕ್ಷಮೆ ಕೇಳಿದ್ದಾರೆ.

POONAWALLA FINCORP

ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ : ಯುನಿಟ್ ನಂ. 2401, 24ನೇ ಮಹಡಿ, ಅಲ್ಟಿಮಸ್, ಡಾ. ಜಿ ಎಂ ಭೋಸ್ಲೆ ಮಾರ್ಗ್, ವರ್ಲಿ, ಮುಂಬಯಿ 400 018 (ಮಹಾರಾಷ್ಟ್ರ)
ನೋಂದಾಯಿತ ಕಚೇರಿ: 201 ಮತ್ತು 202, 2ನೇ ಮಹಡಿ, ಎಪಿ81, ಕೋರೆಗಾಂವ್ ಪಾರ್ಕ್ ಅನೆಕ್ಸ್ ಮುಂಧ್ವಾ, ಪುಣೆ 411 036 (ಮಹಾರಾಷ್ಟ್ರ)

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002 ರ ಅಡಿ ತಗಾದೆ ಸೂಚನೆ

ನೀವು, ಈ ಲೆಳಗೆ ಹೆಸರಿಸಿರುವ ಸಾಲಗಾರ/ಸಹ–ಸಾಲಗಾರರು ಗೃಹ ಸಾಲ/ಆಸ್ತಿ ಮೇಲೆ ಸಾಲವನ್ನು ನಿಮ್ಮ ಸ್ಥಿರಾಸ್ತಿ/ಗಳನ್ನು ಮ್ಯಾಗ್ನಾ ಫಿನ್‌ಕಾರ್ಪ್ ಲಿಮಿಟೆಡ್ ಎಮ್‌ಎಫ್‌ಎಲ್ ಎಂದು ಕರೆಯಲ್ಪಡುವ ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಗೆ ಅಡಮಾನ ಮಾಡಿ ಪಡೆದುಕೊಂಡಿರುತ್ತೀರಿ. ನೀವು ಮರುಪಾವತಿಸದೆ ಸುಸ್ತಿದಾರರಾಗಿರುವುದರಿಂದ, ನಿಮ್ಮ ಸಾಲ/ಗಳ ಖಾತೆಯನ್ನು ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸಲಾಗಿದೆ. ಸೆಕ್ಷನ್ 13(2) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ ಅಡಿ ತಗಾದೆ ಸೂಚನೆಯನ್ನು ನಮಗೆ ತಿಳಿದ ಇತ್ತೀಚಿನ ವಿಳಾಸಕ್ಕೆ ಕಳುಹಿಸಲಾಗಿದ್ದು, ಅದು ನಿಮ್ಮಿಂದ ಸ್ವೀಕೃತಿಯಾಗದೆ ಹಿಂತಿರುಗಿ ಬಂದಿರುತ್ತದೆ. ಆದುದರಿಂದ ಅದರ ವಿವರಗಳನ್ನು ಸೆಕ್ಷನ್ 13(2) ರ ಕಾಯಿದೆ ನಿಯಮ 3(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ನಿಮಗೆ ಬದಲಿ ಸೂಚನೆಯಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ.

ಸಾಲಗಾರರ, ಸಹ–ಸಾಲಗಾರರ, ಭದ್ರತೆಗಳು, ಬಾಕಿ ವಿವರಗಳು, ಸೆಕ್ಷನ್ 13(2) ರ ಅಡಿ ನೀಡಲಾದ ತಗಾದೆ ಸೂಚನೆ ಮತ್ತು ಕ್ಲೈಮು ಮಾಡಲಾದ ಮೊತ್ತದ ವಿವರಗಳು ಈ ಕೆಳಗಿನಂತಿದೆ.

ಕ್ರ ಸಂ.	ಸಾಲಗಾರರ, ಸಹ–ಸಾಲಗಾರರ, ಜಾಮೀನುದಾರರ ಹೆಸರು ಮತ್ತು ಸಾಲದ ಮೊತ್ತ	ಭದ್ರತಾ ಸ್ವತ್ತಿನ ವಿವರ	ತಗಾದೆ ಸೂಚನೆ ದಿನಾಂಕ	ಬಾಕಿ ಮೊತ್ತ ರೂ.ಗಳಲ್ಲಿ
01	ಶ್ರೀನಿವಾಸ್ ವಿ ಮತ್ತು ಸಿಒ ಐಶ್ವರ್ಯ ಆರ್ ಶ್ರೀನಿವಾಸ ವಿ ಸಾಲದ ಮೊತ್ತ : ರೂ.1,35,00,000/– (ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿ ಮಾತ್ರ) Loan No.: LAP01131000000010348435	ಆಸ್ತಿಯ ಷೆಡ್ಯೂಲ್: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ನಂ. 54, ಅಸೆಸ್‌ಮೆಂಟ್ ಖಾತಾ ನಂ. 5437/5247/54, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: (37+36.6)/2 ಅಡಿ, ಉತ್ತರದಿಂದ ದಕ್ಷಿಣಕ್ಕೆ: (37+36.6)/2 ಅಡಿ ಒಟ್ಟು 1103 ಚದರ ಅಡಿಯು ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 55, ಪಶ್ಚಿಮಕ್ಕೆ: ಸೈಟ್ ನಂ. 53, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಎ ಎಲ್ ಶ್ರೀನಿವಾಸ್‌ರವರಿಗೆ ಸೇರಿದ ಆಸ್ತಿ. ಸೈಟ್ ನಂ. 55 ಅಸೆಸ್‌ಮೆಂಟ್ ನಂ. 5438/5248/55, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (37+37.6)2 ಅಡಿ ಉತ್ತರದಿಂದ ದಕ್ಷಿಣಕ್ಕೆ: (37+36.6)/2 ಅಡಿ ಒಟ್ಟು 1103 ಚದರ ಅಡಿಯು ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 56, ಪಶ್ಚಿಮಕ್ಕೆ: ಸೈಟ್ ನಂ. 54, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಎ ಎಲ್ ಶ್ರೀನಿವಾಸ್‌ರವರಿಗೆ ಸೇರಿದ ಆಸ್ತಿ.	21.11.2024	ರೂ.1,45,62,737/– (ಒಂದು ಕೋಟಿ ನಲವತ್ತೈದು ಲಕ್ಷ ಅರುವತ್ತೆರಡು ಸಾವಿರದ ಏಳುನೂರ ಮೂವತ್ತೇಳು ರೂಪಾಯಿಗಳು ಮಾತ್ರ) ಜೊತೆಗೆ 10.25% ಭವಿಷ್ಯದ ವಾರ್ಷಿಕ ಬಡ್ಡಿ 21.11.2024 ರಿಂದ ಹಣ ಸಂಪೂರ್ಣ ಪಾವತಿಯಾಗುವವರೆಗೆ.

ನೀವುಗಳಾದ ಸಾಲಗಾರ ಮತ್ತು ಸಹ–ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲೆ ತಿಳಿಸಿದ ತಗಾದೆ ಮೊತ್ತ ಹಾಗೂ ಮೇಲೆ ತಿಳಿಸಿದಂತೆ ನಂತರದ ಬಡ್ಡಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು, ತಪ್ಪಿದಲ್ಲಿ ಕೆಳಸಹಿದಾರರು ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಹೇಳಲಾದ ಭದ್ರತೆಗಳ ಮೇಲೆ ಜಾರಿ ಕಾಯಿದೆ ಅನ್ವಯ ಕ್ರಮ ಕೈಗೊಳ್ಳಲಿರುವರು. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಸೆಕ್ಷನ್ 13(13) ರ ಹೇಳಲಾದ ಕಾಯಿದೆಯಂತೆ ಮೇಲೆ ಹೇಳಲಾದ ಭದ್ರತೆಗಳನ್ನು ಮಾರಾಟ, ಭೋಗ್ಯ ಅಥವಾ ಇನ್ನಿತರೆ ರೂಪದಲ್ಲಿ ನಮ್ಮ ಅನುಮತಿ ಇಲ್ಲದೆ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ದಿನಾಂಕ: 08.01.2025
ಸ್ಥಳ: ಬೆಂಗಳೂರು

ಅಧಿಕೃತ ಅಧಿಕಾರಿ
ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಪರವಾಗಿ

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLAPTUM00408092 1. ಶಿವನಂಜಯ್ಯ 2. ಗುರುಪ್ರಸಾದ್ ಎಸ್ 3. ಮಂಜುಳಾ ಎಸ್ 4. ಎಸ್ ಲಕ್ಷ್ಮೀ ನಾರಾಯಣ (ಖಾತರಿದಾರ)	ಆಸ್ತಿ ಹೊಂದಿರುವ ಸೈಟ್ ನಂ. 7, ಪಿಐಡಿ ನಂ.21255, ಹಳೆಯ ಸರ್ವೆ ನಂ. 312, ಹೊಸ ಮೌಲ್ಯಮಾಪನ ಸಂಖ್ಯೆ. 2778, ನಂಜುಂಡೇಶ್ವರ ಕೃಪಾ, 4 ನೇ ಕ್ರಾಸ್, ವಾರ್ಡ್ ನಂ. 21 ನೇತಾಜಿ ರಸ್ತೆ, ವಿದ್ಯಾನಗರ, ತುಮಕೂರು – 572106 ಕರ್ನಾಟಕ	09.12.2024	ದಿನಾಂಕ 26.12.2024 ರಂತೆ ರೂ. 35,12,476.58/- (ರೂಪಾಯಿ ಮೂವತ್ತ ಐದು ಲಕ್ಷ ಹನ್ನೆರೆಡು ಸಾವಿರದ ನಾಲ್ಕು ನೂರ ಎಪ್ಪತ್ತ ಆರು ಮತ್ತು ಐವತ್ತ ಎಂಟು ಮಾತ್ರ)
2.	ಸಾಲ ಖಾತೆ ನಂ. HHLBNE00359844 1. ಸಹವರ್, ಅಲಿಯಾಸ್ ಶಾವರ್ ಅಬ್ದುಲ್ (ಸಹ-ಸಾಲಗಾರ, ಪತ್ನಿ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 2. ಸಲ್ಮಾನ್ ಅಲಿಯಾಸ್ ಅಬ್ದುಲ್ ಸಲ್ಮಾನ್ (ಸಹ-ಸಾಲಗಾರ, ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 3. ಅಬ್ದುಲ್ ಜಾಕೀರ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 4. ಅಬ್ದುಲ್ ಶೇದ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 5. ಅಬ್ದುಲ್ ಸಮೀರ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 6. ಅಮ್ರೀನ್ ಅಬ್ದುಲ್ (ಮಗಳು ಹಾಗೂ ಮೃತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 7. ಜಬಿಯಾ ಅಬ್ದುಲ್ (ಮಗಳು ಹಾಗೂ ಮೃತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ) 8. ಸಮ್ರೀನ್ ಅಬ್ದುಲ್ (ಮಗಳು ಹಾಗೂ ಮೃತ ಅಬ್ದುಲ್ ಖಾದರ್ ಅವರ ಕಾನೂನು ಉತ್ತರಾಧಿಕಾರಿ)	ಫ್ಲಾಟ್ ನಂ. 301, 3ನೇ ಮಹಡಿ, ಸರ್ವೆ ಸಂ. 119/2, ಸ್ಪ್ರಿಂಗ್ ಫೀಲ್ಡ್ ಎಲೈಟ್, ಸಿಂಗಸಂದ್ರ ಗ್ರಾಮ, ಮಣಿಪಾಲ್ ಕೌಂಟಿ ರಸ್ತೆ, ಬೇಗೂರು ಹೋಬಳಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು- 560068, ಕರ್ನಾಟಕ	05.04.2021	ದಿನಾಂಕ 28.12.2024 ರಂತೆ ರೂ. 84,17,176.10/- (ರೂಪಾಯಿ ಎಂಬತ್ತ ನಾಲ್ಕು ಲಕ್ಷ ಹದಿನೇಳು ಸಾವಿರದ ನೂರ ಎಪ್ಪತ್ತ ಆರು ಮತ್ತು ಪೈಸೆ ಹತ್ತು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ತುಮಕೂರು/ಬೆಂಗಳೂರು
ಅಧಿಕೃತ ಅಧಿಕಾರಿ

ಕೊಳವೆಬಾವಿ ಕೊರೆಸುವಲ್ಲಿ ಭಾರಿ ಭ್ರಷ್ಟಾಚಾರ ಆರೋಪ ಹಿನ್ನೆಲೆ

ಬಿಬಿಎಂಪಿ ಅಧಿಕಾರಿಗಳ ಮೇಲೆ ಇ.ಡಿ ಡ್ರಿಲ್!

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೊಳವೆಬಾವಿ ಕೊರೆಸುವಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆದಿರುವ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣ ಸಂಬಂಧ, ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ಬಿಬಿಎಂಪಿ ಹಲವು ಅಧಿಕಾರಿಗಳ ಕಚೇರಿ ಮೇಲೆ ದಾಳಿ ನಡೆಸಿದೆ.

2016–2019ರ ಅವಧಿಯಲ್ಲಿ 960 ಕೋಟಿ ರು. ವೆಚ್ಚದಲ್ಲಿ ಹಲವು ಕೊಳವೆಬಾವಿಗಳನ್ನು ಕೊರೆಸಲಾಗಿತ್ತು. ಜತೆಗೆ ನೀರು ಶುದ್ಧೀಕರಣ ಘಟಕಗಳನ್ನು ಆರಂಭಿಸಲಾಗಿತ್ತು. ಈ ಯೋಜನೆಗಳಲ್ಲಿ ಅಕ್ರಮ ನಡೆದಿದೆ ಎಂದು 2021 ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಅವಧಿಯಲ್ಲಿ ರಾಜರಾಜೇಶ್ವರಿ ನಗರ, ಯಲಹಂಕ, ಮಹದೇವಪುರ, ದಾಸರಹಳ್ಳಿ, ಮಹದೇವಪುರ ವ್ಯಾಪ್ತಿಯಲ್ಲಿ 9,588 ಕೊಳವೆ ಬಾವಿ ಕೊರೆಸಲಾಗಿದೆ.

ಈ ಭ್ರಷ್ಟಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಎಂಜಿನಿಯರ್, ಎಂಜಿನಿಯರ್‌ಗಳ ನಿವಾಸಗಳು ಮತ್ತು ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಲಾಗಿದೆ. ಮಂಗಳವಾರ ಮುಂಜಾನೆ 7 ಗಂಟೆಯಿಂದ ಆರಂಭವಾದ ಶೋಧಕಾರ್ಯ ಈಗಲೂ ಮುಂದುವರಿದಿದೆ. ಇ.ಡಿ.ಅಧಿಕಾರಿಗಳು

ದಾಖಲೆಗಳನ್ನು ಕಲೆಹಾಕುತ್ತಿದ್ದು, ಮಹತ್ವದ ಸಾಕ್ಷ್ಯಗಳು ಲಭ್ಯವಾಗಿದೆ.

ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಎಸ್ .ಪ್ರಹ್ಲಾದ್ ಅವರ ಸಮ್ಮುಖದಲ್ಲಿ 2016ರಿಂದ ಕೊರೆಸಿರುವ ಬೋರ್‌ವೆಲ್, ಆರ್.ಒ ಪ್ಲಾಂಟ್‌ಗಳ ಬಗ್ಗೆಯೂ ಇ.ಡಿ. ಅಧಿಕಾರಿಗಳು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಬಿಬಿಎಂಪಿ ಗುತ್ತಿಗೆದಾರ ಅಂಬಿಕಾಪತಿ ಅವರ ನಿವಾಸದಲ್ಲಿ 45 ಕೋಟಿ ರು. ನಗದು ಪತ್ತೆಯಾಗಿತ್ತು. ಈ ಹಣಕ್ಕೂ ಪಾಲಿಕೆಯ ಅವ್ಯವಹಾರಕ್ಕೂ ಸಂಬಂಧ ಇದೆ ಎನ್ನಲಾಗಿದ್ದು, ಈ ನಿಟ್ಟಿನಲ್ಲಿಯೂ ಮಾಹಿತಿ ಕಲೆಹಾಕಲಾಗಿದೆ.

ದಾಖಲೆ ಒದಗಿಸಲು ಹೆಣಗಾಟ: ಪಾಲಿಕೆ 2016, 2017,2018ನೇ ಸಾಲಿನಲ್ಲಿ 968 ಕೋಟಿ ರು. ಖರ್ಚು ಮಾಡಿ 9558 ಕೊಳವೆಬಾವಿಗಳನ್ನು ಕೊರೆಸಿತ್ತು. ನಂತರ 976 ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗಿದೆ ಎಂದು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಆದರೆ 9558 ಕೊಳವೆಬಾವಿಗಳಲ್ಲಿ ಕನಿಷ್ಠ ಒಂದು ಸಾವಿರ ಕೊಳವೆ ಬಾವಿಗಳಲ್ಲಿ ಕನಿಷ್ಠ ಒಂದು ಸಾವಿರ ಕೊಳವೆಬಾವಿಗಳ ದಾಖಲೆಗಳನ್ನು ಒದಗಿಸಲು ಅಧಿಕಾರಿಗಳು ಹೆಣಗಾಟ ನಡೆಸಿರುವುದು ತಿಳಿದುಬಂದಿದೆ.

ಪ್ರಕರಣದ ಹಿನ್ನೆಲೆ: ನಗರದಲ್ಲಿ 969 ಕೋಟಿ ರು. ವೆಚ್ಚದಲ್ಲಿ 9,588 ಕೊಳವೆಬಾವಿ ಹಾಗೂ 976 ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದರು. ಆದರೆ ಇದರಲ್ಲಿ 400 ಕೋಟಿಯಷ್ಟು ಬೃಹತ್ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್.ಆರ್. ರಮೇಶ್ 2019ರಲ್ಲಿ ದಾಖಲೆಗಳ ಸಮೇತ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ಕ್ಕೆ ದೂರು ನೀಡಿದ್ದರು. ಅದರನ್ವಯ 2016 ರಿಂದ 2018ರ ವರೆಗಿನ ಆಯುಕ್ತರು, ಐವರು ಜಂಟಿ ಆಯುಕ್ತರು, ಐವರು ಮುಖ್ಯ ಎಂಜಿನಿಯರ್‌ಗಳು ಸೇರಿದಂತೆ 40ಕ್ಕೂ ಅಧಿಕ ಅಧಿಕಾರಿಗಳ ವಿರುದ್ಧ ದೂರು ದಾಖಲಾಗಿತ್ತು. ಎಸಿಬಿ ರದ್ದಾದ ಬಳಿಕ ಪ್ರಕರಣದ ತನಿಖೆ ಇ.ಡಿ ಗೆ ವಹಿಸಲಾಗಿತ್ತು.

ವೈಟ್‌ಟಾಪಿಂಗ್ ಬಗ್ಗೆಯೂ ಮಾಹಿತಿ ಕಲೆಹಾಕಿದ ಇ.ಡಿ.

ಬೋರ್‌ವೆಲ್ ಕಾಮಗಾರಿಯಲ್ಲಿ ಅಕ್ರಮ ಹಾಗೂ ವೈಟ್‌ಟಾಪಿಂಗ್ ನಲ್ಲಿ ಬಹುಕೋಟಿ ಹಗರಣವಾಗಿದೆ. ಈ ಎರಡು ಕಾಮಗಾರಿಗಳ ಬಗ್ಗೆ ಮಾಹಿತಿ ಕೇಳಿದ್ದಾರೆ. 2018–19ರಲ್ಲಿ ಬೆಂಗಳೂರಲ್ಲಿ ನಡೆದ ವೈಟ್ ಟಾಪಿಂಗ್ ನಲ್ಲಿ ಭಾರೀ ಅಕ್ರಮ ಆರೋಪ ಕೇಳಿಬಂದಿತ್ತು. ಈ ಬಗ್ಗೆ ಬೆಂಗಳೂರು ಬಿಜೆಪಿ ಶಾಸಕರ ನಿಯೋಗ 2019ರಲ್ಲಿ ಲೋಕಾಯುಕ್ತಕ್ಕೆ ದೂರು ನೀಡಿತ್ತು. ಮೊದಲ ಹಂತದಲ್ಲಿ 93.37 ಕಿ.ಮೀ.ಗೆ 1147.76 ಕೋಟಿ ರು. ವೆಚ್ಚ, ಎರಡನೇ ಹಂತದಲ್ಲಿ 62.80 ಕಿ.ಮೀಗೆ 758.56 ಕೋಟಿ ರು. ವೆಚ್ಚ, ಮೂರನೇ ಹಂತದಲ್ಲಿ 123 ಕಿ.ಮೀ.ಗೆ 1139 ಕೋಟಿ ವೆಚ್ಚ ಮಾಡಲಾಗಿದೆ. 279 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಹಾಗೂ ರಸ್ತೆ ದುರಸ್ತಿಗೆ ಪಾಲಿಕೆ ವೆಚ್ಚ ಮಾಡಿದ್ದು ಬರೋಬ್ಬರಿ 3046 ಕೋಟಿ ರು. ಪ್ರತಿ ಕಿಲೋಮೀಟರ್‌ಗೆ 12 ರಿಂದ 18 ಕೋಟಿವರೆಗೆ ವೆಚ್ಚ ಮಾಡಿರುವುದಾಗಿ ಪಾಲಿಕೆ ಲೆಕ್ಕ ತೋರಿಸಿದೆ. ಈ ಬಗ್ಗೆ ಬೆಂಗಳೂರು ಬಿಜೆಪಿ ಶಾಸಕರ ನಿಯೋಗ 2019ರಲ್ಲಿ ಲೋಕಾಯುಕ್ತಕ್ಕೆ ದೂರು ನೀಡಿತ್ತು. ಇದೀಗ ಇಡಿ ಅಧಿಕಾರಿಗಳು ಈ ಎರಡು ಪ್ರಮುಖ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ ಎಂದು ವಂಚನೆ ನಡೆಸುತ್ತಿದ್ದ ವಂಚಕಿ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಬರೋಬ್ಬರಿ 2.52 ಕೋಟಿ ನಗದು ಹಾಗೂ 2.350 ಕೆಜಿ ಚಿನ್ನಾಭರಣ ಪಡೆದು ಐಶ್ವರ್ಯಾ ಗೌಡ ವಂಚನೆ ಮಾಡಿದ್ದಾಳೆ ಎಂದು ವೈದ್ಯೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಹಣ ಮತ್ತು ಚಿನ್ನಾಭರಣ ಸೇರಿದಂತೆ 5.03 ಕೋಟಿ ರು. ವಂಚಿಸಿರುವುದಾಗಿ ಸ್ತ್ರೀ ರೋಗ ತಜ್ಞೆ ಡಾ.ಮಂಜುಳಾ ಪಾಟೀಲ್ ಅವರು ಆರ್.ಆರ್.ನಗರ ಠಾಣೆಗೆ ದೂರು ನೀಡಿದ್ದು, ಐಶ್ವರ್ಯಾ ಗೌಡ, ಅವರ ಪತಿ ಹರೀಶ್ ಕೆ. ಎನ್, ಕಾರು ಚಾಲಕ ಧನಂಜಯ್ ಹಾಗೂ ಅಶ್ವಥ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆಯಾಗಿರುವ ಮಂಜುಳಾ ಪಾಟೀಲ್ ಅವರಿಗೆ 2020–21ನೇ ಸಾಲಿನಲ್ಲಿ ಚಿಕಿತ್ಸೆಗಾಗಿ ಬರುತ್ತಿದ್ದಾಗ ಐಶ್ವರ್ಯಾ ಗೌಡ ಪರಿಚಯವಾಗಿತ್ತು. ತಾನು, ಡಿ.ಕೆ.ಸುರೇಶ್ ಹಾಗೂ ಡಿ.ಕೆ.ಶಿವಕುಮಾರ್ ಅವರ ಸಹೋದರಿ ಎಂದು ಪರಿಚಯಿಸಿಕೊಂಡು, ತನಗೆ ದೊಡ್ಡಮಟ್ಟದಲ್ಲಿ ರಿಯಲ್ ಎಸ್ಟೇಟ್, ಗೋಲ್ಡ್ ಬ್ಯುಸಿನೆಸ್, ಕ್ಯಾಸಿನೋ ವ್ಯವಹಾರ ಇರುವುದಾಗಿ ನಂಬಿಸಿದ್ದಳು. 2022ರಿಂದ 2024ರವೆಗೂ ಹೂಡಿಕೆ, ಮತ್ತಿತರ ಕಾರಣಗಳನ್ನು ನೀಡಿ ಹಂತಹಂತವಾಗಿ 2.52 ಕೋಟಿ ಹಣ ಹಾಗೂ 2.50 ಕೋಟಿ ಮೌಲ್ಯದ ಒಟ್ಟು 2 ಕೆ.ಜಿ 350 ಗ್ರಾಂ ಚಿನ್ನಾಭರಣ ಪಡೆದಿದ್ದ ಐಶ್ವರ್ಯಾ ಗೌಡ ಹಿಂದಿರುಗಿಸದೆ ಸಬೂಬು ಹೇಳುತ್ತಿದ್ದಳು.

ಮಂಜುಳಾ ಪಾಟೀಲ್‌ಗೆ ಬೆದರಿಕೆ: ಜ.1ರಂದು ಮಂಜುಳಾ ಪಾಟೀಲ್ ಅವರ ಮನೆ ಬಳಿ ತೆರಳಿದ್ದ ಚಾಲಕ ಧನಂಜಯ್, ಐಶ್ವರ್ಯಾ ಗೌಡಗೆ ಕರೆಮಾಡಿ ಕೊಟ್ಟಿದ್ದ. ಫೋನ್‌ನಲ್ಲಿ ಮಾತನಾಡಿದ್ದ ಐಶ್ವರ್ಯಾ ಗೌಡ, ನಿನಗೆ ಕೊಡಬೇಕಿರುವ ಹಣ, ಚಿನ್ನಾಭರಣದ ಕುರಿತು ಯಾರಿಗೂ ಹೇಳಬಾರದು, ದೂರು ನೀಡಬಾರದು. ಹಾಗೇನಾದರೂ ದೂರು ನೀಡಿದರೆ, ಸಾಕ್ಷಿ ಹೇಳಿಕೆ ನೀಡಿದರೆ ಹಣ, ಚಿನ್ನಾಭರಣ ಕೊಡುವುದಿಲ್ಲ. ನಾನು ಡಿ.ಕೆ.ಸುರೇಶ್ ಹಾಗೂ ಡಿ.ಕೆ.ಶಿವಕುಮಾರ್ ಅವರ ಸಹೋದರಿ ಎಂಬುದು ಗೊತ್ತಿದೆ ತಾನೇ ಎಂದು ಬೆದರಿಕೆ ಹಾಕಿದ್ದಾಗಿ ಮಂಜುಳಾ ಪಾಟೀಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ಅತ್ಯಾಚಾರ ಆರೋಪ: ಜಿಮ್ ಸೋಮ ವಿರುದ್ಧ ಎಫ್‌ಐಆರ್

ಬೆಂಗಳೂರು: ಅತ್ಯಾಚಾರ ಎಸಗಿದ ಆರೋಪದಲ್ಲಿ ಉದ್ಯಮಿ ಹಾಗೂ ಬಿಜೆಪಿ ಮುಖಂಡ ಸೋಮಶೇಖರ್ ಜಯರಾಜ್ (ಜಿಮ್ ಸೋಮ) ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಆರ್ಥಿಕ ಸಹಾಯ ಮಾಡುವುದಾಗಿ ಕರೆದೊಯ್ದು ಅತ್ಯಾಚಾರ ಎಸಗಿರುವುದಾಗಿ 26 ವರ್ಷದ ಸಂತ್ರಸ್ತ ಮಹಿಳೆ ನೀಡಿದ ದೂರಿನನ್ವಯ ಅಶೋಕ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ದೂರುದಾರರಿಗೆ ಆಕೆಯ ಸ್ನೇಹಿತೆಯೊಬ್ಬಳ ಮೂಲಕ ಸೋಮ ಶೇಖರ್ ಪರಿಚಯವಾಗಿತ್ತು. ಕಳೆದ ವರ್ಷ ಮದುವೆ ನಿಗದಿಯಾಗಿದ್ದರಿಂದ 6 ಲಕ್ಷ ರು. ಆರ್ಥಿಕ ಸಹಾಯ ಮಾಡುವಂತೆ ಸೋಮಶೇಖರ್ ಬಳಿ ದೂರುದಾರೆ ಕೇಳಿದ್ದರು.

ಫ್ಲ್ಯಾಟ್‌ಗೆ ಕರೆದೊಯ್ದು ಅತ್ಯಾಚಾರ: ಕಳೆದ ಅಕ್ಟೋಬರ್‌ನಲ್ಲಿ ದೂರುದಾರೆಯ ಪಿಜಿ ಬಳಿ ಹೋಗಿದ್ದ ಸೋಮಶೇಖರ್, ಹಣ ಕೊಡುವುದಾಗಿ ಆಕೆಯನ್ನು ಲಾಂಗ್ ಫೋರ್ಡ್ ರಸ್ತೆಯಲ್ಲಿರುವ ತಮ್ಮ ಫ್ಲ್ಯಾಟ್‌ಗೆ ಕರೆದೊಯ್ದಿದ್ದರು. ಅಲ್ಲಿ ದೂರುದಾರೆಯ ಇಚ್ಛೆಗೆ ವಿರುದ್ಧವಾಗಿ ಮದ್ಯಪಾನ ಮಾಡಿಸಿ ಅತ್ಯಾಚಾರ ಎಸಗಿದ್ದಾರೆ ಅಲ್ಲದೆ, ನಡೆದ ಘಟನೆ ಯಾರಿಗಾದರೂ ಹೇಳಿದರೆ ಪ್ರಾಣಹಾನಿ ಮಾಡುವುದಾಗಿ ಬೆದರಿಕೆ ಹಾಕಿರುವುದಾಗಿ ಸಂತ್ರಸ್ತ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಈ ದೂರಿನನ್ವಯ ಅಶೋಕನಗರ ಠಾಣೆ ಪೊಲೀಸರು ಸೋಮಶೇಖರ್ ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿದ್ದು, ತನಿಖೆ ಕೈಗೆತ್ತಿಕೊಂಡಿರುವುದಾಗಿ ತಿಳಿಸಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆ ಸೋಮಶೇಖರ್ ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBGM00448111 1. ಜಯಪ್ರಕಾಶ್ ಎಚ್ ಎಂ ಅಲಿಯಾಸ್ ಎಚ್ ಎಂ ಜಯಪ್ರಕಾಶ್ 2. ಮಲಿಯಪ್ಪ ಅಲಿಯಾಸ್ ಮಲಿಯಪ್ಪ ಎಚ್ ಟಿ	ಫ್ಲಾಟ್ ನಂ. 1007 (3 ಬಿಎಚ್‌ಕೆ) ನೆಲಮಹಡಿಯಲ್ಲಿ ಬಹುಮಹಡಿ ಕಟ್ಟಡವು ''ರೋಶನ್ ಗಾರ್ಡೇನಿಯಾ ಅಪಾರ್ಟ್‌ಮೆಂಟ್'' ಎಂದು ಕರೆಯಲ್ಪಡುತ್ತದೆ, ಇದು 1470 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿದ್ದು ಇದರ ಹಕ್ಕು, ಶೀರ್ಷಿಕೆ ಹಾಗೂ ಆಸಕ್ತಿ ಹಾಗೂ 352 ಚದರ ಅಡಿಯ ಅವಿಭಜಿತ ಪಾಲು ಹಾಗೂ ಈ ಭೂಮಿಯ ಎಲ್ಲಾ ಭಾಗಗಳು ಇದು ಪರಿವರ್ತಿಸಲಾದ ಸ್ಥಿರ ಆಸ್ತಿಯಲ್ಲಿ ನಂ. 1373, ಸರ್ವೆ ಸಂ. 95/2 ಮತ್ತು 95/3, ಬಿಬಿಎಂಪಿ ವಾರ್ಡ್ ನಂ. 184, ಉತ್ತರಹಳ್ಳಿ ಗ್ರಾಮ ಮತ್ತು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು – 560025, ಕರ್ನಾಟಕ ಜೊತೆಗೆ ಒಂದು ಕಾರ್ ಪಾರ್ಕಿಂಗ್ ಸ್ಥಳವನ್ನು ಹೊಂದಿದೆ.	26.10.2019	ದಿನಾಂಕ 02.12.2024 ರಂತೆ ರೂ. 94,28,688.45/- (ರೂಪಾಯಿ ತೊಂಬತ್ತ ನಾಲ್ಕು ಲಕ್ಷ ಇಪ್ಪತ್ತ ಎಂಟು ಸಾವಿರದ ಆರು ನೂರ ಎಂಬತ್ತ ಎಂಟು ಮತ್ತು ಪೈಸೆ ನಲವತ್ತ ಐದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್‌ಗಾಗಿ
(ಆರ್ಸಿಲ್ ಸಿಪಿಎಸ್–IV-ಟ್ರಸ್ಟಿನ ಟ್ರಸ್ಟಿ)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

ಬೀದಿನಾಯಿಗಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ ಮಹಿಳೆ

ಬೆಂಗಳೂರು: ಕಾಣೆಯಾದ ಬೀದಿನಾಯಿಗಾಗಿ ಮಹಿಳೆಯೊಬ್ಬರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ. ಕಲ್ಯಾಣನಗರದ ಎಚ್‌ಆರ್‌ಬಿಆರ್ ಲೇಔಟ್ ನಿವಾಸಿ ಡಾ. ಪುನೀತಾ ರಂಗಸ್ವಾಮಿಯವರು ಬೀದಿ ನಾಯಿ ಕಾಣೆಯಾಗಿದೆ ಎಂದು ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಬೀದಿ ನಾಯಿಗೆ ಹಿಂಸೆ ನೀಡಿ, ಬೇರೆ ಕಡೆ ಬಿಟ್ಟು ಬಂದಿದ್ದಾರೆಂದು ಪುನೀತಾ ತಮ್ಮದೇ ಲೇಔಟ್‌ನ ಅನಿಲ್ ಎಂಬುವರು ವಿರುದ್ಧ ಆರೋಪ ಮಾಡಿದ್ದಾರೆ. ಎಚ್‌ಆರ್‌ಬಿಆರ್ ಲೇಔಟ್‌ನ ಎರಡನೇ ಬ್ಲಾಕ್‌ನಲ್ಲಿದ್ದ 7 ತಿಂಗಳ ನಾಯಿಗೆ ದೂರುದಾರೆ ಪುನೀತಾ ರಂಗಸ್ವಾಮಿ ಅವರು ನಿತ್ಯ ಊಟ ಹಾಕುತ್ತಿದ್ದರು. ಹೀಗಾಗಿ, ನಿಯತ್ತಿನ ನಾಯಿ ಪುನೀತಾ ಅವರ ಮನೆ ಮುಂದೆ ಕಾವಲಾಗಿ ಇರುತ್ತಿತ್ತು. 2025ರ ಡಿ. 14ರಂದು ನಾಯಿ ಬಿಸ್ಕೆಟ್ ಹಾಗೂ ನೀರು ಕುಡಿದು ಮನೆಯ ಮುಂದೆ ಮಲಗಿತ್ತು. ಆದರೆ, ಡಿ. 15ರ ಬೆಳಗ್ಗೆಯಿಂದ ನಾಯಿ ಕಾಣೆಯಾಗಿದೆ. ನಾಯಿ ಎಲ್ಲಿ ಹೋಯಿತು ಎಂದು ತಿಳಿಯಲು ಅನಿಲ್ ಅವರ ಬಳಿ ಪುನೀತಾ ಅವರು ಡಿ. 14ರ ರಾತ್ರಿ 11

ಗಂಟೆಯಿಂದ 15ರ ಮಧ್ಯಾಹ್ನ 12 ಗಂಟೆವರೆಗಿನ ಸಿಸಿಟಿವಿ ದೃಶ್ಯಾವಳಿ ಕೇಳಿದ್ದಾರೆ. ಆದರೆ, ಅನಿಲ್ ಸಿಸಿಟಿವಿ ದೃಶ್ಯ ನೀಡಲು ನಿರಾಕರಿಸಿದ್ದಾರೆ. ಹೀಗಾಗಿ, ಅನಿಲ್ ಮೇಲೆ ಅನುಮಾನವಿದೆ. ಅವರೇ ನಾಯಿಗೆ ಹಿಂಸಿಸಿ ಬೇರೆ ಕಡೆ ಬಿಟ್ಟು ಬಂದಿದ್ದಾರೆಂದು ದೂರಿನಲ್ಲಿ ದಾಖಲಿಸಿದ್ದಾರೆ.

ಅಲ್ಲದೇ, ಕಾಣೆಯಾದ ನಾಯಿಯ ತಾಯಿ ಕೂಡ ಕಳೆದ ವರ್ಷ ದೀಪಾವಳಿ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ನಾಪತ್ತೆಯಾಗಿತ್ತು. ಈಗ ಮರಿ ಕೂಡ ಕಾಣೆಯಾಗಿದೆ. ಇನ್ನೂ ಮೂರು ಬೀದಿನಾಯಿಗಳಿದ್ದು ಏನಾದರೂ ಆಗುತ್ತದೆ ಎಂಬ ಭಯವಿದೆ. ಹೀಗಾಗಿ, ಆರೋಪಿ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಪುನೀತಾ ಒತ್ತಾಯಿಸಿದ್ದಾರೆ.

NAGA AGRITECH
#354/8, Kempalinganahalli Road, Kunigal Bypas,
Nelamangala, Bengaluru Rural, Karnataka
GSTIN: 29AGAPG7652G1ZD Mobile : 9008566111

ಸಾರ್ವಜನಿಕ ಪ್ರಕಟಣೆ

ಸಂತೋಷ್ ಎಮ್ S/o. ಮುನಿರಾಜು E. (ಬಾವಿಕೆರೆ ನಿವಾಸಿ) ಎಂಬ ಕೆಲಸಗಾರನು ನಾಗ ಅಗ್ರಿಟೆಕ್, ನೆಲಮಂಗಲ ಎಂಬ ಅಂಗಡಿಯಲ್ಲಿ ಕಳೆದ ಮೂರುವರೆ ತಿಂಗಳಿನಿಂದ ಕೆಲಸ ಮಾಡುತ್ತಿದ್ದು ದಿನಾಂಕ 21–12–2024ರಿಂದ ಕೆಲಸಕ್ಕೆ ಗೈರು ಹಾಜರಾಗಿರುತ್ತಾನೆ ಹೀಗಾಗಿ ಇನ್ನು ಮುಂದೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನಮ್ಮೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ. ನಮ್ಮ ಹೆಸರು ಹೇಳಿಕೊಂಡು ಹೊರಗಡೆ ಸಾರ್ವಜನಿಕವಾಗಿ ಆತ ಯಾವುದೇ ವ್ಯವಹಾರವಾಗಲಿ ಅಥವಾ ಇತರೆ ಚಟುವಟಿಕೆ ನಡೆಸಿದರೆ ನಾವು ಜವಾಬ್ದಾರರಲ್ಲ. ಆತ ನಡೆಸುವ ಯಾವುದೇ ಕ್ರಿಯೆಗೆ ಆತನೇ ಖುದ್ದು ಜವಾಬ್ದಾರನಾಗಿರುತ್ತಾನೆ.

For NAGA AGRITECH
Authorized Signatory

बैंक ऑफ़ बड़ौदा
Bank of Baroda

ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ
ನಂ. 274, ಮೊದಲ ಮಹಡಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ,
ಬೆಂಗಳೂರು 560066. ದೂರವಾಣಿ ಸಂಖ್ಯೆ: 080–28451915/28452286
ಇ–ಮೇಲ್: vjwhit@bankofbaroda.co.in

ಲಾಕರ್ ಓಪನ್ ನೋಟಿಸ್

ಈ ಕೆಳಗಿನ ಬ್ಯಾಂಕ್ ಆಫ್ ಬರೋಡಾ, ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ, ಬೆಂಗಳೂರಿನಲ್ಲಿ ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ,

ಲಾಕರ್ ಹೊಂದಿರುವವರ ಹೆಸರು	ಲಾಕರ್ ಸಂಖ್ಯೆ	ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
ಸೌಭಾಗ್ಯ ಡಿ. ಆರ್ ಕೋಂ ನಾರಾಯಣಸ್ವಾಮಿ ಮಲ್ಲಸಂದ್ರ, ನಡಾವತಿ ಅಂಚೆ, ಬೆಂಗಳೂರು 560067	8951AX0085 (Old No97)	ರೂ. 14,573/–	22.01.2025 ಮಧ್ಯಾಹ್ನ 3.00

ದಿನಾಂಕ: 07.01.2025
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 960/2024

ಅರ್ಜಿದಾರರು: ಶ್ರೀಮತಿ ತಿಮ್ಮಮ್ಮ ಕೋಂ ಲೇಟ್ ಚಿಕ್ಕಬೋರಯ್ಯ ಬಿನ್ ಲೇಟ್ ಗಿರಿಯಯ್ಯ ವಯಸ್ಸು 70 ವರ್ಷ ವಾಸ: ದೊಡ್ಡ ಮರಳವಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 3. ಗ್ರಾಮ ಲೆಕ್ಕಾಧಿಕಾರಿಗಳು, ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಕ್ಕರವರಾದ ಶ್ರೀಮತಿ ದೊಡ್ಡ ತಿಮ್ಮಮ್ಮ ಬಿನ್ ಲೇಟ್ ಗಿರಿಯಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 01.04.1984 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 13.02.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜನವರಿ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 959/2024

ಅರ್ಜಿದಾರರು: ಶ್ರೀಮತಿ ತಿಮ್ಮಮ್ಮ ಕೋಂ ಲೇಟ್ ಚಿಕ್ಕಬೋರಯ್ಯ ಬಿನ್ ಲೇಟ್ ಗಿರಿಯಯ್ಯ ವಯಸ್ಸು 70 ವರ್ಷ ವಾಸ: ದೊಡ್ಡ ಮರಳವಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 3. ಗ್ರಾಮ ಲೆಕ್ಕಾಧಿಕಾರಿಗಳು, ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಣ್ಣರವರಾದ ಶ್ರೀ ಚಲುವರಾಜು ಬಿನ್ ಲೇಟ್ ಗಿರಿಯಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 06.09.1975 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 13.02.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜನವರಿ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 958/2024

ಅರ್ಜಿದಾರರು: ಶ್ರೀಮತಿ ತಿಮ್ಮಮ್ಮ ಕೋಂ ಲೇಟ್ ಚಿಕ್ಕಬೋರಯ್ಯ ಬಿನ್ ಲೇಟ್ ಗಿರಿಯಯ್ಯ ವಯಸ್ಸು 70 ವರ್ಷ ವಾಸ: ದೊಡ್ಡ ಮರಳವಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 3. ಗ್ರಾಮ ಲೆಕ್ಕಾಧಿಕಾರಿಗಳು, ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ಗಿರಿಯಯ್ಯ ಬಿನ್ ಲೇಟ್ ಮೂಗಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 05.05.1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 13.02.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜನವರಿ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 957/2024

ಅರ್ಜಿದಾರರು: ಶ್ರೀಮತಿ ತಿಮ್ಮಮ್ಮ ಕೋಂ ಲೇಟ್ ಚಿಕ್ಕಬೋರಯ್ಯ ಬಿನ್ ಲೇಟ್ ಗಿರಿಯಯ್ಯ ವಯಸ್ಸು 70 ವರ್ಷ ವಾಸ: ದೊಡ್ಡ ಮರಳವಾಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 3. ಗ್ರಾಮ ಲೆಕ್ಕಾಧಿಕಾರಿಗಳು, ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಕಾಳಮ್ಮ ಕೋಂ ಲೇಟ್ ಗಿರಿಯಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 01.01.1960 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 13.02.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜನವರಿ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ದ್ವಿತೀಯ ದರ್ಜೆ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ:869/ 2024

ಅರ್ಜಿದಾರರು: ಶ್ರೀಮತಿ. ಸೌಭಾಗ್ಯ ಕೋಂ ಲೇಟ್ ರಾಮನಾಯ್ಕ ವಯಸ್ಸು ಸುಮಾರು 46 ವರ್ಷ, ವಾಸ:– ದೊಡ್ಡತಾಂಡ್ಯ ಗ್ರಾಮ ಶಿವನಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ತಹಶೀಲ್ದಾರ್‌ರವರು ಜನನ ಮತ್ತು ಮರಣ ನೊಂದಣಾಧಿಕಾರಿಗಳು ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, 2. ಕಂದಾಯ ಗ್ರಾಮ ಲೆಕ್ಕಾಧಿಕಾರಿ ದೊಡ್ಡತಾಂಡ್ಯ ಗ್ರಾಮ, ಶಿವನಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 3 ನೇ ಅರ್ಜಿದಾರರ ತಂದೆಯವರಾದ ರಾಮನಾಯ್ಕ ಬಿನ್ ಲೇಟ್ ಅಣ್ಣನಾಯ್ಕ ರವರು ಇದೇ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡತಾಂಡ್ಯ ಗ್ರಾಮದಲ್ಲಿ ದಿನಾಂಕ:05.09.2016 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಕೋರಿ ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 11.02.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ17.12.2024 ರಂದು ನನ್ನ ಸ್ವಹಸ್ತಾಕ್ಷರು ಮತ್ತು ನ್ಯಾಯಾಲಯದ ಮೊಹರನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ.

ಅರ್ಜಿದಾರರ ಪರ ವಕೀಲರು
ಶಿವಶಂಕರ್.ಟಿ.ಎನ್
ಸ್ಥಳ: ಕನಕಪುರ
ದಿನಾಂಕ:17.12.2024

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:956/ 2024

ಅರ್ಜಿದಾರರು: ಶ್ರೀ.ರಾಮಕೃಷ್ಣ ಬಿನ್ ಲೇಟ್ ನೀಲಹೆಗ್ಗಡೆ ವಯಸ್ಸು ಸುಮಾರು 63 ವರ್ಷ, ವಾಸ:– ಲಕ್ಷ್ಮಿಪುರ ಗ್ರಾಮ ಕಸಬಾ ಹೋಬಳಿ, ಮಳಗಾಳು ಅಂಚೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1, 2, 3, 5, 6, 7 ಅರ್ಜಿದಾರರ ತಂದೆಯವರಾದ ಮತ್ತು 4ನೇ ಅರ್ಜಿದಾರರ ಮಾವನವರಾದ ಶ್ರೀ.ನೀಲಹೆಗ್ಗಡೆ ಬಿನ್ ಲೇಟ್ ದಾಸೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮಳಗಾಳು ಅಂಚೆ, ಕಸಬಾ ಹೋಬಳಿ, ಲಕ್ಷ್ಮಿಪುರ ಗ್ರಾಮ ದಲ್ಲಿ ದಿನಾಂಕ:29.07.1995 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 13.02.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2025 ರ ಜನವರಿ 7ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ.

ಅರ್ಜಿದಾರರ ಪರ ವಕೀಲರು
ಸಾಗರ್.ಟಿ.ಎಸ್., ವಕೀಲರು
ದಿನಾಂಕ:
ಸ್ಥಳ: ಕನಕಪುರ

ಸಮಾಚಾರ ಸಣ್ಣದಲ್ಲ

11ಕ್ಕೆ ನಾಟಕ ಪ್ರದರ್ಶನ

ಬೆಂಗಳೂರು: 'ಹಸ್ಬೆಂಡ್ 360' ನಾಟಕ ಪ್ರದರ್ಶನವನ್ನು ಜ.11ರಂದು ಸಂಜೆ 7:15ಕ್ಕೆ ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಲಾಗಿದೆ. ಅಂತರಂಗ

ನಾಟಕ ತಂಡದ ಅರ್ಚನಾ ಶ್ಯಾಮ್ ಮತ್ತು ವಿನಯ್ ಜಾಯಿಸ್ ನಿರ್ದೇಶಿಸಿರುವ ಈ ನಾಟಕ ತನ್ನ 23ನೇ ಪ್ರದರ್ಶನ ಕಾಣುತ್ತಿದೆ. ಗಂಡ ಹೆಂಡತಿಯ ನಡುವಿನ ಹಾಸ್ಯ ಸನ್ನಿವೇಶಗಳನ್ನು ಒಳಗೊಂಡ ನಾಟಕ ಇದಾಗಿದ್ದು , ಟಿಕೆಟ್‌ಗಳು ಬುಕ್ ಮೈ ಶೋ ನಲ್ಲಿ ಲಭ್ಯವಿದೆ ಎಂದು ತಂಡ ತಿಳಿಸಿದೆ.

12ಕ್ಕೆ ವಿವೇಕಾನಂದರ ವಿಶೇಷ ಕಾರ್ಯಕ್ರಮ

ಬೆಂಗಳೂರು: ಪರಂ ಸಂಸ್ಥೆಯ ವತಿಯಿಂದ ಜ.12ರಂದು 'ವೀರ ಸಂನ್ಯಾಸಿಯ ಆತ್ಮಗೀತೆ' ಎನ್ನುವ ವಿಶೇಷ ಕಾರ್ಯಕ್ರಮವನ್ನು ಜಯನಗರದ ಮಂಗಳ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಕುರಿತಾದ ನೃತ್ಯ-ಸಂಗೀತ ವೈಭವ ಅನಾವರಣಗೊಳ್ಳಲಿದೆ. ಸುಮಾರು ಎರಡು ಗಂಟೆಗಳ ಕಾಲ ನಡೆಯುವ ಈ ನೃತ್ಯ-ಸಂಗೀತ ವೈಭವದಲ್ಲಿ 35ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಕಲಾವಿದರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಾಗ್ಮಿ, ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರಿಂದ ಸ್ವಾಮಿ ವಿವೇಕಾನಂದ ಅವರ ಕುರಿತಾದ ವಿಶೇಷ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನೃತ್ಯ-ಸಂಗೀತ ವೈಭವದ ನಿರ್ದೇಶನವನ್ನು ಕಾರ್ತಿಕ್ ಸರ್ಗುರ್ ಮಾಡಿದ್ದು, ಸಂಗೀತವನ್ನು ಪ್ರವೀಣ್ ಡಿ. ರಾವ್ ಅವರು ನಿರ್ದೇಶನ ಮಾಡಿದ್ದಾರೆ. ಇನ್ನುಳಿದಂತೆ ಗಾಯಕಿ ವಾರಿಜಾಶ್ರೀ ವೇಣುಗೋಪಾಲ್, ಸಿದ್ಧಾರ್ಥ್ ಸೇರಿ ಹಲವು ಗಾಯಕರು ಹಾಡಲಿದ್ದಾರೆ. ವಾದ್ಯವೃಂದದಲ್ಲಿ ಶೃತಿ ಕಾಮತ್, ಜಗದೀಶ್ ಕುರ್ತಿಕೋಟೆ, ಅಮಿತ್‌ರಾಜ್, ಸಾಯಿ ವಂಶಿ ಅವರು ಇರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿ ಆವರಣದಲ್ಲಿ ಕಸ ಹಾಕಿದರೆ ದಂಡ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣ ಸ್ವಚ್ಛವಾಗಿಡಲು ಬೆಂಗಳೂರು ವಿಶ್ವವಿದ್ಯಾಲಯ ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ದಂಡ ಪ್ರಯೋಗಕ್ಕೆ ಮುಂದಾಗಿದೆ. ಈ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಬೆಂಗ ಳೂರು ವಿಶ್ವವಿದ್ಯಾಲಯದ ಆವರಣವನ್ನು ಈಗಾಗಲೇ ಕಸಮುಕ್ತ ಮತ್ತು ಪ್ಲಾಸ್ಟಿಕ್ ಮುಕ್ತ ಪ್ರದೇಶವನ್ನಾಗಿ ಘೋಷಣೆ ಮಾಡಲಾಗಿದೆ. ಆದರೆ ವಿವಿ ಆವರಣದಲ್ಲಿ ಓಡಾಡುವ ಸಾರ್ವಜನಿಕರು ಮತ್ತು ವಾಹನ ಸವಾರರು ಕಸ ಹಾಕುವುದು, ಪ್ಲಾಸ್ಟಿಕ್ ಹಾಕುವ ಪ್ರಕರಣಗಳು ಕಂಡು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಕಸ ಹಾಕೋ ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ಸ್ಥಳದಲ್ಲಿ ದಂಡ ಹಾಕುವ ನಿರ್ಧಾರಕ್ಕೆ ವಿವಿ ಬಂದಿದೆ. ಕಸ ಹಾಕುವ ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ಇನ್ನು ಮುಂದೆ ಸ್ಥಳದಲ್ಲೆ ದಂಡ ಹಾಕಲಾಗುತ್ತದೆ. ಒಂದು ವೇಳೆ ದಂಡದ ನಂತರವೂ ಕಸ ಹಾಕೋದು ಮುಂದುವರೆಸಿದರೆ ಅಂತಹವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ವಿಶ್ವವಿದ್ಯಾಲಯ ನೀಡಿದೆ.

ವಂಚಕಿ ಐಶ್ವರ್ಯ ಕಾರು ಶಾಸಕ ವಿನಯ್ ಬಳಕೆ

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ ಹೆಸರಲ್ಲಿ ಹಲವು ವಂಚನೆ ನಡೆಸಿರುವ ಐಶ್ವರ್ಯಾ ಗೌಡ ಹೆಸರಿನಲ್ಲಿ ನೋಂದಣಿಯಾಗಿರುವ ಐಷಾರಾಮಿ ಬೆಂಜ್ ಕಾರನ್ನು ಶಾಸಕ ವಿನಯ್ ಕುಲಕರ್ಣಿ ಬಳಕೆ ಮಾಡಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ. ಐಶ್ವರ್ಯ ಗೌಡ ಹೆಸರಿನಲ್ಲಿ ನೋಂದಣಿಯಾಗಿರುವ ಐಷಾರಾಮಿ ಬೆಂಜ್ ಕಾರನ್ನು ಬಳಸಿದ ವಿಚಾರವು ತನಿಖೆಯಲ್ಲಿ ಬೆಳಕಿಗೆ ಬರುತ್ತಿದ್ದಂತೆ ಶಾಸಕ ವಿನಯ್ ಕುಲಕರ್ಣಿ ಅವರಿಗೆ ನೋಟಿಸ್ ನೀಡಿ ಪೊಲೀಸರು ವಿಚಾರಣೆ ನಡೆಸುವ ಸಾಧ್ಯತೆಯಿದೆ. ಈಗಾಗಲೇ ಒಂದು ಬಿಎಂಡಬ್ಲ್ಯೂ, ಆಡಿ, ಫಾರ್ಚೂನರ್ ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಐಶ್ವರ್ಯಾ ಬಳಿ ಇನ್ನೂ ಎರಡು ಬೆಂಜ್ ಕಾರುಗಳಿದ್ದವು. ಈ ಎರಡು ಬೆಂಜ್ ಕಾರುಗಳ ಬಗ್ಗೆ ಐಶ್ವರ್ಯ ಇನ್ನೂ ಬಾಯಿಬಿಟ್ಟಿಲ್ಲ. ವಿಚಾರಣೆಯಲ್ಲಿ ನನಗೆ ಗೊತ್ತಿಲ್ಲ ಎಂದು ಐಶ್ವರ್ಯ ಹೇಳುತ್ತಿರುವುದರಿಂದ ಎರಡು ಬೆಂಜ್ ಕಾರುಗಳ ಮೂಲದ ಬಗ್ಗೆ ಪೊಲೀಸರು ತನಿಖೆಯನ್ನು ಕೈಗೊಂಡಾಗ ಎರಡರಲ್ಲಿ ಒಂದು ಬೆಂಜ್ ಕಾರನ್ನು ವಿನಯ್ ಕುಲಕರ್ಣಿ ಬಳಸುತ್ತಿರುವುದು ಗೊತ್ತಾಗಿದೆ.

ವಿನಯ್ ಕುಲಕರ್ಣಿ ವಿಚಾರಣೆ ಸಾಧ್ಯತೆ: ಐಶ್ವರ್ಯಾ ಗೌಡ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಅಶ್ವಥ್ ಗೌಡ ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ 5ನೇ ಆರೋಪಿಯಾಗಿದ್ದಾನೆ. ವಿನಯ್ ಕುಲಕರ್ಣಿಯ ಆಪ್ತನಾಗಿದ್ದ ಅಶ್ವಥ್ ಗೌಡ ಐಶ್ವರ್ಯಗೆ ಚಾಲಕನಾಗಿದ್ದು ಹೇಗೆ ಎನ್ನುವುದು ದೊಡ್ಡ ಪ್ರಶ್ನೆ ಯಾಗಿದೆ. ಈ ಕಾರಣಕ್ಕಾಗಿ ಐಶ್ವರ್ಯಾ ಗೌಡ ದಂಪತಿಯೊಂದಿಗೆ ಸಂಬಂಧ, ವ್ಯವಹಾರ ಕುರಿತು ಪೊಲೀಸರು ವಿನಯ್ ಕುಲಕರ್ಣಿ ಅವರನ್ನು ವಿಚಾರಣೆಗೆ ಒಳಪಡಿಸುವ ಸಾಧ್ಯತೆಯಿದೆ.

ಇಬ್ಬರಿಗೂ ಪರಿಚಯ: ವಂಚನೆ ಪ್ರಕರಣದ ಆರೋಪಿಗಳಾಗಿರುವ ಐಶ್ವರ್ಯ ಗೌಡ ದಂಪತಿ ಹಾಗೂ ದೂರುದಾರೆ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲಕಿ ವನಿತಾ ಐತಾಳ್‌ಗೆ ವಿನಯ್ ಕುಲಕರ್ಣಿ ಚಿರಪರಿಚಿತರಾಗಿದ್ದಾರೆ. ವಂಚನೆ ಪ್ರಕರಣ ದಾಖಲಾಗುವ ಮುನ್ನ ಐಶ್ವರ್ಯ ಗೌಡ ಮತ್ತು ದೂರುದಾರೆ ವನಿತಾ ಐತಾಳ್ ಅವರನ್ನು ವಿನಯ್ ಯಶವಂತಪುರದ ಖಾಸಗಿ ಹೋಟೆಲ್‌ನಲ್ಲಿ ಭೇಟಿ ಮಾಡಿ ಸಂಧಾನ ನಡೆಸಲು ಯತ್ನಿಸಿದ್ದರು. ಐಶ್ವರ್ಯ ಗೌಡ ಮತ್ತು ವನಿತಾ ಐತಾಳ್ ಸಹ ಮಾಧ್ಯಮಗಳ ಜತೆ ಮಾತನಾಡುವಾಗ ವಿನಯ್ ನಮಗೆ ಪರಿಚಯ ಇರುವುದಾಗಿ ಹೇಳಿಕೊಂಡಿದ್ದರು. ಯಶವಂತಪುರದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಭೇಟಿಯಾಗಿ ಇಬ್ಬರನ್ನೂ ಕೂರಿಸಿ ಬುದ್ಧಿವಾದ ಹೇಳಿದ್ದಾಗಿಯೂ ಐಶ್ವರ್ಯ ಗೌಡ, ವನಿತಾ ಐತಾಳ್ ತಿಳಿಸಿದ್ದರು.

ಕ್ರಾಂತಿವೀರ ಬ್ರಿಗೇಡ್ ಫೆ.4ಕ್ಕೆ

ಹಿಂದು ಧರ್ಮ ರಕ್ಷಣೆ ಮಾಡಲು ಹಿಂದುಗಳು ಒಂದಾಗಬೇಕು: ಈಶ್ವರಪ್ಪ

ಬೆಂಗಳೂರು: ಬಿಜೆಪಿಯಿಂದ ಉಚ್ಚಾಟಿತವಾಗಿರುವ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ಅವರ ಕ್ರಾಂತಿವೀರ ಬ್ರಿಗೇಡ್ ಬಸವನ ಬಾಗೇವಾಡಿಯಲ್ಲಿ ಫೆ.4 ರಂದು ಉದ್ಘಾಟನೆ ಆಗಲಿದೆ.

ಖಾಸಗಿ ಹೋಟೇಲ್‌ನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆ.ಎಸ್. ಈಶ್ವರಪ್ಪ, ಜಾತ್ಯತೀತವಾಗಿ ಮತ್ತು ಪಕ್ಷಾತೀತವಾಗಿ ಈ ಕಾರ್ಯಕ್ರಮ ನಡೆಯಲಿದೆ. ಹಿಂದು ಧರ್ಮ ರಕ್ಷಣೆ ಮಾಡಲು ಹಿಂದುಗಳು ಒಂದಾಗಬೇಕು. ಹಿಂದುಗಳು ಒಂದಾಗದಿದ್ದರೆ ಬಹಳ ಕಷ್ಟ. 1008 ಮಠಾಧೀಶರ ಪಾದಪೂಜೆಯೊಂದಿಗೆ ಬ್ರಿಗೇಡ್ ಉದ್ಘಾಟನೆ ಆಗಲಿದೆ ಎಂದರು.

ಹಿಂದುಗಳು ಮತ್ತು ಶೋಷಿತರು ಒಂದಾಗಬೇಕು ಎಂಬ ಉದ್ದೇಶದೊಂದಿಗೆ ಈ ಸಂಘಟನೆ ಕಾರ್ಯನಿರ್ವಹಲಿದ್ದು, ಕಾಂತೇಶ್ ಕಾರ್ಯಾಧ್ಯಕ್ಷರಾಗಿ ಹಾಗೂ ಗೂಳಿಹಟ್ಟಿ ಶೇಖರ್, ಮುಕುಡಪ್ಪ ಅವರು ಸಂಚಾಲಕರಾಗಿ ಕಾರ್ಯನಿರ್ವಹಣೆ ಮಾಡಲಿದ್ದಾರೆ ಎಂದರು.

ಈ ಹಿಂದೆ ರಾಯಣ್ಣ ಬ್ರಿಗೇಡ್ ಕಟ್ಟಿದ್ದಾಗ ಯಾವುದೇ ಸ್ವಾಮೀಜಿಗಳು ನೇತೃತ್ವ ತೆಗೆದುಕೊಂಡಿರಲಿಲ್ಲ. ಹಿಂದೆ ದೊಡ್ಡವರ ಮಾತು ಕೇಳುವ ಅಭ್ಯಾಸ ನನಗೆ ಅವತ್ತು ಇತ್ತು, ಇವತ್ತು ಇಲ್ಲ. ಅಂದು ದೊಡ್ಡವರ ಮಾತು ಕೇಳಿ ರಾಯಣ್ಣ ಬ್ರಿಗೇಡ್ ನಿಲ್ಲಿಸಿದ್ದೆ. ಇಂದು ಯಾವುದೇ ಕಾರಣಕ್ಕೂ ಈ ಬ್ರಿಗೇಡ್ ನಿಲ್ಲುವುದಿಲ್ಲ. ಇದು ಯಾವುದೇ ಪಕ್ಷದ ಬ್ರಿಗೇಡ್ ಆಗಿಲ್ಲ. ಬಿಜೆಪಿಯಲ್ಲಿನ ಅವಮಾನಿತರು, ಅಸಮಾನಿತರು ನಮ್ಮ ಜತೆಯಿದ್ದಾರೆ ಎಂಬ ಪ್ರಶ್ನೆ ಇಲ್ಲ. ಫೆಬ್ರವರಿ 4ರಂದು ಎಲ್ಲವೂ ವೇದಿಕೆ ಮೇಲೆ ಗೊತ್ತಾಗುತ್ತದೆ ಎಂದರು.

ಹಿಂದೂಗಳು ಒಂದಾಗಬೇಕು: ಕ್ರಾಂತಿವೀರ ಬ್ರಿಗೇಡ್‌ನ ಮಾರ್ಗದರ್ಶಕ ಮಂಡಳಿ ಅಧ್ಯಕ್ಷ ಶ್ರೀ ಸೋಮೇಶ್ವರ ಸ್ವಾಮೀಜಿ ಮಾತನಾಡಿ, ಹಿಂದುಗಳು ಎಲ್ಲರೂ ಒಂದಾಗಬೇಕು. ಶೋಷಿತರು ಸೇರಿದಂತೆ ಎಲ್ಲಾ ಸಮುದಾಯದವರು ಒಂದಾಗಬೇಕು. ಈ ಕಾರ್ಯಕ್ರಮಕ್ಕೆ ದೇಶದ ಎಲ್ಲ ಮಠಗಳ ಪೂಜ್ಯರು ಹಾಗೂ 1008 ಜನರು ಭಾಗವಹಿಸಲಿದ್ದಾರೆ. ಈ ದೇಶ ರಕ್ಷಣೆ ಮಾಡಬೇಕು. ನಾಡು ನುಡಿಗೆ ದುಡಿಯಬೇಕು. ದಬ್ಬಾಳಿಕೆ ನಿಲ್ಲಿಸಬೇಕು. ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ನಡೆಯುವ ಕಾರ್ಯಕ್ರಮ. ಮಠ ಮಂದಿರಗಳ ಹಾಗೂ ಹಿಂದು ಧರ್ಮದ ರಕ್ಷಣೆಗೆ ಎಲ್ಲರೂ ಒಂದಾಗಬೇಕು. ಹಿಂದು ಧರ್ಮದ ಸೇವೆಗಾಗಿ ಈ ಸಂಘಟನೆ ಮಾಡಲಾಗುತ್ತಿದೆ ಎಂದು ಹೇಳಿದರು.

ಖಾಸಗಿ ಹೊಟೇಲ್‌ನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಕ್ರಾಂತಿವೀರ ಬ್ರಿಗೇಡ್ ಪೋಸ್ಟರ್‌ಗಳನ್ನು ಮಾಜಿ ಡಿಸಿಎಂ ಕೆ.ಎಸ್ ಈಶ್ವರಪ್ಪ ಅವರು ಬಿಡುಗಡೆಗೊಳಿಸಿದರು.

ಕಾಂಗ್ರೆಸ್‌ಗೆ ನೈತಿಕತೆ ಇಲ್ಲ

ಸಂತೋಷ್ ಪಾಟೀಲ್ ಪ್ರಕರಣದಲ್ಲಿ ನಾನು ರಾಜೀನಾಮೆ ಕೊಟ್ಟಿದ್ದೆ. ಆದರೆ ಇದೀಗ ಸಚಿನ್ ಪಾಂಚಾಳ್ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಈ ವಿಚಾರದಲ್ಲಿ ನನಗೊಂದು ನ್ಯಾಯ ಪ್ರಿಯಾಂಕ್‌ಗೆ ಒಂದು ನ್ಯಾಯನಾ ಎಂದು ಮಾಜಿ ಸಚಿವ ಕೆ.ಎಸ್ ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು. ನಾನು ರಾಜೀನಾಮೆ ಕೊಡುವಾಗ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಾ ಬೇಡ ತಡೀರಿ ಅಂದಿದ್ದರು. ರಾಜಕೀಯ ಪಕ್ಷವಾಗಿ ಬಿಜೆಪಿ ಹೋರಾಟ ಮಾಡಿದೆ. ನಾನು ಬಿಜೆಪಿಯನ್ನು ಸಮರ್ಥನೆ ಮಾಡುತ್ತಿಲ್ಲ. ಅವರ ಹೋರಾಟ ಅವರು ಮಾಡಿದ್ದಾರೆ. ಆದರೆ ಪ್ರಿಯಾಂಕ್ ಖರ್ಗೆ ಉತ್ತರ ಏನು ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ಗೆ ನೈತಿಕತೆ ಇಲ್ಲ. ನೈತಿಕತೆ ಇದ್ದರೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದುಕೊಳ್ಳಲಿ. ನಿರ್ದೋಷಿಯಾಗಿ ಹೊರ ಬಂದರೆ ಒಂದು ನಿಮಿಷವೂ ಕಾಯದೇ ವಾಪಸ್ ಸಚಿವ ಸ್ಥಾನ ನೀಡಲಿ ಎಂದರು.

ಶಿಕಾರಿಪುರದಲ್ಲಿ ವಿಜಯೇಂದ್ರ ಅವರ ಗೆಲುವು ನಮ್ಮ ಭಿಕ್ಷೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ನಾನು ವರುಣಾದಲ್ಲಿ ನಿಂತಿದ್ದರೆ ಸಿದ್ದರಾಮಯ್ಯ ಕಥೆ ಏನಾಗುತ್ತಿತ್ತು ಎಂದು ವಿಜಯೇಂದ್ರ ಹೇಳಿದ್ದಾರೆ. ಅಂದರೆ ನಾನೇ ಗೆಲ್ಲಿಸಿದೆ ಎಂಬ ಅರ್ಥ? ಇದು ಹೊಂದಾಣಿಕೆ ರಾಜಕೀಯ ಅಲ್ಲದೇ ಇನ್ನೇನು? ರಾಜಕೀಯ ಬೆತ್ತಲೆ ಇದಾಗಿದೆ.

ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

ಜಯಂತಿ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ: ಸಿ.ಎಂ.

ಅವರು ನನ್ನನ್ನು ಸದಾ ಪ್ರೀತಿಯಿಂದ ಹೀರೋ ಅನ್ನುತ್ತಿದ್ದರು

ಬೆಂಗಳೂರು: ಜಯಂತಿ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲು ಪ್ರಯತ್ನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸದಾಶಿವ ಶೆಣೈ ಅವರ ಅಭಿನಯ ಶಾರದೆ ಜಯಂತಿ ಅವರ ಜೀವನಗಾಥೆ ಲವ್ಲಿ ಬಟ್ ಲೋನ್ಲಿ ಕೃತಿ ಬಿಡುಗಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಜಯಂತಿ ಅವರು ನನ್ನನ್ನು ಸದಾ ಪ್ರೀತಿಯಿಂದ ಹೀರೋ ಅಂತ ಕರಿಯುತ್ತಿದ್ದರು. ಜಯಂತಿ ಅವರು ಅಪಾರ ಮನುಷ್ಯತ್ವ ಹೊಂದಿದ್ದ ಸ್ನೇಹ ಜೀವಿ ಆಗಿದ್ದರು. ಕಲಾವಿದೆಯಾಗಿ ಜಯಂತಿಗೆ ಜಯಂತಿಯವರೇ ಸಾಟಿ ಆಗಿದ್ದರು. ಅವರು ಮಾನವೀಯವಾಗಿ ಬದುಕನ್ನು ನಡೆಸಿ ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ ಎಂದರು.

ನನ್ನ ಮತ್ತು ಜಯಂತಿ ಅವರ ರಾಜಕೀಯ ಮೌಲ್ಯಗಳು ಒಂದೇ ಆಗಿದ್ದವು. ಸಮಾಜ ಪ್ರೇಮಿ, ಮಾನವೀಯತೆಯ ಪ್ರೇಮಿಯಾಗಿದ್ದರು. ವಿಶ್ವದ ಯಾವುದೇ ಭಾಷೆಯ ಸಿನಿಮಾಗಳಿಗಿಂತ ಕನ್ನಡ ಭಾಷೆ ಸಿನಿಮಾಗಳು ಹಿಂದೆಲ್ಲಾ ಒಳ್ಳೆ ಗುಣಮಟ್ಟ ಕಾಯ್ದುಕೊಂಡಿವೆ. ನಾನು ಸದಾ ನಮ್ಮ ಕನ್ನಡ ಚಿತ್ರರಂಗದ ಪ್ರೋತ್ಸಾಹಕ್ಕೆ ನಿಲ್ಲುತ್ತೇನೆ. ಕನ್ನಡ ಸಿನಿಮಾಗಳಿಗೆ ಶೇ.100ರಷ್ಟು ತೆರಿಗೆ ವಿನಾಯಿತಿ ಘೋಷಿಸಿದ್ದು ನಾನೇ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಎಚ್‌ಎಂಪಿವಿ ಬಗ್ಗೆ ಭಯ ಬೇಡ

ಎಚ್ ಎಂ.ಪಿ. ವೈರಾಣು ಬಗ್ಗೆ ಸಾರ್ವಜನಿಕರು ಭಯಪಡಬೇಕಾದ ಅಗತ್ಯವಿಲ್ಲ. ಜಾಗರೂಕರಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಈಗಾಗಲೇ ಆರೋಗ್ಯ ಇಲಾಖೆಯವರು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದಾರೆ. ಎಚ್ ಎಂ.ಪಿ.ವಿ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಇದು ಆತಂಕಾರಿಯಾದ ವೈರಸ್ ಅಲ್ಲ ಹಾಗೂ ಅದು ಚೀನಾದಿಂದ ಬಂದಿಲ್ಲ. ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಉತ್ತಮ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪಿ.ಲಂಕೇಶ್ ಅವರು ನನಗೆ ಗುರುಗಳ ರೀತಿ. ಪತ್ರಿಕೆ ಕಚೇರಿಗೆ ಹೋಗಿ ಮಾರ್ಗದರ್ಶನ ಪಡೆಯುತ್ತಿದ್ದೆ ಎಂದು ಸ್ಮರಿಸಿದರು. ಈ ವೇಳೆ ನಟ ರಮೇಶ್ ಅರವಿಂದ್, ಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್, ನಿರ್ದೇಶಕಿ ಕವಿತಾ ಲಂಕೇಶ್ , ಹಿರಿಯ ಪತ್ರಕರ್ತ ಸಮೀವುಲ್ಲಾ , ಜಯಂತಿ ಅವರ ಪುತ್ರ ಕೃಷ್ಣಕುಮಾರ್ ಮತ್ತು ಕೃತಿಯ ಲೇಖಕರಾದ ಸದಾಶಿವ ಶೆಣೈ, ನಿರ್ಮಾಪಕರಾದ ರಾಕ್ ಲೈನ್ ವೆಂಕಟೇಶ್ ಅವರು ಉಪಸ್ಥಿತರಿದ್ದರು.

ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸದಾಶಿವ ಶೆಣೈ ಅವರ ಅಭಿನಯ ಶಾರದೆ ಜಯಂತಿ ಅವರ ಜೀವನಗಾಥೆ 'ಲವ್ಲಿ ಬಟ್ ಲೋನ್ಲಿ; ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ನಟ ರಮೇಶ್ ಅರವಿಂದ್, ಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್, ನಿರ್ದೇಶಕಿ ಕವಿತಾ ಲಂಕೇಶ್, ಹಿರಿಯ ಪತ್ರಕರ್ತ ಸಮೀವುಲ್ಲಾ , ನಿರ್ಮಾಪಕರಾದ ರಾಕ್ ಲೈನ್ ವೆಂಕಟೇಶ್ ಬಿಡುಗಡೆಗೊಳಿಸಿದರು.

ಜೀವವೈವಿಧ್ಯ ಸಂರಕ್ಷಣೆ ಶೃಂಗ ಸಭೆ

ಬೆಂಗಳೂರು: ಸುಸ್ಥಿರ ಹವಾಮಾನ ಬದಲಾವಣೆ ಮತ್ತು ಹಸಿರು ಭವಿಷ್ಯಕ್ಕಾಗಿ ಸಾಮೂಹಿಕ ಉಪ ಕ್ರಮಗಳನ್ನು ವೇಗಗೊಳಿಸುವ ಸಲುವಾಗಿ ಮಂಗಳವಾರ ನಗರದ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಜೀವವೈವಿಧ್ಯ ಸಂರಕ್ಷಣೆ ಶೃಂಗ ಸಭೆ ನಡೆಯಿತು.

ಇನ್ಫೋಸಿಸ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಸೆಟಲ್ಮೆಂಟ್ ಸಹಭಾಗಿತ್ವದಲ್ಲಿ ನಡೆದ ಶೃಂಗಸಭೆಯಲ್ಲಿ, ನಗರ ಪ್ರದೇಶದ ಸ್ಥಳ ಮತ್ತು ಕ್ಯಾಂಪಸ್‌ಗಳಲ್ಲಿ ಜೀವವೈವಿಧ್ಯಮಯ ಕಾರ್ಯತಂತ್ರವನ್ನು ರೂಪಿಸುವ ನಿಟ್ಟಿನಲ್ಲಿ ಚರ್ಚಿಸಲಾಯಿತು. ಶಿಕ್ಷಣ ತಜ್ಞರು,ಸಂಶೋಧಕರು, ಕಾರ್ಪೊರೇಟ್ ನಾಯಕರು ಸೇರಿದಂತೆ ಹಲವರು ಭಾಗಿಯಾಗಿದ್ದರು. ಭೂಮಿ ಹಂಚಿಕೆ ವಿಧಾನಗಳಿಂದ ವೈವಿಧ್ಯತೆಗೆ ಆಗುತ್ತಿರುವ ನಷ್ಟಗಳು, ಪರಿಸರ ಪುನರ್ ಸ್ಥಾಪನೆ ಯೋಜನೆ, ನಗರ ಜೈವಿಧ್ಯತೆಯ ಏಕೀಕರಣ, ಕ್ಯಾಂಪಸ್ ಸುರಕ್ಷತೆಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಉತ್ತಮ ಸುಸ್ಥಿರತೆಗೆ ಸಹಭಾಗಿತ್ವ ಅಗತ್ಯ: ಇನ್ಫೋಸಿಸ್‌ನ ಸಹ ಸಂಸ್ಥಾಪಕ ನಂದನ್ ನೀಲೇಕಣಿ ಮಾತನಾಡಿ, ಸುಸ್ಥಿರತೆಯು ಒಂದು ಹಂಚಿಕೆಯ ಜವಾಬ್ದಾರಿಯಾಗಿದೆ ಮತ್ತು ಉತ್ತಮ ಸುಸ್ಥಿರತೆ ಹೊಂದಲು ಕೈಗಾರಿಕೆಗಳು ಹಾಗೂ ವಲಯಗಳಾದ್ಯಂತ ಸಹಭಾಗಿತ್ವದ ಅಗತ್ಯವಿದೆ. ನಮ್ಮ ಗ್ರಹದ ನೈಸರ್ಗಿಕ ಸಂಪತ್ತನ್ನು ರಕ್ಷಣೆ ಮಾಡಲು ಅಗತ್ಯವಿರುವ ಕ್ರಮಗಳನ್ನು ನಿರ್ಧರಿಸುವುದು ಈ ಶೃಂಗಸಭೆಯ ಉದ್ದೇಶ ಎಂದರು.

ಐಐಎಚ್‌ಎಸ್ ನ ಸಂಸ್ಥಾಪಕ ನಿರ್ದೇಶಕ ಆರೋಮ ರವಿ ಮಾತನಾಡಿ, ಹವಾಮಾನ ಬಿಕ್ಕಟ್ಟನ್ನು ಪರಿಹರಿಸುವ ನಿಟ್ಟಿನಲ್ಲಿ ಜೈವಿಕ ವೈವಿಧ್ಯ ಕ್ರಿಯೆ ಮತ್ತು ಪ್ರಕೃತಿ ಆಧಾರಿತ ಪರಿಹಾರಗಳಿಗಾಗಿ ನಗರ ಪ್ರದೇಶಗಳು ನಿರ್ಣಾಯಕ ಸ್ಥಳಗಳಾಗಿ ಹೊರಹೊಮ್ಮುತ್ತಿದೆ. ಬಯೋಕನ್ವರ್ಸ್ ಶೃಂಗಸಭೆ 2025 ಸಂಸ್ಥೆಗಳು, ಕಾರ್ಪೊರೇಟ್‌ಗಳು ಜೀವವೈವಿಧ್ಯ ಸಂರಕ್ಷಣೆ ಹಾಗು ಮರುಸ್ಥಾಪನೆ ಗಮನದಲ್ಲಿಡುವಂತೆ ಮಾಡುತ್ತದೆ. ಈ ಮೂಲಕ ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೆ ವಿಶ್ವದ ಅತ್ಯಂತ ಸವಾಲುಗಳಲ್ಲಿ ಒಂದಾಗಿರುವ ಈ ಸಮಸ್ಯೆಗೆ ಪರಿಹಾರ ಒದಗಿಸುತ್ತದೆ ಎಂದರು.

ರಾಜ್ಯ ಲಾಂಛನದಲ್ಲಿ ಕನ್ನಡವಿಲ್ಲ

ಬೆಂಗಳೂರು: ಭಾಷಾನ್ವಯ ರಾಜ್ಯ ರಚನೆಯಾಗಿ 70 ವರ್ಷಗಳು ಸಮೀಪಿಸುತ್ತಿದ್ದರೂ ಕರ್ನಾಟಕ ರಾಜ್ಯ ಲಾಂಛನದಲ್ಲಿ ಮಾತ್ರ ಒಂದಕ್ಷರ ಕೂಡ ಕನ್ನಡವಿಲ್ಲ. ಇತರ ರಾಜ್ಯಗಳು ತಮ್ಮ ರಾಜ್ಯ ಲಾಂಛನಗಳಲ್ಲಿ ರಾಜ್ಯ ಭಾಷೆಯನ್ನು ಹೊಂದಿವೆ, 1956ರ ರಿಂದ ಆಡಳಿತ ನೆಡೆಸಿದ ಯಾವ ಸರ್ಕಾರಗಳು ಇದರ ಬಗ್ಗೆ ಗಮನ ನೀಡದಿರುವುದು ಶೋಚನೀಯ ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಸದ್ಯದ ಲಾಂಛನ ಸೂಕ್ತವಾಗಿ ಬದಲಿಸಬೇಕು. ಕನ್ನಡ ಭಾಷೆಗೆ ಅಗ್ರಸ್ಥಾನ ಸಿಗಲೇಬೇಕು ಕನ್ನಡ ಸಂಸ್ಕೃತಿಗೆ ಅವಕಾಶ ಸಿಗುವಂತಾದರೆ ಉತ್ತಮ. ರಾಜ್ಯ ಲಾಂಛನದಲ್ಲಿ ಕನ್ನಡ ಬರುವುದು ಕನ್ನಡಿಗರ ಅಸ್ತಿತ್ವದ ದೃಷ್ಟಿಯಿಂದ ಅತ್ಯಗತ್ಯ, ಕನ್ನಡ ಲಿಪಿ ಕನ್ನಡ ಸಂಸ್ಕೃತಿಯ ಅವಿಭಾಜ್ಯ ಅಂಗ. ಕನ್ನಡಕ್ಕಾಗಿರುವ ಈ ಅವಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾರಿಸಬೇಕು. ಕೂಡಲೇ ಲಾಂಛನದಲ್ಲಿ ಕನ್ನಡ ಬರುವಂತೆ ಬದಲಾಯಿಸಬೇಕು ಎಂದು ಆಗ್ರಹಿಸಿದ್ದಾರೆ.



ಚಲನಚಿತ್ರ ನಟ ಡಾಲಿ ಧನಂಜಯ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬೆಂಗಳೂರಿನ ನಿವಾಸದಲ್ಲಿ ಮಂಗಳವಾರ ಭೇಟಿ ಮಾಡಿ ತಮ್ಮ ಮದುವೆಯ ಆಮಂತ್ರಣ ನೀಡಿದರು.

ಕಾಂಗ್ರೆಸ್‌ನದ್ದು 60 ಪರ್ಸೆಂಟ್ ಕಮಿಷನ್ ಸರಕಾರ

ಗುತ್ತಿಗೆದಾರರಿಗೆ ನೀಡಲು ಹಣವಿಲ್ಲ, ನಿಗಮಗಳಿಗೆ ಬಿಜೆಪಿಯಿಂದ ಹೆಚ್ಚು ಅನುದಾನ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್‌ನದ್ದು ಪಕ್ಕಾ 60 ಪರ್ಸೆಂಟ್ ಕಮಿಷನ್ ಸರಕಾರ. ಕಾಂಗ್ರೆಸ್ ಆಡಳಿತದಿಂದ ರಾಜ್ಯ ದಿವಾಳಿಯ ಕಡೆಗೆ ಸಾಗುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಮಾಚಲ ಪ್ರದೇಶ ಹಾಗೂ ಕೇರಳದಂತೆಯೇ ಕರ್ನಾಟಕ ಕೂಡ ದಿವಾಳಿಯ ಕಡೆಗೆ ಹೆಜ್ಜೆ ಇಡುತ್ತಿದೆ. ಕಾಂಗ್ರೆಸ್‌ನದ್ದು ಪಕ್ಕಾ 60 ಪರ್ಸೆಂಟ್ ಕಮಿಶನ್ ಸರಕಾರ. ಗುತ್ತಿಗೆದಾರರಿಗೆ ಪಾವತಿಸಲು ಸರಕಾರದ ಬಳಿ ಹಣವಿಲ್ಲ. ಬಿಜೆಪಿ ಸರಕಾರಕ್ಕೆ 40 ಪರ್ಸೆಂಟ್ ಎಂದು ಆರೋಪಿಸಿದ್ದ ಗುತ್ತಿಗೆದಾರರು, ಈಗ ಕಾಂಗ್ರೆಸ್ ಸರಕಾರ ಶೇ.60 ಕಮಿಷನ್ ಸರಕಾರ ಎಂದು ಹೇಳಿ ದಯಾಮರಣಕ್ಕೆ ಅರ್ಜಿ ಸಲ್ಲಿಸಲು ನೋಡುತ್ತಿದ್ದಾರೆ. ಬೆಂಗಳೂರಿನಲ್ಲಿ 30-40 ನಿವೇಶನಕ್ಕೆ 10 ಲಕ್ಷ ರು. 40-60 ನಿವೇಶನಕ್ಕೆ 20 ಲಕ್ಷ ರು., ಇದಕ್ಕೂ ಹೆಚ್ಚಿನ ನಿವೇಶನಗಳಿಗೆ 40 ಲಕ್ಷ ರು. ಲಂಚ ಕಮಿಷನ್ ಕೊಡಬೇಕಿದೆ ಎಂದು ದೂರಿದರು.

ಗುತ್ತಿಗೆದಾರರಿಗೆ ಸರಕಾರ 32 ಸಾವಿರ ಕೋಟಿ ನೀಡಬೇಕಿದೆ. ಈ ಹಣ ತರಲು ಎಲ್ಲದಕ್ಕೂ ಸರಕಾರ ತೆರಿಗೆ ಹಾಕುತ್ತಿದೆ. ಇಲ್ಲವಾದರೆ ಗುತ್ತಿಗೆದಾರರಿಗೆ ಕೆಲಸ ಸ್ಥಗಿತಗೊಳಿಸುತ್ತಾರೆ. ಇದರ ನಡುವೆ ಆಶಾ ಕಾರ್ಯಕರ್ತೆಯರು ಧರಣಿ ಆರಂಭಿಸಿದ್ದಾರೆ. ಜೊತೆಗೆ ತೊಗರಿ ಖರೀದಿಗೆ ಸರಕಾರದ ಬಳಿ ಹಣವಿಲ್ಲ ಎಂದರು.

ಸಚಿವ ಪ್ರಿಯಾಂಕ್ ಖರ್ಗೆಯವರ ಆಪ್ತರನ್ನು ಇನ್ನೂ ಬಂಧಿಸಿಲ್ಲ. ಬಹುಶಃ ಸುರಕ್ಷತೆ ದೃಷ್ಟಿಯಿಂದ ಅವರನ್ನು ಪೊಲೀಸರು ಕಬ್ಬಿನ ಗದ್ದೆಯಲ್ಲಿ ಇರಿಸಿರಬಹುದು. ಅವರ ಆಪ್ತರು ರೌಡಿಶೀಟರ್ ಪಟ್ಟಿಯಲ್ಲಿದ್ದು, ಆ ಪಟ್ಟಿಯಿಂದ ಹೆಸರು ತೆಗೆಸಿದ್ದೇ ಕಾಂಗ್ರೆಸ್ ನಾಯಕರು.

- ಆರ್.ಅಶೋಕ ಪ್ರತಿಪಕ್ಷ ನಾಯಕ

ಅನುದಾನ ಕಡಿತ, ಬಳಕೆ ಮಾಡಿಲ್ಲ: ರಾಜ್ಯ ಬಜೆಟ್‌ನಲ್ಲಿ 3.22 ಲಕ್ಷ ಕೋಟಿ ರು. ನಲ್ಲಿ 1.79 ಲಕ್ಷ ಕೋಟಿ ರು., ಅಂದರೆ 55.69% ಖರ್ಚಾಗಿದೆ. ಇನ್ನೂ 45% ಅನ್ನು ಎರಡು ತಿಂಗಳಲ್ಲಿ ಖರ್ಚು ಮಾಡಬೇಕಿದೆ. ಎಸ್‌ಸಿಎಸ್‌ಪಿಯಲ್ಲಿ 28,527.02 ಕೋಟಿ ರು. ಇದ್ದರೆ, 13,923 ಕೋಟಿ ರು. ಅಂದರೆ 48.81% ಖರ್ಚು ಮಾಡಲಾಗಿದೆ. ಟಿಎಸ್ಪಿಯಲ್ಲಿ 11,515.39 ಕೋಟಿ ರು. ಇದ್ದರೆ, 4,937.59 ಕೋಟಿ ರು. ಅಂದರೆ 42.88% ಖರ್ಚಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ, 3,077 ಕೋಟಿ ರು. ಇದ್ದರೆ 1,076 ಕೋಟಿ ರು. ಅಂದರೆ 34% ಖರ್ಚಾಗಿದೆ. ನುಡಿದಂತೆ ನಡೆದ ಎಂದು ಹೇಳಿ ಯಾವುದೇ ಅನುದಾನ ಖರ್ಚು ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜ.12ಕ್ಕೆ ಅನಂತ ಸೇವಾ ಉತ್ಸವ

ಗಿರಿಜಾ ಶಾಸ್ತ್ರಿಯವರ ಸ್ಮರಣಾರ್ಥ ನಾನಾ ಕಾರ್ಯಕ್ರಮ ಆಯೋಜನೆ

ಬೆಂಗಳೂರು: ಜ.12,13ರಂದು ಅದಮ್ಯ ಚೇತನಾ ಸಂಸ್ಥೆಯ ವತಿಯಿಂದ ಅನಂತ ಸೇವಾ ಉತ್ಸವ 2025ನ್ನು ಹಮ್ಮಿಕೊಳ್ಳಲಾಗಿದೆ.

ಜಯನಗರದ ಎಂ.ಇಎಸ್ ಮೈದಾನದಲ್ಲಿ ಹಮ್ಮಿಕೊಂಡಿರುವ ಎರಡು ದಿನದ ಈ ಸೇವಾ ಉತ್ಸವ

ಕಾರ್ಯಕ್ರಮದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ದಿ. ಅನಂತಕುಮಾರ್ ಅವರ ತಾಯಿ ಗಿರಿಜಾ ಶಾಸ್ತ್ರಿಯವರ ಸ್ಮರಣಾರ್ಥ ಸ್ಥಾಪಿಸಿದ ಅದಮ್ಯ ಚೇತನದ ವತಿಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಬಾರಿ 'ಅಸ್ಮಿತಾ-ಕ್ಷಾತ್ರತೇಜ' ಧೇಯವಾಕ್ಯದೊಂದಿಗೆ ಈ ಬಾರಿಯ ಅನಂತ ಸೇವಾ ಉತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ದೇಶಭಕ್ತಿ, ಪರಿಸರ ಸಂರಕ್ಷಣೆ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಹಲವು ವಿಭಿನ್ನ ಕಾರ್ಯಕ್ರಮಗಳನ್ನು ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ ಎಂದು ಅದಮ್ಯ ಚೇತನ ಸಂಸ್ಥೆ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್ ತಿಳಿಸಿದ್ದಾರೆ.

ಈ ಬಾರಿ ಅಖಂಡ ವಂದೇ ಮಾತರಂ ಗಾಯನ, ದೇಸಿ ಆಟ- ಮಿಲ್ಲೆಟ್ ಊಟ-ಪರಿಸರ ಪಾಠ, ವಿಶಿಷ್ಟ ಸ್ಪರ್ಧೆಗಳು ಹಾಗೂ ವಿಶೇಷ ಕಾರ್ಯಾಗಾರಗಳು, ನಾಟಕ, ಸಂಗೀತ, ನೃತ್ಯ ಕಾರ್ಯಕ್ರಮ ಹಾಗೂ ಹಸಿರುವ ಜೀವನ ಶೈಲಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸುವ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ 8904623967ಕ್ಕೆ ಸಂಪರ್ಕಿಸಿ.

ಯಾವೆಲ್ಲ ಸ್ಪರ್ಧೆಗಳ ಲಭ್ಯ

- ಬೀದಿನಾಟಕ
- ಸಮೂಹ ನೃತ್ಯ ಸ್ಪರ್ಧೆ
- ಸಮೂಹ ಗಾಯನ ಸ್ಪರ್ಧೆ
- ಸಮೂಹ ವಂದೇ ಮಾತರಂ ಗಾಯನ
- ಭಗವದ್ಗೀತಾ ಶ್ಲೋಕಾ ಪಠಣ ಸ್ಪರ್ಧೆ
- ದೇಸಿ ಅಡುಗೆ ಸ್ಪರ್ಧೆ
- ಕಥೆ ಹೇಳುವ ಸ್ಪರ್ಧೆ
- ರಸ ಪ್ರಶ್ನೆ
- ವೇಷಭೂಷಣ ಸ್ಪರ್ಧೆ

ಹಮ್ಮಿಕೊಂಡಿರುವ ಕಾರ್ಯಾಗಾರ

- ತಾರಸಿ ತೋಟ ಕಾರ್ಯಾಗಾರ
- ಮನೆಯ ಕಸದಿಂದ ಗೊಬ್ಬರ ತಯಾರಿಕೆ
- ಸಸ್ಯ ಪ್ರಸರಣ; ಕಸಿ ಮಾಡುವುದು ಇತ್ಯಾದಿ
- ಮನೆಯಲ್ಲೇ ಆರ್ಕಿಡ್ಸ್ ಹೂವು ಕೃಷಿ
- ಆರೋಗ್ಯಕರ ಸಿರಿಧಾನ್ಯ ತಿಂಡಿ-ತಿನಿಸು ತಯಾರಿಕೆ
- ರಾಸಾಯನಿಕ ಮುಕ್ತ ಸಾಬೂನು ತಯಾರಿಕೆ
- ಶೂನ್ಯ ತ್ಯಾಜ್ಯ ಶಾಲೆ

ಎಸ್ಕಾಂ ಸಿಬ್ಬಂದಿಗೆ ನಗದುರಹಿತ ಚಿಕಿತ್ಸೆ

ಇಂಧನ ಇಲಾಖೆ ನೌಕರರ ಬೇಡಿಕೆ ಈಡೇರಿಕೆಗೆ ಬದ್ಧ: ಸಚಿವ ಕೆ.ಜೆ. ಜಾರ್ಜ್

ಸಚಿವ ಕೆ.ಜೆ. ಜಾರ್ಜ್‌ರವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂಜಿನಿಯರ್‌ಗಳ ಸಂಘದ 2025ರ ತಾಂತ್ರಿಕ ದಿನಚರಿ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದರು.

ಬೆಂಗಳೂರು: ಇಂಧನ ಇಲಾಖೆ ಸಿಬ್ಬಂದಿಗೆ ತಲಾ 5 ಲಕ್ಷ ರು.ವರೆಗೆ ನಗದು ರಹಿತ ವೈದ್ಯಕೀಯ ಸೌಲಭ್ಯ ನೀಡಲಾಗುವುದು ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂಜಿನಿಯರ್‌ಗಳ ವಜ್ರಮಹೋತ್ಸವ ಸಂವಹನ ಉಪನ್ಯಾಸ ಹಾಗೂ ಸಂಘದ 2025ರ ತಾಂತ್ರಿಕ ದಿನಚರಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಲಾಖೆಯ ಸಿಬ್ಬಂದಿಗೆ ನಗದು ರಹಿತ ವೈದ್ಯ ಸೌಲಭ್ಯ ನೀಡಲಾಗುವುದು ಎಂದರು.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, ಈಗಾಗಲೇ ಸೆಸ್ಕ್ ಕಂಪನಿಯು ತನ್ನ ಸಿಬ್ಬಂದಿಗೆ ನಗದು ರಹಿತ ವೈದ್ಯ ಸೌಲಭ್ಯ ಕಲ್ಪಿಸಿದಂತೆ ಎಲ್ಲಾ ಎಸ್ಕಾಂಗಳಲ್ಲೂ ಶೀಘ್ರವೇ ಈ ಸೌಲಭ್ಯ ಕಲ್ಪಿಸುತ್ತೇವೆ. ಇಲಾಖೆಯ ಹಿರಿತನದ ಆಧಾರದ ಮೇಲೆ ಬಡ್ತಿ, ಹುದ್ದೆಗಳ ಭರ್ತಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೆ ಅಗತ್ಯ ರೀತಿ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯ ಅಧಿಕಾರಿಗಳು ಹಾಗೂ ನೌಕರರ ಎಲ್ಲಾ ಬೇಡಿಕೆ ಈಡೇರಿಸಲು ಸರಕಾರ ಬದ್ಧವಾಗಿದೆ ಎಂದರು.

ಕುಸುಮ ಯೋಜನೆಯನ್ನು ತ್ವರಿತಗೊಳಿಸಿ ಫೀಡರ್ ಮಟ್ಟದ ಸೌರೀಕರಣದ ಮೂಲಕ 1200 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಿ ರೈತರಿಗೆ ನೀಡಲು ನಿರ್ಧರಿಸಲಾಗಿದೆ. ಇದರಿಂದ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಬಹುತೇಕ ಬಗೆಹರಿಯುತ್ತದೆ. ಉತ್ಪಾದನೆಯ ಜೊತೆಗೆ ಶೇಖರಣೆ ಬಹಳ ಮುಖ್ಯ. ಶರಾವತಿಯಲ್ಲಿ 2000 ಮೆಗಾವ್ಯಾಟ್ ಮತ್ತು ವರಾಹಿಯಲ್ಲಿ 1500 ಮೆಗಾವ್ಯಾಟ್ ಸಾಮರ್ಥ್ಯದ ಪಂಪ್ ಸ್ಟೋರೇಜ್ ಯೋಜನೆ ಜಾರಿಗೊಳಿಸಲು ನಿರ್ಧರಿಸಲಾಗಿದೆ.

-ಪಂಕಜ್ ಕುಮಾರ್ ಪಾಂಡೆ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಡಿ

ಸೆಸ್ಕ್ ಅಧ್ಯಕ್ಷ ಎ. ರಮೇಶ್ ಬಂಡಿಸಿದ್ದೇಗೌಡ, ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಂಪೀರ್ ಖಾದ್ರಿ, ಪಿಸಿಕೆಎಲ್ ವ್ಯವಸ್ಥಾಪಕ ನಿರ್ದೇಶಕ ಲೋಖಂಡೆ ಸ್ನೇಹಲ್ ಸುಧಾಕರ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಶೀಲಾ.ಸಿ. ಸೇರಿದಂತೆ ಅಧಿಕಾರಿ ವರ್ಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಮೈಸೂರು ಜೈಲಿನಲ್ಲಿ ಕೈದಿ ಸಾವು

ಮೈಸೂರು : ಕೇಕ್ ತಯಾರಿಸಲು ತಂದಿದ್ದ ಎಸ್ಸೆನ್ಸ್ ಕುಡಿದು ಅಸ್ವಸ್ಥರಾಗಿದ್ದ ಮೈಸೂರು ಕೇಂದ್ರ ಕಾರಾಗೃಹದ ಮೂವರು ಕೈದಿಗಳ ಪೈಕಿ ಒಬ್ಬರು ಮೃತಪಟ್ಟಿದ್ದಾರೆ. ಗುಂಡ್ಲುಪೇಟೆ ಮೂಲ್ ಮಾದೇಶ್(37) ಸಾವಿಗೀಡಾದ ಸಜಾ ಬಂದಿ. ಆತನೊಂದಿಗೆ ಅಸ್ವಸ್ಥಗೊಂಡಿದ್ದ ನಾಗರಾಜ್ ಹಾಗೂ ರಮೇಶ್ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಪತ್ನಿ ಕೊಲೆ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಮಾದೇಶ, ಮೂರು ದಿನಗಳ ಹಿಂದೆ ನಾಗರಾಜ್ ಹಾಗೂ ರಮೇಶ್ ಜತೆ ಸೇರಿ ಕೇಕ್ ತಯಾರಿಕೆಗೆ ಬಳಸುವ ಎಸ್ಸೆನ್ಸ್ ಕುಡಿದಿದ್ದರು. ಬಳಿಕ ತೀವ್ರ ಅಸ್ವಸ್ಥಗೊಂಡ ಮೂವರನ್ನೂ ಕ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಾದೇಶ್ ಕೊನೆಯುಸಿರೆಳೆದಿದ್ದಾನೆ. ಮಂಡಿ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಆಕಸ್ಮಿಕವಾಗಿ ಸಿಡಿದ ಗುಂಡು: ಗಾಯ

ಮಂಗಳೂರು: ಪಿಸ್ತೂಲ್‌ನಿಂದ ಆಕಸ್ಮಿಕವಾಗಿ ಗುಂಡುಸಿಡಿದು ಯುವಕನೊಬ್ಬ ಗಂಭೀರವಾಗಿ ಗಾಯಗೊಂಡ ಘಟನೆ ಮಂಗಳೂರು ಹೊರವಲಯದ ಮೂಡುಶೆಡ್ಡೆ ಎಂಬಲ್ಲಿ ನಡೆದಿದೆ. ಗಾಯಾಳು ಸಫ್ವಾನ್ ಎಂದು ಗುರುತಿಸಲಾಗಿದೆ. ಸೆಕೆಂಡ್‌ಹ್ಯಾಂಡ್ ವಸ್ತುಗಳ ಮಾರಾಟ ಮಳಿಗೆಯಲ್ಲಿ ಈ ಘಟನೆ ನಡೆದಿದೆ. ಪರವಾನಗಿ ಹೊಂದಿರುವ ಪಿಸ್ತೂಲ್‌ನಿಂದ ಗುಂಡು ಸಿಡಿದಿದೆ ಎಂದು ತಿಳಿದು ಬಂದಿದೆ. ಪಿಸ್ತೂಲ್ ಸ್ವಚ್ಛಗೊಳಿಸುವಾಗ ಆಕಸ್ಮಿಕವಾಗಿ ಗುಂಡು ಹಾರಿದೆ. ಗಂಭೀರವಾಗಿ ಗಾಯಗೊಂಡ ಸಫ್ವಾನ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾನೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಭಕ್ತರ ಸರದಿ ಸಂಕೀರ್ಣ ನಿರ್ಮಾಣಕ್ಕೆ ಪ್ರಶಂಸೆ

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ದೇವರ ದರ್ಶನ ಪಡೆದ ಉಪ ರಾಷ್ಟ್ರಪತಿ ಧನಕರ್

ಬೆಳ್ತಂಗಡಿ: ಪ್ರಸಿದ್ಧ ಕ್ಷೇತ್ರ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನದ ಸರತಿ ಸಾಲಿನ ದರ್ಶನದ ಸಮುಚ್ಚಯವನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಮಂಗಳವಾರ ಲೋಕಾರ್ಪಣೆ ಮಾಡಿದರು.

ಪತ್ನಿ ಡಾ.ಸುದೇಶ ಧನಕರ್ ಅವರೊಂದಿಗೆ ಧರ್ಮಸ್ಥಳಕ್ಕೆ ಭೇಟಿ ನೀಡಿ, ಮಂಜುನಾಥ ಸ್ವಾಮೀಯ ದರ್ಶನ ಪಡೆದರು. ನಂತರ ಕ್ಯೂ ಕಾಂಪ್ಲೆಕ್ಸ್ ಅನ್ನು ಉಪ ರಾಷ್ಟ್ರಪತಿಯವರು ಲೋಕಾರ್ಪಣೆಗೊಳಿಸಿದರು.

ಧರ್ಮಸ್ಥಳ: ಸಮಾನತೆಯ ಸಂಕೇತ: ಕ್ಷೇತ್ರದ ಅಮೃತವರ್ಷಿಣಿ ಸಭಾಂಗಣದಲ್ಲಿ ನಡೆದ ಸಮುಚ್ಚಯದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಗದೀಪ್ ಧನಕರ್ ಮಾತನಾಡಿ, ಮಂಜುನಾಥ ಸ್ವಾಮಿಯ ದರ್ಶನಕ್ಕೆ ಆಗಿಸುವ ಭಕ್ತರಿಗಾಗಿ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಲಾಗಿದೆ. ಇದು ಕೇವಲ ಕಟ್ಟಡ ಮಾತ್ರವಲ್ಲ, ವೈದ್ಯಕೀಯ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಒಳಗೊಂಡ ಕೇಂದ್ರ. ಎಲ್ಲರಿಗೂ ಒಂದೇ ಕಡೆ ನಿಲ್ಲುವ ವ್ಯವಸ್ಥೆ ಮಾಡಿದ್ದು, ಸಮಾನತೆಯನ್ನು ತೋರಿಸುತ್ತದೆ ಎಂದು ಪ್ರಶಂಸಿಸಿದರು.

ಈ ವೇಳೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಹೇಮಾವತಿ ವಿ. ಹೆಗ್ಗಡೆ, ಹರ್ಷೇಂದ್ರ ಹೆಗ್ಗಡೆ, ಸುರೇಂದ್ರ ಹೆಗ್ಗಡೆ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

ದೇಶ ಆಂತರಿಕವಾಗಿ ಸಶಕ್ತ ಆಗಬೇಕಿದೆ. ದೇಶಸೇವೆಗೆ ಜನತೆ ಮುಂದೆ ಬರಬೇಕಿದೆ. ರಾಜಕಾರಣಿಗಳು ವಿಭಿನ್ನ ಸಿದ್ಧಾಂತ ಹೊಂದಿರಬಹುದು, ಆದರೆ ನಮ್ಮ ಸಂಸ್ಕೃತಿ, ಸಂಸ್ಕಾರ ಮರೆಯಬಾರದು. ದೇಶದಲ್ಲಿ ಸಮಗ್ರತೆ, ವೈವಿಧ್ಯ ಮತ್ತು ಸೌಹಾರ್ದವನ್ನು ಉಳಿಸಿಕೊಳ್ಳಬೇಕಾಗಿದೆ. ದ ಜನರಲ್ಲಿ ಮೂಲಭೂತ ಕರ್ತವ್ಯದ ಬಗ್ಗೆ ಜಾಗೃತಿ ಮೂಡಿಸಬೇಕು. ನಮಗೆ ದೇಶದ ಹಿತಾಸಕ್ತಿಯ ಮೊದಲ ಆದ್ಯತೆಯಾಗಬೇಕು.

-ಜಗದೀಪ್ ಧನಕರ್ ಉಪ ರಾಷ್ಟ್ರಪತಿ

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಸನ್ಮಾನಿಸಿದ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ. ಸುದೇಶ ಧನಕರ್, ಸಂಸದ ಬ್ರಿಜೇಶ್ ಚೌಟ, ಹೇಮಾವತಿ ಹೆಗ್ಗಡೆ, ಸುರೇಂದ್ರ ಹೆಗ್ಗಡೆ ಮತ್ತು ಹರ್ಷೇಂದ್ರ ಹೆಗ್ಗಡೆ ಮೊದಲಾದವರಿದ್ದರು.

ನಾಗರಿಕ ಜೀವನ ಇನ್ನಷ್ಟು ಬೆಳಗಬೇಕು

ದೇಶದಲ್ಲಿ ಸೌಹಾರ್ದ ವಾತಾವರಣ ಬೆಳೆಸಬೇಕು. ರಾಜಕೀಯವಾಗಿ ನಾವು ಇನ್ನಷ್ಟು ಪ್ರಬಲರಾಗಬೇಕು, ದೇಶವನ್ನು ಮತ್ತಷ್ಟು ಎತ್ತರಕ್ಕೆ ಒಯ್ಯಲು ಒಗ್ಗೂಡಬೇಕಿದೆ. ಪ್ರಜಾಪ್ರಭುತ್ವ ನಮಗೆ ಎಲ್ಲ ಸ್ವಾತಂತ್ರ್ಯ ಕೊಟ್ಟಿದೆ. ಸಶಕ್ತ ಪ್ರಜಾಪ್ರಭುತ್ವ ನಮ್ಮಲ್ಲಿದೆ. ಜನಪ್ರತಿನಿಧಿಗಳು ಜನರ ಆದ್ಯತೆಗೆ ಬೆಲೆ ಕೊಡಬೇಕಿದೆ. ಜನರ ಮತಕ್ಕೆ ಬೆಲೆ ಇದ್ದರೆ ಮಾತ್ರ ಸಶಕ್ತ ಪ್ರಜಾಪ್ರಭುತ್ವ ಸಾಧ್ಯ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ತಿಳಿಸಿದರು.

ಭದ್ರಾ ಅರಣ್ಯ ಪ್ರದೇಶದಲ್ಲಿ ಆನೆ ಹತ್ಯೆ ಬಗ್ಗೆ ಹಿರಿಯ ಅಧಿಕಾರಿಗಳು ತನಿಖೆ ಕೈಗೊಂಡರು.

ಆನೆ ಸಾವು-ದಂತ ಅಪಹರಣ

ಭದ್ರಾ ಹುಲಿ ಮೀಸಲು ಪ್ರದೇಶದಲ್ಲಿ ನಡೆದ ಆನೆ ಹತ್ಯೆ | ಇಬ್ಬರ ಅಮಾನತು

ಚಿಕ್ಕಮಗಳೂರು: ಭದ್ರಾ ಅಭಯಾರಣ್ಯ ಹುಲಿ ಮೀಸಲು ವ್ಯಾಪ್ತಿಯ ಲಕ್ಕವಳ್ಳಿ ವಲಯದ ಹಿನ್ನೀರು ಪ್ರದೇಶ ಬೈರಾಪುರ ಸರ್ವೆ ನಂಬರ್ 37ರಲ್ಲಿ ಆನೆಯನ್ನು ಕೊಂದು ದಂತ ಅಪಹರಣ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದೆ.

ಪ್ರಕರಣದಲ್ಲಿ ಅಲ್ಲಿನ ಸಿಬ್ಬಂದಿ ಭಾಗಿಯಾಗಿದ್ದು ತನಿಖೆಯಲ್ಲಿ ಖಚಿತವಾದ ಹಿನ್ನೆಲೆಯಲ್ಲಿ ಫಾರೆಸ್ಟ್ ಗಾರ್ಡ್ ದೇವರಾಜ್ ಹಾಗೂ ಉಪ ವಲಯ ಅರಣ್ಯಾಧಿಕಾರಿ ಕುಮಾರ್ ನಾಯಕ್ ಅವರನ್ನು ಚಿಕ್ಕಮಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಅಮಾನತು ಮಾಡಿದ್ದಾರೆ.

ಸಂಶಯಕ್ಕೆ ಕಾರಣವಾದ ಆನೆ ಹತ್ಯೆ: ಆದೇಶದಲ್ಲಿ ಉಲ್ಲೇಖಿಸಿದ ಅಂಶಗಳನ್ನು ಗಮನಿಸಿದರೆ ಆನೆ ಹತ್ಯೆ ಹಲವು ಸಂಶಯಗಳಿಗೆ ಕಾರಣವಾಗಿದೆ.ಜೂನ್ 2024ರಲ್ಲೇ ಆನೆ ಕಳೇಬರ ಅಲ್ಲಿನ ಬೀಟ್ ಸಿಬ್ಬಂದಿಗೆ ಸಿಕ್ಕಿದೆ. ಆಗ ಅದರಲ್ಲಿ ದಂತ ಇರುವುದು ಕಂಡುಬಂದಿದೆ. ಇದನ್ನು ಮೇಲಧಿಕಾರಿಗಳಿಗೆ ತಿಳಿಸದೆ ದಂತ ಕಳವು ಮಾಡಿರುವ ಸಾಧ್ಯತೆ ಇರುವುದು ಮೇಲ್ನೋಟಕ್ಕೆ ಖಚಿತವಾಗಿದೆ. ಕಾಟಾಚಾರಕ್ಕೆ ಆನೆ ಕಳೇಬರದ ಮರಣೋತ್ತರ ಪರೀಕ್ಷೆ ಮಾಡಿಸಿ ಹೆಣ್ಣುಆನೆ ಎಂದು ಮುಚ್ಚಿಹಾಕುವ ವ್ಯವಸ್ಥಿತ ಹುನ್ನಾರ ಮಾಡಿದ ಆರೋಪವಿದೆ.

ಇದರಲ್ಲಿ ಸರಕಾರೇತರ ಸಂಸ್ಥೆ ಸದಸ್ಯರೊಬ್ಬರು ಭಾಗಿಯಾಗಿ ಸಿಬ್ಬಂದಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎನ್ನಲಾಗಿದ್ದು ಸರಕಾರಿ ಪಶು ವೈದ್ಯರು ಬಾರದೆ ಇಲಾಖೆಯ ಗುತ್ತಿಗೆ ವೈದ್ಯರೇ ಮರಣೋತ್ತರ ಪರೀಕ್ಷೆ ಮಾಡಿರುವುದು ಸಂಶಯಗಳಿಗೆ ಕಾರಣವಾಗಿದೆ.

ಸಿಐಡಿ ತನಿಖೆಗೆ ಒತ್ತಾಯ: ಪ್ರಕರಣವನ್ನು ಸರಕಾರ ಸಿಐಡಿ ತನಿಖೆಗೆ ಒಳಪಡಿಸಬೇಕು. ಆರೋಪಿಗಳು ಎಷ್ಟೇ ಪ್ರಭಾವಿಯಾಗಿದ್ದರೂ ರಕ್ಷಿಸದೆ ಕಠಿಣವಾಗಿ ಶಿಕ್ಷಿಸಬೇಕು ಎಂದು ದೂರುದಾರ ಸಾಮಾಜಿಕ ಪರಿಸರ ಕಾರ್ಯಕರ್ತರು ಅರಣ್ಯ ಸಚಿವರನ್ನು ಒತ್ತಾಯಿಸಿದ್ದಾರೆ.

ವಿಮೆ ಹಣಕ್ಕಾಗಿ ಅಪ್ಪನ ಕೊಂದ ಮಗ: ನಾಲ್ವರ ಬಂಧನ

ಕಲಬುರಗಿ: ವಿಮೆ ಹಣಕ್ಕಾಗಿ ಸ್ವಂತ ತಂದೆಯನ್ನೇ ಕೊಂದು ಅಪಘಾತದ ಕಥೆ ಹೆಣೆದಿದ್ದ ಮಗನನ್ನು ಮಾಡಬೂಳ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಸತೀಶ್ ಜತೆ ಸೇರಿ ಕೊಲೆಗೆ ಮಾಸ್ಟರ್‌ಪ್ಲಾನ್ ರೂಪಿಸಿದ ಗೆಳೆಯರಾದ ಅರುಣ್, ಯುವರಾಜ್ ಹಾಗೂ ರಾಕೇಶ್ ಎಂಬುವವರನ್ನು ಸಹ ಬಂಧಿಸಲಾಗಿದೆ. ಜ.8ರಂದು ಸತೀಶ್ ತನ್ನ ತಂದೆ ಕಾಳಿಂಗರಾವ್ ಜೊತೆ ಬೈಕ್ ಮೇಲೆ ಬರುತ್ತಿದ್ದ ವೇಳೆ ಚಿತ್ತಾಪುರ ತಾಲೂಕಿನ ಬೆಣ್ಣೂರ್ (ಬಿ) ಕ್ರಾಸ್ ಬಳಿ ಅಪಘಾತ ಸಂಭವಿಸಿತ್ತು. ಈ ವೇಳೆ ಕಾಳಿಂಗರಾವ್ ಸಾವನ್ನಪ್ಪಿದ್ದರು. ಸಣ್ಣ ಪುಟ್ಟ ಗಾಯಗಳೊಂದಿಗೆ ಸತೀಶ್ ಪ್ರಾಣಾಪಾಯದಿಂದ ಪಾರಾಗಿದ್ದ. ಈ ಘಟನೆ ಕುರಿತು ಮಾಡಬೂಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಸಂಶಯದ ಬೆನ್ನುಹತ್ತಿದ ಪೊಲೀಸರು ಸತೀಶನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣ ಬಯಲಾಗಿದೆ.

ಹೋಟೆಲ್ ದಂಧೆ ಕೈಕೊಟ್ಟ ಕಾರಣಕ್ಕಾಗಿ ವಿಪರೀತ ಸಾಲವಾಗಿ, ಸಾಲಗಾರರ ಕಾಟ ಹೆಚ್ಚಾಗಿತ್ತು. ಹಾಗಾಗಿ ತನ್ನ ತಂದೆಯನ್ನು ಕೊಂದರೆ ಅವರ ಹೆಸರಿನಲ್ಲಿರುವ ವಿಮೆ ಹಣ ಪಡೆದು ಸಾಲ ತೀರಿಸಬಹುದೆಂಬ ಲೆಕ್ಕಾಚಾರದೊಂದಿಗೆ ಈ ಕೃತ್ಯ ಎಸಗಿದ್ದಾಗಿ ಆತ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಔತಣಕೂಟಕ್ಕೆ ಹೈ ಬ್ರೇಕ್

← ಮೊದಲಪುಟದಿಂದ

ವಿದೇಶದಿಂದ ಭಾರತಕ್ಕೆ ಮರಳಿದರೂ, ದೆಹಲಿಯಲ್ಲಿಯೇ ತಂಗಿದ್ದ ಡಿಕೆಶಿ ಮಂಗಳವಾರ ಬೆಳಗ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿ ಸಭೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಇದೇ ವಿಷಯವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಗಮನಕ್ಕೂ ತಂದಿದ್ದಾರೆ. ನಿತ್ಯ ಒಬ್ಬೊಬ್ಬರ ನಿವಾಸದಲ್ಲಿ ಔತಣಕೂಟದ ನೆಪದಲ್ಲಿ ಸಭೆಗಳನ್ನು ನಡೆಸಿದರೆ, ಕೆಟ್ಟ ಸಂದೇಶ ರವಾನೆಯಾಗಲಿದೆ. ಸಚಿವರು ನಡೆಸುತ್ತಿರುವ ಡಿನ್ನರ್ ಪಾರ್ಟಿಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದ್ದಾರೆ. ಇದಕ್ಕೆ ಒಪ್ಪಿದ ಹೈಕಮಾಂಡ್, ಸುರ್ಜೇವಾಲ ಮೂಲಕ ಪರಮೇಶ್ವರ ಅವರಿಗೆ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ಹೈಕಮಾಂಡ್ ಮುಂದೆ ಡಿಕೆ ಶಿವಕುಮಾರ್ ವಾದವೇನು?

- ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ಈಗಲೂ ಬದ್ಧ
- ಹಾದಿ ಬೀದಿಯಲ್ಲಿ ಅಧಿಕಾರ ಹಸ್ತಾಂತರ, ಹಂಚಿಕೆ ಬಗ್ಗೆ ಮಾತನಾಡುವುದು ಸರಿಯಲ್ಲ
- ಈಗಾಗಲೇ ಎಚ್ಚರಿಕೆ ನೀಡಿದ್ದರೂ ಹಿರಿಯ ನಾಯಕರೇ ಸೂಚನೆಯನ್ನು ಉಲ್ಲಂಘಿಸುತ್ತಿದ್ದಾರೆ
- ಇದೇ ರೀತಿ ಸರಣಿ ಸಭೆಗಳನ್ನು ನಡೆಸುತ್ತಾ ಹೋದರೆ ಪಕ್ಷದ ವರ್ಚಸ್ಸಿಗೆ ಭಾರಿ ಧಕ್ಕೆ
- ಕೂಡಲೇ ಹೈಕಮಾಂಡ್ ಮಧ್ಯಪ್ರವೇಶಿಸಿ, ಇನ್ನೊಮ್ಮೆ ಈ ರೀತಿಯ ಸಭೆ ನಡೆಸದಂತೆ ಖಡಕ್ ಸೂಚನೆ ನೀಡಬೇಕು

ಹಿರಿಯ ನಾಯಕರ ವಾದವೇನು?

- ಒಬ್ಬರಿಗೆ ಒಂದೇ ಹುದ್ದೆ ಎನ್ನುವುದು ಪಕ್ಷದ ನಿಯಮವಾಗಿದೆ
- ಡಿಕೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಥವಾ ಡಿಸಿಎಂ ಸ್ಥಾನದಿಂದ ತೆರವುಗೊಳಿಸಿ
- ಬೆಂಗಳೂರು ನಗರಾಭಿವೃದ್ಧಿ ಹಾಗೂ ನೀರಾವರಿ ಇಲಾಖೆಯಲ್ಲಿ ಒಂದನ್ನು ಬೇರೆಯವರಿಗೆ ಹಸ್ತಾಂತರಿಸಬೇಕು
- ಯಾವುದೇ ಜಿಲ್ಲೆಯಲ್ಲಿ ಹಸ್ತಕ್ಷೇಪ ಮಾಡುವ ಮೊದಲು ಅಲ್ಲಿನ ಸ್ಥಳೀಯ ನಾಯಕರನ್ನು ವಿಶ್ವಾಸಕ್ಕೆ ಪಡೆಯಬೇಕು
- ಡಿಸಿಎಂ ಹುದ್ದೆಯಲ್ಲಿಯೇ ಡಿಕೆ ಮುಂದುವರಿಯುವುದಾದರೆ ಜಾತಿ ಆಧಾರದಲ್ಲಿ ಹೆಚ್ಚುವರಿ ಎರಡು ಡಿಸಿಎಂ ಸ್ಥಾನ ಕಲ್ಪಿಸಿ

ಹೈಕಮಾಂಡ್ ಭೇಟಿಯಾದ ಸಮಯದಲ್ಲಿ ಪ್ರಮುಖವಾಗಿ, 138 ಶಾಸಕರ ಸಂಖ್ಯಾಬಲವಿರುವ ಸಮಯದಲ್ಲಿಯೂ ಈ ರೀತಿ ದಿನಕ್ಕೊಂದು ಸಭೆ ನಡೆಸುವುದು ಸರಿಯಲ್ಲ. ಇದರಿಂದ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಡ್ಯಾಮೇಜ್ ಆಗಲಿದೆ. ಸರಕಾರದಲ್ಲಿ ಅಸ್ಥಿರತೆಯಿದೆ ಎಂದರೆ ಅಧಿಕಾರಿಗಳು ಮಾತು ಕೇಳುವುದಿಲ್ಲ. ಈ ಹಿಂದೆ ಹಲವು ಬಾರಿ ಈ ರೀತಿಯ ಸಭೆ ನಡೆದಾಗ ಪಕ್ಷದ ಹೈಕಮಾಂಡ್ ಎಚ್ಚರಿಕೆ ನೀಡಿದ್ದರೂ ಹಿರಿಯ ಸಚಿವರೇ ಸರಣಿ ಸಭೆ ನಡೆಸುವುದು ಸರಿಯಲ್ಲ. ಆದ್ದರಿಂದ ಕೂಡಲೇ ಇದಕ್ಕೆ ಬ್ರೇಕ್ ಹಾಕಬೇಕು ಎಂದು ಮನವಿ ಮಾಡಿದ್ದರು ಎಂದು ತಿಳಿದುಬಂದಿದೆ.

ಅಧಿಕಾರ ಮೊಟಕಿಗೆ ಹೆಚ್ಚಿದ ಆಗ್ರಹ: ಪರಮೇಶ್ವರ ಅವರು ಆಯೋಜಿಸಿದ್ದ ಪಾರ್ಟಿಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಚರ್ಚೆಗಿಂತ ಹೆಚ್ಚಾಗಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಚರ್ಚೆ ನಡೆಯುವ ಸಾಧ್ಯತೆಗಳಿದ್ದವು. ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ಕೂರಿಸಬೇಕು ಎನ್ನುವ ಒತ್ತಡ ಪಕ್ಷದಲ್ಲಿ ಹಲವು ತಿಂಗಳುಗಳಿಂದ ಕೇಳಿಬರುತ್ತಿದೆ. ಈ ಹಿಂದೆ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿ 'ಒಬ್ಬ ವ್ಯಕ್ತಿ- ಒಂದು ಹುದ್ದೆ' ಎನ್ನುವ ತೀರ್ಮಾನವನ್ನು ಮಾಡಲಾಗಿದೆ. ಆದರೂ ಮುಖ್ಯಮಂತ್ರಿ ಸ್ಥಾನ ನೀಡಿಲ್ಲವೆಂದು ಡಿಸಿಎಂ ಹುದ್ದೆಯೊಂದಿಗೆ ಡಿ.ಕೆ. ಶಿವಕುಮಾರ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಇದರೊಂದಿಗೆ ಬೆಂಗಳೂರು ನಗರಾಭಿವೃದ್ಧಿ ಹಾಗೂ ನೀರಾವರಿ ಇಲಾಖೆಯಂತಹ ಪ್ರಮುಖ ಹಾಗೂ ಆಯಕಟ್ಟಿನ ಇಲಾಖೆಗಳನ್ನು ನೀಡಲಾಗಿದೆ ಎನ್ನುವುದು ಹಲವು ನಾಯಕರ ಅಸಮಾಧಾನವಾಗಿದೆ. ಈಗ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ಕೂರಿಸಿ ಅಥವಾ ಡಿ.ಕೆ.ಶಿವಕುಮಾರ್ ಅವರ ಬಳಿಯಿರುವ ಎರಡು ಖಾತೆಗಳ ಪೈಕಿ ಒಂದನ್ನು ಬೇರೆಯವರಿಗೆ ಹಸ್ತಾಂತರಿಸುವಂತೆ ನೋಡಿಕೊಳ್ಳಬೇಕು. ಮುಂದಿನ ಕೆಲ ತಿಂಗಳ ಕಾಲ ಯಾವುದೇ ಚುನಾವಣೆಯಿಲ್ಲದೇ ಇರುವುದರಿಂದ, ಈ ಹಂತದಲ್ಲಿ ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವುದು ಸೂಕ್ತ. ಆದ್ದರಿಂದ ಹೈಕಮಾಂಡ್ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು ಎನ್ನುವುದು ಹಲವು ಹಿರಿಯ ನಾಯಕರ ಆಗ್ರಹವಾಗಿದೆ ಎಂದು ತಿಳಿದುಬಂದಿದೆ.

10ರಿಂದ ನಾಲೆಗೆ ಕಟ್ಟು ಪದ್ಧತಿಯಲ್ಲಿ ನೀರು

ಮಂಡ್ಯ: ಕೆಆರ್‌ಎಸ್.ಅಣೆಕಟ್ಟೆಯಿಂದ ಬೆಳೆಗಳಿಗೆ ಜ.10ರಿಂದ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೆ.ಆರ್.ಎಸ್.ನಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿ, ಜ.10ರಿಂದ 18 ದಿನ ನೀರು ಹರಿಸಲಾಗುವುದು. 12 ದಿನ ನೀರು ನಿಲುಗಡೆ ಮಾಡಲಾಗುವುದು. ಇದೇ ರೀತಿ ನಾಲ್ಕು ಬಾರಿ ನೀರು ನೀಡಲಾಗುವುದು ಎಂದರು. ಮಳವಳ್ಳಿ ಹಾಗೂ ಮದ್ದೂರು ತಾಲೂಕಿನ ಕೊನೆಯ ಭಾಗಕ್ಕೂ ನೀರು ಹರಿಸಲಾಗುವುದು. ರೈತರು ಅಲ್ಪಾವಧಿ ಬೆಳೆಗಳ ನಾಟಿ ಕಾರ್ಯ ಆರಂಭಿಸಬೇಕು. ಕೃಷಿ ಹಾಗೂ ನೀರಾವರಿ ಇಲಾಖೆ ಸಹಕಾರದೊಂದಿಗೆ ರೈತರು ಎರಡು ಬೆಳೆಗಳನ್ನು ಬೆಳೆಯಬೇಕು ಎಂದು ಸಚಿವರು ಸಲಹೆ ಮಾಡಿದ್ದಾರೆ.

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಕಛೇರಿ, ಚಿಕ್ಕಮಗಳೂರು
Ph: 08262-298107 E-Mail: dhochikmagalur@gmail.com
ಸಂಖ್ಯೆ: ಜಿಆಕುಕ:ಸಿವಿ(5)41/2024–25 ದಿನಾಂಕ: 06.01.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಇವರ ಅಧೀನದ ಆರೋಗ್ಯ ಸಂಸ್ಥೆಗಳಿಗೆ 2025–26ನೇ ಸಾಲಿಗೆ 166 ಗ್ರೂಪ್ 'ಡಿ', 27 ಫಾರ್ಮಾಸಿಸ್ಟ್ ಮತ್ತು 08 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗೆ ಹೊರಸಂಪನ್ಮೂಲದಿಂದ ಒದಗಿಸುವುದಕ್ಕಾಗಿ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು http//eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಜಿ/24–25/134/1378

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
(Fax & Phone : 08232-231001, 222086,
E-mail: mimsmandya@gmail.com)
Website: www.mimsmandya.org

ಇ–ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಅವಶ್ಯವಿರುವ ಸಿದ್ದಪಡಿಸಿದ ಆಹಾರವನ್ನು ರೋಗಿಗಳಿಗೆ ವಿತರಿಸಲು ನೊಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ : 01. ಟೆಂಡರ್ ಪ್ರಕಟಣೆ ಸಂಖ್ಯೆ : ಸಂಖ್ಯೆ:ಮಿಮ್ಸ್/ಸರಬ/ಸಿದ್ದಪಡಿಸಿದ ಆಹಾರ/03/ಇ.ಟೆಂಡರ್/2024–25. ದಿನಾಂಕ:04.01.2025. ಟೆಂಡರ್ ವಿವರ : ಸಿದ್ದಪಡಿಸಿದ ಆಹಾರವನ್ನು ಪಡೆಯಲು ಇ–ಟೆಂಡರ್ ಪ್ರಾರಂಭದ ದಿನಾಂಕ: 06.01.2025 ರಿಂದ ಅಂತಿಮ ದಿನಾಂಕ; 21.01.2025ಸಂಜೆ 5.00 ಗಂಟೆವರೆಗೆ ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) : ರೂ.150.00 ಲಕ್ಷಗಳು (ರೂ. ನೂರ ಐವತ್ತು ಲಕ್ಷಗಳು ಒಂದು ವರ್ಷಕ್ಕೆ ಮಾತ್ರ). ಇಎಂಡಿ ಮೊತ್ತ ರೂ. : 1.5%. ಟೆಂಡರ್‌ನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ(ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/531/2024–25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಕೃಭಾಜನಿನಿ, ಹೊಲಗಾಲುವೆ ವಿಭಾಗ–4, ಆಲಮೇಲ. ಜಿ॥ ವಿಜಯಪುರ
ದೂರವಾಣಿ ಸಂ:08488–232016.ಇ–ಮೇಲ್:eefic4@gmail.com
ಸಂ:ಕೃಭಾಜನಿನಿ/ಹೊವಿ–4/ತಾಂತ್ರಿಕ/ಪಿಬಿ/ಟೆಂಡರ್–II/2024–25/335
ದಿನಾಂಕ:06.01.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ಆಡಳಿತಾಧಿಕಾರಿಗಳು ಕೃಷ್ಣಾ–ಕಾಡಾ, ಭೀಮರಾಯನಗುಡಿ ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಹೊಲಗಾಲುವೆ ವಿಭಾಗ–4, ಆಲಮೇಲ ತಾ. ಆಲಮೇಲ ಜಿ.ವಿಜಯಪೂರ ಇವರು ಅರ್ಹಗುತ್ತಿಗೆದಾರರು ಕೆ.ಪಿ.ಡಬ್ಲ್ಯೂ.ಡಿಗೆ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ರಸ್ತೆ/ಸವುಳು–ಜವುಳು ಕಾಮಗಾರಿಗಳ ಸಂಖ್ಯೆ:08 ಗಳಿಗೆ ಶೇಕಡಾವಾರು ದ್ವಿ–ಲಕೋಟೆಯಲ್ಲಿ ಕೆ.ಪಿ.ಡಬ್ಲ್ಯೂ.ಡಿಗೆ ನಿಯಮಗಳನ್ವಯ ಅರ್ಹ ಬಿಡ್ಡದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಇ,ಎಂ,ಡಿ ಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ದತಿಯಲ್ಲಿ ಸಲ್ಲಿಸಬಹುದಾಗಿದೆ ಹಾಗೂ ಗುತ್ತಿಗೆದಾರರು ದಾಖಲೆಗಳನ್ನು ಇ–ಟೆಂಡರ್ ಮೂಲಕ http://kppp.karnataka.gov.in(e-proc-2.0) (Krishna command Area Development Authority) ಅಂತರ್ಜಾಲದಲ್ಲಿ 'ಶೆಡ್ಯೂಲ್–ಬಿ' ಹಾಗೂ ಇತರ ವಿವರಗಳನ್ನು ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು.
ಟೆಂಡರ್ ಪ್ರಕ್ರಿಯೆಯ ದಿನಾಂಕಗಳು:– 1) ಟೆಂಡರ್ ಪ್ರಕಟಣೆ **ಸಂಖ್ಯೆ:335 ದಿನಾಂಕ: 06.01.2025.** 2) ಈ–ಟೆಂಡರ್ ಲಭ್ಯವಾಗುವ **ದಿನಾಂಕ: 08.01.2025 ಮುಂಜಾನೆ 11.00 ಗಂಟೆ ನಂತರ.** 3) ಟೆಂಡರ್ ವಿಚಾರಣೆಗಾಗಿ ಕೊನೆಯ **ದಿನಾಂಕ: 13.01.2025 ಸಂಜೆ 5.00 ಗಂಟೆವರೆಗೆ.** 4) ಈ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.01.2025 ಸಂಜೆ 5.00 ಗಂಟೆವರೆಗೆ** 5) ತಾಂತ್ರಿಕ ಲಕೋಟೆ ತೆರೆಯುವ **ದಿನಾಂಕ: 17.01.2025 ಮುಂಜಾನೆ 11.00 ಗಂಟೆಯ ನಂತರ.** 6) ಆರ್ಥಿಕ ಲಕೋಟೆ ತೆರೆಯುವ **ದಿನಾಂಕ: 18.01.2025 ಮುಂಜಾನೆ 11.00 ಗಂಟೆಯ ನಂತರ.**

ಸಹಿ/– (ಎಸ್.ಎಮ್.ಜಮಾದಾರ)
ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಹೊಲಗಾಲುವೆ ವಿಭಾಗ–4, ಆಲಮೇಲ.
ವಾಸಾಸಂಇ/ವಿಜಯಪುರ/586/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ: ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 **ದಿನಾಂಕ: 06-01-2025**

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ 24.10%, 7.25% ಮತ್ತು 5% ಅನುದಾನದ ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1, 2, 3 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ. ಮೊತ್ತ	ಮೀಸಲಾತಿ
1	ಅಂಕಲಗಿ–ಅಕ್ಕತಂಗೇರಹಾಳ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT 26608/Call-2)	33.69	0.34	ಪ.ಜಾ.
2	ಉಗಾರಖುರ್ದ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25911/Call-2)	8.01	1.10	ಪ.ಜಾ.
3	ಗೋಕಾಕ ನಗರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26560/Call-2)	27.46	0.27	ಪ.ಪಂ.
4	ಖಾನಾಪೂರ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26603/Call-2)	7.37	0.18	ಇತರೆ
5	ಮಚ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25921/Call-2)	1.91	0.05	ಪ.ಜಾ.
6	ಪೀರನವಾಡಿ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25920/Call-2)	7.37	0.18	ಇತರೆ
7	ಸದಲಗಾ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25905/Call-2)	78.18	1.56	ಇತರೆ
8	ಕುಡಚಿ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25923/Call-2)	41.44	0.41	ಪ.ಜಾ.
9	ಐನಾಪೂರ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25914/Call-2)	18.18	0.23	ಪ.ಜಾ.
10	ಅರಭಾಂವಿ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26619/Call-2)	18.18	0.23	ಪ.ಪಂ.
11	ಚಿಂಚಲಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25902/Call-2)	24.92	0.50	ಇತರೆ
12	ಬೋರಗಾಂವ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25916/Call-2)	21.61	0.50	ಇತರೆ
13	ಶೇಡಬಾಳ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25915/Call-2)	13.85	0.35	ಇತರೆ
14	ಯಕ್ಸಂಬಾ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25913/Call-2)	8.01	0.20	ಇತರೆ
15	ಕಲ್ಲೂರ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25925/Call-2)	23.14	0.50	ಇತರೆ
16	ಮುನವಳ್ಳಿ, ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್‌ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26623/Call-2)	8.39	0.21	ಇತರೆ
17	ಕಲ್ಲೋಳಿ ಪ.ಪಂ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26616/Call-2)	5.85	0.15	ಇತರೆ
18	ಹಾರೂಗೇರಿ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT28694/Call-2)	90.38	2.00	ಇತರೆ
19	ನಿಪ್ಪಾಣಿ ನಗರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT29389/Call-2)	232.50	3.49	ಇತರೆ

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು, ಟೆಂಡರ್ ವೇಳಾಪಟ್ಟಿ ಮತ್ತು ಇತರ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರ.ಸಂ. 01 ರಿಂದ 18	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	22-01-2025 ರಂದು 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	24-01-2025 ರಂದು 10-30 ಘಂಟೆ ನಂತರ
ಕ್ರ.ಸಂ. 19	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	05-02-2025 ರಂದು 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	07-02-2025 ರಂದು 10-30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/ BGM/ RO-NO 1424/2023-24

ಟ್ವೀಟು-ಖಾರಾ

ಪ್ರಿಯಾಂಕ್ ಖರ್ಗೆ, ಸಚಿವ

ಬಿಜೆಪಿಯವರ ಮೇಲೆ ಕೇಸರಿಶಾಲು ಹೋಯ್ತು, ನೀಲಿಶಾಲು ಬಂತು. ನನಗೆ ಇದೊಂದು ವಿಶೇಷ ವಿಸ್ಮಯದಂತೆ ಭಾಸವಾಗುತ್ತಿದೆ..!ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಜೈಭೀಮ್ ಎನ್ನುವುದು ಫ್ಯಾಷನ್ ಎಂದಿದ್ದ ಅಮಿತ್ ಶಾ ಅವರ ಬಿಜೆಪಿಗೆ ನೀಲಿಶಾಲು ಧರಿಸುವುದು ಈಗ ಹೊಸ ಫ್ಯಾಷನ್ ಆಗಿದೆಯೇ..? ಅಥವಾ ಕೇಸರಿಶಾಲಿನ ಮೇಲೆ ಬಿಜೆಪಿಗರಿಗೆ ಅಸಹನೆ ಉಂಟಾಗಿದೆಯೇ..?

ಪ್ರಶಾಂತಕುಮಾರ್, ಬೆಂಗಳೂರು

ಬಾಬಾಸಾಹೇಬರಿಗೆ ಹೆಜ್ಜೆಹೆಜ್ಜೆಗೂ ಅವಮಾನ ಮಾಡಿದ್ದು ಕಾಂಗ್ರೆಸ್. ಬಾಬಾಸಾಹೇಬರ ಹೆಸರಿನಲ್ಲಿ ಕನಿಷ್ಠ ಒಂದು ಸ್ಮಾರಕ ಕಟ್ಟಲು ಬಿಡದೆ ಜನರನ್ನು ಕತ್ತಲಲ್ಲಿ ಇಟ್ಟಿದ್ದು ಕಾಂಗ್ರೆಸ್.

ವಿಶ್ವವಾಣಿ ಕ್ಲಬ್ ಹೌಸ್

ಕಾರ್ನರ್ 08.01.2025

ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀ ನೀರಜ್ ಕುಮಾರ್

ವಿಷಯ
ಸಮಯದ ಶಿಸ್ತು

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ


ಕ. ರಾ. ರ. ಸಾ. ನಿಗಮ
ಕುಣಿಗಲ್
No: 0016971 01/01/25 11:46:49
EXPRESS KA06 F1131
ತುಮಕೂರು -- ಮದ್ದೂರು
TUMKUR -- MADDUR
BF: 5.00 AF: 1.00
ವಯಸ್ಕರು 1 * 96.00 = ₹. 96.00
RRN No.: 500105817886
UPI: ರೂ. = 96.00
549007 A108511 W000050 17033301
Visit - KSRTC.KARNATAKA.GOV.in

ಕ. ರಾ. ರ. ಸಾ. ನಿಗಮ
ಮೈ ಗ್ರಾ ವಿಭಾಗ ಘಟಕ 1
No: 0022785 05/01/25 12:19:49
EXPRESS KA09-F5091
ತುಮಕೂರು -- ಮದ್ದೂರು
TUMKUR -- MADDUR
BF: 5.00 AF: 2.00
ವಯಸ್ಕರು 1 * 117.00 = ₹. 117.00
RRN No.: 537136444681
UPI: ರೂ. = 117.00
942901 A117947 A106792 13015548
Visit - KSRTC.KARNATAKA.GOV.in

- **ಸ್ಥಳ : ತುಮಕೂರು**

ಸಮಸ್ಯೆಯೇನು..?

- ತುಮಕೂರು-ಮದ್ದೂರು ಪ್ರಯಾಣ ದರ ಹಚ್ಚಾಗ್ಗಿರುವ ಬಗ್ಗೆ
- **ಪರಿಹಾರ:** ತುಮಕೂರು-ಮದ್ದೂರು ಪ್ರಯಾಣ ದರ ಹೆಚ್ಚಳವಾಗಿದ ಪರಿಣಾಮ ಪ್ರೋತ್ಸಾಹ ದರ ಹಿಂಪಡೆಯಲಾಗಿದ್ದು, ಶೇ.15% ರಷ್ಟು ಪ್ರಸ್ತುತ ಪ್ರಯಾಣದರ ಹೆಚ್ಚಳವಾಗಿದ್ದರಿಂದ ಮೂಲದರ 117 ರು. ಆಗಿದೆ.

ಸಮಾಚಾರ ಸಣ್ಣದಲ್ಲ

ಬಾಯ್ಲರ್ ಸ್ಫೋಟ: ಕಾರ್ಮಿಕನ ಸಾವು

ರಾಮನಗರ: ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ ಬಾಯ್ಲರ್ ಸ್ಫೋಟಗೊಂಡು ಗಾಯಗೊಂಡಿದ್ದ 5 ಕಾರ್ಮಿಕರ ಪೈಕಿ ಒಬ್ಬರು ಮೃತಪಟ್ಟಿದ್ದಾರೆ. ಉಮೇಶ್ ಕುಮಾರ್ ಸಿಂಗ್ (32) ಮೃತ ಕಾರ್ಮಿಕ. ಬಿಡದಿಯ ಬೈರಮಂಗಲ ಕ್ರಾಸ್ ಬಳಿ ಇರುವ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಬಾಯ್ಲರ್ ಪೈಪ್ ಸ್ಫೋಟಗೊಂಡು ಐವರು ಕಾರ್ಮಿಕರಿಗೆ ಗಂಭೀರ ಗಾಯಗಳಾಗಿದ್ದವು. ಗಾಯಾಳುಗಳಿಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರ ಪೈಕಿ ಒಬ್ಬ ಕಾರ್ಮಿಕ ಕೊನೆಯುಸಿರೆಳೆದಿದ್ದಾನೆ. ಒಣತ್ಯಾಜ್ಯ ಸುಟ್ಟ ನಂತರ ಬೂದಿ ಹೊರಹೋಗುವ ಬಾಯ್ಲರ್ ಪೈಪ್ ಕಟ್ಟಿಕೊಂಡಿತ್ತು. ಕಾರ್ಮಿಕರು ಸೂಕ್ತ ಮುಂಜಾಗ್ರತಾ ಕ್ರಮ ವಹಿಸದೆ ಪೈಪ್ ತೆರೆದಿದ್ದರಿಂದ ಸ್ಫೋಟಗೊಂಡು ಈ ಅವಘಡ ಸಂಭವಿಸಿದೆ.

ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ: ಮೂವರ ಸಾವು



ತುಮಕೂರು: ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿಯಾಗಿ ಮೂವರು ಸ್ಥಳದಲ್ಲೇ ಮೃತಪಟ್ಟ ಘಟನೆ ಮಧುಗಿರಿ ತಾಲೂಕಿನ ಕೊರಟಗೆರೆ ರಸ್ತೆ ಓಬಳಾಪುರ ಗೇಟ್ ಬಳಿ ಇಂದು ಮುಂಜಾನೆ ನಡೆಯಿತು. ಮಹ್ಮದ್ ಆಸೀಫ್ (12), ಮಮ್ತಾಜ್ (38) ಮತ್ತು ಶಾಖೀರ್ ಹುಸೇನ್ (48) ಮೃತರು. ರಸ್ತೆಯಲ್ಲಿ ಮುಂದೆ ಸಾಗುತ್ತಿದ್ದ ಟ್ರ್ಯಾಕ್ಟರ್‌ಗೆ ಹಿಂಬದಿಯಿಂದ ಬಂದ ಬೈಕ್ ಡಿಕ್ಕಿಯಾಗಿ ಈ ದುರಂತ ಸಂಭವಿಸಿದೆ.ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠ ಅಶೋಕ್ ಸ್ಥಳಕ್ಕೆ ಭೇಟಿ ನೀಡಿದ್ದರು. ಮೃತಪಟ್ಟ ಮೂವರು ಮಧುಗಿರಿ ತಾಲೂಕಿನವರೆಂದು ತಿಳಿದು ಬಂದಿದೆ. ಕೋರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಪ್ರಗತಿ ಪರಿಶೀಲಿಸಿದ ಸಿಎಂ ಸಿದ್ದರಾಮಯ್ಯ | ಅಂಬೇಡ್ಕರ್ ನಿಗಮದಲ್ಲಿ 900 ಕೋಟಿ, ಭೋವಿ ನಿಗಮದಲ್ಲಿ 107 ಕೋಟಿ ಖರ್ಚಾಗದೆ ಉಳಿದಿದೆ

ಹಣ ಖರ್ಚು ಮಾಡದ ಅಧಿಕಾರಿಗಳಿಗೆ ನೋಟಿಸ್ ನೀಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆಯ ವಿವಿಧ ನಿಗಮಗಳಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳದಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗರಂ ಆಗಿದ್ದು, ಅನುದಾನ ಸದ್ಬಳಕೆ ಮಾಡದ ನಿಗಮಗಳ ವ್ಯವಸ್ಥಾಪಕ ನಿರ್ದೇಶಕ ವಿರುದ್ಧ ನೋಟಿಸ್ ಜಾರಿ ಮಾಡುವಂತೆ ಸೂಚನೆ ನೀಡಿದ್ದಾರೆ.

ಬಜೆಟ್ ಪೂರ್ವಭಾವಿ ಸಭೆಯಾಗಿ ಮಂಗಳವಾರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ವರ್ಷದ ಕೊನೆಯ ತಿಂಗಳಲ್ಲಿ ಅನುದಾನ ಖರ್ಚು ಮಾಡುವ ಅಸಹ್ಯ ಅಭ್ಯಾಸ ಬೆಳೆಸಿಕೊಂಡಿದ್ದೀರಾ. ಹಣ ಕೈಯಲ್ಲಿದ್ದರೂ ವಿದ್ಯಾರ್ಥಿವೇತನ ನೀಡಲು ಅಧಿಕಾರಿಗಳೇಕೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಕ್ಲಾಸ್ ತೆಗೆದುಕೊಂಡಿದ್ದಾರೆ.

> **ಎಲ್ಲ ಹೋಬಳಿಗಳಲ್ಲಿ ವಸತಿ ಶಾಲೆಗಳ ಸ್ಥಾಪನೆ ಸರಕಾರದ ಗುರಿಯಾಗಿದೆ. ಈ ವರ್ಷ 20 ಹೊಸ ವಸತಿಶಾಲೆಗಳನ್ನು ಆರಂಭಿಸಲಾಗಿದ್ದು, ರಾಜ್ಯದಲ್ಲಿ ಒಟ್ಟು 841 ವಸತಿಶಾಲೆಗಳಿವೆ. ಇನ್ನು 92 ಹೋಬಳಿಗಳಲ್ಲಿ ವಸತಿಶಾಲೆ ಆರಂಭಿಸಬೇಕಾಗಿದ್ದು, ಮುಂದಿನ 2 ವರ್ಷಗಳಲ್ಲಿ ಇದನ್ನು ಪೂರ್ಣಗೊಳಿಸಬೇಕು. ಹೊಸದಾಗಿ ಆರಂಭಿಸಲಾಗಿರುವ ಎಲ್ಲಾ 20 ವಸತಿ ಶಾಲೆಗಳಲ್ಲಿ ಶಿಕ್ಷಕರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ನೀಡಬೇಕು.**
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬಡವರಿಗೆ, ಅರ್ಹ ಫಲಾನುಭವಿಗಳಿಗೆ ಹಂಚಲು ಕೊಟ್ಟ ಹಣವನ್ನು ಖರ್ಚು ಮಾಡದೆ, ಇಟ್ಟುಕೊಂಡು ಕೂರುವುದಕ್ಕಾ ನೀವು ಇರುವುದು ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸರಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ಸೂಚನೆ ನೀಡಿದರು. 2024-25ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 5,377 ಕೋಟಿ ರು. ಅನುದಾನ ಒದಗಿಸಲಾಗಿದೆ. ಆದರೆ ಇದುವರೆಗೆ ಅನುದಾನ 3,631 ಕೋಟಿ ಬಿಡುಗಡೆಯಾಗಿದ್ದು ಈ ಹಣ ಕೂಡ ಪೂರ್ತಿ ಖರ್ಚು ಮಾಡಿಲ್ಲವೇಕೆ ಎಂದು ಪ್ರಶ್ನಿಸಿದರು.

ನಿಗಮದಲ್ಲಿ ಹಣವಿದ್ದರೂ ಖರ್ಚಾಗಿಲ್ಲ: ಅಂಬೇಡ್ಕರ್ ನಿಗಮದಲ್ಲಿ 900 ಕೋಟಿ ರು., ಭೋವಿ ನಿಗಮದಲ್ಲಿ 107 ಕೋಟಿ ರು. ಸೇರಿ ಎಲ್ಲಾ ನಿಗಮಗಳಲ್ಲಿ ನೂರಾರು ಕೋಟಿ ಇದ್ದರೂ ಖರ್ಚು ಮಾಡದ ನಿಗಮದ ಎಂಡಿಗಳಿಗೆ ನೋಟಿಸ್ ನೀಡಿ, ಅಗತ್ಯ ಬಿದ್ದರೆ ಅಮಾನತುಗೊಳಿಸಿ ಎಂದು ಎಚ್ಚರಿಕೆ ನೀಡಿದರು.

ಇಲಾಖೆಗೆ ಸರಕಾರದಿಂದ ನೀಡಿರುವ ಹಣದಲ್ಲಿ 2,892 ಕೋಟಿ ಮಾತ್ರ ವೆಚ್ಚ ಮಾಡಲಾಗಿದೆ. ಉಳಿದದ್ದು ಹಾಗೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಮಾರ್ಚ್ ಅಂತ್ಯದವರೆಗೆ ಕಾಯದೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಮರ್ಪಕವಾಗಿ ವೆಚ್ಚ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿ ವೇತನ ಉಳಿಸಿಕೊಳ್ಳಬೇಡಿ: ವಿದ್ಯಾರ್ಥಿ ವೇತನ ಪಾವತಿಯನ್ನು ವರ್ಷದ ಅಂತ್ಯದವರೆಗೆ ಬಾಕಿ ಉಳಿಸಿಕೊಳ್ಳಬಾರದು. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಪ್ರತಿವರ್ಷ ಸೆಪ್ಟಂಬರ್ ಒಳಗಾಗಿ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನವೆಂಬರ್ ಅಂತ್ಯದೊಳಗಾಗಿ ಪಾವತಿಗೆ ಕ್ರಮ ಕೈಗೊಳ್ಳಬೇಕು. ಆಧಾರ್ ಲಿಂಕ್ ಆಗದಿರುವ ಕಾರಣಕ್ಕೆ ವಿದ್ಯಾರ್ಥಿ ವೇತನದಲ್ಲಿ ವಿಳಂಬವಾಗಬಾರದು. ಎಲ್ಲಾ ವಿದ್ಯಾರ್ಥಿಗಳಿಗೆ ಆಧಾರ್ ಮಾಡಿಸಲು ಕ್ರಮ ಕೈಗೊಳ್ಳಬೇಕು. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ 164 ಕೋಟಿ ಬಿಡುಗಡೆ ಮಾಡಲಾಗಿದ್ದು, ಇದುವರೆಗೆ 105 ಕೋಟಿ ವೆಚ್ಚ ಮಾಡಲಾಗಿದೆ. ಬಾಕಿ ಮೊತ್ತವನ್ನು ಶೀಘ್ರವೇ ಅರ್ಹರಿಗೆ ನೀಡಿ. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ 230 ಕೋಟಿ ಬಿಡುಗಡೆ ಮಾಡಲಾಗಿದ್ದು, ಶೇ.100ರಷ್ಟು ಪ್ರಗತಿ ಸಾಧಿಸಿರುವುದು ಶ್ಲಾಘನೀಯ ಎಂದರು.

ಬಜೆಟ್ ಪೂರ್ವಭಾವಿ ಸಭೆಯಾಗಿ ಮಂಗಳವಾರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ತಾಯಂದಿರ ಮರಣವನ್ನು ಶೂನ್ಯಕ್ಕೆ ಇಳಿಸಲು ಅಭಿಯಾನ ಆರಂಭಿಸಿ

ಮಂಗಳವಾರ ಸಂಜೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿಪರಿಶೀಲಿಸಿದ ಸಿದ್ದರಾಮಯ್ಯ ಅವರು, ರಾಜ್ಯದಲ್ಲಿ ತಾಯಂದಿರ ಮರಣ ಅನುಪಾತ ದೇಶಕ್ಕೆ ಹೋಲಿಸಿದರೆ ಕಡಿಮೆಯಿದೆ. 2018-20ರ ಅವಧಿಯಲ್ಲಿ ರಾಜ್ಯದಲ್ಲಿ ಒಂದು ಲಕ್ಷಕ್ಕೆ 69 ಮರಣ ಸಂಭವಿಸುತ್ತಿದ್ದು, ದೇಶದ ಅನುಪಾತ 97 ಇದೆ. 2022-24ರ ಅವಧಿಯಲ್ಲಿ ರಾಜ್ಯದಲ್ಲಿ ಇದರ ಪ್ರಮಾಣ 55 ಕ್ಕೆ ಇಳಿದಿದೆ. ಮುಂದಿನ ದಿನದಲ್ಲಿ ತಡೆಗಟ್ಟಬಹುದಾದ ತಾಯಂದಿರ ಮರಣವನ್ನು ಶೂನ್ಯಕ್ಕೆ ಇಳಿಸಲು ವ್ಯಾಪಕ ಅಭಿಯಾನ ಆರಂಭಿಸ ಬೇಕು. ತಾಯಂದಿರ ಮರಣ ತಡೆಗಟ್ಟಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿ ದರು. ಒಟ್ಟು 3927 ಎಎನ್‌ಎಂ ಖಾಲಿ ಹುದ್ದೆಗಳ ಪೈಕಿ 1205 ಹಾಗೂ 2990 ಎಚ್‌ಐಒ ಖಾಲಿ ಹುದ್ದೆ ಗಳ ಪೈಕಿ 300 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಈಗಾಗಲೇ ಅನುಮೋದನೆ ನೀಡಿದೆ. ಅಗತ್ಯ ಸೇವೆಗಳಲ್ಲಿ ಖಾಲಿಹುದ್ದೆಗಳನ್ನು ಭರ್ತಿ ಮಾಡಲು ವಿಳಂಬ ಮಾಡಬಾರದು. ಪ್ರಸ್ತುತ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 11182 ಕೋಟಿ ಅನುದಾನ ಒದಗಿಸಲಾಗಿದ್ದು, ಇದುವರೆಗೆ 6593 ಕೋಟಿ ವೆಚ್ಚ ಮಾಡಲಾಗಿದೆ ಎಂದು ವಿವರಿಸಿದರು.

ಸಿಎಂ ನೀಡಿದ ಪ್ರಮುಖ ಸೂಚನೆಗಳೇನು?

- ಪ್ರಸ್ತುತ ರಾಜ್ಯದಲ್ಲಿ 70 ಪಿಯು ವಸತಿ ಶಾಲೆಗಳಿದ್ದು, ಪ್ರತಿ ತಾಲೂಕು ಮಟ್ಟದಲ್ಲಿ ಕನಿಷ್ಠ ಒಂದು ಪಿಯು ವಸತಿ ಶಾಲೆಯಿರಬೇಕು.
- ವಸತಿಶಾಲೆಗಳಲ್ಲಿ ಕ್ರೀಡಾ ಚಟುವಟಿಕೆಗಳಿಗೆ ವ್ಯವಸ್ಥೆ ಮಾಡಬೇಕು. ಸ್ಥಳಾವಕಾಶವಿರುವ ಕಡೆ ಕ್ರೀಡಾಂಗಣ ನಿರ್ಮಿಸಿ
- ವಸತಿಶಾಲೆಗಳಲ್ಲಿ ಊಟದ ಗುಣಮಟ್ಟ ಕಾಯ್ದುಕೊಳ್ಳಬೇಕು. ಹಾಸಿಗೆ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸಬೇಕು.
- ವಿವಿಧ ನಿಗಮಗಳಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್‌ಗಳ ಸಂಖ್ಯೆ ಹೆಚ್ಚಿಸುವುದಕ್ಕೆ ಕ್ರಮವಹಿಸಿ

ಬಿಜೆಪಿ ಮಾಡಿದ ಎಡವಟ್ಟಿನಿಂದ ಸಮಸ್ಯೆ ಸೃಷ್ಟಿ

ಗುತ್ತಿಗೆದಾರರ ಬಿಲ್ ಬಾಕಿ ಉಳಿಯಲು ಬಿಜೆಪಿ ಕಾರಣ

ಬೀದರ್: ಬಿಜೆಪಿ ಸರಕಾರದ ಕೊನೆಯ ಎರಡು ವರ್ಷಗಳ ಅಧಿಕಾರವಧಿಯಲ್ಲಿ ಆರ್ಥಿಕ ನೆರವಿಲ್ಲದೆ ಕಾಮಗಾರಿ ಮಾಡಿರುವುದೇ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರ ಬಿಲ್ ಬಾಕಿ ಉಳಿಯಲು ಕಾರಣವೇ ಹೊರತು ಗ್ಯಾರಂಟಿ ಯೋಜನೆಗಳ ಜಾರಿಯಿಂದಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ ಸ್ಪಷ್ಟಪಡಿಸಿದರು. ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಗುತ್ತಿಗೆದಾರರ ಬಿಲ್ ಬಾಕಿ ಸಮಸ್ಯೆ ಪ್ರತಿ ಜಿಲ್ಲೆಗಳಲ್ಲಿಯೂ ಇದೆ. ಅವರು ಕೆಲಸ ಮಾಡಿದ್ದು, ಬಿಲ್ ಪಾವತಿಸಬೇಕಿರುವುದು ನಿಜ. ಈ ಸಮಸ್ಯೆಗೆ ಮೂಲ ಕಾರಣವನ್ನು ಯಾರು ಹೇಳುತ್ತಿಲ್ಲ. ಹಣಕಾಸು ಇಲಾಖೆ ಯಾವ ಇಲಾಖೆಗೆ ಎಷ್ಟು ಹಂಚಿಕೆಯಾಗಿದೆ, ಅಷ್ಟನ್ನೇ ನೀಡುತ್ತದೆ. ಆದರೆ, ಬಿಜೆಪಿ ಸರಕಾರದ ಇದ್ದಾಗ ಅನುದಾನ ಇಲ್ಲದೆ ಕೆಲಸಗಳನ್ನು ಮಾಡಲಾಗಿದೆ. ಬಿಜೆಪಿ ಮಾಡಿದ ಆ ಎಡವಟ್ಟಿನಿಂದ ಬಿಲ್ ಸಮಸ್ಯೆ ಸೃಷ್ಟಿಯಾಗಿದೆ ಎಂದು ಆರೋಪಿಸಿದರು. ಲೋಕೋಪಯೋಗಿ ಇಲಾಖೆಯದ್ದೆ 14 ಸಾವಿರ ಕೋಟಿ ರು. ವ್ಯತ್ಯಾಸ ಇದ್ದು, ಇದಕ್ಕೆ ಯಾವುದೇ ಅನುದಾನ ಇಲ್ಲ. ಹೀಗಾಗಿ ಮುಂದೆ ಹೆಚ್ಚುವರಿ ಹಣ ಕೇಳುತ್ತಾ ಕೇಳುತ್ತಾ, ಅದನ್ನು ಸರಿದೂಗಿಸಬೇಕಾದ ಅನಿವಾರ್ಯತೆಯಿದೆ. ಗ್ಯಾರಂಟಿ ಯೋಜನೆಗಳಿಗೆ ಬಜೆಟ್ನಲ್ಲಿ ಪ್ರತ್ಯೇಕ ಅನುದಾನ ಘೋಷಿಸಲಾಗಿದ್ದು, ಗ್ಯಾರಂಟಿಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ತಿಳಿಸಿದರು.

> **ಸರಕಾರ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ ಅವರ ನೇತೃತ್ವದಲ್ಲಿ ಮುನ್ನಡೆಯುತ್ತಿದೆ. ಇಲ್ಲಿ ಸಿಎಂ ಕುರ್ಚಿ ಖಾಲಿ ಇಲ್ಲ. ಅಧ್ಯಕ್ಷರ ಹುದ್ದೆಯು ಖಾಲಿ ಇಲ್ಲ. ಸದ್ಯಕ್ಕೆ ಇವರ ನಾಯತ್ವದಲ್ಲಿಯೇ ಭದ್ರವಾಗಿ ಸರಕಾರ ಮುನ್ನಡೆಯುತ್ತದೆ.**
> **-ಸತೀಶ್ ಜಾರಕಿಹೊಳಿ,** ಸಚಿವ

ಡೆತ್‌ನೋಟ್‌ನಲ್ಲಿ ಖರ್ಗೆ ಹೆಸರಿಲ್ಲ

ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಪಾಂಚಾಳ್ ಡೆತ್‌ನೋಟ್‌ಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರಿಲ್ಲ. ಬದಲಾಗಿ ಪ್ರಿಯಾಂಕ್ ಅವರ ಆಪ್ತ ಎಂದು ಬರೆದಿದ್ದಿದೆ. ಇದೂ ಸಹ ಸಿಐಡಿ ತನಿಖೆಯಿಂದ ಗೊತ್ತಾಗುತ್ತದೆ. ಸಾವಿಗೆ ಯಾರು ಕಾರಣ, ಯಾವ ಬಿಲ್ ಬಾಕಿ ಉಳಿದಿತ್ತು ಮತ್ತು ಸಚಿನ್ ಗುತ್ತಿಗೆದಾರನೋ ಅಥವಾ ಇಲ್ಲವೋ ಎಲ್ಲವೂ ಬಹಿರಂಗವಾಗಲಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಹೊಂಡದಲ್ಲಿ ಬಿದ್ದು ಯುವಕ ಸಾವು

ಕುಕನೂರು: ಗಾವರಾಳ ಗ್ರಾಮದಲ್ಲಿರುವ ಕಲ್ಲಿನ ಕ್ವಾರಿಯಲ್ಲಿನ ನಿಂತ ನೀರಿನ ಹೊಂಡ ದಲ್ಲಿ ಕುರಿಗಳಿಗೆ ಸ್ನಾನ ಮಾಡಿಸುವ ವೇಳೆ ಕಾಲು ಜಾರಿ ಬಿದ್ದು ಮಾರುತಿ ತಳಬಾಳ (20) ಎಂಬ ಕುರಿಗಾಯಿ ಯುವಕ ಮೃತಪಟ್ಟಿದ್ದಾನೆ. ಯುವಕ ನೀರಿನಲ್ಲಿ ಮುಳುಗಿದ್ದು, ಅವನನ್ನು ಕಾಪಾಡಲು ಅಲ್ಲಿಯೇ ಇದ್ದ ಯುವಕರು ಪ್ರಯತ್ನಿಸಿದರೂ ಫಲ ಲಭಿಸಲಿಲ್ಲ. ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ಮೃತ ದೇಹ ಪತ್ತೆ ಹೆಚ್ಚಿದರು. ಕುಕನೂರಿನ ಠಾಣೆಯಲ್ಲಿ ದಾಖಲಾಗಿದೆ.

ಜೋಸೆಫ್ ಚರ್ಚ್‌ನಲ್ಲಿ ಕ್ಯಾಥೋಲಿಕ್ ಸಂಪ್ರದಾಯದಂತೆ ವಿಧಿ -ವಿಧಾನ | ಗಣ್ಯರಿಂದ ಅಂತಿಮ ನಮನ

ಸರಕಾರಿ ಗೌರವದೊಂದಿಗೆ ನಾ.ಡಿಸೋಜ ಅಂತ್ಯಕ್ರಿಯೆ

ಶಿವಮೊಗ್ಗ: ಮಲೆನಾಡಿನ ಮುಳುಗಡೆ ಕವಿ ಎಂದೇ ಖ್ಯಾತರಾಗಿದ್ದ ನಾರ್ಬಟ್ ಡಿಸೋಜ ಅವರ ಅಂತ್ಯಕ್ರಿಯೆ ಇಂದು ಸಾಗರದಲ್ಲಿ ನಡೆಯಿತು. ಕಳೆದ ಭಾನುವಾರ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾಗಿದ್ದ ನಾ. ಡಿಸೋಜ ಅವರ ಅಂತ್ಯಕ್ರಿಯೆ ಸಾಗರದ ಸಂತ ಜೋಸೆಫ್ ಚರ್ಚ್‌ನಲ್ಲಿ ಕ್ಯಾಥೋಲಿಕ್ ಸಂಪ್ರದಾಯದಂತೆ ಕುಟುಂಬದವರ ಸಮ್ಮುಖದಲ್ಲಿಯೇ ನಡೆಯಿತು.

ಸೋಮವಾರ ಮಧ್ಯಾಹ್ನ ಮಂಗಳೂರಿನಿಂದ ಸಾಗರದ ನಾ. ಡಿಸೋಜ ಮನೆಗೆ ಅವರ ಪಾರ್ಥಿವ ಶರೀರವನ್ನು ತಂದು ಕುಟುಂಬದವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಮಧ್ಯಾಹ್ನ 12 ಗಂಟೆಗೆ ಸಾಗರದ ಬಿ. ಎಚ್ ರಸ್ತೆಯ ಅವರ ಮನೆಯಿಂದ ಮೆರವಣಿಗೆಯ ಮೂಲಕ ಪಾರ್ಥಿವ ಶರೀರವನ್ನು ಗಾಂಧಿ ಮೈದಾನಕ್ಕೆ ತರಲಾಯಿತು. ಇಲ್ಲಿ ತಾಲೂಕು ಆಡಳಿತ ಸಾರ್ವಜನಿಕರ ದರ್ಶನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಇಲ್ಲಿಯೇ ಸರಕಾರಿ ಗೌರವ ಸಲ್ಲಿಸಲಾಯಿತು. ಪೊಲೀಸರು ಮೂರು ಸುತ್ತು ಕುಶಾಲತೋಪು ಹಾರಿಸಿ ನಾಡಿನ ಹಿರಿಯ ಕವಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ನಾ. ಡಿಸೋಜ ಶರೀರವನ್ನು ಸಾಗರದ ಸಂತ ಜೋಸೆಫ್‌ರ ಚರ್ಚ್‌ಗೆ ತರಲಾಯಿತು. ಇಲ್ಲಿ ಕ್ಯಾಥೋಲಿಕ್ ಕ್ರೈಸ್ತ ಸಮುದಾಯದ ಸಂಪ್ರದಾಯದಂತೆ ಅಂತಿಮ ವಿಧಿ-ವಿಧಾನವನ್ನು ಪೂರ್ಣಗೊಳಿಸಲಾಯಿತು. ನಂತರ ಚರ್ಚ್ ಹಿಂಭಾಗದಲ್ಲಿರುವ ಕ್ರೈಸ್ತರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಲೆನಾಡ ಕವಿ ನಾ. ಡಿಸೋಜ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಗಣ್ಯರು.

ಅಂತಿಮ ದರ್ಶನ ಪಡೆದ ಅಪಾರ ಅಭಿಮಾನಿಗಳು

ಸಾಗರದ ಶಾಸಕರು, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಗೋಪಾಲಕೃಷ್ಣ ಬೇಳೂರು ಅವರು ಗಾಂಧಿ ಮೈದಾನದಲ್ಲಿದ್ದು, ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಸಾಗರದ ಎಸಿ ಯತೀಶ್ ಸೇರಿದಂತೆ ತಹಸೀಲ್ದಾರ್, ಡಿವೈಎಸ್ಪಿ ಅವರು ಹಾಜರಿದ್ದರು. ನಾಡಿನ ಕವಿಗೆ ತಾಲೂಕಿನ ಶಾಲೆಯ ಎಲ್ಲಾ ಮಕ್ಕಳು ಆಗಮಿಸಿ ನುಡಿ ನಮನ ಸಲ್ಲಿಸಿದರು. ಅಂತಿಮ ವಿಧಿ ವಿಧಾನದಲ್ಲಿ ನಾ.ಡಿಸೋಜ ಅವರ ಪತ್ನಿ, ಇಬ್ಬರು ಗಂಡು ಮಕ್ಕಳು, ಓರ್ವ ಪುತ್ರಿ ಸೇರಿದಂತೆ ಕುಟುಂಬಸ್ಥರು ಹಾಗೂ ಅಪಾರ ಅಭಿಮಾನಿಗಳು ಭಾಗಿಯಾದರು.

ಕೊರೆಯುವ ಚಳಿಯಲ್ಲಿ ಕಾಲ ಕಳೆದ ಕುಟುಂಬದ ಸದಸ್ಯರು | ಮನೆ ಜಪ್ತಿ ಮಾಡಿದ ಅಧಿಕಾರಿಗಳು

ಸಾಲ ಮರುಪಾವತಿ ವಿಳಂಬ: ಫೈನಾನ್ಸ್‌ನಿಂದ ಕಿರುಕುಳ

ಮೂಡಲಗಿ: ಹೈನುಗಾರಿಕೆ ಸಾಲವನ್ನು ಮರುಪಾವತಿಸಲು ವಿಳಂಬವಾಗಿದ್ದಕ್ಕೆ ಒಂದು ತಿಂಗಳ ಬಾಣಂತಿ ಸಮೇತ ರೈತ ಕುಟುಂಬವನ್ನು ಹೊರಹಾಕಿ ಮನೆ ಜಪ್ತಿ ಮಾಡಿ ಅಮಾನವೀಯತೆ ಮೆರೆದ ಪ್ರಕರಣ ನಡೆದಿದೆ. ಖಾಸಗಿ ಫೈನಾನ್ಸ್ ಸಿಬ್ಬಂದಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ನಾಗನೂರು ಗ್ರಾಮದ ಸೈದಪ್ಪ ಗದಾಡಿ ಎಂಬುವರು ಹೈನುಗಾರಿಕೆಗಾಗಿ ತಮಿಳು ನಾಡಿನ ಚೆನ್ನೈ ಮೂಲದ ಖಾಸಗಿ ಫೈನಾನ್ಸ್‌ನಿಂದ ಐದು ಲಕ್ಷ ರು. ಸಾಲ ಪಡೆದು, ಮೂರು ಲಕ್ಷ ರು.ಗಳಿಗಿಂತ ಹೆಚ್ಚು ಮೊತ್ತ ಮರು ಪಾವತಿ ಮಾಡಿದ್ದಾನೆ. ಆದರೆ ಹೈನುಗಾರಿಕೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ಆದಾಯ ಬಾರದ ಕಾರಣ, ಇನ್ನುಳಿದ ಸಾಲ ಮರುಪಾವತಿಸಲು ವಿಳಂಬವಾಗಿದ್ದರಿಂದ ಖಾಸಗಿ ಫೈನಾನ್ಸ್‌ನವರು ಕೋರ್ಟ್ ಮೊರೆಹೋಗಿದ್ದರು. ಬೆಳಗಾವಿ ಕೋರ್ಟ್‌ನಿಂದ ಮನೆ ಜಪ್ತಿ ಮಾಡಲು ಆದೇಶವಾಗಿದ್ದರಿಂದ ಕೋರ್ಟ್ ಸಿಬ್ಬಂದಿ, ವಕೀಲರು ಹಾಗೂ ಪೊಲೀಸರು ಸೋಮವಾರ ಮನೆ ಜಪ್ತಿ ಮಾಡಿದ್ದಾರೆ.

ಮಾನವೀಯತೆ ಮರೆತ ಅಧಿಕಾರಿಗಳು: ಜಪ್ತಿಮಾಡುವ ವೇಳೆ ಮನೆಯಲ್ಲಿ ಒಂದೂವರೆ ತಿಂಗಳ ಹಸುಗೂಸು, ಬಾಣಂತಿ ಇದ್ದರೂ ಮಾನವೀಯತೆ ಮರೆತು ಮನೆಯಿಂದ ಹೊರಹಾಕಿದ್ದಕ್ಕೆ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸೋಮವಾರ ಸಂಜೆ ಮನೆ ಜಪ್ತಿ ಮಾಡಿದ್ದರಿಂದ ಊಟವಿಲ್ಲದೆ ಕಣ್ಣೀರಿಡುತ್ತಾ ಮನೆಯ ಹೊರಗಡೆ ಕೊರೆಯುವ ಚಳಿಯಲ್ಲಿ ಬಾಣಂತಿ ಜೊತೆಗೆ ಏಳು ಜನರು ಇಡೀ ರಾತ್ರಿ ಕಳೆಯಬೇಕಾಯಿತು.

ಮನೆ ಜಪ್ತಿಯಾದ ಕಾರಣ ಒಳಗೆ ಹೋಗಲಾರದೆ ಕೊರೆಯುವ ಚಳಿಯಲ್ಲೇ ಬಾಣಂತಿ ಜೊತೆಗೆ ರೈತನ ಕುಟುಂಬದ ಏಳು ಜನರು ರಾತ್ರಿಯಿಡೀ ಕಳೆಯಬೇಕಾಯಿತು.

ಮನವಿ ಮಾಡಿದರೂ ನಿರ್ಲಕ್ಷಿಸಿದ ಅಧಿಕಾರಿಗಳು

ಮನೆ ಜಪ್ತಿ ಮಾಡುವ ವೇಳೆ ಬಾಣಂತಿ, ಅಧಿಕಾರಿಗಳ ಬಳಿ ಇನ್ನು ಸ್ವಲ್ಪ ದಿನ ಕಾಲಾವಕಾಶ ನೀಡಿ, ಮನೆಯಿಂದ ಹೊರಗಡೆ ಹಾಕಿದರೆ ಈ ಹಸುಗೂಸು ಜತೆ ಎಲ್ಲಿರಬೇಕು ಎಂದು ಪರಿಪರಿಯಾಗಿ ಮನವಿ ಮಾಡಿದರೂ ಅಧಿಕಾರಿಗಳು ಕಿವಿಗೊಡದೆ ಹೊರಗಡೆ ಹಾಕಿದ್ದಾರೆ. ಅಡುಗೆ ಮಾಡಿ ಊಟ ಮಾಡಬೇಕೆಂದರೆ ಎಲ್ಲ ವಸ್ತುಗಳು ಮನೆಯ ಒಳಗೆ ಇವೆ ಎಂದು ಬಾಣಂತಿ ಸಂಗೀತಾ ಸುದ್ದಿಗಾರರ ಮುಂದೆ ತಮ್ಮ ಅಳಲು ತೋಡಿಕೊಂಡರು.

- ಚೆನ್ನೈ ಮೂಲದ ಖಾಸಗಿ ಫೈನಾನ್ಸ್ ನಿಂದ ಐದು ಲಕ್ಷ ರು. ಸಾಲ.
- ಒಂದು ತಿಂಗಳ ಬಾಣಂತಿ ಸಮೇತ ರೈತ ಕುಟುಂಬವನ್ನು ಹೊರಹಾಕಿದ ಫೈನಾನ್ಸ್ ಸಿಬ್ಬಂದಿ.
- ಕೋರ್ಟ್ ಸಿಬ್ಬಂದಿ, ವಕೀಲರು ಹಾಗೂ ಪೊಲೀಸರಿಂದ ಮನೆ ಜಪ್ತಿ.

ಹರಪೀಠದಲ್ಲಿ ಕಟ್ಟಡ ಕಾಮಗಾರಿ ಪ್ರಗತಿ, ಆರ್ಥಿಕ ಮುಗ್ಗಟ್ಟನಿಂದ ಸರಳವಾಗಿ ಹರಜಾತ್ರೆ ಆಚರಿಸಲು ನಿರ್ಧಾರ

ಮಕರ ಸಂಕ್ರಾಂತಿಯಂದು ಸರಳ ಹರಜಾತ್ರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಾವಣಗೆರೆ ಜಿಲ್ಲೆಯ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಮಕರ ಸಂಕ್ರಾಂತಿ ಹಬ್ಬದ ದಿನ ವಚನಾನಂದ ಸ್ವಾಮೀಜಿಗಳ ದಿವ್ಯಸಾನ್ನಿಧ್ಯದಲ್ಲಿ ಜ.14 ರಂದು ಸರಳವಾಗಿ ಹರಜಾತ್ರೆ ಆಚರಿಸಲು ತೀರ್ಮಾನಿಸಲಾಗಿದೆ.

ಹರಿಹರದ ಪಂಚಮಸಾಲಿ ಪೀಠದಲ್ಲಿ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ವತಿಯಿಂದ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸೋಮವಾರ ಸಂಜೆ ನಡೆದ ಹರಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಸಮಾಜದ ಮುಖಂಡರು, ಧರ್ಮದರ್ಶಿಗಳು, ಭಕ್ತರು ಈ ಭಾರಿ ಸಾಂಪ್ರದಾಯಿಕವಾಗಿ ಒಂದು ದಿನ ಹರಜಾತ್ರೆ ನಡೆಸಲು ನಿರ್ಧರಿಸಿದ್ದಾರೆ ಎಂದು ಪೀಠದ ಆಡಳಿತಾಧಿಕಾರಿ ಡಾ.ಎಚ್.ಪಿ.ರಾಜ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರ ಪೀಠದಲ್ಲಿ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುವುದು ಹಾಗೂ ಆರ್ಥಿಕ ಮುಗ್ಗಟ್ಟು ಕಾರಣದಿಂದ ಈ ಭಾರಿ ಸರಳವಾಗಿ ಹರಜಾತ್ರೆ ಆಚರಿಸಬೇಕೆಂದು ಸಮಾಜ ಮುಖಂಡರು, ಭಕ್ತರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಅದರಂತೆ ಈ ಭಾರಿ ಸಾಂಪ್ರದಾಯಿಕವಾಗಿ ಹರಜಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ದ್ವಿಶತಮಾನ ವಿಜಯೋತ್ಸವ ವಿಶೇಷ: ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ವಿಜಯೋತ್ಸವದ ದ್ವಿಶತಮಾನೋತ್ಸವ ಆಚರಣೆ ಈ ಬಾರಿಯ 2025 ರ ಹರಜಾತ್ರೆಯ ಜಾತ್ರೆ ವಿಶೇಷವಾಗಿದೆ ಹಾಗೂ ಜಗದ್ಗುರು ವಚನಾನಂದ ಸ್ವಾಮೀಜಿ ಅವರ ಸಪ್ತಮ ವಾರ್ಷಿಕ ಪೀಠಾರೋಹಣ ನಡೆಯಲಿದೆ. ಜಾತ್ರಾ ಮಹೋತ್ಸವಕ್ಕೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು,ನಾಡಿನ ಮಠಾಧೀಶರು, ಸಚಿವರು, ಶಾಸಕರು, ಗಣ್ಯರನ್ನು ಆಹ್ವಾನಿಸಲು ಪೂರ್ವಭಾವಿ ಸಭೆ ತೀರ್ಮಾನಿಸಿದೆ ಎಂದು ತಿಳಿಸಿದ್ದಾರೆ.

ಸಭೆಯಲ್ಲಿ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್, ಧರ್ಮದರ್ಶಿ ಬಿ.ಸಿ. ಉಮಾಪತಿ, ಚಂದ್ರಶೇಖರ್ ಪೂಜಾರ್, ದಾಸೋಹ ಸಮಿತಿ ರಾಜ್ಯಾಧ್ಯಕ್ಷ ಪ್ರಕಾಶ್ ಪಾಟೀಲ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷ ವಸಂತಾ ಹುಲ್ಲತ್ತಿ, ಯುವ ಘಟಕದ ಪ್ರಧಾನ ಕಾರ್ಯದರ್ಶಿ ರಾಜ್ಯಾಧ್ಯಕ್ಷ ಶೇಖರಗೌಡ ಸೇರಿ ಹಲವರಿದ್ದರು.

ಹರಿಹರದ ಪಂಚಮಸಾಲಿ ಪೀಠದಲ್ಲಿ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಸೋಮವಾರ ಸಂಜೆ ನಡೆದ ಹರಜಾತ್ರೆಯ ಪೂರ್ವಭಾವಿ ಸಭೆ ನಡೆಯಿತು.

ಸೋಮಣ್ಣ ಹರಜಾತ್ರಾ ಸಮಿತಿ ಅಧ್ಯಕ್ಷ

ಸಭೆಯಲ್ಲಿ ಕರ್ನಾಟಕ ಗಡಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರನ್ನು 2025 ರ ಹರಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ದಕ್ಷಿಣದಿಂದ ಉತ್ತರಾಯಣ ಪುಣ್ಯ ಕಾಲಕ್ಕೆ ಸೂರ್ಯ ಪಥ ಬದಲಿಸುವ ಮಕರ ಸಂಕ್ರಾಂತಿ ಹಬ್ಬದ ದಿನ ನಡೆಯುವ ಹರಜಾತ್ರೆಗೆ ಸಮಾಜ, ಹಾಗೂ ಎಲ್ಲ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಆಡಳಿತಾಧಿಕಾರಿ ಡಾ.ರಾಜಕುಮಾರ್ ಮನವಿ ಮಾಡಿದ್ದಾರೆ.

ಸಚಿನ್ ಆತ್ಮಹತ್ಯೆ ಕೇಸ್ ಡಿಐಜಿ ಶಂತನು ಭೇಟಿ



ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಮಾಡಿಕೊಂಡ ಬೀದರ್‌ನ ರೈಲ್ವೆ ಹಳಿ ಪ್ರದೇಶಕ್ಕೆ ಸಿಐಡಿ ಡಿಐಜಿ ಶಂತನು ಸಿನ್ಹಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೀದರ್: ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಡಿಐಜಿ ಶಂತನು ಸಿನ್ಹಾ ಮಂಗಳವಾರ ಬೀದರ್‌ಗೆ ಭೇಟಿ ನೀಡಿದ್ದಾರೆ. ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರಕಾರ ಶೀಘ್ರವಾಗಿ ತನಿಖೆ ಮಾಡಿ, ವರದಿ ನೀಡಲು ಆದೇಶಿಸಿದೆ. ಈ ಹಿನ್ನೆಲೆ ಆಗಮಿಸಿರುವ ಸಿಐಡಿ ಡಿಐಜಿಪಿ ಶಾಂತನು ಸಿನ್ಹಾ ಆತ್ಮಹತ್ಯೆ ಸ್ಥಳ ಮಹಜರು ಮಾಡಿದ್ದಾರೆ. ಬಸವೇಶ್ವರ ವೃತ್ತದ ಬಳಿಯ ರೈಲು ಹಳಿ ಮೇಲೆ ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆ ಸ್ಥಳಕ್ಕೆ ಭೇಟಿನೀಡಿ, ರೈಲ್ವೆ ಪೊಲೀಸರು ಹಾಗೂ ಸಿಐಡಿ ತಂಡದಿಂದ ಪ್ರತಿಯೊಂದು ಮಾಹಿತಿಯನ್ನೂ ಪಡೆದಿದ್ದಾರೆ. ಅಲ್ಲದೆ, ಭಾಲ್ಕಿಯ ಕಟ್ಟಿತೂಗಾಂವ್ ಗ್ರಾಮದ ಸಚಿನ್ ನಿವಾಸಕ್ಕೆ ಭೇಟಿ ನೀಡಿ, ಕುಟುಂಬದವರ ವಿಚಾರಣೆ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಶ್ವವಾಣಿ

ಸಂಪಾದಕೀಯ

ಜೀವ ಹಿಂಡುತಿದೆ ಅಜ್ಞಾತ ಹಸ್ತ!

ಇದು 2020ರ ಮಾರ್ಚ್ ತಿಂಗಳ ಮಾತು. ಪ್ರತಿಭೆ, ಉತ್ಸಾಹ ಮತ್ತು ಚುರುಕಿಗೆ ಹೆಸರಾಗಿದ್ದ ಆ ಮಹಾನ್ ಗಾಯಕರು ಅಂದು ಅಪರೂಪಕ್ಕೆಂಬಂತೆ ವೆಬ್ ಕ್ಯಾಮರಾದ ಮುಂದೆ ಕೂತು, ಜಯಂತ್ ಕಾಯ್ಕಿಣಿಯವರು ಕರೋನಾ ಕುರಿತಾಗಿ ಬರೆದಿದ್ದ ''ಕಾಣದಂತೆ ಆಕ್ರಮಿಸಿದೆ ವೈರಿ ಕರೋನಾ, ಅದಕೆ ನಾವೇ ಈಗ ದಾರಿ ಆಗದಿರೋಣ'' ಎಂಬ ಹಾಡಿಗೆ ಸ್ವತಃ ರಾಗ ಸಂಯೋಜಿಸಿ ಹಾಡಿದ್ದರು. ''ಕಾಲ ಬುಡಕೆ ಮಾರಿ ಬರುವವರೆಗೆ ಕಾಯದಿರೋಣ'' ಎಂಬ ಎಚ್ಚರಿಕೆಯ ಸಾಲೂ ಆ ಹಾಡಿನಲ್ಲಿತ್ತು. ಗಾಯಕರು ಆ ಹಾಡನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಎರಡೇ ಗಂಟೆಯಲ್ಲಿ ಸಾವಿರ ಸಂಖ್ಯೆಯಲ್ಲಿ ಶೇರ್ ಆಯಿತು. ಆದರೆ ಅದೇ ವರ್ಷದ ಸೆಪ್ಟೆಂಬರ್ 25ರಂದು ಅದೇ ಕರೋನಾ ಮಹಾಮಾರಿ ಆ ಗಾಯಕರನ್ನು ಆಪೋಶನ ತೆಗೆದುಕೊಂಡುಬಿಟ್ಟಿತು. ಅವರನ್ನು ಆರಾಧಿಸುತ್ತಿದ್ದ ವಿಶ್ವದ ಒಂದಿಡೀ ಅಭಿಮಾನಿ ವರ್ಗ ಅಂದು ಅಕ್ಷರಶಃ ಗದ್ಗದಿತವಾಗಿತ್ತು. ಆ ಮಹಾನ್ ಗಾಯಕರೇ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ. ಅದೆಲ್ಲೋ ಹುಟ್ಟಿ, ಎಲ್ಲೆಲ್ಲಿಂದಲೋ ಹಬ್ಬಿಕೊಂಡು ನಮ್ಮ ನೆಲಕ್ಕೆ ಬಂದ ಕರೋನಾ ಎಂಬ ಪಿಡುಗು ನಮ್ಮ ನಡುವಿನ ಸಹೃದಯಿ ಕಲಾಕಾರನನ್ನು ಬಲಿತೆಗೆದುಕೊಂಡ ಕ್ರೌರ್ಯದ ಪರಿಯಿದು. ಈಗ ಅಂಥದೇ ಮತ್ತೊಂದು ಹೆಮ್ಮಾರಿ ಅಮರಿಕೊಳ್ಳುತ್ತಿದೆ ಎಂಬ ಭಯ ವ್ಯಾಪಿಸಿರುವ ಹಿನ್ನೆಲೆಯಲ್ಲಿ ಕರೋನಾ ರುದ್ರನರ್ತನದ ಅವಧಿಯಲ್ಲಿ ವಿಶ್ವದೆಲ್ಲೆಡೆ ಆವರಿಸಿದ್ದ ಕರಾಳ ಛಾಯೆಯೂ ಬೇಡಬೇಡವೆಂದರೂ ನೆನಪಾಗುತ್ತಿದೆ. ಆಗ ಕಂಡಿದ್ದ ಆ ಕೆಟ್ಟ ಕನಸಿನ ಅನುಭವದ ಹಿನ್ನೆಲೆಯಲ್ಲಿ ನಮ್ಮ ಆಳುಗ ವ್ಯವಸ್ಥೆ ಮತ್ತು ವೈದ್ಯ ಸಮೂಹ ಮತ್ತೊಮ್ಮೆ ಟೊಂಕ ಕಟ್ಟಬೇಕಾದ ಕಾಲ ಸನ್ನಿಹಿತವಾಗಿದೆ. ಜತೆಗೆ, ನಾಗರಿಕರೂ ಹೊಣೆಗಾರಿಕೆ, ಪ್ರಜ್ಞಾವಂತಿಕೆಯನ್ನು ಮೆರೆಯಬೇಕಾದ ಘಟ್ಟವಿದು. ಇದು ಹೆದರಿಸುವ ನುಡಿ ಎಂದು ತಪ್ಪಾಗಿ ಭಾವಿಸಬಾರದು. ಕವಿವಾಣಿಯಲ್ಲಿ ಉಲ್ಲೇಖಿಸಲಾಗಿರುವ ''ಕಾಲ ಬುಡಕೆ ಮಾರಿ ಬರುವವರೆಗೆ ಕಾಯದಿರೋಣ'' ಎಂಬ ಎಚ್ಚರಿಕೆಯ ಸಾಲನ್ನು ಮನಗಂಡು ಜೀವರಕ್ಷಣೆಯ ಕಡೆಗೆ ಗಮನ ನೀಡೋಣ.

ಸೊಂಪಾದಕೀಯ

ಇದು ತೋಳ ಅಲ್ಲ ವೈರಸ್!

ಕರೋನಾ ಕಾಲದಲ್ಲಿ ಅದರ ವೈರಸ್‌ಗಿಂತ ಹೆಚ್ಚು ಭೀತಿಯನ್ನು ಜನರಲ್ಲಿ ಹುಟ್ಟುಹಾಕಿದ್ದು ಅಂದ್ರೆ– 'ತೋಳ ಬಂತು ತೋಳ' ಅನ್ನೋ ದೃಶ್ಯಮಾಧ್ಯಮಗಳು. ಅದರಲ್ಲಿ ಹುರುಳಿತ್ತಾದರೂ, ಇದ್ದುದಕ್ಕಿಂತ ಹೆಚ್ಚಿನ ಪ್ರಮಾಣದ ಭಯವನ್ನು ಅವು ಜನರಲ್ಲಿ ಉಂಟುಮಾಡಿದ್ದಂತೂ ಸತ್ಯ. ಈಗ ಮತ್ತೆ ಅವು 'ಎಚ್‌ಎಂಪಿವಿ' ಎಂಬ ವೈರಸ್‌ನ ಹಿಂದೆ ಬಿದ್ದಿವೆ. ಇಲ್ಲಿ ವಿಶೇಷ ಅಂದ್ರೆ, ದೃಶ್ಯ ಮಾಧ್ಯಮಗಳಲ್ಲಿ ಮಾತ್ರ ಇದರ ವೈಭವೀಕರಣ ಹೆಚ್ಚು.



ಅದೇ, ದಿನಪತ್ರಿಕೆಗಳನ್ನು ತೆರೆದು ನೋಡಿದರೆ, 'ಹೊಸ ವೈರಸ್ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ' ಎಂಬ ವರದಿಗಳು ಕಾಣುತ್ತವೆ. ಆದರೆ ಟಿವಿ ಚಾನೆಲ್‌ಗಳು ಮಾತ್ರ ಮತ್ತೊಂದು ಮಹಾಮಾರಿ ಬಂತು ಅಂತ ಅಖಾಡಕ್ಕೆ ಇಳಿದಿವೆ. ಅದರಲ್ಲೂ, ''ಚೀನಾದಲ್ಲಿ ಊರು ಊರುಗಳೇ ಸ್ಮಶಾನ ಆಗಿವೆ, ಆಸ್ಪತ್ರೆಗಳು ಶವಾಗಾರ ಆಗಿವೆ. ಎಲ್ಲೂ ರೋಗಿಗಳಿಗೆ ಬೆಡ್ ಸಿಗುತ್ತಿಲ್ಲ, ಪ್ರಳಯ ಅಂದ್ರೆ ಇದೇನಾ?'' ಅಂತ ಹೇಳುತ್ತಾ, ಬೆದರಿದವರ ಮೇಲೆ ಕಪ್ಪೆ ಎಸೆಯುವ ಕೆಲಸ ಮಾಡುತ್ತಿವೆ. ಮಾಧ್ಯಮಗಳ ಬಗ್ಗೆ ಜನರಿಗೆ ಇರೋ ಅಭಿಪ್ರಾಯ ಅಂದ್ರೆ, 'ನ್ಯೂಸ್ ಪೇಪರ್‌ಗಳಲ್ಲಿ ಸತ್ಯ ಬರುತ್ತದೆ, ಚಾನೆಲ್‌ನವರು ಟಿಆರ್‌ಪಿಗಾಗಿ ಏನು ಬೇಕಾದರೂ ಸುದ್ದಿ ಮಾಡುತ್ತಾರೆ' ಅನ್ನೋದು. ಅದು ತಕ್ಕ ಮಟ್ಟಿಗೆ ನಿಜ ಕೂಡಾ. ಆದರೆ ಈ ಅಭಿಪ್ರಾಯದ ಜತೆಗೆ ಜನರಿಗೆ ಜೀವನದ ಮತ್ತು ಜೀವದ ಬಗ್ಗೆ ಭಯ ಇರೋದ್ರಿಂದ 'ಟು ಬಿ ಆನ್ ದಿ ಸೇಫರ್ ಸೈಡ್' ಅವರು ನ್ಯೂಸ್ ಪೇಪರ್‌ಗಳ ವರದಿಗಳನ್ನೇ ಹೆಚ್ಚಾಗಿ ನಂಬಲು ಇಷ್ಟಪಡುತ್ತಾರೆ. ಯಾಕಂದ್ರೆ, ಅವು ಏನೂ ಆಗಲ್ಲ ಅನ್ನೋ ಅಭಯ ಕೊಡುತ್ತಿವೆ. ಆದರೆ ಟಿವಿ ಚಾನೆಲ್‌ಗಳು ಭಯೋತ್ಪಾದಕ ಕೆಲಸ ಮಾಡುತ್ತಿವೆ. ಇದರ ಮಧ್ಯೆ ಇದನ್ನು ಪ್ರೂವ್ ಮಾಡುವಂತೆ ಚೀನಾದಲ್ಲಿರುವ ಭಾರತದ ನಾಗರಿಕರು, ''ನಾವು ಇಲ್ಲಿ ಪ್ರತಿನಿತ್ಯ ನೆಮ್ಮದಿಯಾಗಿ ಓಡಾಡುವ ಜನರನ್ನು ನೋಡುತ್ತಿದ್ದೇವೆ. ಭಯಪೀಡಿತರಾಗುವ ಸನ್ನಿವೇಶ ಇಲ್ಲಿಲ್ಲ, ಹಾಗಾಗಿ ಸಮೂಹ ಸನ್ನಿಗೆ ಒಳಗಾಗಬೇಡಿ'' ಅಂತ ಫ್ಯಾಕ್ಟ್ ಚೆಕ್ ವರದಿಗಳನ್ನು ಕೊಡುತ್ತಿದ್ದಾರೆ. ಆದರೆ ಇವುಗಳಲ್ಲಿ ಯಾವುದನ್ನು ನಂಬೋದು, ಯಾವುದನ್ನು ಬಿಡೋದು ಅಂತ ಹೊಸ ವೈರಸ್ ಅಟ್ಯಾಕ್ ಆಗುವ ಮುನ್ನವೇ ನಮ್ಮ ದೇಶದ ನಾಗರಿಕರ ಆರೋಗ್ಯ ಹದಗೆಟ್ಟಿದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಜಪಾನಿನ ಮೇಡ್ ಕೆಫೆ

ಜಪಾನಿನಲ್ಲಿ ಒಂದು ವಿಭಿನ್ನ ಮಾದರಿಯ ಕೆಫೆ ಇದೆ. ಮೊದಲ ಬಾರಿಗೆ ಹೋದವರಿಗೆ ಇದು ಅಚ್ಚರಿಯ ಅನುಭವವನ್ನು ನೀಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಕಾರಣ ಅಂಥ ಕೆಫೆಯನ್ನು ಬೇರೆಲ್ಲೂ ನೋಡಿರಲೂ ಸಾಧ್ಯವಿಲ್ಲ, ಅದನ್ನು ಮೇಡ್ ಕೆಫೆ (Maid Cafe) ಅಂತಾರೆ. ಅದು ಅತಿಥಿ ಸತ್ಕಾರದ ಒಂದು ವಿಭಿನ್ನ ರೀತಿಯ ಕೆಫೆ. ಇದು ಜಪಾನಿನ ಪಾಪ್ ಸಂಸ್ಕೃತಿಯ ಭಾಗವೂ ಹೌದು. ಇದನ್ನು ಮೊದಲ ಬಾರಿ 2000ರ ದಶಕದ ಆರಂಭದಲ್ಲಿ ಟೋಕಿಯೋ ನಗರದ ಅಕಿಹಾಬಾರಾ ಪ್ರದೇಶದಲ್ಲಿ ಆರಂಭಿಸಲಾಯಿತು. ಈ ಕೆಫೆಗಳಲ್ಲಿ ಸಿಬ್ಬಂದಿ (ಸರ್ವೀಸ್ ಸ್ಟಾಫ್) ಮೇಡ್ (ಮನೆ ಕೆಲಸಗಾರ್ತಿ) ಉಡುಪುಗಳನ್ನು ಧರಿಸಿರುತ್ತಾರೆ ಮತ್ತು ಅತಿಥಿಗಳಿಗೆ ಗೌರವಪೂರ್ಣ ಹಾಗೂ ಸ್ನೇಹಪೂರ್ಣ ಸೇವೆಯನ್ನು ನೀಡುತ್ತಾರೆ. ಅಲ್ಲಿ ಗ್ರಾಹಕರಿಗೆ feel at home ಭಾವನೆ ಬರುವಂತೆ ನೋಡಿಕೊಳ್ಳಲಾಗುತ್ತದೆ. ಮೇಡ್ ಕೆಫೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಬಿಳಿ ಏಪ್ರನ್ ಮತ್ತು ಕಪ್ಪು ಅಥವಾ ಬಿಳಿ ಬಣ್ಣದ ಡ್ರೆಸ್ ಧರಿಸಿರುತ್ತಾರೆ. ಇವರ ವೇಷಭೂಷಣವು ಪಶ್ಚಿಮದ ವಿಕ್ಟೋರಿಯನ್ ಶೈಲಿಯ ಮೇಡ್ ವಸ್ತ್ರಧಾರಣೆಯನ್ನು ಪ್ರತಿಬಿಂಬಿಸುತ್ತದೆ. ಇದರಿಂದ ಕೆಫೆಗೆ ಬರುವ ಗ್ರಾಹಕರಿಗೆ ಬೇರೆ ಲೋಕದಲ್ಲಿರುವ ಭಾವನೆ ಮೂಡುತ್ತದೆ. ಅಲ್ಲಿನ ಕೆಲಸಗಾರರು ಅನಿಮೆ ಅಥವಾ ಪಾಶ್ಚಿಮಾತ್ಯ ಪುರಾತನ ಸೇವಕಿಯ ಉಡುಪು ಧರಿಸುತ್ತಾರೆ. ಇವರ ಉಡುಪುಗಳು ವಿಶಿಷ್ಟವಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದು, ಅದರಿಂದಲೇ ಅವರು ಗ್ರಾಹಕರನ್ನು ಸೆಳೆಯುತ್ತಾರೆ. ಅಲ್ಲಿಗೆ ಆಗಮಿಸುವ ಅತಿಥಿಗಳನ್ನು ಸನ್ಮಾನ ಭಾವದಲ್ಲಿ ಮತ್ತು ಸ್ನೇಹಪೂರ್ಣವಾಗಿ ಬರಮಾಡಿಕೊಳ್ಳುತ್ತಾರೆ. 'ಮಾಸ್ಟರ್' (Master) ಅಥವಾ 'ಮಿಸ್ಟ್ರೆಸ್' (Mistress) ಎಂದು ಸಂಬೋಧಿಸಿ ಅತಿಥಿಗಳನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ. ಅಲ್ಲಿನ ಆಹಾರ, ಕಾಫಿ ಅಥವಾ ಡೆಸರ್ಟ್ ಅನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಅವುಗಳ ಮೇಲೆ ನಿಮಗಿಷ್ಟವಾದ ಪಾತ್ರಧಾರಿಗಳ ಚಿತ್ರಗಳನ್ನು ರಚಿಸಿರುತ್ತಾರೆ. ಅಲ್ಲಿ ನೀಡುವ ಆಹಾರಗಳಿಗೆ ವಿಶೇಷವಾಗಿ ಪ್ಲೇಟಿಂಗ್ ಮಾಡಲಾಗಿರುತ್ತದೆ. ಉದಾಹಣೆಗೆ, ಐಸ್ ಕ್ರೀಮ್ ಅಥವಾ ಆಮ್ಲೆಟ್ ಮೇಲೆ ಚಾಕೊಲೇಟ್ ಸಾಸ್ ಬಳಸಿ ಹೃದಯ (Heart)ದ ಆಕೃತಿಯನ್ನು ಬಿಡಿಸಿರುತ್ತಾರೆ. ಇವು ಗ್ರಾಹಕರಿಗೆ ದೃಷ್ಟಿಕೂಟ ಮತ್ತು ಸ್ವಾದ ಎರಡನ್ನೂ ಒದಗಿಸುತ್ತವೆ. ಕೆಲವೊಂದು ಮೇಡ್ ಕೆಫೆಗಳಲ್ಲಿ ಗೇಮ್ಸ್, ಸಿಂಗಿಂಗ್, ಡಾನ್ಸ್ ಪ್ರದರ್ಶನ, ಫೋಟೋಶೂಟ್‌ಗಳನ್ನು ಆಯೋಜಿಸಿರುತ್ತಾರೆ. ಕೆಲ ಕೆಫೆಗಳಲ್ಲಿ ಮೇಡ್‌ಗಳು ಕೋರಿಕೆಯ ಮೇರೆಗೆ ಗ್ರಾಹಕರ ಜತೆಗೆ ಬೋರ್ಡ್ ಗೇಮ್ಸ್ ಅನ್ನು ಸಹ ಆಡುತ್ತಾರೆ. ಮೇಡ್ ಕೆಫೆ ಜಪಾನಿನ ಓಟಾಕು (Otaku) ಸಂಸ್ಕೃತಿಯ ಪ್ರಮುಖ ಭಾಗ. ಅನಿಮೆ, ಮಂಗಾ ಮತ್ತು ಗೇಮಿಂಗ್ ಅಭಿಮಾನಿಗಳು ಈ ಸ್ಥಳಗಳಿಗೆ ಬರುವುದನ್ನು ಬಹಳ ಇಷ್ಟಪಡುತ್ತಾರೆ. ಮೇಡ್ ಕೆಫೆಗಳಿಗೆ ಬರುವ ಅತಿಥಿಯ ಮನಸ್ಸಿನಲ್ಲಿ ತಾನು ವಿಶೇಷ ವ್ಯಕ್ತಿಯೆಂಬ ಅನುಭವ ಮೂಡಿಸುವುದು ಅಲ್ಲಿನ ವೈಶಿಷ್ಟ್ಯ. ಅಲ್ಲಿನ ಸೇವೆಯ ಪ್ರತಿಯೊಂದು ಭಾಗವೂ ಮನಸ್ಸಿಗೆ ತೃಪ್ತಿ ನೀಡುವಂತೆ ವಿನ್ಯಾಸಗೊಳಿಸಿರುತ್ತಾರೆ. ಇದು ಕೇವಲ ಆಹಾರ ಸೇವಿಸುವ ಸ್ಥಳವಷ್ಟೇ ಅಲ್ಲ, ಅಲ್ಲಿನ ಜನರ ನಡೆವಳಿಕೆ ಮತ್ತು ಪರಿಸರ ವಿಶೇಷ ಅನುಭೂತಿಯನ್ನುಂಟು ಮಾಡುತ್ತವೆ. ಅಕಿಹಾಬಾರಾ (Akihabara), ಟೋಕಿಯೋ ನಗರದ ದುಬಾರಿ ಪ್ರದೇಶ, ಮೇಡ್ ಕೆಫೆಗಳ ಕೇಂದ್ರ. ಪ್ರವಾಸಿಗರು ಮತ್ತು ಸ್ಥಳೀಯರು ಈ ಸ್ಥಳಕ್ಕೆ ಬಂದು ಜಪಾನಿನ ವಿಶಿಷ್ಟ ಮತ್ತು ಸೃಜನಶೀಲ ಸಾಂಸ್ಕೃತಿಕ ಪರಂಪರೆಯನ್ನು ಅನುಭವಿಸುತ್ತಾರೆ. ಮೇಡ್ ಕೆಫೆಯು ಅನಿಮೇಷನ್ ಮತ್ತು ಫ್ಯಾಂಟಸಿ ಜಗತ್ತನ್ನು ಅನಾವರಣಗೊಳಿಸುವ ಸಂಸ್ಕೃತಿಯ ಒಂದು ಭಾಗವೂ ಹೌದು. ಈ ಕೆಫೆಗಳಲ್ಲಿ ಸೇವಕಿಯರೊಂದಿಗೆ ಗ್ರಾಹಕರು ಚರ್ಚಿಸಬಹುದು. ಇದು ಸಾಮಾಜಿಕ ಪರಸ್ಪರ ಸಂಬಂಧಗಳಿಗಾಗಿ ಒಂದು ವೇದಿಕೆಯೂ ಆಗಬಲ್ಲದು. ಹಲವರು ತಮ್ಮ ಪ್ರತಿದಿನದ ಜೀವನದಿಂದ ಸ್ವಲ್ಪ ವಿರಾಮ ಪಡೆದು ನಿರಾಳತೆ ಅನುಭವಿಸಲು ಇಲ್ಲಿ ಬರುವುದು ಸಾಮಾನ್ಯ.

ಆ ದೆವ್ವ ಗೊತ್ತಿಲ್ಲ! ಈ ದೆವ್ವ ಇರುವುದಂತೂ ನಿಜ!!



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ದೆವ್ವ-ಭೂತಗಳು ಇಲ್ಲ' ಎಂದು ನಾನು ಹೇಳಿದರೆ ನೀವು ನಂಬುತ್ತೀರಿ, 'ಇವೆ' ಎಂದರೆ ನೀವು ನಂಬಲಾರಿರಿ. ಆದರೆ ಈಗ ನಾವು ತಿಳಿಯ ಹೊರಟಿರುವ ಭೂತದ ಕಥೆಯು ಸುಳ್ಳಲ್ಲ, ಕಲ್ಪನೆಯಲ್ಲ, ಕಟುವಾಸ್ತವ! ನಮ್ಮ ಅವಯವಗಳು ಅಪಘಾತಕ್ಕೆ ತುತ್ತಾದಾಗ, ಕ್ಯಾನ್ಸರ್ ಮುಂತಾದ ಕಾಯಿಲೆಗಳು ಬಂದಾಗ ಇಲ್ಲವೇ ಯುದ್ಧದಲ್ಲಿ ಗಾಯಗೊಂಡಾಗ ಕೈಕಾಲುಗಳನ್ನು ಛೇದಿಸಬೇಕಾದ ಪ್ರಸಂಗಗಳು ಬರಬಹುದು. ಒಂದು ಸಲ ಕಾಲನ್ನು ಛೇದಿಸಿದ ಮೇಲೆ, ಆತ ತನ್ನ ಆ ಅಂಗವನ್ನು ಸದಾ ಕಾಲಕ್ಕೂ ಕಳೆದುಕೊಳ್ಳುತ್ತಾನೆ. ಆದರೆ ಆತನಿಗೆ ತನ್ನ ಕಾಲು ಇನ್ನೂ ಇದೆ, ಅದು ನೋಯುತ್ತಿದೆ, ನವೆಯಾಗುತ್ತಿದೆ, ಅದನ್ನು ಕೆರೆಯಬೇಕೆನ್ನಿಸುತ್ತದೆ ಎಂದರೆ ಅದನ್ನು ನಿಜ ಎಂದು ಭಾವಿಸುವಿರಾ? ಈ ಇಲ್ಲದ ಕಾಲು ನವೆಯಾಗುವುದನ್ನು ಹಾಗೂ ನೋಯುವುದನ್ನು ನಂಬಲೇಬೇಕು. ಇದನ್ನು 'ಫ್ಯಾಂಟಮ್ ಲಿಂಬ್ ಪೇಯ್ನ್' ಎಂದು ಕರೆಯುತ್ತಾರೆ. ಫ್ಯಾಂಟಮ್ ಎಂದರೆ ಇಲ್ಲದಿರುವ ಭೂತವನ್ನು ಇರುವಂತೆ ತೋರಿಸುವ ಸ್ಥಿತಿ ಎಂದರ್ಥ. ಹಾಗಾಗಿ ಕನ್ನಡದಲ್ಲಿ ಇದನ್ನು 'ಭ್ರಮಾಜನಿತ ಅಂಗವೇದನೆ' ಎಂದು ಅನುವಾದಿಸಬಹುದು.

ಭ್ರಮಾಜನಿತ ಅಂಗವೇದನೆಯ ಬಗ್ಗೆ ಮೊದಲ ಬಾರಿಗೆ ಫ್ರೆಂಚ್ ಶಸ್ತ್ರವೈದ್ಯ ಆಂಬ್ರೋಸ್ ಪ್ಯಾರೆ (1510–1590) ವರ್ಣಿಸಿದ. ಅವಯವ ಛೇದನಕ್ಕೆ ಒಳಗಾದ ಅವನ ರೋಗಿಗಳು, ಛೇದಿಸಲ್ಪಟ್ಟ ಅಂಗವು ವಿಪರೀತ ನೋಯುತ್ತಿರುವುದಾಗಿ ಪ್ಯಾರೆಗೆ ದೂರಿದರು. ಕತ್ತರಿಸಿ ಎಸೆದ ಅಂಗವು ನೋಯುತ್ತಿದೆ ಎಂದರೆ ಅದನ್ನು ಹೇಗೆ ತಾನೆ ನಂಬಲು ಸಾಧ್ಯ? ಬಹುಶಃ ಈ ನೋವು ಮನೋಜನ್ಯವಾಗಿರಬೇಕೆಂದು ಪ್ಯಾರೆ ನಿರ್ಲಕ್ಷಿಸಿದ. ಅಮೆರಿಕದ ಅಂತರ್ಯುದ್ಧವು (ಅಮೆರಿಕನ್ ಸಿವಿಲ್ ವಾರ್) 1861ರಿಂದ 1865ರವರೆಗೆ ನಡೆಯಿತು. ಈ ಯುದ್ಧದಲ್ಲಿ ಅಮೆರಿಕದ ಶೇ.2ರಷ್ಟು ಜನರು, ಅಂದರೆ ಸರಿಸುಮಾರು 8 ಲಕ್ಷ ಜನರು ಮರಣಿಸಿದರು. ಹಾಗೆಯೇ ಸುಮಾರು 4,75,000 ಜನರು ನಾನಾ ರೀತಿಯ ಗಾಯಗಳ ಕಾರಣ ಅಂಗವಿಕಲರಾದರು. ಈ ಅವಧಿಯಲ್ಲಿ ಅಂಗಛೇದನಕ್ಕೆ ಒಳಗಾಗಿದ್ದ ಸೈನಿಕರು, ದೊಡ್ಡ ಪ್ರಮಾಣದಲ್ಲಿ ಭ್ರಮಾಜನಿತ ಅಂಗವೇದನೆಯ ಬಗ್ಗೆ ದೂರಲಾರಂಭಿಸಿದರು. ಆಗ ಸೈಲಾಸ್ ವೀರ್ ಮಿಚೆಲ್ ಎಂಬ ವೈದ್ಯನು ಈ ಸ್ಥಿತಿಗೆ 'ಫ್ಯಾಂಟಮ್ ಲಿಂಬ್ ಪೇಯ್ನ್' ಎಂದು ಮೊದಲ ಬಾರಿಗೆ ನಾಮಕರಣ ಮಾಡಿದ. ಆಗಲೂ, ಸಮಕಾಲೀನ ವೈದ್ಯರು ಈ ನೋವನ್ನು ಮನೋಜನ್ಯವೆಂದೇ ಭಾವಿಸಿದರು. ವಿಶ್ವದ ಎರಡನೆಯ ಮಹಾಯುದ್ಧದಲ್ಲಿ ಅಮೆರಿಕದ 15,000 ಸೈನಿಕರು ತಮ್ಮ ಅಂಗಾಂಗಗಳನ್ನು ಕಳೆದುಕೊಂಡರು. ಜನವರಿ 1, 2018ರ ವೇಳೆಗೆ, ಇರಾಕ್ ಮತ್ತು ಅಫ್ಘಾನಿಸ್ತಾನದ ಯುದ್ಧದಲ್ಲಿ 1718 ಸೈನಿಕರು ತಮ್ಮ ಕೈಕಾಲುಗಳನ್ನು ಕಳೆದುಕೊಂಡರು. ಇವರಲ್ಲಿ ಅಂಗಛೇದನಕ್ಕೊಳಗಾದ ಶೇ.80ರಿಂದ 100ರವರೆಗಿನ ಜನರು ಒಂದಲ್ಲ ಒಂದು ರೀತಿಯ ಭ್ರಮಾಜನಿತ ಅಂಗವೇದನೆಯನ್ನು ಅನುಭವಿಸಲಾರಂಭಿಸಿದರು. ಹಾಗಾಗಿ ಈ ನೋವು ಮನೋಜನ್ಯವಾದುದಲ್ಲ, ದೇಹದಲ್ಲಿಯೇ ಹುಟ್ಟುತ್ತಿರಬೇಕು ಎಂಬ ತೀರ್ಮಾನಕ್ಕೆ ವೈದ್ಯರು ಬಂದರು, ತಮ್ಮ ಅಧ್ಯಯನ ಮತ್ತು ಸಂಶೋಧನೆಯನ್ನು ತೀವ್ರಗೊಳಿಸಿದರು.

ಡೆಡ್ಲೋ ಕಥೆ: 1866. ಅಮೆರಿಕದ 'ಅಟ್ಲಾಂಟಿಕ್ ಮಂಥ್ಲಿ' ಪತ್ರಿಕೆಯಲ್ಲಿ ಜಾರ್ಜ್ ಡೆಡ್ಲೋ ಎಂಬುವವನು ಬರೆದ ಕಥೆಯೊಂದು ಪ್ರಕಟವಾಯಿತು. ಕಥಾನಾಯಕ ಜಾರ್ಜ್ ಡೆಡ್ಲೋ ಎಂಬ ಯುವವೈದ್ಯ. ಈತ ತನ್ನ ವೈದ್ಯಕೀಯ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಅಮೆರಿಕದ ಸೈನ್ಯವನ್ನು ಸೇರಿದ. ಸೈನ್ಯವು ಅವನನ್ನು ಸಮರಾಂಗಣದ ಮುಂಚೂಣಿಗೆ ಕಳುಹಿಸಿತು. ಅವನು ಯುದ್ಧದ ತೀವ್ರತೆಯನ್ನು ಕಣ್ಣಾರೆ ಕಂಡ. ಶತ್ರುಗಳು ಗುಂಡಿನ ಮಳೆಗರೆದರು. ಡೆಡ್ಲೋ ತೀವ್ರವಾಗಿ ಗಾಯಗೊಂಡ. ವೈದ್ಯರು ಅವನ ಎರಡೂ ಕೈಗಳನ್ನು ಹಾಗೂ ಎರಡೂ ಕಾಲುಗಳನ್ನು ಛೇದಿಸಿದರು. ಈಗ ಡೆಡ್ಲೋ ಒಂದು ಮರದ ದಿಮ್ಮಿಗೆ ಸಮನಾದ! ಕುಳಿತೆಡೆಯಿಂದ ಒಂದು ಇಂಚೂ ಅಲುಗಾಡಲಾರ, ಮತ್ತೊಬ್ಬರ ನೆರವಿಲ್ಲದೆ ಊಟ, ತಿಂಡಿ, ಸ್ನಾನವನ್ನು ಮಾಡಲಾರ. ಉಡುಗೆ, ತೊಡುಗೆಗಳನ್ನು ಧರಿಸಲಾರ. ಮಲಮೂತ್ರಗಳನ್ನೂ ಮತ್ತೊಬ್ಬರ ನೆರವಿನಿಂದಲೇ ವಿಸರ್ಜಿಸಬೇಕು. ಇಂಥ ದುಃಸ್ಥಿತಿಯಲ್ಲಿ ಅವನನ್ನು ಭ್ರಮಾಜನಿತ ಅಂಗವೇದನೆಯು ತೀವ್ರ ಸ್ವರೂಪದಲ್ಲಿ ಕಾಡಲಾರಂಭಿಸಿತು. ಇಲ್ಲದ ಕೈಕಾಲುಗಳಲ್ಲಿ ಉಗ್ರ ಸ್ವರೂಪದ ನೋವು ಕಾಣಿಸಿಕೊಂಡಿತು. ಈ ನೋವನ್ನು ಶಮನ ಮಾಡುವಂಥ ಔಷಧವೇ ಇಲ್ಲ! ಕಾಲಿನಲ್ಲಿ ಕಂಡುಬರುವ ವಿಪರೀತ ನವೆಯನ್ನು ಕೆರೆದು ಕಡಿಮೆ ಮಾಡೋಣ ಎಂದರೆ ಕಾಲೇ ಇಲ್ಲ! ತಾನು ಪ್ರತ್ಯಕ್ಷ ನರಕದಲ್ಲಿದ್ದೇನೆ, ತನಗೆ ಇಲ್ಲಿಂದ ಬಿಡುಗಡೆ ಇಲ್ಲವೇ ಎಂಬ ಅಳಲನ್ನು ಡೆಡ್ಲೋ ತನ್ನ ಕಥೆಯಲ್ಲಿ ತೋಡಿಕೊಂಡ.



ಡೆಡ್ಲೋ ಕಥೆಯನ್ನು ಓದುತ್ತಿರುವಂತೆಯೇ ಅಮೆರಿಕನ್ನರು ವಿಚಲಿತರಾದರು. ನಾಲ್ಕೂ ಅವಯವಗಳಿಲ್ಲದ ಅಸಹಾಯಕನಿಗೆ ಭ್ರಮಾಜನಿತ ಅಂಗವೇದನೆಯು ಕಾಡುತ್ತಿರುವ ಬಗ್ಗೆ ತೀವ್ರ ಕಳವಳಗೊಂಡರು. ಮಮ್ಮಲ ಮರುಗಿದರು. ಒಂದು ಕಥೆಯು ಇಡೀ ಅಮೆರಿಕನ್ನರಿಗೆ ಭ್ರಮಾಜನಿತ ನೋವಿನ ಉಗ್ರ ಸ್ವರೂಪವನ್ನು ಪರಿಚಯ ಮಾಡಿಕೊಟ್ಟಿತು. ನಂತರದ ದಿನಗಳಲ್ಲಿ 'ಜಾರ್ಜ್ ಡೆಡ್ಲೋ ಕಥೆ'ಯು ಕೇವಲ ಕಥೆ ಎನ್ನುವುದು ತಿಳಿಯಿತು. ಈ ಕಥೆಯನ್ನು ಬರೆದವನು ಸೈಲಾಸ್ ವೀರ್ ಮಿಚೆಲ್! ಭ್ರಮಾಜನಿತ ಅಂಗವೇದನೆಯು ಎಷ್ಟು ತೀವ್ರವಾಗಿರಬಹುದು ಎಂಬ ಕಲ್ಪನೆಯು ಅಮೆರಿಕನ್ನರಿಗೆ ದೊರೆಯಲೆಂದೇ ಈ ಕಾಲ್ಪನಿಕ ಕಥೆಯನ್ನು ಬರೆದ. ಹಾಗಾಗಿ ಅಮೆರಿಕನ್ನರು, ಅಂಗಛೇದನಕ್ಕೆ ಒಳಗಾದವರನ್ನು ನಿಜವಾದ ಸಹಾನುಭೂತಿಯಿಂದ ನೋಡಲಾರಂಭಿಸಿದರು.

ವೈವಿಧ್ಯ: ಈಗ ವೈದ್ಯಲೋಕಕ್ಕೆ ಈ ಭ್ರಮಾಜನಿತ ಅಂಗವೇದನೆಯ ಪರಿಚಯ ಸಾಕಷ್ಟು ಆಗಿದೆ. ಇದು ಅಂಗಛೇದನಕ್ಕೆ ಒಳಗಾದ ಶೇ.80ರಿಂದ 100 ಮಂದಿಯಲ್ಲಿ ಕಂಡುಬರುತ್ತದೆ. ಆದರೆ ಎಲ್ಲರಲ್ಲೂ ಈ ವೇದನೆಯು ಏಕರೂಪವಾಗಿರುವುದಿಲ್ಲ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಲೇ ಇರುತ್ತದೆ. ಹಾಗಾಗಿ ವೈದ್ಯರು ಈ ವೇದನೆಯ ಬಗ್ಗೆ ಅಧ್ಯಯನ ಮಾಡಿ, ಅಂಗಛೇದಿತರ ಅನುಭವವನ್ನು ವರ್ಗೀಕರಿಸಿದ್ದಾರೆ.

1. ಭ್ರಮಾಜನಿತ ನೋವು: ಛೇದನೆಗೆ ಒಳಗಾಗಿ, ಛೇದಿತ ಅಂಗವಿದ್ದ ಸ್ಥಳದಲ್ಲಿ ವಿವಿಧ ಪ್ರಮಾಣದ ನೋವು ಕಂಡುಬರುತ್ತದೆ.

2. ಭ್ರಮಾಜನಿತ ಸಂವೇದನೆ: ಅಂಗವನ್ನು ಛೇದಿಸಿದ್ದರೂ, ಆ ಅಂಗವಿನ್ನೂ ಅಲ್ಲೇ ಇದೆ ಎಂಬ ಭಾವನೆ. ನೋವು ಇರುವುದಿಲ್ಲ, ಆದರೆ ಅಲ್ಲಿದ್ದ ಅಂಗವು, ಈ ಹಿಂದೆ ಯಾವ ಯಾವ ಸ್ಪರ್ಶಸಂವೇದನೆಗಳನ್ನು ಅನುಭವಿಸುತ್ತಿತ್ತೋ, ಅವೆಲ್ಲವನ್ನು ಈಗಲೂ ಅನುಭವಿಸುತ್ತದೆ. (ಉದಾ: ನವೆ, ಉರಿ, ಜೋಮು, ಚಿವುಟುವ ಅನುಭವ, ಜುಮುಗುಟ್ಟುವುದು, ಚುಚ್ಚುವುದು, ತಿರುಚುವುದು, ಬಿಸಿಯಾಗುವುದು, ತಣ್ಣಗಾಗುವುದು, ತುಡಿಯುವುದು ಇತ್ಯಾದಿ). ಈ ಅನುಭವವು ಎಷ್ಟು ಸಹಜವಾಗಿರುತ್ತದೆ ಎಂದರೆ, 'ತನಗೆ ಒಂದು ಕಾಲು ಇಲ್ಲ' ಎಂಬ ಭಾವನೆಯೇ ಬರುವುದಿಲ್ಲ. ಕುರ್ಚಿಯಲ್ಲಿ ಕುಳಿತವರು ಎರಡೂ ಕಾಲು ಇದ್ದವರು ಹೇಗೆ ಎದ್ದು ನಡೆಯಲಾರಂಭಿಸುತ್ತಾರೋ, ಹಾಗೆಯೇ ನಡೆಯಲು ಹೋಗಿ ಬೀಳುತ್ತಾರೆ.

3. ಭ್ರಮಾಜನಿತ ಅಂಗವೇದನಾ ಲಕ್ಷಣಾವಳಿ (ಫ್ಯಾಂಟಮ್ ಪೇಯ್ನ್ ಸಿಂಡ್ರೋಮ್): ಈ ವರ್ಗೀಕರಣದಲ್ಲಿ ನೋವಿನ ಜತೆಯಲ್ಲಿ ಎಲ್ಲ ರೀತಿಯ ಸಂವೇದನೆಗಳು ಕಂಡುಬರುತ್ತವೆ.

4. ಶೇಷ ಅಂಗವೇದನೆ (ರೆಸಿಡ್ಯೂಯಲ್ ಲಿಂಬ್ ಪೇಯ್ನ್): ಛೇದನಕ್ಕೆ ಒಳಗಾದ ಮೊಂಡು (ಸ್ಟಂಪ್) ಭಾಗದಲ್ಲಿ ನೋವು ಹಾಗೂ ಇತರ ಲಕ್ಷಣಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಮೊಂಡಿನಲ್ಲಿ ಯಾವುದೇ ರೀತಿಯ ಸೋಂಕು ಅಥವಾ ಅಳಿದುಳಿದಿರುವ ನರಕ್ಕೆ ಆದ ಹಾನಿಯು ಈ ರೀತಿಯ ವೇದನೆಗೆ ಕಾರಣವಾಗಬಹುದು. ಇಂಥ ವೇದನೆಗೆ ಚಿಕಿತ್ಸೆಯನ್ನು ನೀಡಬಹುದು.

ಕಾಲ ವ್ಯಾಪ್ತಿ: ಭ್ರಮಾಜನಿತ ಅಂಗವೇದನೆಯು ಎಲ್ಲಿಯವರೆಗೆ ಇರುತ್ತದೆ? ಸಂವೇದನೆಗಳು ಯಾವಾಗಲೂ ಒಂದೇ ಸ್ವರೂಪದಲ್ಲಿ ಇರುತ್ತವೆಯೆ? ಇವುಗಳನ್ನು ಕೆರಳಿಸುವ ಅಂಶಗಳು ಯಾವುವು ಎನ್ನುವ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಅಂಗಛೇದನೆಯಾದ ದಿನದಿಂದ ಸಾಮಾನ್ಯವಾಗಿ ಸರಾಸರಿ 6 ತಿಂಗಳಿನವರೆಗೆ ನೋವು ಕಾಡುವುದುಂಟು. ಅದಾದ ನಂತರ ಸಂವೇದನೆಯ ತೀವ್ರತೆಯು ಹಾಗೂ ಕಂಡುಬರುವ ಅವಧಿಯು ಕಡಿಮೆಯಾಗುತ್ತಾ ಹೋಗುತ್ತದೆ. ಕೆಲವರಲ್ಲಿ ಮಾತ್ರ ಈ ಸಂವೇದನಾ ಹಿಂಸೆಯು ಎರಡು ವರ್ಷಗಳಾದರೂ ಕಡಿಮೆಯಾಗುವುದಿಲ್ಲ. ಮಧುಮೇಹ, ರಕ್ತದ ಒತ್ತಡ, ಮೊಂಡುಭಾಗಕ್ಕೆ ಬೀಳುವ ಪೆಟ್ಟು, ನರಗಳಿಗೆ ಹಾನಿ, ಉರಿಯೂತ, ನರಗಂಟುಗಳು, ರಕ್ತಪ್ರವಾಹದಲ್ಲಿ ಏರುಪೇರು, ಚರ್ಮದಲ್ಲಿ ಒತ್ತಡ ಗಾಯಗಳು ವೇದನೆಯನ್ನು ಕೆರಳಿಸಬಹುದು.

ಭ್ರಮಾಜನಿತ ಅಂಗವೇದನೆಯನ್ನು ಸಹಿಸಿಕೊಂಡು ಬದುಕುವುದು ಹೇಳಿದಷ್ಟು ಸುಲಭವಲ್ಲ. ಮನೆಯಲ್ಲಿ ಬಂಧುಗಳು, ಗೆಳೆಯರು ಭಾವನಾತ್ಮಕ ಆಸರೆಯನ್ನು ನೀಡುವುದು ಬಹಳ ಮುಖ್ಯ. ಏನಾದರೂ ಒಂದು ಕೆಲಸದಲ್ಲಿ ತೊಡಗಿದ್ದರೆ, ಅಂಗವೈಕಲ್ಯದ ಚಿಂತೆಯು ಹೆಚ್ಚು ಕಾಡದು. ಇಲ್ಲದಿದ್ದರೆ ಮಾನಸಿಕ ಸಮತೋಲನವು ತಪ್ಪಿ ಆತಂಕ, ಖಿನ್ನತೆ, ಸುಸ್ತು, ಸೋಂಕು, ರಕ್ತಪರಿಚಲನಾ ತೊಂದರೆ, ಮೂಳೆಯ ತೊಂದರೆ ಇತ್ಯಾದಿಗಳು ಸಮಸ್ಯೆಯನ್ನು ಉಲ್ಬಣಿಸಿ, ವೇದನೆಯು ಕಡಿಮೆಯಾಗುವುದಕ್ಕೆ ಅವಕಾಶವೇ ದೊರೆಯದಿರಬಹುದು. ಇಂಥ ಸಂದರ್ಭದಲ್ಲಿ ಈ ಪ್ರಚೋದಕಗಳಿಗೆ ಮೊದಲು ಚಿಕಿತ್ಸೆಯನ್ನು ಕೊಡಬೇಕಾಗುತ್ತದೆ. ವೇದನೆಯು ನಿದ್ರೆಯಲ್ಲೂ ಕಾಡಲಾರಂಭಿಸಿದರೆ ಬದುಕು ಬಹಳ ಕಷ್ಟವಾಗುತ್ತದೆ. ನಿದ್ರೆಯಿಲ್ಲದಿದ್ದರೆ ಹಗಲಿನಲ್ಲಿ ದೈನಂದಿನ ಕೆಲಸಗಳನ್ನು ಮಾಡಲು ಕಷ್ಟವಾಗಿ ಸಮಸ್ಯೆಯು ಮತ್ತಷ್ಟು ತೀವ್ರವಾಗುತ್ತದೆ. ಇಂದಿನ ದಿನಗಳಲ್ಲಿ ಕೃತಕ ಕೈ ಕಾಲುಗಳು ದೊರೆಯುತ್ತಿವೆ. ಹಾಗಾಗಿ ಎಲ್ಲಿಯವರೆಗೆ ಅವರು ಕೃತಕ ಅಂಗಗಳನ್ನು ಧರಿಸಿರುತ್ತಾರೋ, ಅಲ್ಲಿಯವರೆಗೆ ಈ ಸಂವೇದನಾ ಹಿಂಸೆಗಳು ಕಡಿಮೆ ಇರುತ್ತವೆ ಅಥವಾ ಪೂರ್ಣ ಮಾಯವಾಗಬಹುದು. ಕೃತಕ ಅಂಗವನ್ನು ಕಳಚಿದ ಕೂಡಲೇ ಸಂವೇದನೆಗಳು ಹಿಂದಿರುಗಬಹುದು.

ಕಾರಣ: ಭ್ರಮಾಜನಿತ ಅಂಗವೇದನೆಯು ಏಕೆ ಕಂಡುಬರುತ್ತದೆ ಎನ್ನುವುದಕ್ಕೆ ನಿಖರ ಉತ್ತರವು ನಮಗೆ ತಿಳಿಯದು. ಆದರೆ ತಾರ್ಕಿಕವಾಗಿ ಒಪ್ಪಬಹುದಾದ ಒಂದು ವಿವರಣೆಯಿದೆ. ನಮ್ಮ ದೇಹದ ಪ್ರತಿಯೊಂದು ಅಂಗದಿಂದ ವಿವಿಧ ಸಂವೇದನೆಗಳನ್ನು ಹೊತ್ತ ನರಗಳು ಮಿದುಳನ್ನು ತಲುಪುತ್ತವೆ. ಹಾಗೆಯೇ ಮಿದುಳು ನಮ್ಮ ಪ್ರತಿಯೊಂದು ಅಂಗಕ್ಕೂ ನರಗಳನ್ನು ಪೂರೈಸುತ್ತದೆ. ಇವು ಮಿದುಳಿನ ಆಜ್ಞೆಗಳನ್ನು ಹೊತ್ತು ತಂದು ಅಂಗಾಂಗಗಳ ಕೆಲಸ ಕಾರ್ಯಗಳಿಗೆ ನೆರವಾಗುವ ಕಾರ್ಯಚಾಲನಾ ನರಗಳು. ಒಂದು ಕಾಲನ್ನು ಮೊಣಕಾಲಿನ ಬಳಿ ಛೇದಿಸಿದಾಗ, ಕಾಲಬೆರಳುಗಳಲ್ಲಿರುವ ಸಂವೇದನಾ ನರಗಳು ಛೇದನೆಯಾದ ಸ್ಥಳದಲ್ಲಿ ತಾವೂ ಛೇದನೆಯಾಗಿರುತ್ತವೆ. ಉಳಿದ ನರಭಾಗವು ಮೊಂಡು ಅಂಗದಿಂದ ಮಿದುಳಿನವರೆಗೆ ಸಮಗ್ರವಾಗಿಯೇ ಇರುತ್ತದೆ. ಮಿದುಳಿನಲ್ಲಿ ಕಾಲುಬೆರಳಗಳಿಂದ ಬರುವ ನರಸಂವೇದನೆಗಳನ್ನು ಸ್ವೀಕರಿಸುವ ನರಕೋಶಗಳು ನರಸಂಜ್ಞೆಗಳಿಗಾಗಿ ಕಾಯುತ್ತಿರುತ್ತವೆ. ಅವು ಈ ನೋವಿನ ಸಂವೇದನೆಗಳಿಗೆ ಕಾರಣ ಎನ್ನಲಾಗಿದೆ. ಕಾಲಕ್ರಮೇಣ ಕಾಲುಬೆರಳುಗಳ ನರಸಂವೇದನೆಯನ್ನು ಸ್ವೀಕರಿಸುವ ಮಿದುಳು ನರಕೋಶಗಳು ತಮ್ಮ ತಪ್ಪನ್ನು ತಿದ್ದಿಕೊಂಡು ಇತರ ಕೆಲಸಗಳಲ್ಲಿ ಪಾಲ್ಗೊಳ್ಳುತ್ತವೆ. ಇದನ್ನು 'ನರಸುರೂಪಿಕೆ' ಅಥವಾ 'ನ್ಯೂರೋಪ್ಲಾಸ್ಟಿ' ಎನ್ನುವರು.

ಚಿಕಿತ್ಸೆ: ವೇದನೆಯನ್ನು ತಾತ್ಕಾಲಿಕವಾಗಿ ತಗ್ಗಿಸಲು ನೋವು ನಿವಾರಕಗಳನ್ನು ಬಳಸುವರು. ಖಿನ್ನತೆ ರೋಧಕ ಔಷಧಗಳು, ಪ್ರೊಪ್ರನೋಲಾಲ್, ಗಾಬಾಪೆಂಟಿನ್, ಪ್ರಿಗ್ಯಾಬಲಿನ್, ನಿಫೆಡಿಪಿನ್, ಬಾಟ್ಯುಲಿನಮ್ ಟಾಕ್ಸಿನ್, ಲಿಡೋಕೇನ್ ಮುಂತಾದ ಔಷಧಗಳನ್ನು ಬಳಸಬಹುದು. ವೇದನೆಯನ್ನು ಕಡಿಮೆ ಮಾಡಲು ಭಾರತೀಯ ನರರೋಗಗಳ ತಜ್ಞ ಡಾ. ರಾಮಚಂದ್ರನ್ ಅವರು 'ಕನ್ನಡಿ ಚಿಕಿತ್ಸೆ' ಅಥವಾ 'ಮಿರರ್ ಥೆರಪಿ'ಯನ್ನು ಸೂಚಿಸಿದ್ದಾರೆ. ಕನ್ನಡಿ ಚಿಕಿತ್ಸೆಯಲ್ಲಿ ನಾವು ಮಿದುಳಿಗೆ ಒಂದು ರೀತಿಯ 'ಮೋಸ'ವನ್ನು ಮಾಡುತ್ತೇವೆ. ಇಲ್ಲದ್ದನ್ನು ಇರುವಂತೆ ತೋರಿಸುತ್ತೇವೆ (ಚಿತ್ರವನ್ನು ನೋಡಿ). ಒಬ್ಬ ವ್ಯಕ್ತಿಯ ಎಡಗೈ ಛೇದನೆಯಾಗಿದೆ. ಆದರೆ ಬಲಗೈ ಆರೋಗ್ಯವಾಗಿದೆ. ಛೇದಿಸಲ್ಪಟ್ಟ ಕೈ ಬಳಿ ಒಂದು ಕನ್ನಡಿಯನ್ನು ಇಟ್ಟಿದ್ದಾರೆ. ಆ ಕನ್ನಡಿಯಲ್ಲಿ ವ್ಯಕ್ತಿಯ ಬಲಗೈ ಕಾಣುತ್ತಿದೆ. ಬಲಗೈಯನ್ನು ಆಡಿಸಿದಾಗಲೆಲ್ಲ, ಆ ಬಿಂಬ ಕನ್ನಡಿಯಲ್ಲಿ ಕಾಣುವ ಕಾರಣ, ಮಿದುಳು ತನ್ನ ಎಡಗೈ ಸಕ್ರಿಯವಾಗಿರುವ ಹಾಗೆ ಭಾವಿಸುತ್ತದೆ. ದಿನಕ್ಕೆ 20 ನಿಮಿಷಗಳ ಕಾಲ ಹೀಗೆ, ಮಿದುಳಿಗೆ ಇಲ್ಲದ ಕೈಯನ್ನು ಇದೇ ಎನ್ನುವ ಭಾವವನ್ನು ಬರಿಸುವ ಕಾರಣ, ಅದು ಎಡಗೈ ಇದೆ ಎಂದೇ ಭಾವಿಸಿ ವೇದನೆಯನ್ನು ಮಂದಗೊಳಿಸುತ್ತದೆ.

ಸಿಂಧೂ ನಾಗರಿಕತೆಯ ಧರ್ಮಾರಂಭ

ಬಸವ ಮಂಟಪ

ರವಿ ಹಂಜ್
vveditoped@gmail.com

ಪರೋಕ್ಷವಾಗಿ 'ಅಸಿಂಧು' ಎನಿಸುವ ಸಿಂಧೂ ಮೂಲದ ಹಿಂದೂ ಮತಧರ್ಮಗಳನ್ನು ಸಾಂವಿಧಾನಿಕವಾಗಿಯಾಗಲಿ, ನ್ಯಾಯಾಂಗವಾಗಿಯಾಗಲಿ ಮಾನ್ಯತೆ ಕೊಡಲು ಒಂದು ವಿಶ್ಲೇಷಣಾಪೂರ್ಣ ಅವಲೋಕನದಿಂದ ಪ್ರಯತ್ನಿಸಿದ್ದರೆ ಹಿಂದೂ ಪ್ರಭೇದದ ಎಲ್ಲಾ ಪಂಥಗಳೂ ಧಾರ್ಮಿಕ ಮಾನ್ಯತೆ ಪಡೆಯುತ್ತಿದ್ದವಷ್ಟೇ. ಆದರೆ ಭಾರತೀಯ ಮತಧರ್ಮಗಳನ್ನು ಮಾನ್ಯ ಮಾಡಲು ಭಾರತೇತರ ಮತಧರ್ಮಗಳಂತೆ ಧರ್ಮವೆಂದರೆ ಒಬ್ಬ ಧರ್ಮಗುರು, ಒಂದು ಧರ್ಮಗ್ರಂಥ ಇರಲೇಬೇಕೆಂಬ ಸೀಮಿತ ಬಾಲಿಶ ಚೌಕಟ್ಟನ್ನು ಹಿಂದೂ ಧರ್ಮದ ಆಧಾರದ ಮೇಲೆಯೇ ವಿಭಜಿತಗೊಂಡ ಭಾರತವು ತನ್ನ ನೆಲಮೂಲದ ಧಾರ್ಮಿಕ ಪಂಥಗಳ ಹೊರತಾಗಿಯೂ ಗಾಢವಾಗಿ ಅಪ್ಪಿಕೊಂಡುಬಿಟ್ಟಿದೆ!

ಇದು ಸರಿಯೇ?

ವಿಶ್ವದ ಮತಧರ್ಮಗಳಲ್ಲಿ ಎರಡು ವಿಧ. ಒಂದನೇ ವಿಧದ ಮತಧರ್ಮಗಳು ಮಾನವ ವಿಕಾಸದೊಂದಿಗೆ ನೈಸರ್ಗಿಕವಾಗಿ ವಿಕಾಸಗೊಳ್ಳುತ್ತ ಜ್ಞಾನಿಗಳಿಂದ ಪರಿಷ್ಕೃತಗೊಳ್ಳುತ್ತ ಸಂಘಟನಾತ್ಮಕವಾಗಿ ಸ್ಥಾಪಿತಗೊಂಡರೆ, ಎರಡನೇ ವಿಧದ ಮತಧರ್ಮಗಳು ಪ್ರವಾದಿಗಳಿಂದ ಸ್ಥಾಪಿತವಾದವು. ಹಿಂದೂ ಸಂಸ್ಕೃತಿಯ ಪ್ರಭೇದದ ಮತಗಳು ಸುವ್ಯವಸ್ಥಿತ ಸಂಘಟನಾತ್ಮಕವಾಗಿ ವಿಕಸಿತಗೊಂಡ ಅನಾದಿ ಸಾಂಸ್ಕೃತಿಕ ಧರ್ಮಗಳು. ಯಹೂದಿ, ಕ್ರಿಶ್ಚಿಯನ್ ಮತ್ತು ಇಸ್ಲಾಂಗಳು ಪ್ರವಾದಿಗಳಿಂದ ಸ್ಥಾಪಿತಗೊಂಡ ಮಧ್ಯಂತರ ಮತಧರ್ಮಗಳು. ಪ್ರವಾದಿಗಳು ''ನಮ್ಮ ಧಾರ್ಮಿಕ ತತ್ವಗಳು ಮೊದಲೇ ಇದ್ದವು, ಅವುಗಳನ್ನು ನಾನು ಪರಿಷ್ಕರಿಸಿರುವೆ' ಎನ್ನದೆ 'ಇವು ನನ್ನವೇ ತತ್ವಗಳು' ಎಂದು ಹಕ್ಕೊತ್ತಾಯವನ್ನು ಮಂಡಿಸಿ ತಮ್ಮ ಚಿಂತನೆಯನ್ನು ಬೋಧಿಸಿದ್ದರೆ, ಭಾರತೀಯ ಪ್ರಭೇದದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶೈವಾದ್ವೈತ, ಶಕ್ತಿವಿಶಿಷ್ಟಾದ್ವೈತದ ರಚನೆಕಾರರು ಇವೆಲ್ಲಕ್ಕೂ ಮೂಲ ವೇದಾಗಮೋಪನಿಷತ್ತುಗಳಲ್ಲಿಯೂ, ಬ್ರಹ್ಮಸೂತ್ರ ಭಗವದ್ಗೀತೆಗಳಲ್ಲಿಯೂ ಹೇಳಿರುವುದರ ಅನುಸಾರವಾಗಿ ತಮ್ಮ ಮತವಿದ್ದು ಅದಕ್ಕೆ ಭಾಷ್ಯವನ್ನು ತಾವು ಬರೆದಿರುವುದಾಗಿ ಹೇಳಿಕೊಂಡಿದ್ದಾರೆ.

ಉದಾಹರಣೆಗೆ ಶ್ರೀ ರಾಮಾನುಜಾಚಾರ್ಯರು, ''ಶ್ರೀ ಭಗವದ್ ಬೋಧಾಯನ ಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತಿಂ ಪೂರ್ವಾಚಾರ್ಯಾಸ್ಸಂಚಿಕ್ಷಿಪುಃ; ತನ್ಮತಾನು ಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ...'' ಎಂದಿದ್ದಾರೆ. ಅರ್ಥಾತ್ ಭಗವದ್ ಬೋಧಾಯನರು ಬ್ರಹ್ಮಸೂತ್ರಕ್ಕೆ ವಿಸ್ತಾರವಾದ ವೃತ್ತಿಯನ್ನು ಬರೆದರೆಂತಲೂ, (ದ್ರಮಿಡಾಚಾರ್ಯರೇ ಮೊದಲಾದ) ಪೂರ್ವದ ಮಹನೀಯರು ಅದನ್ನು ಸಂಕ್ಷೇಪವಾಗಿ ಬರೆದರೆಂತಲೂ, ಅದನ್ನನುಸರಿಸಿ ತಾವು ಭಾಷ್ಯವನ್ನು ಬರೆಯುತ್ತಿರುವುದು ಎಂದು ಶ್ರೀಭಾಷ್ಯದ ಪ್ರಾರಂಭದಲ್ಲಿಯೇ ಶ್ರೀ ರಾಮಾನುಜಾಚಾರ್ಯರು ಹೇಳಿದ್ದಾರೆ. ಆದುದರಿಂದ ಶ್ರೀ ರಾಮಾನುಜಾಚಾರ್ಯರೇ ವಿಶಿಷ್ಟಾದ್ವೈತ ಮತಸ್ಥಾಪಕರು ಎನ್ನಲಾಗದು. ಅದೇ ರೀತಿ ಶ್ರೀಪತಿ ಪಂಡಿತಾರಾಧ್ಯ ರಚಿಸಿದ ಶ್ರೀಕರಭಾಷ್ಯದ ಪ್ರಾರಂಭವೂ ಹೀಗಿದೆ: ''ಅಗಸ್ತ್ಯ ಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಂ। ಸೂತ್ರ ವೃತ್ತಿಂ ಸಮಾಲೋಕ್ಯ ಕೃತಂ ಭಾಷ್ಯಂ ಶಿವಂಕರಂ ॥'' ಅರ್ಥಾತ್ ಅಗಸ್ತ್ಯವೃತ್ತಿಯ ಆಧಾರದ ಮೇಲೆ ಶ್ರೀಕರಭಾಷ್ಯವು ಬರೆಯಲ್ಪಟ್ಟಿದೆ ಎನ್ನುವುದು, ಸಿದ್ಧಾಂತ ಶಿಖಾಮಣಿಯು ಅಗಸ್ತ್ಯವೃತ್ತಿಯ ಆಧಾರಗ್ರಂಥವಾಗಿದೆ ಎನ್ನುವ ಪುರಾಣವು ಸಹ ಇದನ್ನು ಹಿಂದೂ ಸಂಸ್ಕೃತಿಯ ಪ್ರಭೇದಕ್ಕೆ ಗಾಢವಾಗಿ ಜೋಡಿಸುತ್ತದೆ. ಇದೇ ರೀತಿ ಶಂಕರಾಚಾರ್ಯ, ಮಧ್ವಾಚಾರ್ಯ, ಕಬೀರ್, ಮೀರಾ, ಸಂತ ಜ್ಞಾನೇಶ್ವರ, ಆರ್ಯಸಮಾಜದ ದಯಾನಂದ ಸರಸ್ವತಿಯವರೆಲ್ಲರ ತತ್ವಗಳೂ ಹಿಂದೂ ಸಂಸ್ಕೃತಿಯ ಪ್ರಭೇದಕ್ಕೆ ಗಾಢವಾಗಿ ಜೋಡಣೆಯಾಗಿವೆ. ಇಲ್ಲದಿದ್ದರೆ ಈ ಸುಧಾರಕರೆಲ್ಲ ಪ್ರವಾದಿಗಳಾಗಿ ಅವರು ಬೋಧಿಸಿದ ತತ್ವಗಳೆಲ್ಲಾ ಒಂದೊಂದು ಪ್ರತ್ಯೇಕ ಧರ್ಮಗಳಾಗಿಬಿಡುತ್ತಿದ್ದವು. ಆದರೆ ಹಾಗಾಗಲಿಲ್ಲವೇಕೆಂದರೆ ಅವರು ಹೀಗಿದ್ದದ್ದನ್ನು ಹೀಗೆ ಪರಿಷ್ಕರಿಸಿ, ಸುಧಾರಿಸಿ, ಸರಳಗೊಳಿಸಿದ್ದೇನೆ ಎಂದಿರುವ ಪ್ರಮುಖ ಕಾರಣದಿಂದಷ್ಟೇ. ಮಹಾವೀರ, ಬುದ್ಧ ಸಹ ಹೀಗೆಯೇ ಅಭಿಪ್ರಾಯ ಹೊಂದಿದ್ದರೂ ಅವರ ಅನುಯಾಯಿಗಳು ಅವುಗಳನ್ನು ಮತಧರ್ಮ ಎಂದು ಆದಿಯಿಂದಲೂ ಕರೆದುಕೊಂಡ ಕಾರಣ ಅವು ಪ್ರತ್ಯೇಕ ಧರ್ಮಗಳಾಗಿವೆ. ಅದೇ ರೀತಿ ಧರ್ಮ ಕರ್ಮ ಮೋಕ್ಷ ಎಂಬ ಹಿಂದೂ ಸಂಸ್ಕೃತಿಯ ಗಾಢಛಾಯೆಯೇ ಆಗಿರುವ ಸಿಖ್ ಧರ್ಮಕ್ಕೆ ಸಹ ಪ್ರತ್ಯೇಕ ಧರ್ಮದ ಮಾನ್ಯತೆ ಸಿಕ್ಕಿದೆ. ಇದಕ್ಕೆ ಪ್ರಮುಖವಾಗಿ ಆಧ್ಯಾತ್ಮಿಕ ತಾತ್ವಿಕತೆಗಿಂತ ಸಿಖ್ಖರ ವೇಷಭೂಷಣದ ಭಿನ್ನತೆ ಕಾರಣವಾಗಿದೆ ಎನಿಸುತ್ತದೆ.



ಇನ್ನು ಧರ್ಮಸ್ಥಾಪಕರೆಂದು ಪರಿಗಣಿಸಿರುವ ಪ್ರವಾದಿಗಳು ಸಹ ಆಗಲೇ ಪ್ರವಾದಿ ಮೋಸಸ್ ಸ್ಥಾಪಿಸಿದ್ದ ಯಹೂದಿ ಮತವನ್ನೇ ಪರಿಷ್ಕರಿಸಿ ಸುಧಾರಿಸಿದ್ದರೂ ಅವರು ಹಾಗೆ ಹೇಳಿಕೊಳ್ಳದೆ 'ನಾನು' ಎಂದ ಕಾರಣ ಅವು ಪ್ರತ್ಯೇಕ ಧರ್ಮಗಳಾದವು. ಅವರು 'ನಾನು' ಎಂದದ್ದು ಪ್ರತಿಯೊಬ್ಬನೂ ತನ್ನ ಆತ್ಮವನ್ನು ಕುರಿತಾಗಿ ಎಂದುಕೊಳ್ಳಲಿ ಎಂದೋ ಏನೋ ಗೊತ್ತಿಲ್ಲ. ಆದರೆ ಯೇಸುವು ಸ್ವ ಅಥವಾ ಆತ್ಮದ ಅರ್ಥದಲ್ಲೇ ''ನಾನೇ ಮಾರ್ಗ, ನಾನೇ ದೇವರು'' ಎಂದಿದ್ದಾನೆ. ವೀರಶೈವದ ಆತ್ಮಲಿಂಗ ಸಹ ಇದೇ ಅರ್ಥದಲ್ಲಿ ಅನಾದಿಯಿಂದಲೂ ಇದೆ. ಹಾಗಾಗಿಯೇ ಆತ್ಮವಿರುವ ಕಾಯಕ್ಕೆ ಕಾಳಾಮುಖರಾದಿಯಿಂದ ಕಾಳಾಮುಖ ಬಸವಣ್ಣನೂ ಸೇರಿ ಕಾಯವೇ ಕೈಲಾಸ ಎಂದಿರುವುದು, ದೇಹವೇ ದೇಗುಲ ಎಂದು ಹಾಡಿರುವುದು.

ಭಾಗ-1

ಇನ್ನು ಯಹೂದಿ ಧರ್ಮವು ಸಹ ಅಬ್ರಹಾಂ ಎಂಬ ಆದಿ ಪ್ರವಾದಿಯಿಂದ ಸ್ಥಾಪಿತವಾದದ್ದು ಎಂದೇ ಪರಿಗಣಿಸಲ್ಪಟ್ಟಿದೆ. ಅಬ್ರಹಾಂ ಏಕದೇವೋಪಾಸನೆಯನ್ನು ಮಧ್ಯಪ್ರಾಚ್ಯದಲ್ಲಿ ಮೂರೂವರೆ ಸಾವಿರ ವರ್ಷಗಳ ಹಿಂದೆ ಪ್ರತಿಪಾದಿಸಿದ್ದನು. ಅದಕ್ಕೂ ಮುಂಚೆ ಅಲ್ಲಿ ಬಹುದೇವೋಪಾಸನೆ ಚಾಲ್ತಿಯಿದ್ದಿತು. ಅಬ್ರಹಾನ ತಂದೆ ಈ ದೇವತೆಗಳ ವಿಗ್ರಹಗಳನ್ನು ಮಾಡುವ ಶಿಲ್ಪಿಯಾಗಿದ್ದ ಸಹ. ಏಕದೇವೋಪಾಸನೆಯ ಬದಲಾವಣೆ, ಮತ್ತಿತರೆ ಸಣ್ಣಪುಟ್ಟ ಬದಲಾವಣೆಗಳ ಬಿಟ್ಟರೆ ಎಲ್ಲ ಯಹೂದಿ ಧಾರ್ಮಿಕ ಆಚರಣೆಗಳೂ ಮುಂಚಿನ ರೀತಿಯೇ ಇದ್ದವು. ಆ ಮುಂಚಿನ ರೀತಿಗಳು ಸಹ ಹಿಂದೂ ಪ್ರಭೇದದಂತೆಯೇ ನೈಸರ್ಗಿಕ ಸಂಘಟಿತ ವಿಕಸಿತ ಧರ್ಮದ ರೀತಿಯೇ ಇದ್ದವು. ಆದರೆ ಅಬ್ರಹಾಂ ಇದ್ದ ಮತಧರ್ಮವನ್ನೇ ಏಕದೇವೋಪಾಸನೆಯಾಗಿ ಪರಿಷ್ಕರಿಸಿ ಸುಧಾರಿಸಿದ ಕಾರಣ ಮತ್ತು ಅವನು ಸುಧಾರಿಸಿದೆ ಎನ್ನದೆ ಸ್ಥಾಪಿಸಿದೆ ಎಂದ ಕಾರಣ ಅವನೂ ಪ್ರವಾದಿ ಎನಿಸಿದ್ದನು. ಅದೇ ರೀತಿಯಾಗಿ ಯಹೂದಿ ಪ್ರಭೇದದ ಕ್ರೈಸ್ತ, ಇಸ್ಲಾಂ ಸಹ. ಈ ಪ್ರವಾದಿತನಕ್ಕೆ ಪ್ರಮುಖವಾಗಿ ಅಲ್ಲಿನ ಪ್ರಾದೇಶಿಕ ಸಾಮಾಜಿಕ ಮಾನವಿಕ ಸನ್ನಿವೇಶಗಳು ಕಾರಣ. ಹೆಚ್ಚಿನ ಜನರಿಗೆ ಧರ್ಮದ ಚಿಂತನೆ ಇದ್ದಿತೋ ಇಲ್ಲವೋ, ಇದ್ದವನೇ ಪ್ರವಾದಿಯಾಗುವಂಥ ಸನ್ನಿವೇಶ ಇದ್ದರೂ ಇದ್ದೀತು. ಮರುಭೂಮಿಯ ಜನರ ಭೌತಿಕ ಹಸಿವಿಗೂ ಫಲವತ್ತಾದ ಭೂಮಿಯ ಸಂತೃಪ್ತ ಜನರ ಲೌಕಿಕ ಹಸಿವಿಗೂ ನಡುವಿನ ವ್ಯತ್ಯಾಸವೇ ಈ ಏಕವ್ಯಕ್ತಿ ಚಿಂತನೆಯ ಪ್ರವಾದಿ ಮತ್ತು ಸಂಘಟಿತ ಸಾಮೂಹಿಕ ಧರ್ಮದರ್ಶಿತ್ವ ಎನಿಸುತ್ತದೆ!

ಮನುಷ್ಯ ಇಂದಲ್ಲದೆ ವಿಕಾಸದ ಆರಂಭದಿಂದಲೂ ಜಾಗತಿಕವಾಗಿದ್ದ ಎನ್ನಲು ಕ್ರೈಸ್ತ, ಇಸ್ಲಾಮಿನ ಮೂಲವಾದ ಯಹೂದಿಗಳ 'ಡೇವಿಡ್'ನ ನಕ್ಷತ್ರ'ವೂ ಹಿಂದೂ/ವೀರಶೈವದ 'ಪಂಚಕೋನ/ಷಟ್ಕೋನ'ಗಳ ರೀತಿಯಲ್ಲಿಯೇ ಇದೆ. ಇರಲಿ, ಒಟ್ಟಾರೆ ಈ ಎಲ್ಲಾ ಕಾರಣಗಳಿಗಾಗಿಯೇ ಹಿಂದೂ ಪ್ರಭೇದದ ಮತಧರ್ಮಗಳನ್ನು ನೈಸರ್ಗಿಕವಾಗಿ ಸಂಘಟನಾತ್ಮಕವಾಗಿ ಸಾಮೂಹಿಕವಾಗಿ ಸಹಕಾರಿ ತಾತ್ವಿಕ ನೆಲೆಯಲ್ಲಿ ಪ್ರಜಾಧರ್ಮಪ್ರಭುತ್ವದನ್ವಯವಾಗಿ ವಿಕಸಿತಗೊಂಡ Organically Evolved ಧಾರ್ಮಿಕ ವ್ಯವಸ್ಥೆಗಳು ಎನ್ನಬಹುದು.

ಇದೆಲ್ಲಾ ಇತಿಹಾಸದ ಅರಿವಿದ್ದೂ ವಿಭಜನೋತ್ತರ ಭಾರತದ ಪ್ರಧಾನಿಯಾದ ನೆಹರೂ ಅವರಾಗಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರಾಗಲಿ ಹಿಂದೂ ಪ್ರಭೇದಗಳ ಧರ್ಮಗಳನ್ನು ಕಾನೂನಾತ್ಮಕವಾಗಿ ಮಾನ್ಯ ಮಾಡಲೇ ಇಲ್ಲ! ಮನುಸ್ಮೃತಿ ಪ್ರಣೀತ ಬ್ರಿಟಿಷ್ ನಿರ್ಣಯದ ಹಿಂದೂ ಕಾನೂನನ್ನು ಯಥಾವತ್ತಾಗಿ ಅಳವಡಿಸಿ ಅವರು ಅವರದೇ ವ್ಯಾಖ್ಯಾನದ ಮನುವಾದಿಗಳೇ ಆದರು. ಹಾಗಾಗಿಯೇ ತಾರ್ಕಿಕವಾಗಿ ಭಾರತವು ಹಿಂದೂ ಸಂಸ್ಕೃತಿಯ ಇಸ್ಲಾಂ ದೇಶ ಎನ್ನಿಸುವುದು.

ಇರಲಿ, ಹಾಗಿದ್ದರೆ ಈ ಹಿಂದೂ ಸಂಸ್ಕೃತಿಯ ಧಾರ್ಮಿಕ ಪ್ರಭೇದಗಳು ಹೇಗೆ ಉದಯವಾದವು?

ಇದರ ಆಳವನ್ನು ತಿಳಿಯಲು ದೇಶದ ವೈಜ್ಞಾನಿಕ ಐತಿಹಾಸಿಕ ಆದಿಯಿಂದ ವರ್ತಮಾನಕ್ಕೆ ಬರುವ ಒಂದು ಮಹಾಕಾಲಯಾನವನ್ನು ಪರಿಕ್ರಮಿಸಬೇಕಾಗುತ್ತದೆ. ಇಂಥ ಮಹಾಕಾಲಯಾನವನ್ನು ನೆಹರು ಅವರು ಪರಿಕ್ರಮಿಸಿ ದಾಖಲಿಸಿ ತಮ್ಮ ಕೃತಿಯನ್ನು 'The Discovery of India ಎಂದೇ ಕರೆದಿದ್ದಾರೆ. ಅಂಬೇಡ್ಕರ್ ಈ ಪ್ರಭೇದಗಳ ಬಗ್ಗೆ ಸಾಕಷ್ಟು ಸಂಶೋಧನಾತ್ಮಕ ಕೃತಿಗಳನ್ನು ರಚಿಸಿದ್ದಾರೆ. ಹಾಗಾಗಿಯೇ ನೆಹರು ಮತ್ತು ಅಂಬೇಡ್ಕರ್ ಇಬ್ಬರಿಗೂ ಈ ಇತಿಹಾಸದ ಅರಿವಿದ್ದೂ ಹಿಂದೂ ಮತಧರ್ಮಗಳಿಗೆ ಮಾನ್ಯತೆ ಕೊಡಲಿಲ್ಲ ಎಂದದ್ದು. ಅಂದು ಬೌದ್ಧ, ಜೈನಧರ್ಮಗಳಂತೆಯೇ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತ್ತು ಶಕ್ತಿವಿಶಿಷ್ಟಾದ್ವೈತ(ವೀರಶೈವ)ಗಳು ತಕ್ಷಣಕ್ಕೆ ಪ್ರತ್ಯೇಕ ಧರ್ಮಗಳಾಗಬೇಕಿತ್ತು. ಆದರೆ ಹಾಗೆ ಮಾಡದೆ ಈ ಧರ್ಮಗಳಿಗೆ ಸಾಂವಿಧಾನಿಕ ಅನ್ಯಾಯವಾಯಿತು. ಇರಲಿ, ವೈಜ್ಞಾನಿಕ ದಾಖಲೆಗಳ ಪ್ರಕಾರ ಭಾರತೀಯ ಇತಿಹಾಸ ಸಿಂಧೂಕೊಳ್ಳದಿಂದ ಆರಂಭವಾದ ಕಾರಣ ಈ ಮಹಾಕಾಲಯಾನವನ್ನು ಅಲ್ಲಿಂದಲೇ ಆರಂಭಿಸಬೇಕಾಗುತ್ತದೆ. ಏಕೆಂದರೆ ಇದೆಲ್ಲವನ್ನೂ ಅರಿಯದೆ ತೂಲಿಸದೆ ಭಾರತೀಯ ತರ್ಕಶಾಸ್ತ್ರದ ಸೂತ್ರಕ್ಕೆ ಅನ್ವಯಿಸದೆ ನಿರ್ಣಯ ಮಂಡಿಸಿದರೆ ನಮ್ಮದೂ ಐದೂವರೆ ಲಕ್ಷ ಚಿಲ್ಲರೆ ಶೋಧಗಂಗಾ some ಶೋಧನೆಯಂತಾಗುತ್ತದೆ.

(ಮುಂದುವರಿಯುವುದು)

(ಲೇಖಕರು ಶಿಕಾಗೋ ನಿವಾಸಿ ಮತ್ತು ಸಾಹಿತಿ)

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಧೂಮಲೀಲೆ ಅನಗತ್ಯ

ನಟ ಸುದೀಪ್ ಅಭಿನಯದ 'ಮ್ಯಾಕ್ಸ್' ಚಲನಚಿತ್ರವನ್ನು ಇತ್ತೀಚೆಗೆ ವೀಕ್ಷಿಸಿದೆವು. ಒಟ್ಟಾರೆಯಾಗಿ ಚಿತ್ರ ಚೆನ್ನಾಗಿತ್ತು. ಆದರೆ ಅವರು ಕಾಣಿಸಿಕೊಂಡಿರುವ ಪೊಲೀಸ್ ಅಧಿಕಾರಿ ಪಾತ್ರವು ಕ್ಷಣಕ್ಕೊಮ್ಮೆ ಎಂಬಂತೆ ಧೂಮಪಾನ ಮಾಡುತ್ತಲೇ ಇರುತ್ತದೆ. ಸಾಲದೆಂಬಂತೆ ಮತ್ತೊಬ್ಬ ಮಹಿಳಾ ಪೊಲೀಸ್ ಅಧಿಕಾರಿಯೂ ಧೂಮಪಾನ ಮಾಡುವ ದೃಶ್ಯವಿದೆ. ಈ 'ಧೂಮಲೀಲೆ' ಅಗತ್ಯವೇ? ಇದರಿಂದ ಯುವಜನರಿಗೆ ತಪ್ಪುಸಂದೇಶ ರವಾನೆಯಾಗುವುದಿಲ್ಲವೇ? ಏಕೆಂದರೆ, ಅವರು ಇಂಥ ದೃಶ್ಯಗಳನ್ನೇ ಅನುಕರಿಸುವ ಅಪಾಯ ಹೆಚ್ಚುತ್ತಿದೆ. ಇಲ್ಲಿ 'ಮ್ಯಾಕ್ಸ್' ಚಿತ್ರವನ್ನಷ್ಟೇ ಬೆರಳು ಮಾಡಿ ತೋರಿಸುತ್ತಿಲ್ಲ, ಅದೊಂದು ಉದಾಹರಣೆ ಅಷ್ಟೇ. ಇಂಥ ದೃಶ್ಯಗಳು ಅನೇಕ ಚಲನಚಿತ್ರಗಳಲ್ಲಿವೆ. ಇಂಥ ದೃಶ್ಯ ಬಂದಾಗ, ಬೆಳ್ಳಿತೆರೆಯ ಮೂಲೆಯಲ್ಲೆಲ್ಲೋ 'ಧೂಮಪಾನ ಆರೋಗ್ಯಕ್ಕೆ ಹಾನಿಕರ' ಎಂದು ಸಣ್ಣ ಅಕ್ಷರದಲ್ಲಿ ಉಲ್ಲೇಖಿಸಿದರೆ ಸಾಕೇ? ಸೆನ್ಸಾರ್ ಮಂಡಳಿ ಇಂಥ ಸೂಕ್ಷ್ಮವನ್ನು ಗಮನಿಸಿಯೇ ಚಿತ್ರಕ್ಕೆ ಪ್ರಮಾಣಪತ್ರ ನೀಡುವಂತಾಗಬೇಕು. ಜತೆಗೆ ಆಯಾ ನಟ-ನಟಿಯರು, ನಿರ್ದೇಶಕರಿಗೂ ಸಾಮಾಜಿಕ ಜವಾಬ್ದಾರಿ ಇರಬೇಕು. ಧೂಮಪಾನ ಮತ್ತು ಮದ್ಯಪಾನದ ದೃಶ್ಯಗಳು ಇಲ್ಲದಿದ್ದರೂ ಚಿತ್ರಕ್ಕೇನೂ ಧಕ್ಕೆಯಾಗದು. ಈ ಬಗ್ಗೆ ಚಲನಚಿತ್ರೋದ್ಯಮಿಗಳು, ತಾಂತ್ರಿಕ ವರ್ಗದವರು ಮತ್ತು ಕಲಾವಿದ ಬಳಗದವರು ಪರಸ್ಪರ ಚರ್ಚಿಸಲಿ.

– ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಸಮಸ್ಯೆಯನ್ನು ಪರಿಹರಿಸಿ

ತೀರ್ಥಹಳ್ಳಿಯ ಗುತ್ತಿಗೆದಾರರೊಬ್ಬರು ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ತಮ್ಮ ಕಾಮಗಾರಿಗಳ ಬಿಲ್ ಪಾವತಿಸುವಂತೆ, ಇಲ್ಲವಾದಲ್ಲಿ ತಮಗೆ ದಯಾಮರಣಕ್ಕೆ ಅವಕಾಶ ಮಾಡಿಕೊಡುವಂತೆ ಎರಡು ಆಯ್ಕೆಗಳನ್ನು ಅವರ ಮುಂದಿರಿಸಿರುವ ಸುದ್ದಿ ವರದಿಯಾಗಿದೆ. ಇದು ಮಹತ್ವದ ಸುದ್ದಿಯೇ. ಏಕೆಂದರೆ, ಯಾವುದೇ ಗುತ್ತಿಗೆದಾರರು ತಮಗೆ ಬರಬೇಕಾದ ಬಾಕಿ ಬಿಲ್ ಮೊತ್ತದ ವಿಷಯದಲ್ಲಿ ಸರಕಾರದ ಮುಂದೆ ಈ ಹಿಂದೆ ಇಂಥ ಆಯ್ಕೆ ಇಟ್ಟಂತಿಲ್ಲ. ಬಿಲ್ ಇತ್ಯರ್ಥವಾಗದೆ ಸತಾಯಿಸಿದ ಕಾರಣ ಗುತ್ತಿಗೆದಾರರೊಬ್ಬರು ಆತ್ಮಹತ್ಯೆಗೆ ಮೊರೆಹೋದ ನಿದರ್ಶನವೂ ಇದೆ. ತೀರ್ಥಹಳ್ಳಿಯ ಗುತ್ತಿಗೆದಾರರ ವಿಷಯವನ್ನು ವಿಚಾರ ಮಾಡಿದಾಗ ಗೋಚರಿಸುವ ಒಂದಷ್ಟು ಸಾಧ್ಯತೆಗಳೆಂದರೆ, ಒಂದೋ ಸರಕಾರದ ಬಳಿ ಹಣವಿಲ್ಲ; ಇಲ್ಲವೇ, ಹಣ ಇದೆ, ಬಹುಶಃ ಬಿಡುಗಡೆಯೂ ಆಗಿದೆ. ಆದರೆ ಅದನ್ನು ವಿತರಿಸುವವರು ಕೈಚಾಚಿದ್ದಕ್ಕೆ ಏನೂ ದಕ್ಕಿಲ್ಲ, ಹೀಗಾಗಿ ಗುತ್ತಿಗೆದಾರರಿಗೆ ಅವರು ಕೈಕೊಟ್ಟಿದ್ದಾರೆ! ಬೇರಿನ್ನಾವ ಕಾರಣ ಇದ್ದೀತು? ಸಿಎಂಗೆ ಬರೆದ ಪತ್ರದಲ್ಲಿ ಸದರಿ ಗುತ್ತಿಗೆದಾರರು, ಮೂರ್ನಾಲ್ಕು ವರ್ಷಗಳ ಹಿಂದಿನ ಕಾಮಗಾರಿಗಳ ಹಣ ತಮಗೆ ಪಾವತಿಯಾಗದ ಕಾರಣ ಜೀವನ ನಿರ್ವಹಣೆ ದುಸ್ತರವಾಗಿದೆ ಎಂದು ಹಲುಬಿದ್ದಾರೆ. ಅವರು ಸಿಎಂ ಮುಂದೆ ಇಟ್ಟಿರುವ ಎರಡು ಆಯ್ಕೆಗಳಲ್ಲಿ, ಬಾಕಿ ಇರುವ ಹಣವನ್ನು ತಕ್ಷಣ ಕೊಡುವಂತೆ ಆದೇಶಿಸುವುದೊಂದೇ ಸಿಎಂ ಮುಂದಿರುವ ಆಯ್ಕೆ. ಗುತ್ತಿಗೆದಾರರ ಅಳಲಿನ ಹಿಂದೆ 'ಕಮಿಷನ್' ಎಂಬ ಪೆಡಂಭೂತದ ಕೈವಾಡವಿರುವ ಸಾಧ್ಯತೆಯನ್ನು ಅಲ್ಲಗಳೆಯಲಾದೀತೇ? ಒಟ್ಟಿನಲ್ಲಿ ಅವರ ಈ ಸಮಸ್ಯೆ ಪರಿಹಾರವಾದರೆ ಸಾಕು!

– ಸಾಮಗ ದತ್ತಾತ್ರಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
  ಭಟ್ರೇ, ಕೆಲವರು ರೈಲು ಬಿಟ್ಟರೆ, ಇನ್ನೂ ಕೆಲವರು ಬುಲೆಟ್ ಟ್ರೇನ್ ಬಿಡ್ತಾರಲ್ಲ?
- **ಕನಿಷ್ಠ ಹಳಿಯಾದರೂ ಇದೆಯಾ ಎಂಬುದನ್ನು ದೃಢಪಡಿಸಿಕೊಳ್ಳಬೇಕಿತ್ತು!**

- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ಮೊದಲ ರಾತ್ರಿಗೂ, ಕೊನೆಯ ರಾತ್ರಿಗೂ ಏನು ವ್ಯತ್ಯಾಸ?
- **ಮೊದಲ ರಾತ್ರಿ ಮಲಗುವಾಗ ಒಂಟಿಯಲ್ಲ, ಕೊನೆ ರಾತ್ರಿ ಒಬ್ಬರೇ ಮಲಗಬೇಕಾಗುತ್ತದೆ!**

- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಹ್ಯಾಪಿ ನ್ಯೂ ಇಯರ್, ಯುಗಾದಿಯನ್ನು ಭೇಟಿಯಾದರೆ ಏನು ಹೇಳಬಹುದು?
- **ಮೂರು ತಿಂಗಳು ಬಿಟ್ಟು ಸಿಗ್ತೀನಿ!**

- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೇ, ಒಂದು ವಾರ ಜಪಾನಿನಲ್ಲಿದ್ದೇ ಒಂದು ತಿಂಗಳು ಬರೆದಿರಿ, ಒಂದು ತಿಂಗಳು ಇದ್ದಿದ್ದರೆ?
- **ಭಟ್ಟರ ಬರಹದಿಂದ ಭೂಕಂಪ!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
  ಭಟ್ರೇ, ಕನ್ನಡ ಹೋರಾಟಗಾರರನ್ನು ವಿದೇಶದಲ್ಲೇಕೆ ಸನ್ಮಾನಿಸುವುದಿಲ್ಲ?
- **ಅಲ್ಲಿಯೂ ಕನ್ನಡ ಕಡ್ಡಾಯ ಮಾಡಬೇಕು ಎಂದು ಪ್ರತಿಭಟನೆಗೆ ಕುಳಿತರೆ ಏನು ಮಾಡೋದು?!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
  ಭಟ್ರೇ, ನಿಮ್ಮ ಮತ್ತು ಕುಮಾರಸ್ವಾಮಿ ಮಧ್ಯೆ ರಾಜಿ ಆಗಿದೆಯಂತೆ?
- **ನಮ್ಮಿಬ್ಬರ ಸಂಬಂಧ ಕಿತ್ತುಹೋದರೆ ತಾನೇ ರಾಜಿ ಮಾಡ್ಕೊಳ್ಳೋದು!**

- **ಸದಾನಂದ ಶೆಟ್ಟಿ, ಬ್ರಹ್ಮಾವರ**
  ಭಟ್ರೇ, ಈ ದಿನಗಳಲ್ಲಿ ಮನೆಗೆಲಸದವಳು ಸಿಗುವುದೇ ಇಲ್ಲವಲ್ಲ?
- **ಅದೇ ವಾಸಿ, ಹೆಂಡತಿ ನಿನ್ನ ಮೇಲೆ ಸಂದೇಹ ಪಡಲು ಬಲವಾದ ಕಾರಣ ಇಲ್ಲದಂತಾಯ್ತು ಬಿಡು!**

- **ಸುಮನ್, ಬೆಳ್ತಂಗಡಿ**
  ಭಟ್ರೇ, ಶೀಘ್ರ ಇಂಗ್ಲಿಷ್ ಇಂಪ್ರೂವ್ ಮಾಡಿಕೊಳ್ಳಲು ಏನು ಮಾಡಬೇಕು?
- **ಗುಂಡು ಹಾಕಬೇಕು!**

- **ಕಲ್ಲೇಶ ಬೂದಿಹಾಳ, ಚಿತ್ರದುರ್ಗ**
  ಭಟ್ರೇ, ಎಲ್ಲರ ಮನೆಯಲ್ಲೂ ಸಿಸಿಟಿವಿಯನ್ನೇಕೆ ಹಾಕಿಸುವುದಿಲ್ಲ?
- **ಮನೆಯಲ್ಲಿ ಹದ್ದಿನಕಣ್ಣಿನ ಹೆಂಡತಿ ಇದ್ದರೆ ಸಿಸಿಟಿವಿ ಏಕೆ?!**

ದೊಡ್ಡವರಾದ ಮೇಲೆ ಸಣ್ಣವರಾಗಬಾರದು !

ಲೋಕಮತ

ಲೋಕೇಶ್ ಕಾಯರ್ಗ

kaayarga@gmail.com

ಅದು ಕನ್ನಡದ ಕೋಟ್ಯಧಿಪತಿ ಕಾರ್ಯಕ್ರಮ. ಅನಿಲ್ ಕುಂಬ್ಳೆ ಅವರನ್ನು ವಿಶೇಷ ಅತಿಥಿಯಾಗಿ ಕರೆಸಲಾಗಿತ್ತು. ಎಸ್.ಪಿ. ಬಾಲಸುಬ್ರಮಣ್ಯ ಅವರ ಹಾಡುಗಳೆಂದರೆ ಕುಂಬ್ಳೆಗೆ ಇಷ್ಟ. ಮಾತಿನ ಮಧ್ಯೆ ಈ ವಿಷಯ ಪ್ರಸ್ತಾಪಕ್ಕೆ ಬಂತು. ಕಾರ್ಯಕ್ರಮವನ್ನು ಅದ್ಭುತವಾಗಿ ನಡೆಸಿಕೊಡುತ್ತಿದ್ದ ನಟ ಪುನೀತ್ ರಾಜ್‌ಕುಮಾರ್ ಎಸ್‌ಪಿಬಿಗೆ ಫೋನ್ ಹಚ್ಚಿ, ಕುಂಬ್ಳೆ ಜತೆ ನೇರವಾಗಿ ಮಾತನಾಡಲು ಅವಕಾಶ ಮಾಡಿಕೊಟ್ಟರು. ಆ ಕಡೆಯಿಂದ ಫೋನ್ ಎತ್ತಿಕೊಂಡ ಎಸ್‌ಪಿಬಿ ಕೇಳಿದ್ದೊಂದೇ ಪ್ರಶ್ನೆ-ನೀವು ಕನ್ನಡಿಗರು ಇಷ್ಟು ಒಳ್ಳೆಯವರಾಗಿರಲು ಹೇಗೆ ಸಾಧ್ಯ..? ಕುಂಬ್ಳೆ ಸುಮ್ಮನೆ ನಕ್ಕು ಧನ್ಯವಾದ ಹೇಳಿದರು.

ಈ ಮಾತಿನಲ್ಲಿ ಅನಿಲ್ ಕುಂಬ್ಳೆ ಮಾತ್ರವಲ್ಲ, ಟೀಮ್ ಇಂಡಿಯಾವನ್ನು ಪ್ರತಿನಿಧಿಸಿದ ಕರ್ನಾಟಕದ ಆಟಗಾರರೆಲ್ಲರ ಪ್ರಶಂಸೆ ಇತ್ತು. 60-70 ದಶಕದ ಜಿ.ಆರ್. ವಿಶ್ವನಾಥ್, ಬಿ.ಎಸ್. ಚಂದ್ರಶೇಖರ್, ಎರ್ರಪಳ್ಳಿ ಪ್ರಸನ್ನ, ನಂತರದ ದಶಕಗಳಲ್ಲಿ ಬಂದ ಬ್ರಿಜೇಶ್ ಪಟೇಲ್, ರೋಜರ್ ಬಿನ್ನಿ, ಸಯ್ಯದ್ ಕಿರ್ಮಾನಿ, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್, ರಾಹುಲ್ ದ್ರಾವಿಡ್‌ರಿಂದ ತೊಡಗಿ ಹಾಲಿ ತಂಡದ ಭಾಗವಾಗಿರುವ ಕೆ.ಎಲ್. ರಾಹುಲ್ ತನಕ ಎಲ್ಲರಿಗೂ ಮಾತು ಅನ್ವಯವಾಗುವಂತಿತ್ತು. ಕರ್ನಾಟಕದ ಕ್ರಿಕೆಟಿಗರೆಂದೂ ಮೈದಾನದ ಒಳಗೆ ಮತ್ತು ಹೊರಗೆ ಮೈ ಮರೆತು ವರ್ತಿಸಿದವರಲ್ಲ. 'ಜಂಟಲ್‌ಮ್ಯಾನ್ಸ್ ಗೇಮ್' ಎಂದು ಕರೆಸಿಕೊಳ್ಳುವ ಕ್ರಿಕೆಟ್‌ನಲ್ಲಿ 'ಗಂಟಲ್' ಮ್ಯಾನ್‌ಗಳಾದವರಲ್ಲ. ಎದುರಾಳಿಯು ಕೆಣಕಿದಾಗಲೆಲ್ಲಾ ಬ್ಯಾಟ್, ಬಾಲ್ ಮೂಲಕವೇ ಉತ್ತರ ನೀಡಿದವರು. ಈ ಕಾರಣಕ್ಕಾಗಿಯೇ ಕನ್ನಡಿಗ ಕ್ರಿಕೆಟಿಗರೆಂದರೆ ವಿಶ್ವಮಟ್ಟದಲ್ಲೂ ವಿಶೇಷ ಗೌರವ.

ಈ ಮಾತು ಈಗ ನೆನಪಾಗಲು ಕಾರಣವಿದೆ. ಆಸ್ಟ್ರೇಲಿಯಾದಲ್ಲಿ ಈಗ ತಾನೇ ಮುಗಿದಿರುವ ಗವಾಸ್ಕರ್- ಬಾರ್ಡರ್ ಸರಣಿಯ ಟೆಸ್ಟ್ ಪಂದ್ಯಗಳಲ್ಲಿ ನಮ್ಮ ಸ್ಟಾರ್ ಕ್ರಿಕೆಟರ್ ವಿರಾಟ್ ಕೊಹ್ಲಿ ಮತ್ತು ಬೌಲರ್ ಮೊಹಮ್ಮದ್ ಅವರ ವರ್ತನೆಯ ಬಗ್ಗೆ ಭಾರತ ಮತ್ತು ಆಸ್ಟ್ರೇಲಿಯಾದ ಮಾಧ್ಯಮಗಳಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಆ ದೇಶದ ಮಾಧ್ಯಮಗಳು ಅಲ್ಲಿನ ಕ್ರಿಕೆಟಿಗರ ವರ್ತನೆಯನ್ನು ಸಮರ್ಥಿಸಿಕೊಂಡು ನಮ್ಮವರನ್ನು ಹೀಗಳೆದರೆ, ನಮ್ಮ ದೇಶದ ಮಾಧ್ಯಮಗಳು ಟೀಮ್ ಆಸ್ಟ್ರೇಲಿಯಾ ಮತ್ತು ಅಲ್ಲಿನ ಪ್ರೇಕ್ಷಕ ವರ್ಗವನ್ನು ದೂರುತ್ತಿವೆ. ಆದರೆ ಪ್ರಶ್ನೆ ಇರುವುದು ವಿರಾಟ್ ಕೊಹ್ಲಿಯಂತಹ ಮೇರು ಕ್ರಿಕೆಟಿಗ ಹೀಗೂ ವರ್ತಿಸಹುದೇ ?

ಈ ಸರಣಿಯನ್ನು ರೋಹಿತ್ ಬಳಗ 1-3 ಅಂತರದಿಂದ ಸೋತಿದ್ದು ದೊಡ್ಡ ವಿಚಾರವೇನೂ ಅಲ್ಲ. ಮೂರನೇ ಬಾರಿಗೆ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಪ್ರವೇಶಿಸುವ ನಮ್ಮ ಕನಸು ನನಸಾಗಲಿಲ್ಲ ಎನ್ನುವುದೂ ಮುಖ್ಯವಲ್ಲ. ಆದರೆ ಬ್ಯಾಟಿಂಗ್ ವೈಫಲ್ಯದ ಜತೆ ತಮ್ಮ ವರ್ತನೆಗಾಗಿ ಕೊಹ್ಲಿ ದಂಡ ತೆತ್ತಿದ್ದು, ಕೊನೆಯಲ್ಲಿ ಟ್ರೋಫಿ ವಿತರಣೆಯ ವೇಳೆ ಗವಾಸ್ಕರ್ ಅವರನ್ನು ಕರೆಯದೆ ಅವಮಾನಿಸಿದ್ದು, ಆರದ ಗಾಯಗಳಾಗಿ ಉಳಿದು ಬಿಡುತ್ತವೆ. ಆಸೀಸ್ ಸರಣಿಯ ಕಹಿ ನೆನಪುಗಳನ್ನು, ಕೊಹ್ಲಿಯಂತಹ ಹಿರಿಯ ಆಟಗಾರ ಮತ್ತಷ್ಟು ಕಹಿಯಾಗಿಸಿದರು ಎಂದರೆ ತಪ್ಪಲ್ಲ.

ಆಕ್ರಮಣ ವರ್ಸಸ್ ಅಹಂಕಾರ

ನಿಜ, ವಿರಾಟ್ ಕೊಹ್ಲಿ ಮೊದಲಿನಿಂದಲೂ ತಮ್ಮ ಆಕ್ರಮಣಕಾರಿ ಕ್ರಿಕೆಟ್‌ನಿಂದಲೇ ಪ್ರಸಿದ್ಧರಾದವರು. ಅವರು ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್ ಅವರಂತೆ ತಮ್ಮ ಭಾವನೆಗಳನ್ನು ಎಂದು ಬಚ್ಚಿಟ್ಟುಕೊಂಡವರಲ್ಲ. ಆದರೆ ಆಟದಲ್ಲಿ ತೋರಿಸುವ ಆಕ್ರಮಣ ಪ್ರವೃತ್ತಿಗೂ, ಆಟದಿಂದ ಹೊರತಾದ ಪ್ರವೃತ್ತಿಗೂ ಸಾಕಷ್ಟು ವ್ಯತ್ಯಾಸವಿದೆ. ಮೆಲ್ಬೋರ್ನ್‌ನಲ್ಲಿ ನಡೆದ 4ನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಪರ ಚೊಚ್ಚಲ ಪ್ರವೇಶ ಪಡೆದ 19ರ ಹರೆಯದ ಸ್ಯಾಮ್ ಕೋನ್‌ಸ್ಟಾಸ್ ಚೆನ್ನಾಗಿ ಆಡುತ್ತಿದ್ದರು. ಜಸ್‌ಪ್ರಿತ್ ಬುಮ್ರಾ ಎಸೆತಕ್ಕೆ ಸಿಕ್ಸರ್ ಹೊಡೆದು ತಮ್ಮ ಕ್ಲಾಸ್ ಏನೆಂದು ಅವರು ತೋರಿಸಿಕೊಟ್ಟಿದ್ದರು. ಕೊಹ್ಲಿಯಂತಹ ಹಿರಿಯ ಆಟಗಾರ ಒಂದು ಬಾರಿ ಚಪ್ಪಾಳೆ ತಟ್ಟಿ ಅವರನ್ನು ಅಭಿನಂದಿಸಿದ್ದರೆ, ಅವರ ವ್ಯಕ್ತಿತ್ವ ಇನ್ನಷ್ಟು ವಿರಾಟವಾಗುತ್ತಿತ್ತು. ಆದರೆ ಯುವ ಆಟಗಾರನಿಗೆ ಭುಜ ತಗುಲಿಸಿ ಹೊರಟ 'ಕಿಂಗ್' ಕೊಹ್ಲಿ, ತಮ್ಮ ವರ್ತನೆಯಿಂದ ಕಿರೀಟ ಕಳೆದುಕೊಂಡು ಸಣ್ಣವರಾಗಿ ಬಿಟ್ಟರು.

90ರ ದಶಕದಿಂದ ದೂಷಣೆ, ನಿಂದನೆ, ಮತ್ತು ಕೆರಳಿಸುವ ಮಾತುಗಳಿಂದ ಕ್ರಿಕೆಟ್ ಆಟವನ್ನು ಕಿರಿಕ್ ಆಟವನ್ನಾಗಿಸಿದ ಟೀಮ್ ಆಸ್ಟ್ರೇಲಿಯಾದ ಎದುರು ಆಟವಾಡಬೇಕಾದರೆ ಈ ತಂತ್ರವನ್ನು ಬಳಸಲೇಬೇಕು. ಆಸೀಸ್ ಆಟಗಾರರು ಸ್ಲೆಡ್ಜಿಂಗ್ ಮಾಡಬೇಕಾದರೆ ನಾವ್ಯಾಕೆ ಮಾಡಬಾರದು ಎಂದು ಕೇಳುವವರಿದ್ದಾರೆ. ಆದರೆ ಕೊಹ್ಲಿಯಂತಹ ಆಟಗಾರ ಈ ಮಟ್ಟಕ್ಕಿಳಿದು ತಮ್ಮ ವ್ಯಕ್ತಿತ್ವಕ್ಕೆ ಕುಂದು ತಂದುಕೊಳ್ಳಬಾರದಿತ್ತು. ಸಂಯಮ ಕಳೆದುಕೊಂಡು ಪ್ರೇಕ್ಷಕರ ಜತೆ, ಪತ್ರಕರ್ತರ ಜತೆ ಜಗಳಕ್ಕಿಳಿಯಬಾರದಿತ್ತು.

ಆಯಾ ದೇಶದ ನೆಲದಲ್ಲಿ ಪ್ರೇಕ್ಷಕರು ತಮ್ಮ ದೇಶೀಯ ತಂಡವನ್ನು ಬೆಂಬಲಿಸುವುದು ವಿಶೇಷವೇನೂ ಅಲ್ಲ. ಆದರೆ ಮೆಲ್ಬೋರ್ನ್‌ನಲ್ಲಿ ಯುವ ಆಟಗಾರ ಸ್ಯಾಮ್ ಕೋನ್‌ಸ್ಟಾಸ್ ಜೊತೆ ಅನುಚಿತವಾಗಿ ನಡೆದುಕೊಂಡ ಬಳಿಕ ಕೊಹ್ಲಿ ಆಸ್ಟ್ರೇಲಿಯನ್ನರ ಪಾಲಿಗೆ ವಿಲನ್ ಆಗಿದ್ದರು. ಅವರ ಆಟದ ವೇಳೆ ಪ್ರೇಕ್ಷಕರ ಕಿರುಚಾಟ ಮೇರೆ ಮೀರುವಂತಿತ್ತು. ಇದರಿಂದ ನಷ್ಟವಾಗಿದ್ದು ಭಾರತಕ್ಕೆ. ಕೊಹ್ಲಿ ಕೊನೆಯ ಎರಡೂ ಪಂದ್ಯಗಳಲ್ಲಿ ತಮ್ಮ ನೈಜ ಆಟ ಕಂಡುಕೊಳ್ಳಲಾರದೆ ಏಕಾಗ್ರತೆ ಕಳೆದುಕೊಂಡು ಔಟಾದರು.

ಹಾಗೆಂದು ಕೊಹ್ಲಿ ಮಾಡಿದ್ದೆಲ್ಲವೂ ತಪ್ಪೆಂದಲ್ಲ. ಕೊನೆಯ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಸ್ಟೀವ್ ಸ್ಮಿತ್ ಔಟಾದಾಗ, ಕೊಹ್ಲಿ ತಮ್ಮ ಪ್ಯಾಂಟ್‌ನ ಖಾಲಿ ಜೇಬು ತೋರಿಸಿ, 'ನಮ್ಮಲ್ಲಿ ಚೆಂಡು ವಿರೂಪಗೊಳಿಸುವ ಸ್ಯಾಂಡ್‌ಪೇಪರ್ ಇಲ್ಲ' ಎಂದು ಪರೋಕ್ಷವಾಗಿ 2018ರಲ್ಲಿ ಚೆಂಡು ವಿರೂಪಗೊಳಿಸಿದ ಕಾರಣಕ್ಕೆ ಸ್ಟೀವ್ ಸ್ಮಿತ್ ಸೇರಿದಂತೆ ಆಸ್ಟ್ರೇಲಿಯಾದ ಮೂವರು ಆಟಗಾರರು ನಿಷೇಧಕ್ಕೆ ಒಳಗಾದ ಪ್ರಕರಣ ನೆನಪಿಸಿದ್ದರು. ಬುಮ್ರಾ ವಿರುದ್ಧದ ಚೆಂಡು ವಿರೂಪಗೊಳಿಸಿದ ಆರೋಪಕ್ಕೆ ಕೊಹ್ಲಿ ಈ ಉತ್ತರ ನೀಡಿದ್ದರು. ಆದರೆ ಆರಂಭದಲ್ಲಿ ಎಸಗಿದ ತಪ್ಪು ನಂತರದ ನಡತೆಗೂ ಕಳಂಕ ಹಚ್ಚಿತು.

ಸವಾಲ್ ಜವಾಬ್ ಹೊಸದೇನಲ್ಲ

ಕ್ರಿಯೆಗೆ ಪ್ರತಿಕ್ರಿಯೆ ರೂಪದಲ್ಲಿ ಭಾರತೀಯ ಆಟಗಾರರು ಈ ಹಿಂದೆಯೂ ತಕ್ಕ ಜವಾಬು ನೀಡಿದ್ದರು. 1992ರ ಕಿರಣ್ ಮೋರೆ- ಮಿಯಾಂದಾದ್ ಪ್ರಕರಣ ಎಂದಿಗೂ ಮರೆಯಲಾಗದ ಘಟನೆ. ಆದರೆ ಈ ನಿಂದನೆಗೆ ತಕ್ಕ ಉತ್ತರ ಬ್ಯಾಟ್ ಮತ್ತು ಬಾಲ್ ರೂಪದಲ್ಲಿಯೇ ಇದ್ದಾಗ ಆಟ ಇನ್ನಷ್ಟು ಸ್ಮರಣೀಯವಾಗುತ್ತದೆ. ಕನ್ನಡಿಗ ವೆಂಕಟೇಶ್ ಪ್ರಸಾದ್ 1996ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ ಬೌಂಡರಿ ಹೊಡೆದು ತಮ್ಮನ್ನು ಕೆಣಕಿದ ಪಾಕಿಸ್ತಾನದ ಅಮಿರ್ ಸೊಹೈಲ್ ಅವರನ್ನು ಮುಂದಿನ ಎಸೆತದಲ್ಲಿಯೇ ಔಟ್ ಮಾಡಿ ಸಂಭ್ರಮಿಸಿದ್ದನ್ನು ಕ್ರಿಕೆಟ್ ಪ್ರೇಮಿಗಳು ಈಗಲೂ ನೆನಪಿಸಿಕೊಳ್ಳುತ್ತಾರೆ. ತೆಂಡುಲ್ಕರ್, ದ್ರಾವಿಡ್, ಲಕ್ಷ್ಮಣ್, ಧೋನಿ, ಯುವರಾಜ್ ಸಿಂಗ್ ಮುಂತಾದವರು ತಮ್ಮನ್ನು ಕೆಣಕಿದ ಬೌಲರ್‌ಗಳನ್ನು ಚೆಂಡಾಡಿದ ಹಲವು ಉದಾಹರಣೆಗಳಿವೆ. ಆದರೆ ಟ್ರಾವಿಸ್ ಹೆಡ್ ತೋರಿಸಿದ ಅಸಭ್ಯ ಸನ್ನೆ, ಕೊಹ್ಲಿಯ 'ಭುಜಬಲದ ಪರಾಕ್ರಮ' ಆಟದ ಅಂದವನ್ನು ಕೆಡಿಸಲಷ್ಟೇ ಸಾಧ್ಯ.

ಆಸೀಸ್ ಸ್ಲೆಡ್ಜರ್ಸ್

ಆಸ್ಟ್ರೇಲಿಯಾ ಕ್ರಿಕೆಟಿಗರಿಗೆ ಈಗ ತಾವು ಕೊಟ್ಟಿದ್ದನ್ನು ಉಣ್ಣುವ ಕಾಲ ಬಂದಿದೆ. ಆಟಗಾರರ ನಿಂದನೆಯನ್ನು ಆಕ್ರಮಣಕಾರಿ ಕ್ರಿಕೆಟ್‌ನ ಭಾಗವಾಗಿ ಮಾಡಿದ್ದು ಇದೇ ಟೀಮ್ ಆಸ್ಟ್ರೇಲಿಯಾ. 2008ರಲ್ಲಿ ಭಾರತ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದಾಗ ನಡೆದ 'ಮಂಕಿ ಗೇಟ್' ಪ್ರಕರಣ ಕ್ರಿಕೆಟ್ ಪ್ರಿಯರಿಗೆ ನೆನಪಿರಬಹುದು. ಬೌಲರ್ ಹರ್ಭಜನ್ ಸಿಂಗ್ ತಮ್ಮನ್ನು 'ಮಂಕಿ' ಎಂದು ನಿಂದಿಸಿದ್ದಾಗಿ ಆಲ್ ರೌಂಡರ್ ಆ್ಯಂಡ್ರೂ ಸೈಮಂಡ್ಸ್ ದೂರಿದ್ದರು. ಈ ಪ್ರಕರಣದಲ್ಲಿ ಭಜ್ಜಿಗೆ ಒಂದು ಒಂದು ಪಂದ್ಯದ ನಿಷೇಧ ಹೇರಲಾಗಿತ್ತು. ಆದರೆ ತಮ್ಮ ಅಶಿಸ್ತು, ದುರ್ನಡತೆಯ ಕಾರಣಗಳಿಗಾಗಿಯೇ ಕುಖ್ಯಾತಿ ಹೊಂದಿದ್ದ ಸೈಮಂಡ್ಸ್ ಕುಡಿದು ಕಾರು ಚಲಾಯಿಸುವಾಗ ಅಪಘಾತಕ್ಕೀಡಾಗಿ ದುರಂತ ಸಾವು ಕಂಡಿದ್ದು ಈಗ ಇತಿಹಾಸ. 90ರ ದಶಕದಲ್ಲಿ ಸ್ಟೀವ್ ವೋ ನಾಯಕನಾಗಿದ್ದಾಗ ಅಳವಡಿಸಿಕೊಂಡ ಸ್ಲೆಡ್ಜಿಂಗ್ ನೀತಿ ಮುಂದೆ ರಿಕಿ ಪಾಂಟಿಂಗ್ ಕಾಲದಲ್ಲಿ ಮತ್ತಷ್ಟು ಗಟ್ಟಿಯಾಯಿತು. ಆರಂಭದಲ್ಲಿ ಕ್ರಿಕೆಟಿಗರ ಏಕಾಗ್ರತೆ ಕದಡಲು ಅಳವಡಿಸಿಕೊಂಡ ಈ ನೀತಿ ಮುಂದೆ ದೂಷಣೆಗಷ್ಟೇ ಸೀಮಿತವಾಗದೆ ದುರ್ವರ್ತನೆಗೂ ನಾಂದಿ ಹಾಡಿತು. 2006ರಲ್ಲಿ ಮುಂಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಗೆದ್ದ ರಿಕಿ ಪಾಂಟಿಂಗ್, ಟ್ರೋಫಿ ಪಡೆದಾಕ್ಷಣ ಬಿಸಿಸಿಐ ಅಧ್ಯಕ್ಷರಾಗಿದ್ದ ಶರದ್ ಪವಾರ್ ಅವರನ್ನು ಪಕ್ಕಕ್ಕೆ ತಳ್ಳಿ ಫೋಟೋ ತೆಗೆಸಿಕೊಂಡಿದ್ದರು. ಆಸ್ಟ್ರೇಲಿಯ ಕ್ರಿಕೆಟಿಗರಿಗೆ ಇಂತಹ ವಿವಾದಗಳು ಹೊಸದೇನೂ ಅಲ್ಲ. ಕುಡಿತ, ಮೋಜು, ಹಲ್ಲೆ, ದುರ್ನಡತೆ ಕಾರಣಗಳಿಗಾಗಿ ಅಲ್ಲಿನ ಹಿರಿಯ ಆಟಗಾರರು ಕೂಡ ನಿಷೇಧಕ್ಕೊಳಗಾದ ಉದಾಹರಣೆಗಳಿವೆ. ಆಸ್ಟ್ರೇಲಿಯಾದ ಕ್ರಿಕೆಟ್ ಅಭಿಮಾನಿಗಳು ಕೂಡ ಇದನ್ನು ಆಟದ ಭಾಗವಾಗಿಯೇ ಪರಿಗಣಿಸಿದ್ದಾರೆ.

ಭಾರತದಲ್ಲಿ ಸನ್ನಡತೆಯೇ ಸೈ

ಕ್ರಿಕೆಟಿಗರು, ಸಿನಿಮಾ ತಾರೆಯೆಂದರೆ ಆರಾಧಿಸುವ (ಹೀರೋ ವರ್ಶಿಪ್) ಭಾರತದ ಅಭಿಮಾನಿಗಳು ಇಂತಹ ಘಟನೆಗಳನ್ನು ಅರಗಿಸಿಕೊಳ್ಳುವುದು ಕಷ್ಟ. ಕೊಹ್ಲಿಯಂತಹ ಆಟಗಾರ ಉತ್ತಮ ನಿರ್ವಹಣೆ ನೀಡಲು ವಿಫಲವಾಗಿದ್ದು ಮಾತ್ರವಲ್ಲ, ದುರ್ನಡತೆಗಾಗಿ ದಂಡ ಕಟ್ಟಬೇಕಾಯಿತೆಂಬ ವಿಚಾರವೇ ನಮ್ಮ ಅಭಿಮಾನಕ್ಕೆ ಘಾಸಿ ಮಾಡುತ್ತದೆ. ಒಂದು ವೇಳೆ ವಿರಾಟ್ ಜಾಗದಲ್ಲಿ ಸಚಿನ್ ತೆಂಡೂಲ್ಕರ್ ಇದ್ದರೆ ಇಡೀ ದೇಶ ರೊಚ್ಚಿಗೇಳುತ್ತಿತ್ತು. ಕ್ರಿಕೆಟನ್ನು ಅನಧಿಕೃತ ರಾಷ್ಟ್ರಧರ್ಮವನ್ನಾಗಿ ಸ್ವೀಕರಿಸಿರುವ ದೇಶದಲ್ಲಿ ಆಟಗಾರರು ತಮ್ಮ ಪ್ರತಿಯೊಂದು ನಡೆ ನುಡಿಯಲ್ಲೂ ಎಚ್ಚರಿಕೆ ವಹಿಸಬೇಕಾಗುತ್ತದೆ. ಅದರಲ್ಲೂ ಎಳೆಯ ಆಟಗಾರರು ತಮ್ಮ ವರ್ತನೆ ಮಿತಿ ಮೀರದಂತೆ ಸಂಯಮ ವಹಿಸಬೇಕಾಗುತ್ತದೆ. ಇದಕ್ಕೆ ತಪ್ಪಿ ನಡೆದರೆ ತಂಡದಿಂದ ಸ್ಥಾನ ಕಳೆದುಕೊಳ್ಳುವ ಜೊತೆಗೆ ಅಭಿಮಾನಿಗಳ ಆಕ್ರೋಶಕ್ಕೂ ಗುರಿಯಾಗಬೇಕಾಗುತ್ತದೆ.

ಕರ್ನಾಟಕದವರೇ ಆದ ಸದಾನಂದ ವಿಶ್ವನಾಥ್ 80ರ ವಿಕೆಟ್ ಕೀಪರ್ ಆಗಿ ಅತ್ಯಂತ ಭರವಸೆ ಮೂಡಿಸಿದ್ದವರು. ರಾಷ್ಟ್ರೀಯ ತಂಡಕ್ಕೆ ಸೇರಿದ್ದ ಅವರು ತಮ್ಮ ಅಶಿಸ್ತು ಮತ್ತು ಉದ್ಧಟತನದ ಕಾರಣಕ್ಕಾಗಿ ಕ್ರಿಕೆಟ್‌ನಿಂದಲೇ ನಿವೃತ್ತಿ ಪಡೆಯಬೇಕಾಯಿತು. ಕುಡಿತ, ಅಶಿಸ್ತಿನ ಕಾರಣಕ್ಕೆ ಬದುಕಿನಲ್ಲೂ ಕತ್ತಲೆಯತ್ತ ಸಾಗಿದ ವಿನೋದ್ ಕಾಂಬ್ಳಿ ನಮ್ಮ ಮುಂದಿರುವ ಅತ್ಯುತ್ತಮ ಉದಾಹರಣೆ. ಅಶಿಸ್ತಿನ ಕಾರಣದಿಂದಲೇ ರಾಷ್ಟ್ರೀಯ ತಂಡದಿಂದ ಹೊರ ಬಿದ್ದ ಪ್ರತಿಭಾವಂತ ಆಟಗಾರ ಪೃಥ್ವಿ ಶಾಗೆ ಈ ಬಾರಿ ಐಪಿಎಲ್ ತಂಡದಲ್ಲೂ ಸ್ಥಾನ ಸಿಕ್ಕಿಲ್ಲ. ಐಪಿಎಲ್‌ನಂತಹ ಕ್ರೀಡಾಕೂಟ ಆರಂಭವಾದ ಮೇಲೆ ಭಾರತದ ಆಟಗಾರರು ಮತ್ತು ಮತ್ತು ವಿದೇಶಿ ಆಟಗಾರರ ನಡುವೆ ಹೊಸ ಬಾಂಧವ್ಯ ಬೆಳೆದಿದೆ. ಆದರೆ ತಮ್ಮ ದೇಶದ ಪರವಾಗಿ ಆಡುವಾಗ ಪ್ರತಿಯೊಬ್ಬ ಆಟಗಾರ ಛಲದಿಂದ ಆಡುವುದು ಸಹಜ. ಈ ಆವೇಶ ಆಭಾಸಕ್ಕೆಡೆಯಾಗದಂತೆ ನೋಡಿಕೊಳ್ಳುವುದು ಆಯಾ ಆಟಗಾರರ ಕೈಯಲ್ಲಿದೆ. ಅದರಲ್ಲೂ ಹಿರಿಯ ಆಟಗಾರರ ನಡೆ ಕಿರಿಯರಿಗೆ ಮಾತ್ರವಲ್ಲ ತಮ್ಮ ಅಭಿಮಾನಿಗಳಿಗೂ ಮಾದರಿಯಾಗಿರಬೇಕು. ಸಣ್ಣವರು ದೊಡ್ಡವರಾಗಬೇಕು. ಆದರೆ ದೊಡ್ಡವರಾದ ಮೇಲೆ ಸಣ್ಣವರಾಗಬಾರದು. ಇದು ವಿರಾಟ್ ಕೊಹ್ಲಿ ಕಲಿಸಿದ ಪಾಠ.

ಪ್ರತಿಸ್ಪಂದನ

ವೈ.ಎಸ್.ಗಣೇಶ್, ಬೆಂಗಳೂರು

ಸಮಯೋಚಿತ ಲೇಖನ

ವೆಂಕಟೇಶ ಬೈಲೂರು ಅವರ 'ಮಂಗಳ ದ್ರವ್ಯಗಳನ್ನು ತುಳಿಯುವುದು ತರವೇ?' ಎಂಬ ಲೇಖನ (ವಿಶ್ವವಾಣಿಯ 'ಆರಾಮ' ಪುರವಣಿ, ಜ.7) ಸಮಯೋಚಿತವಾಗಿದೆ. ಲೇಖಕರು ಗಮನಿಸಿರುವ ಅಂಶಗಳೆಲ್ಲಾ ನಮಗೂ ಅನಿಸಿರುವಂಥವೇ. ವಿವಾಹ ಮಂಟಪದ ಮೇಲಿನ ಅಕ್ಷತೆಕಾಳು ತುಳಿಯುವುದು, ಊಟಕ್ಕೆ ಒಂದು ಪಂಕ್ತಿಯವರು ಕೂತಿರುವಾಗಲೇ ಮುಂದಿನ ಪಂಕ್ತಿಯವರು ಅವರ ಹಿಂದೆ ಹಾತೊರೆದು ನಿಲ್ಲುವುದು, ಹಿರಿಯರನ್ನು ಗಮನಿಸದ-ಗೌರವಿಸದ ಬಂಧುಗಳು ಮತ್ತು ಕಿರಿಯರು- ಇವೆಲ್ಲಾ ಇಂದು ಕಲ್ಯಾಣ ಮಂಟಪಗಳಲ್ಲಿ ಕಾಣುವಂಥ ದೃಶ್ಯಗಳೇ!

ಇನ್ನು, ಪುರೋಹಿತರ ಪಾಡನ್ನಂತೂ ಕೇಳುವುದೇ ಬೇಡ! ಒಂದು ರೀತಿಯಲ್ಲಿ ತಾತ್ಸಾರಕ್ಕೆ ಗುರಿಯಾಗುವ ಮಂದಿ ಇವರು, ಕಾರಣ ಛಾಯಾಗ್ರಾಹಕರ 'ಏಕಸ್ವಾಮ್ಯತೆ'ಯೇ ಅಲ್ಲಿ ಮನೆಮಾಡಿರುತ್ತದೆ. ಮದುವೆ ಮಂಟಪವನ್ನೇ ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡವರಂತೆ ಕೆಲ ಛಾಯಾಗ್ರಾಹಕರು ವರ್ತಿಸುವುದಿದೆ. ಮದುವೆಯ ವಿಧಿಯ ಆಚರಣೆ ನಡೆಯುವಾಗ ಸಾಕಷ್ಟು ದೂರದಲ್ಲಿ ದ್ದುಕೊಂಡೇ ಫೋಟೋ ತೆಗೆಯುವ ಸಾಧ್ಯತೆಯಿದ್ದರೂ, ಅದರ ಬದಲಿಗೆ ಚಲನಚಿತ್ರದ ಷೂಟಿಂಗ್‌ನ ಛಾಯಾಗ್ರಾಹಕರಂತೆ ಇವರು ಪುರೋ ಹಿತರು ಸೇರಿದಂತೆ ಮಂಟಪದ ಬಹುತೇಕರನ್ನು ನಿಯಂತ್ರಿ ಸುವುದಿದೆ. ವಿವಾಹ/ಉಪನಯನಗಳ ಆಚಾರ-ವಿಚಾರಗಳು ಪುರೋಹಿತರಿಗಿಂತ ತಮಗೇ ಜಾಸ್ತಿ ಗೊತ್ತು ಎನ್ನುವಂತೆ ಅವರು ವರ್ತಿಸುವುದು, ಯಾವುದಾದರೊಂದು ಆಚರಣೆಯನ್ನು ಕ್ಲಿಕ್ಕಿಸಲು ಆಗದಿದ್ದರೆ ಅದನ್ನು ಮತ್ತೊಮ್ಮೆ ನಿರ್ವಹಿಸುವಂತೆ ಆಗ್ರಹಿಸುವುದು, ಹೀಗೆ ವಿಲಕ್ಷಣ ರೀತಿಯಲ್ಲಿ ಕೆಲ ಛಾಯಾಗ್ರಾಹಕರು ವರ್ತಿಸು ವುದಿದೆ. ಮದುವೆ ಮಂಟಪದಲ್ಲಿರುವ ವಧು-ವರರು 'ಕಂಕಣಬದ್ಧ'ರಾಗಿ ಇರುವಂಥವರಾಗಿರುತ್ತಾರೆ, ಅವರಲ್ಲಿ 'ಲಕ್ಷ್ಮೀ-ನಾರಾ ಯಣರ ಆವಾಹನೆ' ಆಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಅವರನ್ನು ಆಶೀರ್ವದಿಸುವ ಆಶಯವು ಪುರೋಹಿತರ ಮೂಲಕ ನೆರವೇರಬೇಕು ಹಾಗೂ ಅಕ್ಷತೆಯನ್ನು ಅವರಿಬ್ಬರ ಮೇಲೆ ಹಾಕಿ ಆಶೀರ್ವದಿಸಬೇಕು ಎಂಬುದು ಕ್ರಮ. ಆದರೆ ಮದುವೆ ಮಂಟಪದ ಮೇಲಿನ ನೂಕುನುಗ್ಗಲಿನಲ್ಲಿ ಮತ್ತು ಛಾಯಾಗ್ರಾಹಕರು ಒಡ್ಡುವ ಅಡೆತಡೆಯಲ್ಲಿ ಇದನ್ನು ಮಾಡಲೂ ಆಗುವುದಿಲ್ಲ, ಎಷ್ಟೋ ಸಂದರ್ಭದಲ್ಲಿ ಅಕ್ಷತೆಯೇ ಸಿಗುವುದಿಲ್ಲ. ಹೀಗಾಗಿ ವಧು-ವರರ ಪಾಲಿಗೆ ಅತ್ಯಗತ್ಯವಾಗಿರುವ ಹಿರಿಯರ ಶುಭಾಶೀರ್ವಾದ ಮತ್ತು ಸಮಾನಮನಸ್ಕರ ಶುಭಹಾರೈಕೆಯ ಶಾಸ್ತ್ರಗಳು ಅಂದುಕೊಂಡಂತೆ ನಡೆಯುವುದಿಲ್ಲ.

ಇನ್ನು 'ಸೆಲೆಬ್ರಿಟಿ' ಎನಿಸಿಕೊಂಡವರು ಬಂದುಬಿಟ್ಟರಂತೂ, ಆಮಂತ್ರಿತರಲ್ಲಿ ಕೆಲವರು ಇದು ಮದುವೆ ಸಮಾರಂಭ ಎಂಬುದನ್ನೂ ಮರೆತು ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಹಾತೊರೆಯುವುದಿದೆ. ಕಲ್ಯಾಣ ಮಂಟಪಗಳಲ್ಲಿ ಆಗುವ ಇಂಥ ಘಟನೆಗಳಿಂದ ಸಂಭಾವಿತ ಆಮಂತ್ರಿತರಿಗೆ ಇರಿಸು-ಮುರಿಸು ಆಗುವುದು ದಿಟ. ಆದರೆ ಇಲ್ಲಿ ಯಾರೂ ಯಾರಿಗೂ ಏನನ್ನೂ ಹೇಳದಂಥ ಪರಿಸ್ಥಿತಿ ಇರುತ್ತದೆ. ಇನ್ನು ಮೇಲಾದರೂ ಇಂಥ ಪರಿಪಾಠಗಳಿಗೆ ಪೂರ್ಣವಿರಾಮ ಇಡಬೇಕು. ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿಯೂ, ಸಂದರ್ಭದ ಸೂಕ್ಷ್ಮತೆಯನ್ನು ಅರಿಯುವ ಗುಣವೂ ಇರಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

ಸಂಕಷ್ಟದ ಸಂಚಿಕೆಯಲ್ಲಿ ಬೆಲೆಯೇರಿಕೆಯ ಅಧ್ಯಾಯ!

ಗಗನಮುಖಿ

ರಮಾನಂದ ಶರ್ಮಾ

vveditoped@gmail.com

ರಾಜ್ಯದಲ್ಲೀಗ ಬೆಲೆಯೇರಿಕೆಯ ಪರ್ವದ ಕುರಿತೇ ಚರ್ಚೆ ನಡೆಯುತ್ತಿದೆ! ಪೆಟ್ರೋಲ್ 3 ರು., ಡೀಸೆಲ್ 2 ರು., ಅಫಿಡವಿಟ್ 20ರಿಂದ 100 ರು., ಟ್ರಸ್ಟ್ ಡೀಡ್ 1000ದಿಂದ 2000 ರು., ಆಸ್ತಿ ಪರಭಾರೆ ಪತ್ರ 1000ದಿಂದ 2000 ರು. ಹೀಗೆ ಏರಿಕೆ ಕಂಡಿವೆ. ವಿದ್ಯುಚ್ಛಕ್ತಿ ದರವು ಯುನಿಟ್‌ಗೆ 75 ಪೈಸೆ ಏರಿಕೆಯಾದ ಮೇಲೆ, ಈಗ ಬಸ್ ಟಿಕೆಟ್ ದರ ಶೇ.15ರಷ್ಟು ಹೆಚ್ಚಿದೆ. ಮೆಟ್ರೋ ಟಿಕೆಟ್ಟು, ಹಾಲು, ಆಟೋ ಮತ್ತು ನೀರಿನ ದರಗಳೂ ಹೆಚ್ಚಾಗುವ ಕುರಿತು ಮಾತುಗಳು ಹರಿದಾಡುತ್ತಿವೆ.

ರಾಜ್ಯದಲ್ಲೀಗ ಬೆಲೆಯೇರಿಕೆಯ ಪರಿಪಾಠವು 'ಪವರ್ ಟಾಪ್‌ಗೇರ್'ಗೆ ತಿರುಗಿದೆ ಎನ್ನುವ ಜನಸಾಮಾನ್ಯರ ಆಕ್ರೋಶದಲ್ಲಿ ಅರ್ಥವಿಲ್ಲದಿಲ್ಲ. ಹಾಗೆಯೇ, ಈ ಏರಿಕೆಯ ಪರ ಹಾಗೂ ವಿರುದ್ಧವಾಗಿ ರಾಜಕೀಯ ಪಕ್ಷಗಳ ಸಮರ್ಥನೆ ಮತ್ತು ಪ್ರತಿಭಟನೆಗಳಿಗೆ ಕೂಡ ತೂಕ ದಕ್ಕುವುದಿಲ್ಲ. 'ನೀವು ಮಾಡಿದರೆ ಸರಿ, ಅದನ್ನೇ ನಾವು ಮಾಡಿದರೆ ತಪ್ಪಾ?' ಎಂದು ಕೆಲ ರಾಜಕಾರಣಿಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವುದು ಇನ್ನೊಮ್ಮೆ ಮುನ್ನೆಲೆಗೆ ಬಂದಿದೆ. ಹಾಲಿ ವಿಪಕ್ಷ ನಾಯಕ ಆರ್. ಅಶೋಕ್ ಅವರು ಹಿಂದೆ ಸಾರಿಗೆ ಸಚಿವರಾಗಿದ್ದಾಗ ಮತ್ತು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಪ್ರಯಾಣ ದರವನ್ನು ಏರಿಸಿದ ನಿದರ್ಶನಗಳಿವೆ. ಆಗ ಕಾಂಗ್ರೆಸ್‌ನವರು ಪ್ರತಿಭಟಿಸಿದ್ದರು. ಈಗಿನ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ''2020ರ ನಂತರ ಮೊದಲ ಬಾರಿಗೆ ಈಗ ದರ ಏರಿಸಲಾಗಿದೆ'' ಎಂದಿದ್ದಾರೆ; ಇತರ ಸಾರಿಗೆ ನಿಗಮಗಳಲ್ಲಿ 2020ರಲ್ಲಿ ಶೇ.12ರಷ್ಟು ಏರಿಕೆ ಮಾಡಿದ್ದರೂ, ಬಿಎಂಟಿಸಿಯಲ್ಲಿ 2014ರ ಬಳಿಕ ಸಾರಿಗೆ ದರದ ಪರಿಷ್ಕರಣೆಯಾಗದಿರುವುದನ್ನು ಅವರು ಎತ್ತಿತೋರಿಸಿ, ದರ ಹೆಚ್ಚಳವನ್ನು ಸಮರ್ಥಿಸಿಕೊಂಡಿದ್ದಾರೆ. ಹಾಗೆಯೇ ಹಿಂದಿನ ಸರಕಾರವು 5,999 ಕೋಟಿ ರು. ಮೊತ್ತದ ಸಾಲವನ್ನು ಬಿಟ್ಟುಹೋಗಿರುವುದನ್ನು ಅವರು ಒತ್ತಿ ಹೇಳಿ, ಪ್ರಯಾಣದರ ಏರಿಕೆಗೆ ಅದನ್ನೂ ಕಾರಣವಾಗಿಸಿದ್ದಾರೆ.

ಭಾರತೀಯ ಜನತಾ ಪಕ್ಷವಂತೂ, ಈ ಬೆಲೆಯೇರಿಕೆಯ ಹಿಂದಿರುವ ಸರಕಾರದ ಅಸಹಾಯಕತೆ ಮತ್ತು ಸಮೀಕರಣವನ್ನು ಅರಿಯಲು ಯತ್ನಿಸದೆಯೇ, 'ವಿರೋಧಿಸುವುದೇ ವಿಪಕ್ಷಗಳ ಕೆಲಸ' ಎಂಬ ಅಲಿಖಿತ, ಆದರೆ ಧಾರಾಳವಾಗಿ ಅಳವಡಿಸಿಕೊಂಡು ಅನುಸರಿಸಲಾಗುವ ರಾಜಕೀಯ ತಂತ್ರಗಾರಿಕೆಗೆ ಶರಣಾಗಿದೆ. ''ಮಹಿಳೆಯರಿಗೆ ಉಚಿತ ಪ್ರಯಾಣದ ಭಾಗ್ಯವನ್ನು ನೀಡಿದ್ದರಿಂದಲೇ ಸಾರಿಗೆ ನಿಗಮಗಳು ನಷ್ಟವನ್ನು ಅನುಭವಿಸುತ್ತಿದ್ದು, ಇದನ್ನು ಸರಿದೂಗಿಸಲು ಸರಕಾರವು ಪ್ರಯಾಣದರವನ್ನು ಏರಿಸುವ ಅನಿವಾರ್ಯತೆಯಲ್ಲಿ ಸಿಲುಕಿದೆ'' ಎಂದು ದೂರುತ್ತಿದೆ ಬಿಜೆಪಿ. ವಿಚಿತ್ರವೆಂದರೆ, ಕೇಂದ್ರ ಸರಕಾರವು ಯಾವುದೇ ವಸ್ತು ಮತ್ತು ಸೇವೆಯ ಬೆಲೆಯನ್ನು ಏರಿಸಿದಾಗಲೂ ರಾಜ್ಯ ಬಿಜೆಪಿ ಪ್ರತಿಭಟಿಸಲಿಲ್ಲ. ಕಳೆದ 10 ವರ್ಷಗಳಲ್ಲಿ ತೈಲಬೆಲೆಯು ಹಲವು ಬಾರಿ ಹೆಚ್ಚಾಗಿದೆ, ಅಡುಗೆ ಅನಿಲದ ಸಿಲಿಂಡರ್ ಬೆಲೆ ಸಾವಿರ ರು. ದಾಟಿದೆ. ಕೋವಿಡ್ ಕಾಲಘಟ್ಟದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಇಳಿದಾಗ ಕೂಡ ಭಾರತದಲ್ಲಿ ತೈಲಬೆಲೆ ಇಳಿಯಲಿಲ್ಲ. 'ಜಿಎಸ್‌ಟಿ' ಬಾಬತ್ತಿನಿಂದಾಗಿ ಹಲವು ಪದಾರ್ಥಗಳ ಬೆಲೆ ಏರುತ್ತಲೇ ಇದ್ದು, ಪಾಪ್‌ಕಾರ್ನ್ ಕೂಡ ಜಿಎಸ್‌ಟಿಗೆ ಸಿಲುಕಿದೆ! ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಟೋಲ್ ನಿರಂತರ ಏರುತ್ತಲೇ ಇದೆ, ಇದು ರಾಜ್ಯ ಬಿಜೆಪಿಯ ಗಮನಕ್ಕೆ ಬರುವುದಿಲ್ಲ. ಆದರೆ, ರಾಜ್ಯ ಸರಕಾರ ಯಾವುದಾದರೂ ಸಾಮಗ್ರಿಯ/ಸೇವೆಯ ಬೆಲೆಯೇರಿಸಿದರೆ ನಮ್ಮಲ್ಲಿನ ಬಿಜೆಪಿಯವರು ಅದನ್ನು ಥಕ್ಕನೆ ಹಿಡಿದುಕೊಳ್ಳುತ್ತಾರೆ, ಅರೆಕ್ಷಣವೂ ವಿಳಂಬಿಸದೆ ಅದನ್ನು ಪ್ರತಿಭಟಿಸಲು ರಸ್ತೆಗಿಳಿಯುತ್ತಾರೆ. ರಾಜ್ಯದಲ್ಲಿ ಅಕಸ್ಮಾತ್ ಬಿಜೆಪಿ ಅಧಿಕಾರದಲ್ಲಿದ್ದು, ಬಸ್ ಪ್ರಯಾಣ ದರವನ್ನು ಏರಿಸಿದ್ದಿದ್ದರೆ, ಕಾಂಗ್ರೆಸ್ ಕೂಡ ಇದೇ ಮಾದರಿಯಲ್ಲಿ ಬೀದಿಗಿಳಿಯುತ್ತಿತ್ತು. ಆ ಮಾತು ಬೇರೆ!

ಹಣದುಬ್ಬರದ ಈ ದಿನಗಳಲ್ಲಿ ತಿಂಗಳ ಕೊನೆ ತಲುಪುವುದೂ ದುಸ್ತರವಾಗಿರುವಾಗ ಈ ಬೆಲೆಯೇರಿಕೆಯು 'ಬಾಗಿದವನ ಬೆನ್ನ ಮೇಲೆ ಇನ್ನೊಂದು ಏಟು' ಎನ್ನುವಂತಾಗಿರುವುದರಲ್ಲಿ ಎರಡು ಮಾತಿಲ್ಲ. ಆರ್ಥಿಕವಾಗಿ 'ಮಧ್ಯಮ ಮತ್ತು ಬಡ' ಎಂಬ ವರ್ಗದಲ್ಲಿರುವವರಿಗೆ ಇದು ಸಹಿಸಲಾಗದ ಒತ್ತಡ. ಆಡಳಿತಗಾರರ ದೃಷ್ಟಿಯಲ್ಲಿ- 'ಇದು ಕೇವಲ ಶೇ.15ರಷ್ಟು ಹೆಚ್ಚಳವಾಗಿದ್ದು ಜನಸಾಮಾನ್ಯರಿಗೆ ಭಾರವಾಗದು'. ಆದರೆ, ಬೂಟು ಧರಿಸಿದವನಿಗೆ ಮಾತ್ರವೇ ಗೊತ್ತು, ಅದು ಎಲ್ಲಿ ಕಚ್ಚುತ್ತದೆ ಎನ್ನುವ ಸತ್ಯ. ಇದು ಆಡಳಿತಗಾರರಿಗೆ ಅರಿವಾಗದ ಕಹಿಸತ್ಯ! ತಮಗೆ ಬರುವ ಆದಾಯದಲ್ಲಿಯೂ ಇದೇ ಪ್ರಮಾಣದಲ್ಲಿ ಏರಿಕೆಯಾದರೆ ಜನರ‍್ಯಾರೂ ಸರಕಾರ ಕೈಗೊಳ್ಳುವ ಬೆಲೆಯೇರಿಕೆಯನ್ನು ಪ್ರಶ್ನಿಸುವುದಿಲ್ಲ. ನಮ್ಮ ಆಳುಗರಲ್ಲಿ ಕಾಣಬರುವ ಒಂದು ವಿಶೇಷವೆಂದರೆ, ಯಾವುದಾದರೊಂದು ಬಾಬತ್ತಿನ ಬೆಲೆಯೇರಿಸಬೇಕಾಗಿ ಬಂದಾಗ, ''ಕಳೆದ ಕೆಲವು ವರ್ಷಗಳಿಂದ ಏರಿಸಿಲ್ಲ, ನೆರೆರಾಜ್ಯ ಮತ್ತು ಹೊರರಾಜ್ಯಗಳಲ್ಲಿ ನಮಗಿಂತ ಹೆಚ್ಚಿನ ದರ ಇದೆ'' ಎನ್ನುವ ವಾದವನ್ನು ಮುಂದಿಟ್ಟು, ಬೆಲೆಯೇರಿಕೆಯ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಾರೆ (ದುಡಿಯುವ ವರ್ಗಕ್ಕೆ ಸಂಬಳ ಹೆಚ್ಚಿಸುವ ನಿಟ್ಟಿನಲ್ಲಿ ಈ ಮಾನದಂಡವನ್ನು ಬಳಸುವುದಿಲ್ಲ, ಅದು ಇನ್ನೊಂದು ವಿಪರ್ಯಾಸ!). ಆದರೆ, ಅನ್ಯರಾಜ್ಯಗಳಲ್ಲಿ ನಮಗಿಂತ ಕಡಿಮೆಯಿದ್ದರೆ 'ಜಾಣಕುರುಡು' ಪ್ರದರ್ಶಿಸುತ್ತಾರೆ. ಉದಾಹರಣೆಗೆ, ಹಾಲಿನ ದರವು ಮಹಾರಾಷ್ಟ್ರದಲ್ಲಿ 56.19 ರು., ಕೇರಳದಲ್ಲಿ 52 ರು., ಗುಜರಾತ್‌ನಲ್ಲಿ 54 ರು. ಇದ್ದು, ಕರ್ನಾಟಕದಲ್ಲಿ ಹಾಲಿನ ದರವನ್ನು ಏರಿಸುವಾಗ ಈ ಮಾಹಿತಿಯನ್ನು ದೊಡ್ಡ ದನಿಯಲ್ಲಿ ಉಲ್ಲೇಖಿಸಲಾಗುತ್ತದೆ ಅಥವಾ ಪ್ರಯಾಣದರದ ವಿಷಯ ಬಂದಾಗ, 'ಕರ್ನಾಟಕದಲ್ಲಿ ಕನಿಷ್ಠ ದರ 5 ರು. ಇದ್ದರೆ ಹೈದರಾಬಾದ್‌ನಲ್ಲಿ 10 ರು. ಇದೆ' ಎಂಬ ಮಾಹಿತಿಯನ್ನು ಕರ್ನಾಟಕದ ಜನರ ಗಮನಕ್ಕೆ ತರಲಾಗುತ್ತದೆ; ಆದರೆ, ತಮಿಳುನಾಡಿನಲ್ಲಿ ಕನಿಷ್ಠದರವು 4 ರು.ನಷ್ಟು ಇರುವುದನ್ನು ಮರೆಮಾಚಲಾಗುತ್ತದೆ!



ವಸ್ತು ಅಥವಾ ಸೇವೆ ಯಾವುದೇ ಇರಲಿ, ಅವುಗಳ ಬೆಲೆಯು ಆಗಿಂದಾಗ್ಗೆ ಏರುವುದು ಒಂದು ಸಾಮಾನ್ಯ ಪ್ರಕ್ರಿಯೆ; ಅದು ನಿಂತ ನೀರಿನಂತೆ ಸ್ಥಿರವಾಗಿರುವುದು ಅಸಾಧ್ಯ. ಕಳೆದೊಂದು ದಶಕದಲ್ಲಿ ಡೀಸೆಲ್ ದರದಲ್ಲಿ ಭಾರಿ ಏರಿಕೆಯಾಗಿದೆ (2020ರಲ್ಲಿ 68 ರು., ಪ್ರಸ್ತುತ 89 ರು.). ಹಾಗೆಯೇ ಹೊಸ ಬಸ್ಸುಗಳ ಖರೀದಿ, ಬಿಡಿಭಾಗಗಳ ದರ ಮತ್ತು ಬಸ್ಸುಗಳ ನಿರ್ವಹಣಾ ವೆಚ್ಚದಲ್ಲಿ ಕೂಡ ಭಾರಿ ಹೆಚ್ಚಳವಾಗಿದೆ. ಐಷಾರಾಮಿ ಪ್ರಯಾಣಕ್ಕಾಗಿ ಸಂಸ್ಥೆಯು ಕೋಟ್ಯಂತರ ರು. ವೆಚ್ಚದಲ್ಲಿ ನೂರಾರು ಸುಖಾಸೀನ ಬಸ್ಸುಗಳನ್ನು ಒದಗಿಸಿದೆ. ಸಿಬ್ಬಂದಿಗೆ ಆಗುತ್ತಿರುವ ವೆಚ್ಚವೇ ಸಂಸ್ಥೆಯ ಬಹುಪಾಲು ಆದಾಯವನ್ನು ಕಬಳಿಸುತ್ತದೆ ಎಂಬುದು ಗಮನಿಸಬೇಕಾದ ಮತ್ತಷ್ಟು ಅಂಶಗಳು.

ಒಟ್ಟಾರೆಯಾಗಿ ಹೇಳುವುದಾದರೆ, ವಸ್ತು ಅಥವಾ ಸೇವೆಯ ಬೆಲೆಯೇರಿಕೆಗೆ ಯಾವುದೇ ರಾಜಕೀಯ ಪಕ್ಷವನ್ನು ನೇರವಾಗಿ ದೂರುವಂತಿಲ್ಲ; ಯಾವ ಪಕ್ಷ ಅಧಿಕಾರದಲ್ಲಿದ್ದರೂ ಇದು ಅನಿವಾರ್ಯ ಕ್ರಮ. ನಿತ್ಯಜೀವನದ ಪ್ರತಿಯೊಂದು ಸ್ತರದಲ್ಲೂ ಬೆಲೆಯೇರಿಕೆಯ ಛಾಯೆಯಿದೆ. ಸೂಜಿಯಿಂದ ಹಿಡಿದು ಮಠ-ಮಂದಿರದಲ್ಲಿ ಪೂಜಾಸೇವೆಗೆ ನಿಗದಿ ಪಡಿಸಲಾಗಿರುವ ಶುಲ್ಕದವರೆಗೂ ಬೆಲೆಯೇರಿಕೆಯು ತನ್ನ ಬಾಲವನ್ನು ಚಾಚಿರುವಾಗ, ಬಸ್ ಪ್ರಯಾಣದರವನ್ನಷ್ಟೇ ಪ್ರತ್ಯೇಕವಾಗಿ ನೋಡಲು ಸಾಧ್ಯವೇ? ಎಂಬ ಪ್ರಶ್ನೆಯಲ್ಲಿ ತಥ್ಯವಿದೆ.

ಬೆಲೆಯೇರಿಕೆಗೆ ಇರುವ ಕಾರಣಗಳು ಹಲವು; ಆದರೆ ಅಧಿಕಾರದಲ್ಲಿರುವ ರಾಜಕೀಯ ಪಕ್ಷ ಅದರ ಹೊಣೆಯನ್ನು ಹೊರಬೇಕಾಗಿ ಬರುತ್ತದೆಯಷ್ಟೇ. ಬೆಲೆಯೇರಿಕೆಯನ್ನು ಪ್ರಸ್ತುತ ನಖಶಿಖಾಂತವಾಗಿ ಪ್ರತಿಭಟಿಸುತ್ತಿರುವ ಪಕ್ಷದವರು ಅಧಿಕಾರದಲ್ಲಿದ್ದಿದ್ದರೂ ಮಾಡುತ್ತಿದ್ದುದು ಇದನ್ನೇ! ಬಹುಶಃ ಈ ಸತ್ಯ ಅವರಿಗೂ ಗೊತ್ತು. ಆದರೆ, 'ಪಕ್ಷ ರಾಜಕೀಯ' ಅವರ ಕೈಯನ್ನು ಕಟ್ಟುತ್ತದೆ. 'ನಾವು ಮಾಡಿದರೆ ಸರಿ, ಅದನ್ನೇ ನೀವು ಮಾಡಿದರೆ ತಪ್ಪು' ಎಂಬ ಅಲಿಖಿತ ಸಿದ್ಧಾಂತದ ಮೇಲೆಯೇ ದೇಶದ ರಾಜಕೀಯ ನಡೆಯೋದು. ಉದಾಹರಣೆಗೆ- ಕಾಂಗ್ರೆಸ್ ಪಕ್ಷವು ಮತದಾರರಿಗೆ 'ಪಂಚ ಗ್ಯಾರಂಟಿ' ಹೆಸರಲ್ಲಿ ಹಲವು ಉಚಿತ ಸೌಲಭ್ಯಗಳ ಭರವಸೆ ನೀಡಿ ರಾಜ್ಯದಲ್ಲಿ ಅಧಿಕಾರದ ಗದ್ದುಗೆಯೇರಿದಾಗ, ದೇಶಾದ್ಯಂತ ಅವನ್ನು 'ಬಿಟ್ಟಿಭಾಗ್ಯ' ಎಂದು ಜರಿಯಲಾಗಿತ್ತು. ಹಾಗೆ ಲೇವಡಿ ಮಾಡಿದವರೇ ಇತ್ತೀಚೆಗೆ ಆ 'ಉಚಿತ'ಗಳಿಗೆ ತಲೆಬಗ್ಗಿಸಿ ಅಧಿಕಾರದ ಗದ್ದುಗೆಯೇರಿದ್ದಾರಲ್ಲಾ, ಇದಕ್ಕೇನಂತೀರಿ?!

ಪ್ರಯಾಣದರ ಏರಿಕೆಯು ಜನಸಾಮಾನ್ಯರ ದೃಷ್ಟಿಯಲ್ಲಿ 'ಸ್ವೀಕಾರಾರ್ಹವಲ್ಲದ' ಕ್ರಮ ಇರಬಹುದು; ಆದರೆ ಇದನ್ನು ರಾಜಕೀಯದ ಕನ್ನಡಕದೊಳಗಿಂದ ನೋಡದೆ ವಾಸ್ತವಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗ್ರಹಿಸಬೇಕಿದೆ. ಇಂದು ಸಾರ್ವತ್ರಿಕವಾಗಿರುವ ಬೆಲೆಯೇರಿಕೆಗೆ ಸಾರಿಗೆ ನಿಗಮವೂ ತಲೆಬಾಗಬೇಕಾಗಿ ಬಂದಿರುವುದನ್ನು ಅನಿವಾರ್ಯತೆಯ ದೃಷ್ಟಿಯಲ್ಲಿ ವಿಶ್ಲೇಷಿಸಬೇಕಿದೆ. ನಿಗಮವು ನಷ್ಟ ಅನುಭವಿಸುವಂತೆ ಆಗಿರುವುದರಲ್ಲಿ, ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ನೀಡುವ 'ಶಕ್ತಿ' ಯೋಜನೆಯ ಪಾಲು ಸಾಕಷ್ಟಿದೆ ಎಂಬ ಮಾತಿನಲ್ಲಿ ಅರ್ಥವಿದೆ. ಯಾವುದೇ ಕಾರಣಕ್ಕೂ ಈ ಯೋಜನೆಯನ್ನು ಹಿಂತೆಗೆದುಕೊಳ್ಳುವುದು ಕಷ್ಟ ಮತ್ತು ಇಂಥ ಕ್ರಮವು ಆಡಳಿತ ಪಕ್ಷಕ್ಕೆ ಮುಂದಿನ ಚುನಾವಣೆಯಲ್ಲಿ ಅಡ್ಡಗಾಲು ಹಾಕುವುದು ಸತ್ಯ. ಈ ಯೋಜನೆ ಅಡಿಯಲ್ಲಿ ಉಚಿತ ಪ್ರಯಾಣ ಮಾಡುವವರಿಗೆ, 'ಗರಿಷ್ಠ ಅಂತರ, ದಿನಕ್ಕೆ ಒಮ್ಮೆ ಮಾತ್ರ, ದಿನಗೂಲಿ ಮಹಿಳೆಯರಿಗೆ ಮಾತ್ರ, ನಿರ್ದಿಷ್ಟ ಮಾರ್ಗ/ತಾಲೂಕು/ಜಿಲ್ಲೆಯಲ್ಲಿ ಮಾತ್ರ, ಹಿರಿಯ ನಾಗರಿಕರು, ರೋಗಿಗಳು, ವಿದ್ಯಾರ್ಥಿಗಳು ಮತ್ತು ಅಂಗವಿಕಲರಿಗೆ ಮಾತ್ರ' ಎಂಬಂಥ ನಿಬಂಧನೆಗಳನ್ನು ಹಾಕಿದ್ದಿದ್ದರೆ, ಈ ಯೋಜನೆಯ ದುರುಪಯೋಗ ಕಡಿಮೆಯಾಗುತ್ತಿತ್ತೇನೋ ಎಂಬ ಅಭಿಪ್ರಾಯ ಅಲ್ಲಲ್ಲಿ ಕೇಳಿಬರುತ್ತಿದೆ. ಹಾಗೆಯೇ, 'ಇದು ಸಾರಿಗೆ ನಿಗಮವು ಮುಂದಿನ ದಿನಗಳಲ್ಲಿ ಕೂಡ ಪುನಃ ಪ್ರಯಾಣದರ ಏರಿಕೆಗೆ ಶರಣಾಗುವುದನ್ನು ತಪ್ಪಿಸಬಹುದು' ಎನ್ನಲಾಗುತ್ತಿದೆ. ಎಲ್ಲಾ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ನೀಡಿ, ಪುರುಷರಿಂದ ಮಾತ್ರ ಹಣ ಪೀಕಿಸುವುದು ಯಾವ ನ್ಯಾಯ? ಎಂಬ ಪ್ರಶ್ನೆ ಕ್ರಮೇಣ ಜೋರಾಗಿ ಕೇಳುತ್ತಿದೆ. ಸಮಾನತೆ ಮತ್ತು ತಾರತಮ್ಯದ ಹೆಸರಿನಲ್ಲಿ ಈ 'ವಿಷಯ'ವು 'ವಿವಾದ'ವಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ನಾರದ ಸಂಚಾರ

ಕಲಹಪ್ರಿಯ

naadigru@gmail.com

ಹೀಗೊಬ್ಬರು 'WISE' ಚಾನ್ಸೆಲರ್

ಒಂದು ಕಾಲಕ್ಕೆ ಗುಜರಾತಿನ ಮುಖ್ಯಮಂತ್ರಿಯಾಗಿದ್ದು ಪ್ರಸ್ತುತ ಉತ್ತರ ಪ್ರದೇಶದ ರಾಜ್ಯಪಾಲೆಯ ಗದ್ದುಗೆಯನ್ನು ಅಲಂಕರಿಸಿರುವ ಆನಂದಿಬೆನ್ ಪಟೇಲ್ ಅವರ ಕುರಿತು ನಿಮಗೆ ಗೊತ್ತೇ ಇದೆ. ಅವರು ಇತ್ತೀಚೆಗೆ ಹೀಗೇ ಒಂದು ಸಂದರ್ಭದಲ್ಲಿ ಮಾತನಾಡುತ್ತಾ, ''ವೈಮಾನಿಕ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದು ಮಹರ್ಷಿ ಭಾರದ್ವಾಜರೇ ಹೊರತು 'ರೈಟ್ ಸಹೋದರರು' ಅಲ್ಲ'' ಎಂದು ಉದ್ಗರಿಸಿ ಹಲವರ ಹುಬ್ಬೇರುವಂತೆ ಮಾಡಿದರಂತೆ. ಇರಬಹುದೇನೋ, ಅದಕ್ಕೆ ಕಲಹಪ್ರಿಯ ನಾರದರ ತಕರಾರೇನೂ ಇಲ್ಲ. ಏಕೆಂದರೆ, ತ್ರೇತಾಯುಗದಲ್ಲೇ 'ಪುಷ್ಪಕ ವಿಮಾನ'ವನ್ನು ಮಡಗಿಕೊಂಡಿದ್ದ ರಾವಣನ ಪ್ರಸಂಗವನ್ನು ಓದಿದವರಿಗೆ ಆನಂದಿಬೆನ್ ಪಟೇಲರ ಈ ಪ್ರತಿಪಾದನೆ ಅಚ್ಚರಿಯನ್ನೇನೂ ಉಂಟುಮಾಡುವುದಿಲ್ಲ. ''ವೈಮಾನಿಕ ತಂತ್ರಜ್ಞಾನ, ಗುರುತ್ವಾಕರ್ಷಣಾ ಶಕ್ತಿಯ ಸಿದ್ಧಾಂತ ಸೇರಿದಂತೆ ಆಧುನಿಕ ಯುಗದ ಹತ್ತು ಹಲವು ತಂತ್ರಜ್ಞಾನಗಳು, ಸಿದ್ಧಾಂತಗಳ ಉಲ್ಲೇಖ ನಮ್ಮ ಅಥರ್ವಣ ವೇದದಲ್ಲೇ ಆಗಿದೆ; ಅದರಲ್ಲಿ ಇಲ್ಲದ ವೈಜ್ಞಾನಿಕ ಸಂಗತಿಗಳಿಲ್ಲ. ಆದರೆ ನಾವು ಅವನ್ನು ಪುಸ್ತಕದಲ್ಲೇ ಉಳಿಸಿಕೊಂಡೆವು, ಪರದೇಶದವರು ಅವನ್ನು ಕದ್ದು ತಾವೇ ಕಂಡುಹಿಡಿದದ್ದು ಎಂದು ಹೇಳಿಕೊಂಡು ಎಲ್ಲರನ್ನೂ 'ಮಂಗ್ಯಾ' ಮಾಡಿದರು'' ಎಂದು ಹೇಳುವವರೂ ಇದ್ದಾರೆ. ಹೀಗಾಗಿ ಆನಂದಿಬೆನ್ ಪಟೇಲರ ಪ್ರತಿಪಾದನೆಯ ಕುರಿತು ನಾರದರು ಏನೂ ಹೇಳಲು ಹೋಗುವುದಿಲ್ಲ.

ಆದರೆ, ಅವರ ಇನ್ನೊಂದು ಪ್ರತಿಪಾದನೆ ಕೇಳಿ ನಾರದರಂಥ ಸಾಕ್ಷಾತ್ ತ್ರಿಲೋಕ ಸಂಚಾರಿಗೂ ಗೊಂದಲವಾಗಿರುವುದುಂಟು. ''ರಾವಣನ ಸೋದರರಲ್ಲಿ ಒಬ್ಬನಾದ ಕುಂಭಕರ್ಣನು ವರ್ಷದಲ್ಲಿ ಆರು ತಿಂಗಳು ಮಲಗಿರುತ್ತಿದ್ದ ಎಂದು ಹೇಳಲಾಗುತ್ತದೆ; ಆದರೆ ವಾಸ್ತವವಾಗಿ ಅವನು ತನ್ನ ರಹಸ್ಯ ಪ್ರಯೋಗಾಲಯದಲ್ಲಿ ಯಂತ್ರಗಳನ್ನು ರೂಪಿಸಲು ಸದರಿ ಅವಧಿಯನ್ನು ವಿನಿಯೋಗಿಸುತ್ತಿದ್ದ ಆಗಿನ ಕಾಲದ ಟೆಕ್ಕಿ'' ಎಂಬ ಆಣಿಮುತ್ತುಗಳನ್ನು ಆನಂದಿಬೆನ್ ಉದುರಿಸಿಬಿಟ್ಟಿರುವುದೇ ನಾರದರ ಗೊಂದಲಕ್ಕೆ ಕಾರಣ! ರಾಜ್ಯವೊಂದರ ರಾಜ್ಯಪಾಲರಾಗಿರುವವರು ಅಲ್ಲಿನ ವಿಶ್ವವಿದ್ಯಾಲಯಗಳ 'ಚಾನ್ಸೆಲರ್' (ಕುಲಪತಿ) ಕೂಡ ಆಗಿರುತ್ತಾರೆ. ''ವಿದ್ಯಾರ್ಥಿಗಳಿಗೆ ಯಾವಾಗಲೂ 'ಸರಿಯಾದ' ಜ್ಞಾನವನ್ನೇ ನೀಡಬೇಕು'' ಎಂದು ಒತ್ತಿಹೇಳುವ ಹೇಳುವ ಈ 'WISE' ಚಾನ್ಸೆಲರ್ ಅವರ 'ಕುಂಭಕರ್ಣ ಸಂಬಂಧಿತ' ಸಮರ್ಥನೆಯನ್ನು ಒಪ್ಪಿಕೊಳ್ಳುವುದು ಸ್ವಲ್ಪ ಕಷ್ಟವಾಗ್ತಾ ಇದೆಯಲ್ಲಾ...!!

ಮೋಸಗಾರರಿಗೆ ಜಾಗವಿಲ್ಲ

ತಮ್ಮ ಅಭಿಮಾನಿಗಳಿಂದ 'ದಳಪತಿ' ಎಂದೇ ಪ್ರೀತಿಯಿಂದ ಕರೆಸಿಕೊಳ್ಳುವ ತಮಿಳು ಚಿತ್ರನಟ ವಿಜಯ್ ಅವರು 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಎಂಬ ರಾಜಕೀಯ ಪಕ್ಷವನ್ನು ಹುಟ್ಟುಹಾಕಿರುವುದು ಈಗ ಜಗಜ್ಜಾಹೀರು. ಈ ಪಕ್ಷಕ್ಕೆ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಪದಾಧಿಕಾರಿಗಳನ್ನು ನೇಮಿಸಲು ಭರದಿಂದ ಸಿದ್ಧತೆ ನಡೆದಿದೆಯಂತೆ. ಹಾಗೆಂದ ಮಾತ್ರಕ್ಕೆ ಅದು ಚಲನಚಿತ್ರಕ್ಕೆ ಕಲಾವಿದರು ಮತ್ತು ತಂತ್ರಜ್ಞರನ್ನು ಆರಿಸಿದಂತೆ ಅಲ್ಲವಲ್ಲಾ, ಅದಕ್ಕೊಂದು ಬೇರೆಯದೇ ಆದ ಲೆಕ್ಕಾಚಾರವಿದೆ. ಹೀಗಾಗಿ, ತಮಿಳುನಾಡಿನಲ್ಲಿ ಈಗಾಗಲೇ ಬೇರುಬಿಟ್ಟಿರುವ 'ಡಿಎಂಕೆ' ಮತ್ತು 'ಎಐಎಡಿಎಂಕೆ' ಪಕ್ಷಗಳ ಅದೇ 'ರಚನಾಸ್ವರೂಪ' ಮತ್ತು 'ಬೈಲಾ'ಗಳನ್ನು ಸದ್ಯಕ್ಕೆ ಅನುಸರಿಸಲು 'ಟಿವಿಕೆ' ಪಕ್ಷ ಸಿದ್ಧವಾಗಿದೆಯಂತೆ. ಆದರೆ, ಒಂದು 'ಕಟ್ಟುನಿಟ್ಟನ್ನು' ಮಾತ್ರ 'ಪಟ್ಟಾಗಿ' ಅನುಸರಿಸುವಂತೆ ವಿಜಯಣ್ಣನ ಕಡೆಯಿಂದ ಸೂಚನೆ ಬಂದಿದೆಯಂತೆ, ಅದೆಂದರೆ- ಕಾನೂನಾತ್ಮಕ ತೊಡಕು/ಸಮಸ್ಯೆಗಳ ಇತಿಹಾಸ ಹೊಂದಿರುವವರು, ಕ್ರಿಮಿನಲ್ ಹಿನ್ನೆಲೆಯವರು ಪಕ್ಷದ ಕಾರ್ಯಾಲಯದೊಳಗೆ ಬಿಲ್‌ಕುಲ್ ಕಾಲಿಡುವಂತಿಲ್ಲವಂತೆ. ಈ ಆಶಯದ ಭಾಗವಾಗಿ, ಪದಾಧಿಕಾರಿ ಹುದ್ದೆಯ ಆಕಾಂಕ್ಷಿಗಳ ವೈಯಕ್ತಿಕ ವಿವರವನ್ನು ಕಲೆಹಾಕುವಂತೆ ಅವರು ಪಕ್ಷದ ಹಿರಿಯ ನಾಯಕರಿಗೆ ಸೂಚಿಸಿರುವುದರ ಜತೆಗೆ, ಸದರಿ 'ಸ್ಕ್ರೀನಿಂಗ್'ನಲ್ಲಿ ವಿಫಲರಾದವರನ್ನು ನಿರ್ದಾಕ್ಷಿಣ್ಯವಾಗಿ ಹೊರಹಾಕುವಂತೆ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರಂತೆ. ಪಕ್ಷದ ಮತ್ತು ಸರಕಾರದ ಆಯಕಟ್ಟಿನ ಜಾಗಗಳಲ್ಲಿ ಅಪರಾಧಿಕ ಹಿನ್ನೆಲೆಯವರನ್ನೇ ತುಂಬಿಸಿಕೊಂಡಿರುವ ಕೆಲವರು 'ದಳಪತಿ'ಯ ಈ ಕಟ್ಟುನಿಟ್ಟನ್ನು ಕಂಡು ಏನನ್ನುವರೋ?!!

ನಾರಾಯಣ ನಾರಾಯಣ!

''ಕರ್ನಾಟಕದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿಗಳ ಬದಲಾವಣೆ ವಿಚಾರ ಬರುವುದಿಲ್ಲ; ಆದರೆ 2028ಕ್ಕೆ ನಾನೇ ಸಿಎಂ ಅಭ್ಯರ್ಥಿ ಎಂದು ಹೇಳಿದ್ದೇನೆ, ಕಾದುನೋಡಬೇಕು'' ಎಂಬ ಸಚಿವ ಸತೀಶ್ ಜಾರಕಿಹೊಳಿ ಅವರ ಹೇಳಿಕೆಯನ್ನು ಓದಿದ 'ಕೇಶವಕೃಪಾ'ಪೋಷಿತರೊಬ್ಬರು ಕಡ್ಲೆಮಿಠಾಯಿ ಮೆಲ್ಲುತ್ತಾ, ''ಅಣ್ಣಾ, 2028ರಲ್ಲಿ ಮೊದಲು ಎಲೆಕ್ಷನ್ನು ಆಗ್ಲಿ... ಸ್ವಲ್ಪ ತಡ್ಕಳಿ'' ಎಂದು ಹಿತವಚನ ಹೇಳಿದರಂತೆ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 12

ಸಮಾಚಾರ ಸಣ್ಣದಲ್ಲ

ಅಸಾರಾಂಗೆ ಜಾಮೀನು

ದೆಹಲಿ: 2013ರ ಅತ್ಯಾಚಾರ ಪ್ರಕರಣದಲ್ಲಿ ಜೈಲಿನಲ್ಲಿರುವ ಅಸಾರಾಂ ಬಾಪುಗೆ(86) ಮಾ.31ರವರೆಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ಅಸಾರಾಂ ಹೃದಯ ಸಂಬಂಧಿ ಕಾಯಿಲೆ ಜೊತೆಗೆ ವಿವಿಧ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದು, ವೈದ್ಯಕೀಯ ಕಾರಣಗಳಿಗಾಗಿ ನ್ಯಾ.ಎಂ.ಎಂ.ಸುಂದ್ರೇಶ್ ಮತ್ತು ರಾಜೇಶ್ ಬಿಂದಾಲ್ ಅವರ ಪೀಠ ಮಂಗಳವಾರ ಜಾಮೀನು ಆದೇಶ ನೀಡಿದೆ. ಅಪರಾಧಿ ಜೈಲಿನಿಂದ ಹೊರಹೋದಾಗ ಅನುಯಾಯಿಗಳನ್ನು ಭೇಟಿ ಮಾಡಬಾರದು ಎಂದು ಪೀಠ ನಿರ್ದೇಶಿಸಿದೆ.

ಹಿರಿಯ ಯೋಧ ಬಲದೇವ್ ನಿಧನ

ರಜೌರಿ: ಪಾಕಿಸ್ತಾನ ವಿರುದ್ಧದ 4 ಯುದ್ಧಗಳಲ್ಲಿ ಹೋರಾಡಿದ ಹಿರಿಯ ಯೋಧ ಹವಾಲ್ದಾರ್ (ನಿವೃತ್ತ) ಬಲದೇವ್ ಸಿಂಗ್(93) ಮಂಗಳವಾರ ನಿಧನರಾದರು. ವಯೋಸಹಜ ಕಾರಣಗಳಿಂದ ಅವರು ಹುಟ್ಟೂರು ನೌಶೇರಾದಲ್ಲಿ ಕೊನೆಯುಸಿರೆಳೆದರು. ಗ್ರಾಮದಲ್ಲಿಯೇ ಸೇನಾಗೌರವಗಳೊಂದಿಗೆ ಅಂತಿಮ ವಿಧಿ ನೆರವೇರಿಸಲಾಗುವುದೆಂದು ಸೇನಾ ವಕ್ತಾರರು ತಿಳಿಸಿದ್ದಾರೆ. 1931ರ ಸೆ.27ರಂದು ನೌನಿಹಾಲ್ ಗ್ರಾಮದಲ್ಲಿ ಜನಿಸಿದ ಸಿಂಗ್, 16 ವರ್ಷದವರಾಗಿದ್ದಾಗಲೇ 1947-48ರಲ್ಲಿ ನೌಶೇರಾ ಮತ್ತು ಜಂಗಾರ್ ಯುದ್ಧದ ಸಮಯದಲ್ಲಿ 50 ಪ್ಯಾರಾ ಬ್ರಿಗೇಡ್‌ನ ಕಮಾಂಡರ್ ಬ್ರಿಗೇಡಿಯರ್ ಉಸ್ಮಾನ್ ನೇತೃತ್ವದಲ್ಲಿ ಬಾಲ ಸೇನಾ ಪಡೆಗೆ ಸ್ವಯಂ ಸೇವಕರಾಗಿ ಸೇರಿದ್ದರು. 12-16ರ ವಯೋಮಾನದಲ್ಲಿ ಬಾಲ ಸೇನೆ ಸೇರಿದರು. 1950ರ ನ.14ರಂದು ಸೇನೆ ಸೇರಿದ ಸಿಂಗ್ 3 ದಶಕ ಸೇವೆ ಸಲ್ಲಿಸಿದರು. 1961 ಮತ್ತು 1962 ಹಾಗೂ 1965ರ ಭಾರತ-ಪಾಕಿಸ್ತಾನ ಯುದ್ಧಗಳು ಸೇರಿದಂತೆ ಅನೇಕ ಯುದ್ಧಗಳಲ್ಲಿ ಹೋರಾಡಿದರು ಎಂದು ಸೇನಾ ವಕ್ತಾರರು ಮಾಹಿತಿ ನೀಡಿದ್ದಾರೆ.

ಅಧಿಕಾರ ಹಸ್ತಾಂತರಕ್ಕೆ ಬೈಡನ್ ಕಿರಿಕಿರಿ: ಟ್ರಂಪ್

ವಾಷಿಂಗ್ಟನ್: ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜ.20ರಂದು ಪದಗ್ರಹಣ ಮಾಡಲಿದ್ದಾರೆ. ಆದರೆ ಅದಕ್ಕೂ ಮುನ್ನ ನಡೆಯಬೇಕಿರುವ ಅಧಿಕಾರ ಹಸ್ತಾಂತರ ಪ್ರಕ್ರಿಯೆ ವಿಚಾರವಾಗಿ ಹಾಲಿ ಅಧ್ಯಕ್ಷ ಜೋ ಬೈಡನ್ ನಡೆ ಬಗ್ಗೆ ಟ್ರಂಪ್ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಅಧಿಕಾರ ಹಸ್ತಾಂತರಕ್ಕೆ ಬೈಡನ್ ಕಿರಿಕಿರಿ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಬೆಳಗ್ಗೆ 6.35ಕ್ಕೆ 7.1 ತೀವ್ರತೆಯ ಕಂಪನ | ಟಿಬೆಟ್‌ನಲ್ಲಿ 130 ಜನರಿಗೆ ಗಾಯ,
ನೂರಾರು ಕಟ್ಟಡಗಳ ಕುಸಿತ | ನೇಪಾಳದ ಕಠ್ಮಂಡು, ಉತ್ತರ ಭಾರತದಲ್ಲೂ ಕಂಪನದ ಪ್ರಭಾವ

ಟಿಬೆಟ್ ಭೂಕಂಪಕ್ಕೆ 100+ ಬಲಿ

ಕಠ್ಮಂಡು: ಹಿಮಾಲಯದ ತಪ್ಪಲಿನಲ್ಲಿರುವ, ಭಾರತದ ಎಡಭುಜಕ್ಕೆ ತಾಗಿಕೊಂಡೇ ಇರುವ ಟಿಬೆಟ್‌ನಲ್ಲಿ ಮಂಗಳ ವಾರ ಅತ್ಯಂತ ತೀವ್ರ ಸ್ವರೂಪದ ಭೂಕಂಪವಾಗಿದ್ದು, 100ಕ್ಕೂ ಹೆಚ್ಚು ದುರ್ಮರಣಕ್ಕೀಡಾಗಿದ್ದಾರೆ, 130 ಮಂದಿ ಗಾಯಗೊಂಡಿದ್ದಾರೆ. ಟಿಬೆಟ್‌ನಲ್ಲಿ ಬೆಳಗ್ಗೆ ರಿಕ್ಟರ್ ಮಾಪಕದಲ್ಲಿ 7.1ರಷ್ಟು ತೀವ್ರತೆಯ ಭೂಕಂಪವಾಗಿ, ನೂರಾರು ಕಟ್ಟಡಗಳು ನೆಲಕ್ಕುರುಳಿ, ಛಿದ್ರಗೊಂಡು ನಾಶವಾಗಿವೆ. ಭಾರೀ ಪ್ರಮಾಣದಲ್ಲಿ ಸರಕಾರಿ, ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗಿದೆ. ಹಲವೆಡೆ ರಸ್ತೆ ಸಂಪರ್ಕ ಕಡಿತವಾಗಿದೆ. ನೇಪಾಳ ಗಡಿಯ ಸಮೀಪ ಡಿಂಗ್ರಿ ಕೌಂಟಿಯಲ್ಲಿ ಬೆಳಿಗ್ಗೆ 6.35ಕ್ಕೆ(ಚೀನಾ ಬೀಜಿಂಗ್ ಸಮಯ ಬೆಳಗ್ಗೆ 9.05) ಭೂಕಂಪ ಸಂಭವಿಸಿದೆ. ಒಂದೂವರೆ ಗಂಟೆಗಳ ಅವಧಿಯಲ್ಲೇ ಆರು ಬಾರಿ ಭೂಕಂಪವಾಗಿದೆ. ಬೆಳಗ್ಗೆ 6.35ಕ್ಕೆ ಸಂಭವಿಸಿದ 7.1 ತೀವ್ರತೆಯ ಭೂಕಂಪದ ನಂತರ ಹಲವು ಸಮಯದವರೆಗೂ ಭೂಮಿ ಪದೇ ಪದೇ ಕಂಪಿಸುತ್ತಲೇ ಇತ್ತು ಎಂದು ಚೀನಾ ಭೂಕಂಪ ನೆಟ್‌ವರ್ಕ್ ಸೆಂಟರ್ ಹೇಳಿದೆ.



ಭಯ-ಆಘಾತ: ಒಂದರ ಹಿಂದೊಂದರಂತೆ ಭೂಕಂಪನ, ದೊಡ್ಡ ಶಬ್ದ ಕಂಡು-ಕೇಳಿ ಟಿಬೆಟ್ ಜನರು ನಡುಗಿಹೋಗಿದ್ದಾರೆ. ಭೂಕಂಪನದ ಕೇಂದ್ರಬಿಂದುವಿದ್ದ ಪ್ರದೇಶದ ಜನರಂತೂ ತೀವ್ರ ಆಘಾತಕ್ಕೊಳಗಾಗಿದ್ದಾರೆ. ಟಿಬೆಟ್‌ನ ಈ ಭಾಗದಲ್ಲಿ ಭೂಕಂಪ ಸಾಮಾನ್ಯವೆನಿಸಿದ್ದರೂ, ಮಂಗಳವಾರ ಬೆಳಗ್ಗೆ ಸಂಭವಿಸಿದ ಭೂಕಂಪ ಬಹಳ ತೀವ್ರ ಸ್ವರೂಪದ್ದಾಗಿತ್ತು. ಇತ್ತೀಚಿನ ಐದು ವರ್ಷಗಳಲ್ಲಿ ಇಂತಹ ಪ್ರಬಲ ಭೂಕಂಪನವನ್ನು ಟಿಬೆಟ್ ಜನತೆ ಕಂಡಿರಲಿಲ್ಲ. 200-ಕಿ.ಮೀ. ತ್ರಿಜ್ಯದಲ್ಲಿ ದಾಖಲಾದ ಅತ್ಯಂತ ಶಕ್ತಿಶಾಲಿ ಕಂಪನ ಇದಾಗಿದೆ ಎಂದು ತಜ್ಞರು ವಿವರಿಸಿದ್ದಾರೆ.



ಉ.ಭಾರತ-ನೇಪಾಳ

ಟಿಬೆಟ್‌ನಲ್ಲಾದ ಪ್ರಬಲ ಭೂಕಂಪದ ತೀವ್ರತೆ ನೆರೆಯ ನೇಪಾಳ ರಾಜಧಾನಿ ಕಠ್ಮಂಡು ಮತ್ತು ಭಾರತದ ಉತ್ತರ ಭಾಗಗಳ ಮೇಲೆಯೂ ಆಗಿದೆ. ಬಿಹಾರ ರಾಜ್ಯದಲ್ಲಿಯೂ ಜನರಿಗೆ ಭೂಮಿ ಕಂಪಿಸಿದ ಅನುಭವವಾಗಿದೆ. ಜನರು ಮನೆ-ಅಪಾರ್ಟ್‌ಮೆಂಟ್‌ಗಳಿಂದ ಹೊರಗೆ ಓಡಿಬರುತ್ತಿರುವ ದೃಶ್ಯ ಕಂಡುಬಂದಿದೆ. ಆಸ್ತಿಪಾಸ್ತಿಗೆ ಯಾವ ಪ್ರಮಣದಲ್ಲಿ ಹಾನಿಯಾಗಿದೆ ಎಂಬ ವಿವರ ಲಭ್ಯವಾಗಿಲ್ಲ. ನೇಪಾಳದಲ್ಲಿ ಶುರುವಾದ ಕಂಪನದ ಅಲೆ ನಂತರ ಬಿಹಾರ, ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್) ಮೇಲೆಯೂ ಹೆಚ್ಚು ಪರಿಣಾಮ ಬೀರಿದೆ. ಅಮೆರಿಕದ ಜಿಯೋಲಾಜಿಕಲ್ ಸರ್ವೆ ಪ್ರಕಾರ, ನೇಪಾಳ-ಟಿಬೆಟ್ ಗಡಿ ಬಳಿ ಲೊಬುಚೆಯಿಂದ ಈಶಾನ್ಯಕ್ಕೆ 93 ಕಿಮೀ ದೂರ ಬೆಳಿಗ್ಗೆ 6.35ಕ್ಕೆ ಭೂಕಂಪ ಸಂಭವಿಸಿದೆ. ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ಭೂಕಂಪನ ಅನುಭವವಾಗಿದೆ. ಕಾವ್ರೆಪಲಾಂಚ್ವೋಕ್ ಮತ್ತು ಧಾಡಿಂಗ್ ಜಿಲ್ಲೆಗಳಲ್ಲೂ ಭೂಮಿ ಕಂಪಿಸಿದೆ. ಕಠ್ಮಂಡುವಿನಲ್ಲಿ ಜನರು ಭಯಗೊಂಡು ಮನೆಗಳಿಂದ ಹೊರಗೋಡಿಬಂದರು. ಸುದೈವವಶಾತ್ ಯಾವುದೇ ಹಾನಿ ಈವರೆಗೆ ವರದಿಯಾಗಿಲ್ಲ. ಭೂಕಂಪನ ಸಾಧ್ಯತೆಯ ಪ್ರಮುಖ ಭೌಗೋಳಿಕ ದೋಷದ ರೇಖೆಯ ಮೇಲೆಯೇ ನೇಪಾಳ ನೆಲೆಗೊಂಡಿದೆ. ಅಲ್ಲಿ ಭಾರತೀಯ ಟೆಕ್ಟೋನಿಕ್ ಪ್ಲೇಟ್ ಯುರೇಷಿಯನ್ ಪ್ಲೇಟ್‌ಗೆ ತಳ್ಳಿ ಹಿಮಾಲಯವನ್ನು ರೂಪಿಸುತ್ತದೆ.

- ಭೂಕಂಪ ಪೀಡಿತ ಟಿಬೆಟ್‌ನಲ್ಲೇ ಬ್ರಹ್ಮಪುತ್ರಾಗೆ ಚೀನಾ ಅಣೆಕಟ್ಟೆ
- ಚೀನಾ ಕ್ರಮದಿಂದ ಭಾರತ-ಬಾಂಗ್ಲಾಕ್ಕೆ ಅಪಾಯ ಕಟ್ಟಿಟ್ಟಬುತ್ತಿ

ಚೀನಾ ಅಣೆಕಟ್ಟೆ: ಭಾರತಕ್ಕೆ ಚಿಂತೆ

ಭೂಕಂಪ ಪೀಡಿತ ಟಿಬೆಟ್ ಭಾಗದಲ್ಲಿಯೇ ಬ್ರಹ್ಮಪುತ್ರಾ ನದಿಗೆ ಅಡ್ಡಲಾಗಿ ವಿಶ್ವದಲ್ಲೇ ಅತ್ಯಂತ ದೊಡ್ಡ ಗಾತ್ರದ ಅಣೆಕಟ್ಟೆ ಮತ್ತು ಜಲವಿದ್ಯುದಾಗಾರವನ್ನು ನಿರ್ಮಿಸಲು ಚೀನಾ ಮುಂದಾಗಿದೆ. ಈಗಾಗಲೇ ಅಧ್ಯಕ್ಷ ಕ್ಸಿ ಜಿಂಗ್ ಸರಕಾರ, ಅಣೆಕಟ್ಟೆ ಕಾಮಗಾರಿ ಆರಂಭಕ್ಕೂ ಹಸಿರು ನಿಶಾನೆ ತೋರಿದೆ. ಚೀನಾ ಟಿಬೆಟ್ ಭಾಗದಲ್ಲಿ ಅಣೆಕಟ್ಟೆ ನಿರ್ಮಿಸುವುದರಿಂದ ಭಾರತ ಮತ್ತು ಬಾಂಗ್ಲಾದೇಶ ಎರಡಕ್ಕೂ ಅಪಾಯ ಕಟ್ಟಿಟ್ಟದ್ದೇ ಎನ್ನಲಾಗಿದೆ. ಅದೇ ಭಾಗದಲ್ಲಿ ಮಂಗಳವಾರ ಭೂಕಂಪವಾಗಿರುವುದು ಭಾರತದ ಚಿಂತೆ ಇನ್ನಷ್ಟು ಹೆಚ್ಚುವಂತೆ ಮಾಡಿದೆ.

ಅವಶೇಷಗಳಡಿ ನೂರಾರು ಜನ!

ಭೂಕಂಪದ ತೀವ್ರತೆಗೆ ನೂರಾರು ಕಟ್ಟಡಗಳು ನೆಲಕ್ಕುರುಳಿದ್ದರಿಂದ ಹೆಚ್ಚಿನ ಸಂಖ್ಯೆಯ ಜನರು ಗಾಯಗೊಂಡಿದ್ದಾರೆ. ಕಂಪನದ ನಂತರ ಅವಶೇಷಗಳಡಿ ನೂರಾರು ಜನರು ಸಿಲುಕಿಕೊಂಡಿದ್ದು, ಅವರನ್ನು ರಕ್ಷಿಸುವ ಕಾರ್ಯ ನಡೆಯುತ್ತಿದೆ ಎಂದು ಚೀನಾದ 'ಕ್ಸಿನ್‌ಹುವಾ' ಸುದ್ದಿಸಂಸ್ಥೆ ವರದಿ ಮಾಡಿದೆ. ಟಿಬೆಟ್‌ನಲ್ಲಿ ಭೂಕಂಪ ಸಂಭವಿಸಿದ ಪ್ರದೇಶಕ್ಕೆ ಚೀನಾದ ಸ್ಟೇಟ್ ಕೌನ್ಸಿಲ್, ರಾಷ್ಟ್ರೀಯ ಕಾರ್ಯಪಡೆಯನ್ನು ಕಳುಹಿಸಿಕೊಟ್ಟಿದೆ ಮತ್ತು ಲೆವೆಲ್-3 ತುರ್ತುಪರಿಸ್ಥಿತಿಯನ್ನೂ ಘೋಷಿಸಲಾಗಿದೆ ಎಂದು ಚೀನಾದ ಸಿಸಿಟಿವಿ ಸುದ್ದಿ ವೆಬ್‌ಸೈಟ್ ವರದಿ ಮಾಡಿದೆ.

ಒಟ್ಟು ಮತದಾರರು 1.55 ಕೋಟಿ

ದೆಹಲಿ ವಿಧಾನಸಭೆ ಫೆ.5ಕ್ಕೆ ಚುನಾವಣೆ, 8ಕ್ಕೆ ಫಲಿತಾಂಶ

ದೆಹಲಿ: ದೇಶದ ರಾಜಕೀಯ ಪಕ್ಷಗಳಲ್ಲಿ, ರಾಜಕೀಯ ಆಸಕ್ತರಲ್ಲಿ ಭಾರೀ ಕಾತುರಕ್ಕೆ ಕಾರಣವಾಗಿರುವ ದೆಹಲಿಯ ವಿಧಾನಸಭೆಗೆ ಚುನಾವಣೆ ಮಂಗಳವಾರ ಘೋಷಣೆಯಾಗಿದೆ. ದೆಹಲಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆ.5ರಂದು ಮತದಾನ ನಡೆದು, ಫೆ.8ರಂದು ಫಲಿತಾಂಶ ಪ್ರಕಟವಾಗಲಿದೆ ಎಂದು ಹೇಳಿದರು.

70 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 13 ಸಾವಿರ ಮತಗಟ್ಟೆಗಳಿರಲಿವೆ. ಶೇ.100 ವೆಬ್‌ಕ್ಯಾಸ್ಟಿಂಗ್‌ಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ದೇಶದ ರಾಜಧಾನಿಯಲ್ಲಿನ ಮತದಾರರು ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಮತದಾನದಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು. ಕಳೆದ ಸೋಮವಾರ ಚುನಾವಣಾ ಆಯೋಗ ಕೇಂದ್ರಾಡಳಿತ ಪ್ರದೇಶ ದೆಹಲಿಯ ಮತದಾರರ ಒಟ್ಟು ಸಂಖ್ಯೆ ಬಹಿರಂಗಪಡಿಸಿತ್ತು. ಮಂಗಳವಾರದ ಸುದ್ದಿಗೋಷ್ಠಿಯಲ್ಲಿ ದೆಹಲಿಯಲ್ಲಿನ ಮತದಾರರ ಅಂತಿಮ ಪಟ್ಟಿಯನ್ನು ಚುನಾವಣಾ ಆಯೋಗ ಬಿಡುಗಡೆ ಮಾಡಿತು. ದೆಹಲಿಯ 70 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 1,55,24,858 ನೋಂದಾಯಿತ (1.55 ಕೋಟಿ) ಮತದಾರರಿದ್ದಾರೆ. ಪುರುಷ ಮತದಾರರ ಸಂಖ್ಯೆ 84,49,645 ಹಾಗೂ ಮಹಿಳಾ ಮತದಾರರ ಸಂಖ್ಯೆ 71,73,952ರಷ್ಟಿದೆ. ಈ ಬಾರಿ ದೆಹಲಿಯಲ್ಲಿ ಯುವ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. 25.89 ಲಕ್ಷ ಯುವಜನರು ಮತದಾರರಾಗಿದ್ದಾರೆ. ಅದಲ್ಲದೇ ಇದೇ ಮೊದಲ ಬಾರಿಗೆ ಮತ ಚಲಾಯಿಸಲು ಅರ್ಹರಾದ ನವಮತದಾರರ ಸಂಖ್ಯೆಯೂ 2.08 ಲಕ್ಷದಷ್ಟಿದೆ.

ನೀತಿ ಸಂಹಿತೆ ಜಾರಿ: ದೆಹಲಿ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವುದರಿಂದ ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದು, ಸರಕಾರಗಳು ಚುನಾವಣಾ ವ್ಯಾಪ್ತಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಯಾವುದೇ ಹೊಸ ಯೋಜನೆ ಘೋಷಿಸುವಂತಿಲ್ಲ. ನೀತಿ ಸಂಹಿತೆ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು. ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಸುದ್ದಿಗೋಷ್ಠಿಯಲ್ಲಿದ್ದರು.

- ಪುರುಷ ಮತದಾರರು 84.49 ಲಕ್ಷ
- ಮಹಿಳಾ ಮತದಾರರು 71.74 ಲಕ್ಷ
- ಯುವ ಮತದಾರರು 25.89 ಲಕ್ಷ
- ಪ್ರಥಮ ಬಾರಿ ಮತದಾರ 2.08 ಲಕ್ಷ

ಉಪ ಚುನಾವಣೆ

ಉತ್ತರ ಪ್ರದೇಶ ಮತ್ತು ತಮಿಳುನಾಡಿನ ವಿಧಾನಸಭಾ ಕ್ಷೇತ್ರಗಳಿಗೂ ಫೆ.5ರಂದೇ ಉಪ ಚುನಾವಣೆ ನಡೆಸಲಾಗುವುದು ಎಂದೂ ಮುಖ್ಯ ಚುನಾವಣಾ ಆಯುಕ್ತರು ಪ್ರಕಟಿಸಿದರು.

ಮತದಾರರ ಪಟ್ಟಿ ವದಂತಿ

ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ವದಂತಿಗಳನ್ನು ಹಬ್ಬಿಸಲಾಗುತ್ತಿದೆ. ಮತದಾರರ ಪಟ್ಟಿಯಿಂದ ಕೆಲ ಸಮುದಾಯದವರ ಹೆಸರುಗಳನ್ನು ತೆಗೆದು ಹಾಕಲಾಗಿದೆ ಎಂದೂ ಆರೋಪಿಸಲಾಗಿದೆ. ಅವೆಲ್ಲವೂ ಉತ್ಪ್ರೇಕ್ಷಿತ ಮಾತುಗಳಾಗಿವೆ. ಆಧಾರವಿಲ್ಲದೆ, ದುರುದ್ದೇಶದಿಂದ ವೃಥಾ ಆರೋಪಗಳನ್ನು ಮಾಡಲಾಗುತ್ತಿದೆ. ವಿದ್ಯುನ್ಮಾನ ಮತಯಂತ್ರ(ಇವಿಎಂ) ಬಗೆಗೂ ಈ ಹಿಂದೆಯೂ ವದಂತಿಗಳನ್ನು ಹಬ್ಬಿಸಲಾಗಿತ್ತು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಕಾಲ್ತುಳಿತ: ಗಾಯಾಳು ಬಾಲಕ-ಅಲ್ಲು ಭೇಟಿ

ಹೈದರಾಬಾದ್: ಸಂಧ್ಯಾ ಚಿತ್ರಮಂದಿರ ಕಾಲ್ತುಳಿತದಲ್ಲಿ ಗಂಭೀರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿರುವ 9 ವರ್ಷದ ಬಾಲಕ ಶ್ರೀತೇಜ್‌ನನ್ನು ದುರಂತದ 30 ದಿನಗಳ ನಂತರ ನಟ ಅಲ್ಲು ಅರ್ಜುನ್ ಭೇಟಿ ಮಾಡಿದ್ದಾರೆ. ಸಿಕಂದರಾಬಾದ್‌ನ 'ಕಿಮ್ಸ್' ಆಸ್ಪತ್ರೆ ಯಲ್ಲಿ ಶ್ರೀತೇಜ್‌ನನ್ನು ಮಂಗಳವಾರ ಬೆಳಗ್ಗೆ ಭೇಟಿ ಮಾಡಿದ ಅಲ್ಲು ಜತೆ ಟಿಜಿಎಫ್‌ಡಿಸಿ ಅಧ್ಯಕ್ಷ ದಿಲ್ ರಾಜು ಮತ್ತಿತರರಿದ್ದರು. ಅಲ್ಲು ಆಸ್ಪತ್ರೆ ಭೇಟಿ ವೇಳೆ ರಾಮಗೋಪಾಲಪೇಟೆ ಪೊಲೀಸರು ಬೆಂಗಾವಲಾಗಿದ್ದರು. ಸಾರ್ವಜನಿಕ ಶಾಂತಿ, ಕಾನೂನು- ಸುವ್ಯವಸ್ಥೆ ಕಾಪಾಡಲು ಆಸ್ಪತ್ರೆ ಭೇಟಿ ರಹಸ್ಯವಾಗಿಡುವಂತೆ ಪೊಲೀಸರು ಸೂಚಿಸಿದ್ದರು. ಡಿ.5ರಂದೇ ಶ್ರೀತೇಜ್ ಭೇಟಿಗೆ ಅಲ್ಲು ಮುಂದಾಗಿದ್ದರು. ಆದರೆ ಪೊಲೀಸರು ನೋಟಿಸ್ ನೀಡಿದ್ದರಿಂದ ಭೇಟಿ ರದ್ದುಗೊಳಿಸಿದರು. ಡಿ.4ರಂದು ಸಂಧ್ಯಾ ಚಿತ್ರಮಂದಿರದಲ್ಲಿ ಪುಷ್ಪ-2 ಪ್ರದರ್ಶನ ವೇಳೆ ನಟ ಅಲ್ಲು ಅರ್ಜುನ್ ಭೇಟಿ ನೀಡಿದ್ದರಿಂದ ಅಭಿಮಾನಿಗಳು ಮುಗಿಬಿದ್ದಿದ್ದರಿಂದ ಕಾಲ್ತುಳಿತವಾಗಿ 39 ವರ್ಷದ ರೇವತಿ ಬಲಿಯಾಗಿದ್ದರು. ಅವರ ಮಗ ಶ್ರೀತೇಜ್ ತೀವ್ರವಾಗಿ ಗಾಯಗೊಂಡು 34 ದಿನಗಳಿಂದ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟ ನಡೆಸಿದ್ದಾನೆ.

ಅಪಾಯದಲ್ಲಿ 9 ಕಾರ್ಮಿಕರು | ವಿಶಾಖಪಟ್ಟಣಂ ಮುಳುಗು ತಜ್ಞರು

ಅಸ್ಸಾಂ ಕಲ್ಲಿದ್ದಲು ಗಣಿ ದುರಂತಕ್ಕೆ 3 ಬಲಿ

ಗುವಾಹತಿ: ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯ ಕಲ್ಲಿದ್ದಲು ಗಣಿಯಲ್ಲಿ 12 ಕಾಮಿಕರು ಅಪಾಯದಲ್ಲಿ ಸಿಲುಕಿಕೊಂಡಿದ್ದು, ರಕ್ಷಣಾ ಕಾರ್ಯಾಚರಣೆ ಭರದಿಂದ ನಡೆದಿದೆ. ಕಲ್ಲಿದ್ದಲು ಗಣಿ ದುರಂತದಲ್ಲಿ ಈವರೆಗೆ ಮೂವರು ಕಾರ್ಮಿಕರು ಸಾವಿಗೀಡಾಗಿದ್ದು. ಮೂವರ ಮೃತದೇಹಗಳನ್ನು ಗಣಿಯೊಳಗೆ ಪತ್ತೆ ಮಾಡಲಾಗಿದೆ. ಇನ್ನೂ 9 ಕಾರ್ಮಿಕರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ.



ಸೋಮವಾರ ರಾತ್ರಿ ಗಣಿ ದುರಂತ ನಡೆದಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಯ(ಎನ್‌ಡಿಆರ್‌ಎಫ್) 30 ಸದಸ್ಯರ ತಂಡ ರಕ್ಷಣಾ ಕಾರ್ಯಾಚರಣೆ ನಡೆಸಿದೆ. 8 ಸಿಬ್ಬಂದಿಗಳ ರಾಜ್ಯ ವಿಪತ್ತು ನಿರ್ವಹಣಾ ಪಡೆಯ(ಎಸ್‌ಡಿಆರ್‌ಎಫ್) ಮತ್ತೊಂದು ತಂಡವೂ ರಕ್ಷಣಾ ಕಾರ್ಯಾಚರಣೆಗೆ ಕೈಜೋಡಿಸಿದೆ. ಭಾರತೀಯ ಸೇನಾಪಡೆಯ ನೆರವನ್ನೂ ಪಡೆಯಲಾಗಿದೆ. ರಕ್ಷಣಾ ಕಾರ್ಯಾಚರಣೆಗಾಗಿ ನೌಕಾಪಡೆಯ ಆಳ ನೀರಿನ ಡೈವರ್‌ಗಳ ನೆರವು ಕೋರಲಾಗಿದೆ. ಗಣಿ ಒಳಗೆ ನೀರು ಸಂಗ್ರಹವಾಗಿದ್ದು, ನೀರಿನ ಮಟ್ಟ 100 ಅಡಿಗಳವರೆಗೂ ಏರಿದೆ. ಹಾಗಾಗಿ ವಿಶಾಖಪಟ್ಟಣಂನಲ್ಲಿರುವ ನೌಕಾಪಡೆಯ ಮುಳುಗು ತಜ್ಞರಿಗೆ ಕರೆ ಕಳುಹಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ಕಳೆದ ವರ್ಷ: ಕಲ್ಲಿದ್ದಲು ಗಣಿ ದುರಂತ ಈಶಾನ್ಯ ಭಾರತದಲ್ಲಿ ಮರುಕಳಿಸುತ್ತಲೇ ಇರುತ್ತವೆ. 2024ರ ಜನವರಿಯಲ್ಲಿ ನಾಗಾಲ್ಯಾಂಡ್‌ನ ವೋಖಾ ಜಿಲ್ಲೆಯ ಕಲ್ಲಿದ್ದಲು ಗಣಿಗೆ ಬೆಂಕಿ ಬಿದ್ದಿದ್ದರಿಂದ ಆರು ಕಾರ್ಮಿಕರು ಸಾವನ್ನಪ್ಪಿ, ನಾಲ್ವರು ಗಾಯಗೊಂಡಿದ್ದರು. ಮೇ ತಿಂಗಳಲ್ಲಿ ಅಸ್ಸಾಂನ ತೀನ್‌ಸುಕಿಯಾ ಜಿಲ್ಲೆಯಲ್ಲಿ ಗಣಿ ಕುಸಿದು 3 ಕಾರ್ಮಿಕರು ಸಾವನ್ನಪ್ಪಿದ್ದರು.

ಅಪಾಯದಲ್ಲಿ ಸಿಲುಕಿರುವವರು

ಗಣಿಯಲ್ಲಿ ಸಿಲುಕಿಕೊಂಡಿರುವ ಗಣಿ ಕಾರ್ಮಿಕರ ಹೆಸರನ್ನು ಮುಖ್ಯಮಂತ್ರಿ ಕಚೇರಿ ಮಂಗಳವಾರ ಬಿಡುಗಡೆ ಮಾಡಿದೆ. ಅಸ್ಸಾಂ ರಾಜ್ಯದ ಜಾಕಿರ್ ಹುಸೇನ್(38), ಸಪಾರ್ ಬರ್ಮನ್(46), ಮುಸ್ತಫಾ ಶೇಖ್(44), ಖುಷಿ ಮೋಹನ್ ರೈ(57), ಲಿಜನ್ ಮಗರ್(26) ಮತ್ತು ಶರತ್ ಗೊಯಾರಿ(37) ಹಾಗೂ ನೇಪಾಳದ ಗಂಗಾ ಬಹದ್ದೂರ್ ಶ್ರೇತ್(38), ಪಶ್ಚಿಮ ಬಂಗಾಳದ ಸಂಜಿತ್ ಸರಕಾರ್ (35) ಮತ್ತು ಹುಸೇನ್ ಅಲಿ(30) ಗಣಿಯಲ್ಲಿ ಸಿಲುಕಿದ ಕಾರ್ಮಿಕರು.

300 ಕೋಟಿ ಡಾಲರ್ ಹೂಡಿಕೆ

ದೆಹಲಿ: ಭಾರತಕ್ಕೆ ಆಗಮಿಸಿರುವ ಮೈಕ್ರೊಸಾಫ್ಟ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ) ಸತ್ಯ ನಾದೆಲ್ಲಾ ಅವರು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಧನ್ಯವಾದ ಹೇಳಿದರು.

ಭಾರತದಲ್ಲಿನ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ, ಕೃತಕ ಬುದ್ಧಿಮತ್ತೆ, ಹೂಡಿಕೆ ಮೊದಲಾದ ವಿಚಾರಗಳನ್ನು ಚರ್ಚಿಸಿದರು. ಈ ಭೇಟಿಯಿಂದ ಸತ್ಯ ನಾದೆಲ್ಲಾ ಬಹಳ ಹರ್ಷಗೊಂಡಿದ್ದಾರೆ ಎಂದು ವರದಿಯಾಗಿದೆ. ಆ ಬಳಿಕ ಮೈಕ್ರೊಸಾಫ್ಟ್ ಕಂಪನಿ, ಭಾರತದಲ್ಲಿ 300 ಕೋಟಿ ಅಮೆರಿಕನ್ ಡಾಲರ್ (25,725 ಕೋಟಿ ರು.) ಬಂಡವಾಳ ತೊಡಗಿಸಿ ಕೃತಕ ಬುದ್ಧಿಮತ್ತೆ(ಎಐ) ಉದ್ಯಮ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ (ಮೈಕ್ರೊಸಾಫ್ಟ್‌ನ ಆಝುರ್) ಸಾಮರ್ಥ್ಯ ವಿಸ್ತರಿಸಿಕೊಳ್ಳಲಾಗುವುದು ಎಂದು ಘೋಷಿಸಿದೆ.ಮಂಗಳವಾರ ದೆಹಲಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸತ್ಯ ನಾದೆಲ್ಲಾ, ಭಾರತದಲ್ಲಿ ಕಂಪನಿಯ ಸಾಮರ್ಥ್ಯ ವಿಸ್ತರಣೆಗಾಗಿ ಒಂದೇ ಬಾರಿ 300 ಕೋಟಿ ಡಾಲರ್ ಹೂಡಿಕೆ ಮಾಡುವುದನ್ನು ಘೋಷಿಸಲು ಬಹಳ ಸಂತಸವೆನಿಸುತ್ತಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಮರುದಿನವೇ ಸತ್ಯ ನಾದೆಲ್ಲಾ ಈ ಮಾತು ಹೇಳಿರುವುದು ಗಮನಾರ್ಹ.



ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

1 ಕೋಟಿ ಎಐ ತಂತ್ರಜ್ಞರ ತಯಾರಿ!

2030ರ ವೇಳೆಗೆ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ವಿಸ್ತೃತ ತರಬೇತಿ ನೀಡಿ ಭಾರತದಲ್ಲಿನ 1 ಕೋಟಿ ಯುವಜನರನ್ನು ಸಮರ್ಥ ಎಐ ತಂತ್ರಜ್ಞರಾಗಿ ರೂಪಿಸುವ ಮಹತ್ವದ ಯೋಜನೆಯನ್ನೂ ಮೈಕ್ರೊಸಾಫ್ಟ್ ಹೊಂದಿದೆ. ಈ ಮಹತ್ವದ ಕಾರ್ಯಕ್ರಮದ ಮೂಲಕ ಭಾರತವನ್ನು 'ಎಐ' ಕ್ಷೇತ್ರದಲ್ಲಿ ನಂ.1 ಸ್ಥಾನಕ್ಕೇರಿಸಬೇಕೆಂಬುದು ನಮ್ಮ ಕನಸಾಗಿದೆ. ಈ ಅವಕಾಶವನ್ನು ಭಾರತದ ಪ್ರತಿಭಾವಂತ ಯುವಜನರು ಸದುಪಯೋಗ ಮಾಡಿಕೊಳ್ಳುವರೆಂಬ ವಿಶ್ವಾಸವಿದೆ ಎಂದು ಮೈಕ್ರೊಸಾಫ್ಟ್ 'ಸಿಇಒ' ಸತ್ಯ ನಾದೆಲ್ಲಾ ಹೇಳಿದ್ದಾರೆ.

ಕರ್ನಾಟಕ ಸರ್ಕಾರ (ರೇಷ್ಮೆ ಇಲಾಖೆ)
ರೇಷ್ಮೆ ಉಪ ನಿರ್ದೇಶಕರ ಕಛೇರಿ,
ಜಿಲ್ಲಾ ಪಂಚಾಯತ್,ವಿಜಯನಗರ ರೇಷ್ಮೆ ಇಲಾಖೆ, ರಾಜೀವ ನಗರ, ಹೊಸಪೇಟೆ -583201
Email: ddsvijayanagara2024@gmail.com Mob: 9480409030

ಟೆಂಡರ್ ಪ್ರಕಟಣೆ (ಇ- ಪ್ರಕ್ಯೂರ್‌ಮೆಂಟ್ ಮೂಲಕ)

ವಿಜಯನಗರ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ವಿತರಿಸಲು ರೇಷ್ಮೆ ಬೆಳೆಗೆ ಸೋಂಕುನಿವಾರಕಗಳನ್ನು - ಗ್ರೇಡ್ -1 ಬ್ಲಿಚಿಂಗ್ ಪೌಡರ್ (Grade-1 Bleaching Powder), ಸೋಂಕು ನಿವಾರಕಗಳು (Disinfectants) ಮತ್ತು ಊಜಿ ಟ್ರಾಪ್ (Uzi Trap) ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಸಲ್ಲಿಸಲು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.

1)ಟೆಂಡರ ವಿವರ: ರೇಷ್ಮೆ ಬೆಳೆಗೆ ಬಳಸುವ ಗ್ರೇಡ್ -1 ಬ್ಲಿಚಿಂಗ್ ಪೌಡರ್ (Grade-1 Bleaching Powder),ಸೋಂಕು ನಿವಾರಕಗಳು (Disinfectants), ಊಜಿ ಟ್ರಾಪ್ (Uzi Trap) ಸರಬರಾಜು ಮಾಡಲು ಟೆಂಡರ್ ಪ್ರಕಟಣೆ 2)ಟೆಂಡರ್ ಸಂಖ್ಯೆ NO.DDS/V.NAG/EPRO/DISINFECT/40/2024 (SD/2024-25/IND0078) Date :04-01-2025 3) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:- 04-01-2025. 4)ಪ್ರೀ-ಬಿಡ್ ಸಭೆ ದಿನಾಂಕ:- 10-01-2025 ಬೆಳಿಗ್ಗೆ 11.30 (ಅವಶ್ಯಕತೆ ಇದ್ದಲ್ಲಿ) 5)ಕಛೇರಿ ವಿಳಾಸ:- ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯನಗರ, ರೇಷ್ಮೆ ಇಲಾಖೆ, ರಾಜೀವ್ ನಗರ, ಹೊಸಪೇಟೆ-583201 6)ಟೆಂಡರ್ ಡೌನ್‌ಲೌಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ & ಸಮಯ 18-01-2025 ಸಂಜೆ 05.00 ಗಂಟೆ 7)ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ: ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವಂತೆ 8)ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ:- 20-01-2025 ಬೆ:- 11.00 9)ಆರ್ಥಿಕ ಬಿಡ್ ತೆರೆಯುವ ದಿನಾಂಕ:- 22-01-2025 ಬೆ: 11.30 (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ). ಆಸಕ್ತ ಸರಬರಾಜುದಾರರು " ಇ-ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು

ಸಹಿ/- ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ವಿಜಯನಗರ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/453

ಕರ್ನಾಟಕ ಸರ್ಕಾರ
ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ - ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಕೊಠಡಿ ಸಂಖ್ಯೆ: 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.
ದೂರವಾಣಿ ಸಂಖ್ಯೆ: 080 29787452, ಇ-ಮೇಲ್: dhobangalorerural@gmail.com
ಸಂಖ್ಯೆ: DSO/NP-NCD/20/2024-25 ದಿನಾಂಕ: 06.01.2025

Expression of Interest

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸರ್ವೇಕ್ಷಣಾ ಘಟಕದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಸಾರ್ವಜನಿಕ ಆಸ್ಪತ್ರೆ ದೊಡ್ಡಬಳ್ಳಾಪುರ ಇಲ್ಲಿ Oncology (ಕ್ಯಾನ್ಸರ್ ಪೀಡಿತ) ರೋಗಿಗಳಿಗೆ SAST Empanelment ಮೂಲಕ ಚಿಕಿತ್ಸೆ ಒದಗಿಸಲು ಜಿಲ್ಲೆಯಲ್ಲಿ ಹಬ್ & ಸ್ಪೋಕ್ ಮಾದರಿಯಲ್ಲಿ Oncology (ಕ್ಯಾನ್ಸರ್ ಪೀಡಿತ) ರೋಗಿಗಳಿಗೆ Day Care Chemotherapy Center ಚಿಕಿತ್ಸಾ ಕೇಂದ್ರ ಸ್ಥಾಪಿಸಲು SAST Empanelment ಮೂಲಕ ಚಿಕಿತ್ಸೆ ಮೂಲಕ ಒದಗಿಸಲು SAST ನೊಂದಾಯಿತ ಖಾಸಗಿ ಆಸ್ಪತ್ರೆಯವರೊಂದಿಗೆ MOU ಮಾಡಿಕೊಂಡು ಸೇವೆ ನೀಡುವಂತೆ Expression of Interest ಇ-ಟೆಂಡರ್ ಮುಖಾಂತರ ಕರೆಯಲಾಗಿದೆ.

ಟೆಂಡರ್ ವೇಳಾಪಟ್ಟಿ: ಟೆಂಡರ್ ಇಂಡೆಂಟ್: DHFWS/2024-25/Prequal_Tender_Number_18. 1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಕೊನೆಯ ದಿ:18/01/2025 ರಂದು ಸಂಜೆ 5.30 ಗಂಟೆಯವರೆಗೆ. 2) ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗೆ ಸಂಬಂಧಪಟ್ಟ ಸಂಶಯಗಳನ್ನು ಪರಿಹರಿಸಿಕೊಳ್ಳಲು ಕೊನೆಯ ದಿ:10/01/2025. 3) ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿ:20/01/2025 ರಂದು ಬೆಳಗ್ಗೆ 11.00 ಗಂಟೆ.

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನದಂದು ಸದರಿ ಸಂಸ್ಥೆಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಅಥವಾ kppp.karnataka.gov.in ಪಡೆಯಬಹುದು.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ವಾಪ್ರ/4185/ಎಸ್‌ಎಸ್‌ಸಿ/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿ ಟಿ ಯು ಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ ರಾಜ್ಯ
ಫೋನ್:(0831)2405468 ಫ್ಯಾಕ್ಸ್ : (0831)2405467
ಉಲ್ಲೇಖ : ವಿತಾವಿ/ಆ.ಸ./2024-25/ 126 ದಿನಾಂಕ : 02-01-2025

ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪತ್ನಾಲ್ಕನೇಯ ವಾರ್ಷಿಕ ಘಟಿಕೋತ್ಸವ (ಭಾಗ-II) ಸಮಾರಂಭ - ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ
******

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ನಾಲ್ಕನೇಯ ಘಟಿಕೋತ್ಸವ (ಭಾಗ-II) ಸಮಾರಂಭವು, ಶನಿವಾರ, ದಿನಾಂಕ 08 ಫೆಬ್ರವರಿ, 2025ರಂದು, ಪೂರ್ವಾಹ್ನ 11-00 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2023-24ನೇ ಸಾಲಿನ ಸ್ನಾತಕೋತ್ತರ (PG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಕಛೇರಿಯ ಮುಂದಿನ ಕೆಲಸದ ದಿನ, ಅಂದರೆ ಸೋಮವಾರ ದಿ:10-02-2025ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು

ಸಮಾಚಾರ ಸಣ್ಣದಲ್ಲ

ಗುಪ್ತ ಕ್ಯಾಮೆರಾದಲ್ಲಿ ಮಂದಿರ ಚಿತ್ರೀಕರಣ

ವಡೋದರಾ: ಗುಜರಾತ್‌ನ ವಡೋದರಾ ನಗರದ ಯುವಕ ಜಯಕುಮಾರ್, ಕನ್ನಡಕದಲ್ಲಿದ್ದ ರಹಸ್ಯ ಕ್ಯಾಮೆರಾ ಮೂಲಕ ಅಯೋಧ್ಯೆಯ ಶ್ರೀರಾಮ ಮಂದಿರವನ್ನು ಚಿತ್ರೀಕರಿಸಲು ಯತ್ನಿಸಿದ್ದು, ಸಾಕ್ಷಿ ಸಮೇತವೇ ಯುವಕನ್ನು ಬಂಧಿಸಲಾಗಿದೆ. ಆ ಬಳಿಕ ಒಳಪ್ರವೇಶಿಸುವ ಭಕ್ತರ ತಪಾಸಣೆ, ರಾಮ ಮಂದಿರದ ಸುತ್ತಲ ಭದ್ರತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ರಾಮಮಂದಿರದಲ್ಲಿ ಖಾಸಗಿತನ ಮತ್ತು ಸುರಕ್ಷತೆ ಖಚಿತಪಡಿಸಲು ಮೊಬೈಲ್ ಫೋನ್‌ಗಳು ಮತ್ತು ಕ್ಯಾಮೆರಾಗಳ ಮೇಲೆ ಕಟ್ಟುನಿಟ್ಟು ನಿಷೇಧ ಜಾರಿಗೊಳಿಸಲಾಗಿದೆ. ಕಾನೂನು ಜಾರಿ ಮತ್ತು ಗುಪ್ತಚರ ಅಧಿಕಾರಿಗಳು ಯುವಕನ ವಿಚಾರಣೆ ನಡೆಸಿದ್ದಾರೆ. ಜಯ ಕುಮಾರ್‌ನ ಉದ್ದೇಶ ಮತ್ತು ಕ್ಯಾಮೆರಾ ತಂದ ಹಿಂದಿನ ಕಾರಣ ತಿಳಿಯಲು ಯತ್ನಿಸಲಾಗುತ್ತಿದೆ.

ತಿಮ್ಮಪ್ಪನ ದರ್ಶನಕ್ಕೆ ಹೊಸ ಮಾರ್ಗಸೂಚಿ

ತಿರುಮಲ: ತಿರುಪತಿ ತಿಮ್ಮಪ್ಪನ ಭಕ್ತರಿಗೆ ದೇವರ ದರ್ಶನವನ್ನು ಇನ್ನಷ್ಟು ಸುಲಭಗೊಳಿಸಲೆಂದೇ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಹೊಸ ಮಾರ್ಗಸೂಚಿ ಪ್ರಕಟಿಸಿದೆ. ಮುಂದಿನ ಹತ್ತು ದಿನಗಳ ಅವಧಿಗೆ ಅಂದರೆ ಜ.10ರಿಂದ 19ರವರೆಗೆ ವೈಕುಂಠ ದ್ವಾರ ತೆರೆದಿರಲಿದ್ದು, ಭಕ್ತಾದಿಗಳು ತಿಮ್ಮಪ್ಪನ ದರ್ಶನ ಪಡೆಯಬಹುದಾಗಿದೆ. ಈ ಅವಧಿಯಲ್ಲಿ 7 ಲಕ್ಷಕ್ಕೂ ಹೆಚ್ಚು ಭಕ್ತರು ವೈಕುಂಠ ದ್ವಾರದ ಮೂಲಕ ತಿಮ್ಮಪ್ಪನ ದರ್ಶನ ಪಡೆಯ ಬಹುದು ಎಂದು ಟಿಟಿಡಿ ಅಂದಾಜು ಮಾಡಿದೆ. ತಿರುಮಲ ದೇವಸ್ಥಾನದಲ್ಲಿ ಭಕ್ತರು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸುವ ಉದ್ದೇಶದಿಂದಲೇ ಟಿಟಿಡಿ ಈ ನಿರ್ಧಾರ ಉಚಿತ ಸ್ಲಾಟೆಡ್ ಸರ್ವ ದರ್ಶನಕ್ಕೆ ಬರುವ ಭಕ್ತರು ಸಾಲಿನಲ್ಲಿ ಹೆಚ್ಚು ಕಾಲ ನಿಲ್ಲುವುದನ್ನು ತಪ್ಪಿಸಲು ಟೈಮ್ ಸ್ಲಾಟ್ ಟೋಕನ್‌ಗಳನ್ನು ತೆಗೆದುಕೊಳ್ಳ ಬಹುದು ಎಂದು ಹೇಳಲಾಗಿದೆ.

ಬಿಹಾರದಲ್ಲಿ ಇಬ್ಬರು ಕ್ರಿಮಿನಲ್ಸ್‌ಗೆ ಗುಂಡು

ಪಟನಾ: ಬಿಹಾರದ ರಾಜಧಾನಿ ಪಟನಾದಿಂದ 15 ಕಿ.ಮೀ. ದೂರದಲ್ಲಿ ರಾಜ್ಯ ಪೊಲೀಸರು ದರೋಡೆ ಕೋರರ ಬಂಧನ ಕಾರ್ಯಾಚರಣೆ ವೇಳೆ ಮೂವರು ಕ್ರಿಮಿನಲ್‌ಗಳಿಗೆ ಗುಂಡಿಕ್ಕಿದ್ದು, ಇಬ್ಬರು ಹತರಾಗಿದ್ದಾರೆ. ಮತ್ತೊಬ್ಬ ಗಾಯಗೊಂಡು ಸೆರೆ ಸಿಕ್ಕಿದ್ದಾನೆ. ಉಳಿದವರು ಪರಾರಿಯಾಗಿದ್ದಾರೆ. ದರೋಡೆಕೋರರ ಗುಂಪಿನ ಜತೆಗಿನ ಗುಂಡಿನ ಚಕಮಕಿಯಲ್ಲಿ ಒಬ್ಬ ಪೊಲೀಸ್‌ಗೂ ಗುಂಡು ತಗುಲಿ ಗಾಯವಾಗಿದೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ದರೋಡೆ ಮಾಡುವ ಉದ್ದೇಶ ದಿಂದ 10 ಮಂದಿಯ ತಂಡ ಹಿಂದೂನಿ ಗ್ರಾಮಕ್ಕೆ ದಾಳಿ ಇಟ್ಟಿತ್ತು. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರೂ ಹಿಂದೂನಿಗೆ ತಲುಪಿ ಬಂಧನ ಕಾರ್ಯಾಚರಣೆ ನಡೆಸಿದರು.

ಯುವಕನ ಕತ್ತು ಸೀಳಿದ ಗಾಳಿಪಟದ ಮಾಂಜಾ

ಮೀರತ್: ಉತ್ತರ ಭಾರತದ ರಾಜ್ಯಗಳಲ್ಲಿ ಗಾಳಿ ಪಟದ ಹಬ್ಬ ಬಂತೆಂದರೆ ಅಪಾಯಕಾರಿ ದಾರ 'ಮಾಂಜಾ' ಹಾವಳಿ ವಿಪ ರೀತ. ಚೀನಾದಿಂದ ತಯಾ ರಾಗಿ ಬಂದಿರುವ 'ಮಾಂಜಾ' ದಾರ ಉತ್ತರ ಪ್ರದೇಶದ ಮೀರತ್‌ನ ಯುವಕನ ಕತ್ತು ಸೀಳಿ ಸಾವಿಗೆ ಕಾರಣವಾಗಿದೆ. ಮೃತನನ್ನು ಸುಹೇಲ್ (22) ಎಂದು ಗುರುತಿಸ ಲಾಗಿದೆ. ಗಾಜಿನ ಚೂರುಗಳನ್ನು ಅರೆದು ಲೇಪಿಸಿದ್ದ ಗಾಳಿಪಟದ ದಾರ 'ಮಾಂಜಾ' ರಸ್ತೆಗಡ್ಡಲಾಗಿ ನೇತಾಡುತ್ತಿದ್ದು, ಸ್ನೇಹಿತ ನವಾಜಿಶ್ ಜತೆ ಬೈಕ್‌ನಲ್ಲಿ ಬರುತ್ತಿದ್ದ ಸುಹೇಲ್‌ನ ಕೊರಳನ್ನು ಕೊಯ್ದುಹಾಕಿದೆ. ನವಾಜಿಶ್ ಕೂಡಾ ಗಾಯಗೊಂಡಿದ್ದಾನೆ. ಸುದ್ದಿ ತಿಳಿಯುತ್ತಲೇ ಧಾವಿಸಿದ ಮೀರತ್ ಪೊಲೀಸರು, ಸುಹೇಲ್ ಮೃತದೇಹ ಮರಣೋತ್ತರ ಪರೀಕ್ಷೆಗೆ ರವಾನಿಸಿ, ಗಾಯಾಳು ನವಾಜಿಶ್‌ನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಸುಹೇಲ್ ಕೊರಳು ಕೊಯ್ದ ಚೀನಾದ ಮಾಂಜಾ ದಾರ, ಮೋಟಾರ್ ಬೈಕ್ ವಶಕ್ಕೆ ಪಡೆದಿದ್ದಾರೆ. ಸುಹೇಲ್ ಕೂಡಾ ಗಾಳಿಪಟ ಮತ್ತು ಮಾಂಜಾ ದಾರ ಖರೀದಿಸಿ ಬೈಕ್‌ನಲ್ಲಿ ವಾಪಸಾ ಗುತ್ತಿದ್ದಾಗಲೇ ಈ ಅವಘಡ ನಡೆದಿದೆ. ಪೊಲೀಸರು ಬೈಕ್ ಪರಿಶೀಲಿಸಿದಾಗ ಯುವಕರಿಬ್ಬರೂ ಗಾಳಿಪಟ -ಮಾಂಜಾ ದಾರ ಖರೀದಿಸಿರುವುದು ತಿಳಿದು ಬಂದಿದೆ. ಗಾಜನ್ನು ಕುಟ್ಟಿ ಪುಡಿಮಾಡಿ ಅದನ್ನು ಗೋಂದಿನ ಜತೆ ನೈಲಾನ್ ದಾರಕ್ಕೆ ಸವರಿ ಅಂಟಿಸಿ ಚೈನೀಸ್ ಮಾಂಜಾ ತಯಾರಿಸಲಾಗುತ್ತದೆ. ಈ ದಾರಗಳು ಮಾರಣಾಂತಿಕವಾಗಿರುತ್ತವೆ. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಮಾಂಜಾ ಬಳಕೆ ನಿಷೇಧಿಸಲಾಗಿದೆ. ಆದರೂ ಅಕ್ರಮ ಮಾರಾಟ ಮುಂದುವರಿದೇ ಇದೆ. 'ಮಾಂಜಾ ದಾರ' ಬಳಕೆ ಕರ್ನಾಟಕಲ್ಲೂ ನಿಷೇಧ ವಾಗಿದೆ. ಮಾಂಜಾ ದಾರಕ್ಕೆ ಯುವಕ ಬಲಿಯಾದ ಬಳಿಕ ಎಚ್ಚೆತ್ತ ಪೊಲೀಸರು ಮೀರತ್‌ನ ಗಾಳಿಪಟದ ಅಂಗಡಿಗಳ ಮೇಲೆ ದಾಳಿ ನಡೆಸಿ ಚೀನಾ ತಯಾರಿಕೆಯ 6 ಮೂಟೆ ಮಾಂಜಾ ದಾರಗಳನ್ನು ಜಪ್ತಿ ಮಾಡಿ, ಒಟ್ಟು ಐವರು ವ್ಯಾಪಾರಿಗಳನ್ನು ವಶಕ್ಕೆ ಪಡೆದಿದ್ದಾರೆ.

{ **ಮಾಯಾವತಿ** } ಬಿಎಸ್‌ಪಿ ಮುಖ್ಯಸ್ಥೆ

ಬಿಎಸ್‌ಪಿ ಬಡವರು ಮತ್ತು ತುಳಿತಕ್ಕೊಳಗಾದವರ ಪಕ್ಷವಾಗಿದ್ದು, ಇದು ಹಣಬಲದಿಂದ ದೂರವಿರುತ್ತದೆ. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಸರಕಾರಿ ಯಂತ್ರಗಳ ದುರುಪಯೋಗ, ಕೋಮುವಾದ ಮತ್ತು ಇತರ ಕೆಟ್ಟ ಪ್ರಚಾರಗಳಿಂದ ಕಳಂಕಿತವಾಗದಂತೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವಂತೆ ಚುನಾವಣಾ ಆಯೋಗವು ನೋಡಿಕೊಳ್ಳಬೇಕು.

ಆನ್‌ಲೈನ್ ಎಫ್‌ಐಆರ್‌ಗೆ ಪೋರ್ಟಲ್ ಆರಂಭಿಸಿದ ಅರಣ್ಯ ಇಲಾಖೆ

ಇನ್ನು ಮುಂದೆ ಎಷ್ಟು ಪ್ರಕರಣ ದಾಖಲಾಗಿವೆ ಎನ್ನುವ ಸ್ಪಷ್ಟ ಮಾಹಿತಿ ಲಭ್ಯ

ಅರಣ್ಯ ಅಪರಾಧ ತಡೆಗೆ ಗರುಡಾಕ್ಷಿ ಅಸ್ತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈಲ್ಡ್ ಲೈಫ್ ಟ್ರಸ್ಟ್ ಆಫ್ ಇಂಡಿಯಾ ಸಹಯೋಗದಲ್ಲಿ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿರುವ ಗರುಡಾಕ್ಷಿ ಆನ್‌ಲೈನ್, ಡಿಜಿಟಲ್ ಎಫ್‌ಐಆರ್ ವ್ಯವಸ್ಥೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಇಂದಿನ ಆಧುನಿಕ ಯುಗಮಾನದ ಅಗತ್ಯಕ್ಕೆ ಅನುಗುಣವಾಗಿ ಅರಣ್ಯ ಇಲಾಖೆ ಬದಲಾಗುತ್ತಿದ್ದು, ಅರಣ್ಯ ಒತ್ತುವರಿ, ಅಕ್ರಮ ಮರ ಕಡಿತಲೆ, ಕಳ್ಳಬೇಟೆ, ಅತಿಕ್ರಮ ಪ್ರವೇಶ ಇತ್ಯಾದಿ ಅರಣ್ಯ ಅಪರಾಧಗಳಿಗೆ ಇನ್ನು ಮುಂದೆ ಗರುಡಾಕ್ಷಿ ಅಸ್ತ್ರ ಪ್ರಯೋಗಿಸಲಾಗುವುದು. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅರಣ್ಯ ಅಪರಾಧ ತಡೆಯಲು, ತಪ್ಪಿತಸ್ಥರಿಗೆ ಶಿಕ್ಷೆ ಆಗುವುದನ್ನು ಖಾತ್ರಿ ಪಡಿಸಲು ಹಾಗೂ ಆ ಮೂಲಕ ಅರಣ್ಯ ಮತ್ತು ವನ್ಯಜೀವಿ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದರು.

ಅರಣ್ಯ ಸಚಿವರಾದ ಬಳಿಕ ಇಲಾಖೆಯಲ್ಲಿ ಹಂತ ಹಂತವಾಗಿ ಸುಧಾರಣೆ ತರುತ್ತಿದ್ದು, ಪೊಲೀಸ್ ಇಲಾಖೆಯಲ್ಲಿ ಇರುವ ರೀತಿಯಲ್ಲೇ ಅರಣ್ಯ ಇಲಾಖೆಯಲ್ಲೂ ಆನ್‌ಲೈನ್ ಎಫ್‌ಐಆರ್ ವ್ಯವಸ್ಥೆ ಜಾರಿಗೆ ತರಲು ತಂತ್ರಾಂಶ ರೂಪಿಸುವಂತೆ 2023ರಲ್ಲಿಯೇ ಸೂಚನೆ ನೀಡಿದ್ದೆ, ಈಗ ಕಾರ್ಯರೂಪಕ್ಕೆ ಬಂದಿದೆ. ಈ ತಂತ್ರಾಂಶ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಕಾನೂನುಗಳ ಅಡಿಯಲ್ಲಿ ಅರಣ್ಯ ಅಪರಾಧ ಪ್ರಕರಣಗಳನ್ನು ನಿರ್ವಹಿಸಲು ಮತ್ತು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಪ್ರಸ್ತುತ ಗರುಡಾಕ್ಷಿ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಬೆಂಗಳೂರು ನಗರ ವಿಭಾಗ, ಬೆಂಗಳೂರು ಅರಣ್ಯ ಸಂಚಾರಿ ದಳ ವಿಭಾಗ, ಭದ್ರಾವತಿ ವಿಭಾಗ, ಶಿರಸಿ ವಿಭಾಗ ಮತ್ತು ಮಲೈ ಮಹದೇಶ್ವರ ವನ್ಯಜೀವಿ ವಿಭಾಗಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತದೆ. ಈ ತಂತ್ರಾಂಶದ ಕಾರ್ಯನಿರ್ವಹಣೆಯ ಬಗ್ಗೆ ಕ್ಷೇತ್ರ ಮಟ್ಟದ ಪ್ರತಿಕ್ರಿಯೆ ಆಧಾರದ ಮೇಲೆ ಇನ್ನೂ ಹೆಚ್ಚು ಕ್ರಿಯಾಶೀಲಗೊಳಿಸಿ ಹಂತ ಹಂತವಾಗಿ ರಾಜ್ಯದ ಎಲ್ಲ ವಿಭಾಗಕ್ಕೂ ವಿಸ್ತರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಶಿಕ್ಷೆ ಖಚಿತ

ಅರಣ್ಯ ಅಪರಾಧ ಕುರಿತಂತೆ ದೂರು ಕೊಟ್ಟವರಿಗೆ ಎಫ್‌ಐಆರ್ ಪ್ರತಿ ಲಭಿಸಲಿದೆ. ಇದರೊಂದಿಗೆ ಚಾರ್ಜ್ ಶೀಟ್ ಹಾಕಲಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಅವಕಾಶ ಆಗುತ್ತದೆ. ಚಾರ್ಜ್‌ಶೀಟ್ ಸಲ್ಲಿಕೆ ಆದ ಕೂಡಲೇ ನ್ಯಾಯಾಲಯದಲ್ಲಿ ಅಪರಾಧ ಸಂಖ್ಯೆ ದಾಖಲಾಗುತ್ತದೆ, ವಿಚಾರಣೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತದೆ ಎಂದರು.

ಚಾಲ್ತಿಯಲ್ಲಿರುವ ಪ್ರಕರಣಗಳು ಮತ್ತು ಹೊಸದಾಗಿ ದಾಖಲಿಸಲ್ಪಡುವ ಪ್ರಕರಣಗಳನ್ನು ನಿರ್ವಹಿಸಲು ಮತ್ತು ಇವುಗಳಿಂದ ಸೃಜನೆಯಾಗುವ ದತ್ತಾಂಶಗಳ ವಿಶ್ಲೇಷಣೆಗಳನ್ನು ಪಡೆಯಲು ಗರುಡಾಕ್ಷಿಯಲ್ಲಿ ನಾಲ್ಕು ಮಾಡ್ಯೂಲ್ ಅಳವಡಿಸಲಾಗಿದೆ. ಇಲಾಖೆಯ ವಿವಿಧ ಘಟಕಗಳಲ್ಲಿ ಈಗಾಗಲೇ ದಾಖಲಿಸಲಾಗಿರುವ ಹಾಗೂ ಹಾಲಿ ಚಾಲ್ತಿಯಲ್ಲಿರುವ ಪ್ರಕರಣಗಳನ್ನು ಗಣಕೀಕರಿಸಲು ಮೊದಲ ಹಂತದಲ್ಲಿ ಕ್ರಮಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಒಳಮೀಸಲು: ನಾಗಮೋಹನ ದಾಸ್ ಜೊತೆ ಬಿಜೆಪಿ ನಿಯೋಗ ಚರ್ಚೆ

ಬೆಂಗಳೂರು: ಬಿಜೆಪಿ ಸಂಸದ ಗೋವಿಂದ ಕಾರಜೋಳ ಮತ್ತು ಮಾಜಿ ಕೇಂದ್ರ ಸಚಿವರಾದ ಅನೇಕಲ್ ನಾರಾಯಣಸ್ವಾಮಿ ನೇತೃತ್ವದಲ್ಲಿ ಒಳಮೀಸಲಾತಿ ಹೋರಾಟಗಾರರ ನಿಯೋಗ ನ್ಯಾ.ನಾಗಮೋಹನದಾಸ್ ಅವರನ್ನು ಅವರ ಏಕ ಸದಸ್ಯ ಆಯೋಗದ ಕಚೇರಿಯಲ್ಲಿ ಭೇಟಿಯಾಗಿ ಚರ್ಚೆ ನಡೆಸಿತು. ಸುಪ್ರೀಂಕೋರ್ಟ್ ತೀರ್ಪಿನ ತರುವಾಯ ಒಳ ಮೀಸಲಾತಿ ಜಾರಿ ತ್ವರಿತವಾಗಿ ಆಗಬೇಕಾದ ಅಗತ್ಯ, ಆದಿ ಕರ್ನಾಟಕ, ಆದಿದ್ರಾವಿಡ ವಿಷಯದಲ್ಲಿನ ದತ್ತಾಂಶಗಳ ನಿಖರತೆ ಬಗ್ಗೆ ಹಲವು ಆಯಾಮದ ಚರ್ಚೆ ನಡೆಸಲಾಯಿತು. ನ್ಯಾ.ನಾಗಮೋಹನ್ ದಾಸ್ ಅವರ ಶಿಫಾರಸಿನ ಅನ್ವಯ ಹಿಂದಿನ ಬಿಜೆಪಿ ಸರಕಾರ ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಹೆಚ್ಚಳ ಮಾಡಿರುವುದು ಮತ್ತು 2011ರ ಜನಗಣತಿಯ ದತ್ತಾಂಶಗಳ ಆಧಾರದಲ್ಲಿ ಮಾಧುಸ್ವಾಮಿ ವರದಿ ಮಾಡಿದ ವರ್ಗೀಕರಣದ ವಿವರಗಳನ್ನು ಸಮಿತಿಯ ಸದಸ್ಯರಾದ ಗೋವಿಂದ ಕಾರಜೋಳ ಅವರು ವಿವರಿಸಿದರು. ಆದಿದ್ರಾವಿಡ, ಆದಿಕರ್ನಾಟಕ ಗೊಂದಲ ಸರಿಪಡಿಸಲು ಮಾಧುಸ್ವಾಮಿ ಸಮಿತಿ ತಾಲೂಕು, ಜಿಲ್ಲೆಗಳ ದತ್ತಾಂಶ ಬಳಸಿರುವ ವಿವರಗಳನ್ನು ಅನೇಕಲ್ ನಾರಾಯಣಸ್ವಾಮಿ ನೀಡಿದರು. ಒಳ ಮೀಸಲಾತಿ ಹೋರಾಟಗಾರರು ಇದ್ದರು. ನ್ಯಾ.ನಾಗಮೋಹನ್ ದಾಸ್, ಸಮರ್ಪಕವಾಗಿ ವರದಿ ಸಿದ್ಧಪಡಿಸಿ ಮಾದಿಗ ಸಮಾಜಕ್ಕೆ ಮತ್ತು ಎಲ್ಲ ನೂರೊಂದು ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಭರವಸೆ ನೀಡಿದರು.

ರೈತ ದಲ್ಲೇವಾಲ್‌ಗೆ ಲೋ ಬಿಪಿ: ವೈದ್ಯರು

ಚಂಡೀಗಢ: ಕನಿಷ್ಠ ಬೆಂಬಲ ಬೆಲೆಗೆ ಕಾಯಿದೆ ರೂಪ ನೀಡಬೇಕು ಎಂಬುದೂ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 42 ದಿನಗಳಿಂದ ಅನಿರ್ದಿಷ್ಟಾವಧಿ ಉಪವಾಸ ನಡೆಸುತ್ತಿರುವ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ್(70) ಆರೋಗ್ಯ ಸ್ಥಿತಿ ಹದಗೆಟ್ಟಿದ್ದು, ರಕ್ತದೊತ್ತಡದಲ್ಲಿ ಕುಸಿತವಾಗಿದೆ. ರಕ್ತದೊತ್ತಡ 80/56ಕ್ಕೆ ಕುಸಿದಿದೆ. ಲೋ ಬಿಪಿ ಸಮಸ್ಯೆ ಉಂಟಾಗಿದೆ ಎಂದು ಪ್ರತಿಭಟನಾ ಸ್ಥಳದಲ್ಲಿದ್ದ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಇದಕ್ಕೂ ಮುನ್ನ ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿ ಸ್ಥಳಕ್ಕೆ ಭೇಟಿ ನೀಡಿ, ವೈದ್ಯಕೀಯ ನೆರವು ತೆಗೆದುಕೊಳ್ಳುವಂತೆ ದಲ್ಲೆವಾಲ್ ಅವರನ್ನು ಒತ್ತಾಯಿಸಿತು.

ನಾನಾ ಬೇಡಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಬೆಂಗಳೂರು: ನಿಗದಿತ ವೇತನ, ಸರಕಾರದಿಂದ ಪ್ರೋತ್ಸಾಹ ಧನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಆಯೋಜಿಸಿದ್ದ ಆಶಾ ಕಾರ್ಯಕರ್ತೆಯರು ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಮಂಗಳವಾರದಿಂದ ಆರಂಭಿಸಿದ್ದು, ರಾಜ್ಯದಲ್ಲಿರುವ ಸುಮಾರು 42 ಸಾವಿರ ಜನ ಆಶಾ ಕಾರ್ಯಕರ್ತೆಯರ ಬೇಡಿಕೆಗಳು ಹಲವು ವರ್ಷಗಳಿಂದ ಈಡೇರಿಲ್ಲ. ಆದ್ದರಿಂದ ಕೆಲಸ ಸ್ಥಗಿತಗೊಳಿಸಿ ಧರಣಿಗೆ ನಿರ್ಧರಿಸಿದ್ದೇವೆ ಎಂದು ಪ್ರತಿಭಟನಾ ನಿರತರು ತಿಳಿಸಿದರು.

ಆದೇಶಕ್ಕೆ ಜಗ್ಗದ ಕಾರ್ಯಕರ್ತರು: ಜ.7 ರಿಂದ ಪ್ರತಿ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಗೈರುಹಾಜರಾದ ಆಶಾ ಕಾರ್ಯಕರ್ತರ ಮಾಹಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪಡೆಯಬೇಕು. ಜಿಲ್ಲಾಡಳಿತ ವತಿಯಿಂದ ಆಶಾ ಕಾರ್ಯಕರ್ತರಿಗೆ ಒದಗಿಸಿರುವ ಸೌಲಭ್ಯಗಳನ್ನು ಆಶಾ ಕಾರ್ಯಕರ್ತೆಯರಿಗೆ ಮನವರಿಕೆ ಮಾಡಿ ಕಾನೂನುಬಾಹಿರ ಹೋರಾಟದಲ್ಲಿ ಭಾಗವಹಿಸದಂತೆ ಮನವೊಲಿಸಬೇಕು ಎಂದು ಇತ್ತೀಚೆಗೆ ಆರೋಗ್ಯ ಇಲಾಖೆ ಆದೇಶಿಸಿದ್ದರೂ, ಕಿವಿಗೊಡದ ಆಶಾ ಕಾರ್ಯಕರ್ತೆಯರು ಪ್ರತಿಭಟನೆಯನ್ನು ಕೈಗೊಂಡರು. ಈ ಸಂದರ್ಭದಲ್ಲಿ ಕೆ. ಉಮಾ, ಎಸ್.ಆರ್.ಹಿರೇಮಠ್, ರಾಜ್ಯ ಸಂಯುಕ್ತ ಆಶಾಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ ಸೇರಿದಂತೆ ಮುಂತಾದವರಿದ್ದರು.

ಮಾಜಿ ಸಿಎಂ ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ | ಯಡಿಯೂರಪ್ಪ ಪರ ಸಿ.ವಿ.ನಾಗೇಶ್ ವಾದ

ವಿಚಾರಣಾಧೀನ ನ್ಯಾಯಾಲಯ ವಿವೇಚನೆ ಬಳಸಿಲ್ಲ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಸಂಜ್ಞೇ ಸ್ವೀಕರಿಸಿರುವ ವಿಚಾರಣಾಧೀನ ನ್ಯಾಯಾಲಯದ ಆದೇಶದಲ್ಲಿ ವಿವೇಚನೆ ಬಳಸಲಾಗಿಲ್ಲ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿತು.



ಪೋಕ್ಸೊ ಪ್ರಕರಣ ಮತ್ತು ಆನಂತರದ ನ್ಯಾಯಾಂಗ ಪ್ರಕ್ರಿಯೆ ರದ್ದುಪಡಿಸುವಂತೆ ಕೋರಿ ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ, ಪ್ರಕರಣದಲ್ಲಿ ಇತರೆ ಆರೋಪಿಗಳಾಗಿರುವ ಅರುಣ ವೈ.ಎಂ.ರುದ್ರೇಶ ಮರಳುಸಿದ್ದಯ್ಯ ಮತ್ತು ಜಿ.ಮರಿಸ್ವಾಮಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ತನಿಖೆ ಪಕ್ಷಪಾತಿಯಾಗಬಾರದು: ಯಡಿಯೂರಪ್ಪ ಪರವಾಗಿ ವಾದ ಮುಂದುವರಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು ಸತ್ಯ ಬಯಲು ಮಾಡಲು ತನಿಖೆ ನಡೆಸಲಾಗುತ್ತದೆ. ತನಿಖೆಯು ಪಕ್ಷಪಾತಿಯಾಗಿರಬಾರದು. ನ್ಯಾಯಯುತ ಮತ್ತು ಕಾನೂನಿನ ಅನ್ವಯ ನಡೆಯಬೇಕು. ಸಂಜ್ಞೇ ಪರಿಗಣಿಸುವ ಸಂದರ್ಭದಲ್ಲಿ ವಿಚಾರಣಾಧೀನ ನ್ಯಾಯಾಲಯವು ತನಿಖಾಧಿಕಾರಿಯ ಅಭಿಪ್ರಾಯ ಒಪ್ಪಲಾಗದು. ಅಂತೆಯೇ ಪೊಲೀಸರು ಬಿ ವರದಿ ಸಲ್ಲಿಸಿದ ಪ್ರಕರಣಕ್ಕೂ ಇದು ಅನ್ವಯವಾಗುತ್ತದೆ. ತನಿಖಾಧಿಕಾರಿ ಸಾಕ್ಷಿ ಸಂಗ್ರಹಿಸಲಿದ್ದು, ಅವರು ಸಾಕ್ಷಿಯನ್ನು ಪ್ರತ್ಯೇಕಿಸಲಾಗದು. ಸಾಕ್ಷಿಯು ಒಪ್ಪಿತವೇ ಇಲ್ಲವೇ ಎಂಬುದನ್ನು ನ್ಯಾಯಾಲಯ ನಿರ್ಧರಿಸಲಿದೆ. ದೂರು ದಾಖಲಿಸುವುದಕ್ಕೂ ಮುನ್ನ ದೂರುದಾರೆ (ಸಂತ್ರಸ್ತೆಯ ತಾಯಿ; ಈಗ ಸಾವನ್ನಪ್ಪಿದ್ದಾರೆ) ಮತ್ತು ಸಂತ್ರಸ್ತೆಯು ಹಲವು ಬಾರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ್ದಾರೆ ಎಂದರು.

ಸಂತ್ರಸ್ತೆಯ ಹೇಳಿಕೆ ಪರಿಗಣನೆ: ಒಂದು ಹಂತದಲ್ಲಿ ಪೀಠವು ನಾಗೇಶ್ ಅವರಿಗೆ ನೀವು ಉಲ್ಲೇಖಿಸುತ್ತಿರುವ ಸಾಕ್ಷಿಗಳ ಹೇಳಿಕೆಯನ್ನು ಪರಿಗಣಿಸಬೇಕು ಎಂದಾದರೆ ಸಂತ್ರಸ್ತೆಯ ಹೇಳಿಕೆ ಪರಿಗಣಿಸಬೇಕಾಗುತ್ತದೆ. ಇಡೀ ಘಟನೆಯನ್ನು ಸಂತ್ರಸ್ತೆ ವಿವರಿಸಿದ್ದಾರೆ. ಇದು ಹೇಳಿಕೆ ವರ್ಸಸ್ ಹೇಳಿಕೆ ಆಗುವುದಿಲ್ಲವೇ, ಅದು ವಿಚಾರಣೆ ನಡೆಯುವುದು ಸೂಕ್ತವಾಗಿದೆ ಎಂದಿತು. ಈ ಹಂತದಲ್ಲಿ ಹಿರಿಯ ವಕೀಲರಾದ ನಾಗೇಶ್ ಅವರು ವಾದ ಮಂಡನೆಗೆ ಇನ್ನೂ ಒಂದು ತಾಸು ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ನ್ಯಾಯಾಲಯ ವಿಚಾರಣೆ ಜ.10ಕ್ಕೆ ಮುಂದೂಡಿತು.

ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ ಚಿತ್ರ ವಿವಾದ

ನ್ಯಾಯಾಲಯಕ್ಕೆ ಹಾಜರಾದ ನಟಿ ರಮ್ಯಾ

ಬೆಂಗಳೂರು: 2023ರಲ್ಲಿ ಬಿಡುಗಡೆ ಆಗಿದ್ದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ತನ್ನ ಅನುಮತಿ ಇಲ್ಲದೆ ತಮ್ಮ ದೃಶ್ಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ಸಿನಿಮಾದ ನಿರ್ಮಾಪಕರು, ನಿರ್ದೇಶಕರ ವಿರುದ್ಧದ ದೂರಿನ ವಿಚಾರಣೆಗೆ ನಟಿ ರಮ್ಯಾ ವಾಣಿಜ್ಯ ಸಂಕೀರ್ಣ ನ್ಯಾಯಾಲಯಕ್ಕೆ ಹಾಜರಾಗಿದ್ದರು.

2023ರಲ್ಲಿಯೇ ರಮ್ಯಾ ದೂರು ದಾಖಲಿಸಿ, ಸಿನಿಮಾ ಬಿಡುಗಡೆಗೆ ತಡೆ ನೀಡಬೇಕು ಎಂದಿದ್ದರು. ಆದರೆ ನ್ಯಾಯಾಲಯ ಆಗ ತಡೆ ನೀಡಿರಲಿಲ್ಲ. ಆದರೆ ವಿಚಾರಣೆ ಮುಂದುವರಿದಿದ್ದು, ಮಂಗಳವಾರ ನ್ಯಾಯಾಲಯದ ಮುಂದೆ ಹಾಜರಾದ ರಮ್ಯಾ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿದ್ದಾರೆ. ಡಿಸೆಂಬರ್ 30 ರಂದು ಸಹ ನಟಿ ರಮ್ಯಾ, ವಿಚಾರಣೆಗೆ ಹಾಜರಾಗಿದ್ದರು. ಮಂಗಳವಾರ ಕೆಲ ದಾಖಲೆಗಳನ್ನು ಪ್ರಸ್ತುತ ಪಡಿಸುವಂತೆ ನ್ಯಾಯಾಲಯ ಸೂಚಿಸಿದ್ದ ಕಾರಣಕ್ಕೆ ಆಗಮಿಸಿದ್ದ ರಮ್ಯಾ ದಾಖಲೆಗಳನ್ನು ನೀಡಿದ್ದಾರೆ. ವಿಚಾರಣೆ ಬಳಿಕ ಮಾಧ್ಯಮಗಳ ಬಳಿ ಮಾತನಾಡಿದ ರಮ್ಯಾ, ಪ್ರಕರಣದ ಬಗ್ಗೆ ಹೆಚ್ಚೇನು ಹೇಳಲಿಲ್ಲವಾದರೂ ಜನವರಿ 15 ಕ್ಕೆ ಮೂಲ ಒಪ್ಪಂದದ ಪ್ರತಿಯನ್ನು ಪ್ರಸ್ತುತ ಪಡಿಸುವಂತೆ ಹೇಳಿದ್ದಾರೆ. ಹೀಗಾಗಿ ಒರಿಜಿನಲ್ ಅಗ್ರಿಮೆಂಟ್ ನೀಡುತ್ತಿರುವುದಾಗಿ ಹೇಳಿದರು.

ಪ್ರಕರಣ ಏನು?

ನಿತಿನ್ ಕೃಷ್ಣಮೂರ್ತಿ ನಿರ್ದೇಶಿಸಿ, ವರುಣ್ ಹಾಗೂ ಪ್ರಜ್ವಲ್ ಬಿ ಪಿ ನಿರ್ಮಾಣ ಮಾಡಿದ್ದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ರಮ್ಯಾ ನಟಿಸಿದ್ದರು. ಆದರೆ ಸಿನಿಮಾ ಬಿಡುಗಡೆಗೆ ಇನ್ನು ಕೆಲವೇ ದಿನ ಇದ್ದಾಗ ರಮ್ಯಾ ಸಿನಿಮಾದ ಮೇಲೆ ಪ್ರಕರಣ ದಾಖಲಿಸಿ, ನನ್ನ ಅನುಮತಿ ಇಲ್ಲದೆ ಸಿನಿಮಾದಲ್ಲಿ ನನ್ನ ದೃಶ್ಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ಆರೋಪ ಮಾಡಿದರು. ಆದರೆ ನ್ಯಾಯಾ ಲಯ ರಮ್ಯಾ ವಾದವನ್ನು ಪುರಸ್ಕರಿಸ ಲಿಲ್ಲ. ನಿತಿನ್ ಕೃಷ್ಣಮೂರ್ತಿ ನಿರ್ದೇಶನದ ಈ ಚಿತ್ರದಲ್ಲಿ ರಿಷಬ್ ಶೆಟ್ಟಿ,ರಕ್ಷಿತ್ ಶೆಟ್ಟಿ, ದಿಗಂತ್, ರಮ್ಯಾ ಸೇರಿ ಹಲವು ಸ್ಟಾರ್ಸ್ ಅತಿಥಿ ಪಾತ್ರದಲ್ಲಿ ನಟಿಸಿದ್ದರು. ಒಂದಿಷ್ಟು ದೃಶ್ಯಗಳಲ್ಲಿ ಮೋಹಕತಾರೆ ರಮ್ಯಾ ಅಭಿನಯಿಸಿದ್ದ ಹಿನ್ನೆಲೆ ಅವರ ದೃಶ್ಯ ಗಳನ್ನು ಚಿತ್ರತಂಡ ಪ್ರಚಾರಕ್ಕೆ ಬಳಸಿ ಕೊಂಡಿತ್ತು. ಹಾಗಾಗಿ ರಮ್ಯಾ ಚಿತ್ರ ತಂಡದ ವಿರುದ್ಧ ನೋಟಿಸ್ ಜಾರಿ ಗೊಳಿಸಿದ್ದರು.

ಎಲ್ಲ ವಿಷಯಗಳಲ್ಲೂ ಮಕ್ಕಳ ಕಲಿಕೆಗೆ ಅಬಾಕಸ್ ಸಹಕಾರಿ: ಎಚ್.ಎನ್.ನರೇಂದ್ರ

ಅಬಾಕಸ್‌ನಿಂದ ಗಣಿತವಷ್ಟೇ ಅಲ್ಲ, ಏಕಾಗ್ರತೆಯೂ ಹೆಚ್ಚಲಿದೆ

ಬೆಂಗಳೂರು: ಅಬಾಕಸ್ ಕಲಿಸುವಾಗ ಕೇವಲ ಗಣಿತ ಮಾತ್ರವಲ್ಲದೇ, ಮಕ್ಕಳಲ್ಲಿ ಏಕಾಗ್ರತೆಯೂ ಬೆಳೆಯುತ್ತದೆ. ಆದ್ದರಿಂದ ಮಕ್ಕಳಲ್ಲಿ ಬೆಳವಣಿಗೆಗೆ ಅಬಾಕಸ್ ಪೂರಕವಾಗುತ್ತದೆ ಎಂದು ಎಸ್‌ಐಪಿ ಅಬಾಕಸ್ ಸಂಸ್ಥೆಯ ಕರ್ನಾಟಕದ ಮುಖ್ಯಸ್ಥ ಎಚ್.ಎನ್. ನರೇಂದ್ರ ಹೇಳಿದರು.

ಅರಮನೆ ಮೈದಾನದ ಮಾಣಿಕ್ಯಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಎಸ್.ಐ.ಪಿ. ಪ್ರೊ.ಡಿ.ಜಿ. ಸ್ಪರ್ಧೆಯ ವೇಳೆ ಮಾತನಾಡಿದ ಅವರು, ಅನೇಕ ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿರುವ ಗಣಿತವನ್ನು ಸುಲಭ ರೀತಿಯಲ್ಲಿ ಕಲಿಸುವುದು ಅಬಾಕಸ್‌ನ ಉದ್ದೇಶ. ಆದರೆ ಕೇವಲ ಅದಷ್ಟೇ ಅಲ್ಲದೇ, ನಮ್ಮ ತರಬೇತಿಯ ವೇಳೆ ನಾವು ಮಕ್ಕಳಿಗೆ ಏಕಾಗ್ರತೆಯನ್ನು ಕಲಿಸುತ್ತೇವೆ. ಇದರಿಂದಾಗಿ ಮಕ್ಕಳಿಗೆ ಕೇವಲ ಗಣಿತ ಮಾತ್ರವಲ್ಲದೇ, ಎಲ್ಲಾ ವಿಷಯಗಳಲ್ಲಿಯೂ ಸಹಾಯವಾಗುತ್ತದೆ. ಇದರಿಂದ ಶಾಲೆಗಳಲ್ಲಿ ಶಿಕ್ಷಕರು ಯಾವ ವಿಷಯದ ಬಗ್ಗೆ ಪಾಠ ಮಾಡಿದರೂ, ಅದನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಮಕ್ಕಳಿಗೆ ಬರುತ್ತದೆ. ಕೇವಲ ಪಠ್ಯ ಮಾತ್ರವಲ್ಲದೇ, ಕ್ರೀಡೆ, ಕಲೆ, ಸಂಸ್ಕೃತಿಯ ಸಮಯದಲ್ಲಿಯೂ ಈ ಏಕಾಗ್ರತೆ ಮಕ್ಕಳ ಸಹಾಯಕ್ಕೆ ಬರಲಿದೆ ಎಂದು ಹೇಳಿದರು.

ಮಣಿಗಳ ಮೂಲಕ ಗಣಿತದ ಕಲಿಕೆ: ಅನೇಕರಿಗೆ ಗಣಿತ ಎನ್ನುವುದು ಕಬ್ಬಿಣದ ಕಡಲೆಯಾಗಿರುತ್ತದೆ. ಏಕೆಂದರೆ ಸಾಂಪ್ರದಾಯಿಕವಾಗಿ ನಾವು ಗಣಿತವನ್ನು ಕೇವಲ ಕಾಲ್ಪನಿಕ ಅಂಕಿಗಳ ಮೇಲೆ ಕಲಿಸುತ್ತೇವೆ. ಆದರೆ ಅಬಾಕಸ್‌ನಲ್ಲಿ ಮಕ್ಕಳಿಗೆ ಮಣಿಗಳನ್ನು ತೋರಿಸಿ ಕಲಿಸುತ್ತೇವೆ. ಸಾಂಪ್ರದಾಯಿಕವಾಗಿ ಮಕ್ಕಳು ಸಂಖ್ಯೆಯನ್ನು ಅನುಭವಿಸಲು ಆಗುವುದಿಲ್ಲ. ಆದರೆ ನಾವು ನೀಡುವ ಮಣಿಯನ್ನು ಮಕ್ಕಳು ಮುಟ್ಟಬಹುದು, ಅನುಭವಿಸಬಹುದು. ಅದರಿಂದ ಮಕ್ಕಳಿಗೆ ಅಬಾಕಸ್ ಮೂಲಕ ಗಣಿತವನ್ನು ಕಲಿಯುವುದು ಸುಲಭವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಈ ಸ್ಪರ್ಧೆಯಲ್ಲಿ ರಾಜ್ಯದ 82 ಕೇಂದ್ರಗಳಿಂದ 3900ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಬೆಳಗ್ಗೆಯಿಂದ ನಡೆದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ 917 ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಲಾಯಿತು. ಇದರೊಂದಿಗೆ ಅಬಾಕಸ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಮಕ್ಕಳಿಗೆ ಪ್ರಶಸ್ತಿಪತ್ರ ನೀಡಿ ಸಾಂಪ್ರದಾಯಿಕವಾಗಿ ಗೌರವಿಸಲಾಯಿತು.

ಅರಮನೆ ಮೈದಾನದ ಮಾಣಿಕ್ಯಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಎಸ್.ಐ.ಪಿ. ಪ್ರೊ.ಡಿ.ಜಿ. ಸ್ಪರ್ಧಾ ಕಾರ್ಯಕ್ರಮದಲ್ಲಿ ಎಸ್.ಐ.ಪಿ.ಅಬಾಕಸ್ ಸಂಸ್ಥೆಯ ಕರ್ನಾಟಕದ ಮುಖ್ಯಸ್ಥ ಎಚ್.ಎನ್. ನರೇಂದ್ರ ಪಾಲ್ಗೊಂಡಿದ್ದರು.

ರಾಜ್ಯದ ನಾನಾ ಜಿಲ್ಲೆಗಳಿಂದ 3900 ಮಕ್ಕಳು ಭಾಗವಹಿಸುತ್ತಿರುವುದು ಈ ಸ್ಪರ್ಧೆಯ ವಿಶೇಷವಾಗಿದೆ. ಮಕ್ಕಳ ಪ್ರತಿಭೆ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿ ಇತ್ತೀಚಿನ ದಿನಗಳಲ್ಲಿ ಅಬಾಕಸ್ ಪದ್ಧತಿಯ ಮೂಲಕ ಕಲಿಕೆಯ ಸಾಮರ್ಥ್ಯ ಹೆಚ್ಚಿಸುವುದು ವಿಶೇಷ ಎನಿಸುತ್ತಿದೆ. ಅಬಾಕಸ್‌ನಿಂದ ಮಕ್ಕಳಿಗೆ ಕಲಿಕೆಯ ಸಾಮರ್ಥ ಹೆಚ್ಚಳ, ಏಕಾಗ್ರತೆ, ಜ್ಞಾಪಕಶಕ್ತಿ ಹೆಚ್ಚಳ, ತಾರ್ಕಿಕ ಶಕ್ತಿ ಮತ್ತು ಕಲಾತ್ಮಕ ಗುಣಗಳ ಬೆಳವಣಿಗೆ, ಭಯ, ಆತಂಕ ನಿವಾರಣೆಯಾಗಲಿದೆ.

-ಎಚ್.ಎನ್. ನರೇಂದ್ರ, ಎಸ್.ಐ.ಪಿ. ಕರ್ನಾಟಕ ಮುಖ್ಯಸ್ಥರು

ಕಾಳುಮೆಣಸು ಕ್ವಿಂಟಾಲ್‌ಗೆ 2,000–3,000 ರು. ಏರಿಕೆ | ಶುಂಠಿ ಕ್ವಿಂಟಾಲ್‌ಗೆ 10,000 ರಿಂದ 12,000 ರು. ಕುಸಿತ

ಕಾಳುಮೆಣಸಿಗೆ ಶುಕ್ರದೆಸೆ; ಶುಂಠಿಗೆ ವಕ್ರದೆಸೆ

ಹೂವಪ್ಪ ಐ.ಎಚ್. ಬೆಂಗಳೂರು

ಕಾಳುಮೆಣಸು ದರ ಆಕಾಶಕ್ಕೇರಿಕೆಯಾಗಿದ್ದರೆ ಶುಂಠಿ ಬೆಲೆ ಪಾತಾಳಕ್ಕೆ ಕುಸಿದಿದೆ. ಇನ್ನೂ ಕಾಳುಮೆಣಸು ದಪ್ಪ ಕ್ವಿಂಟಾಲ್‌ಗೆ 67,000 ರು. ಇದ್ದ ಬೆಲೆ 70,000 ರು. ಗೆ ಜಿಗಿದಿದೆ. ಸಣ್ಣ 65,000ರು. ಇದ್ದ ಬೆಲೆ 67,000 ರು. ಗೆ ಜಿಗಿದಿದೆ. ಕ್ವಿಂಟಾಲ್‌ಗೆ ಹೆಚ್ಚು ಕಡಿಮೆ 2,000–3,000 ರು. ರಷ್ಟು ಏರಿಕೆಯಾಗಿದೆ. ಕಾಳು ಮೆಣಸಿನ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಬೆಳೆಗಾರರಿಗೆ ಸಂತಸ ಮೂಡಿಸಿದೆ. ಈ ಸಾಲಿನಲ್ಲಿ ಭಾರಿ ಮಳೆಯಿಂದ ಶ್ರೀಲಂಕಾದಲ್ಲಿ ಇಳುವರಿ ಕುಸಿದಿದೆ ಈ ಹಿನ್ನೆಲೆಯಲ್ಲಿ ಇದರಿಂದ ಅಂತಾ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ. ಬೆಲೆ ಏರಿಕೆಗೆ ಕಾರಣವಾಗಿದೆ.

ಕಳೆದ ವಾರದಿಂದ ಕಾಳುಮೆಣಸಿನ ದರ ಏರಿಕೆಯತ್ತ ಸಾಗಿದ್ದು, ಮುಂದಿನ ದಿನಗಳಲ್ಲಿಯೂ ಬೆಲೆ ಹೆಚ್ಚಾಗುವ ಸಾಧ್ಯತೆಯಿದೆ ಎನ್ನುತ್ತಾರೆ ಮಸಾಲಾ ವ್ಯಾಪಾರಿ ಸತೀಶ್. ಕಾಳು ಮೆಣಸು ಸಂಗ್ರಹಿಸಿಟ್ಟಿದ್ದ ಬೆಳೆಗಾರರಿಗೆ ಮುಂದಿನ ದಿನಗಳಲ್ಲಿ ಬಂಪರ್ ಬೆಲೆ ಸಿಗುವ ನಿರೀಕ್ಷೆ ಇದೆ ಎನ್ನಲಾಗುತ್ತಿದೆ.

ಕಳೆದ 6–7 ವರ್ಷಗಳಿಂದ ಕೆಜಿಗೆ 500 ರು. ವರೆಗೂ ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದ ಕಾಳು ಮೆಣಸು ದಪ್ಪ ಈಗ 650 ರು.ಗೂ ಹೆಚ್ಚು ಮಾರಾಟವಾಗುತ್ತಿದೆ.

ಭಾರತದಲ್ಲಿ ಕಾಳುಮೆಣಸು ಉತ್ಪಾದನೆ ಕುಸಿದು, ಬಳಕೆ ಹೆಚ್ಚುತ್ತಿರುವುದು ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಗೆ ಇದು ಪ್ರಮುಖ ಕೂಡಾ ಕಾರಣವಾಗಿದೆ ಹೊಸ ಆಹಾರ ಪದ್ಧತಿಯಲ್ಲಿ ಕಾಳುಮೆಣಸು ಪ್ರಮುಖ ಅಂಶವಾಗುತ್ತಿದೆ. ಆದರೆ ಬೇಡಿಕೆಗೆ ಅನುಗುಣವಾಗಿ ದೇಶದಲ್ಲಿ ಉತ್ಪಾದನೆ ಹೆಚ್ಚಿಲ್ಲ. ಮಸಾಲೆ ಕಂಪನಿಗಳು ಹೇರಳ ಪ್ರಮಾಣದಲ್ಲಿ ಕಾಳುಮೆಣಸು ದಾಸ್ತಾನು ಮಾಡಿರುವುದು ಬೇಡಿಕೆ ಹೆಚ್ಚಲು ಇದು ಕೂಡಾ ಕಾರಣವಾಗಿದೆ ಎನ್ನುತ್ತಾರೆ ಕಾಳುಮೆಣಸು ಬೆಂಗಳೂರು ಎಪಿಎಂಸಿ ವರ್ತಕ ಸುರೇಶ್.

ಮಲೆನಾಡು ಭಾಗದಲ್ಲಿ ಹೆಚ್ಚು ಕಾಳುಮೆಣಸು ಬೆಳೆಯಲಾಗುತ್ತದೆ. ಮಡಿಕೇರಿ, ಹಾಸನ ಜಿಲ್ಲೆಯ ಸಕಲೇಶಪುರ, ಚಿಕ್ಕಮಗಳೂರು ಮಾರುಕಟ್ಟೆಗಳಲ್ಲಿ ಕಾಳುಮೆಣಸಿಗೆ ಪ್ರತಿ ಕೆಜಿಗೆ 600 ರು.ಗಳಿಂದ 630 ರು. ದರ ದೊರೆಯುತ್ತಿದೆ.

ದೇಶದ ಕಾಳುಮೆಣಸು ಉತ್ಪಾದನೆ: ಕರ್ನಾಟಕ ಈಗಾಗಲೇ ಕೇರಳ ರಾಜ್ಯವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೇರಿದೆ. ಕರ್ನಾಟಕದಲ್ಲಿ ಪ್ರತಿವರ್ಷ 33 ಸಾವಿರ ಟನ್ ಉತ್ಪಾದಿಸಲಾಗುತ್ತಿದೆ. ಎರಡನೇ ಸ್ಥಾನಕ್ಕಿಳಿದಿರುವ ಕೇರಳ ವಾರ್ಷಿಕ 28 ಸಾವಿರ ಟನ್ ಕಾಳು ಮೆಣಸು ಉತ್ಪಾದಿಸುತ್ತಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ಗೋವಾ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳಿವೆ. ಕರ್ನಾಟಕ ರಾಜ್ಯದಲ್ಲಿ ಅತಿಹೆಚ್ಚು ಕಾಳುಮೆಣಸು ಉತ್ಪಾದಿಸುವ ಜಿಲ್ಲೆ ಕೊಡಗು. ನಂತರದ ಸ್ಥಾನದಲ್ಲಿ ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿವೆ.



ವರ್ಷ	ಬೆಲೆ
2016	750
2019	220
2021	300-350
2021 ಅಂತ್ಯ	500
2022	400-450
2024	590-630

ಶುಂಠಿ ಬೆಲೆ ಪಾತಾಳಕ್ಕೆ

ಕಳೆದ ವರ್ಷ ಬಂಗಾರದ ಬೆಲೆ ಕಂಡಿದ್ದ ಹಸಿ ಶುಂಠಿ ದರ ದಿಢೀರ್ ಕುಸಿದಿದೆ. ಶುಂಠಿ ಇಳುವರಿ ಇದ್ದರೂ ಬೆಲೆ ಕುಸಿತದಿಂದ ರೈತರಿಗೆ ಲಾಭ ಇಲ್ಲದಾಗಿದೆ. ಕಳೆದ ವರ್ಷ ಎಪಿಎಂಸಿ ಸಗಟು ಬೆಲೆ ಶುಂಠಿ ಕ್ವಿಂಟಾಲ್‌ಗೆ ಕನಿಷ್ಠ 11,000 ರು. ಗರಿಷ್ಠ 15,000 ರು. ಇದ್ದ ಬೆಲೆ ಈ ವರ್ಷ ಅದು ಈಗ ಕನಿಷ್ಠ 1700 ರು. ಗರಿಷ್ಠ 3000 ರು. ಗೆ ಮಾರಟವಾಗುತ್ತಿದೆ. ಕಳೆದ ಸಾಲಿಗಿಂತ ಒಂದು ಕ್ವಿಂಟಾಲ್‌ಗೆ ಹೆಚ್ಚುಕಡಿಮೆ 10,000 ರು. ರಿಂದ 12,000 ರು. ರಷ್ಟು ಕುಸಿದಿದೆ. ಉತ್ತರಭಾರತದಲ್ಲಿ ಹೆಚ್ಚು ಶುಂಠಿ ಬೆಳೆ ಬಂದಿದ್ದರಿಂದ ಅಲ್ಲಿಯ ಮಾರುಕಟ್ಟೆಗೆ ರಾಜ್ಯದ ಶುಂಠಿ ಬೇಡಿಕೆ ಇಲ್ಲದಾಗಿದೆ ಕರ್ನಾಟಕದಲ್ಲಿ ಹೆಚ್ಚು ಶುಂಠಿ ಬೆಳೆಯಲಾಗಿದೆ ಇದು ಶುಂಠಿ ಬೆಲೆ ಕುಸಿಯಲು ಕಾರಣವಾಗಿದೆ.

ಶುಂಠಿಗೆ ಕೂಲಿ ವೆಚ್ಚ ಸಿಗುವುದು ಕಷ್ಟಕರ: ಈ ಬಾರಿ ಬಿತ್ತನೆ ಶುಂಠಿ ಬೆಲೆ 60ಕೆ.ಜಿ.ಗೆ 5,500 ರು. ರಿಂದ 6,500ರು. ವರೆಗೆ ಇತ್ತು. ಜೊತೆಗೆ ಕೂಲಿ ಪೈಪ್ಲೈನ್ ಕೋಳಿಗೊಬ್ಬರ ರಾಸಾಯನಿಕಗಳ ಎಲ್ಲ ವೆಚ್ಚ ಮಾಡಿ 1 ಎಕರೆಯಲ್ಲಿ ಶುಂಠಿ ಬೆಳೆಯಲು ಈ ವರ್ಷ 4.5ಲಕ್ಷ ರು.ರಿಂದ 5 ಲಕ್ಷ ರು. ವೆಚ್ಚವಾಗಿದೆ ಎಂದು ರೈತರು ಹೇಳುತ್ತಾರೆ. ಈಗಿನ ಬೆಲೆಯಲ್ಲಿ ಒಂದು ಎಕರೆಯಲ್ಲಿ ಬೆಳೆದ ಶುಂಠಿ ಮಾರಾಟ ಮಾಡಿದರೆ ಬೆಳೆಗೆ ಮಾಡಿದ ಖರ್ಚು ಕೂಡಾ ಸಿಗಲ್ಲ ಎನ್ನುತ್ತಾರೆ ಶಿಕಾರಿಪುರ ರೈತ ಶಿವಾನಂದಪ್ಪ.

ಶುಂಠಿ ವ್ಯಾಪ್ತಿ

2023	24,840 ಹೆಕ್ಟೇರ್	2,71,588 ಮೆಟ್ರಿಕ್ ಟನ್
2024	25,834 ಹೆಕ್ಟೇರ್	2,82,451 ಮೆಟ್ರಿಕ್ ಟನ್

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಬುಧವಾರ
08 | 01 | 2025
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಎಲ್ಲದಕ್ಕೂ ಪ್ರತಿಕ್ರಿಯಿಸುವುದು ತರವೇ?

ತುಂಬಿದ ಕೊಡವು ಶಬ್ದ ಮಾಡುವುದಿಲ್ಲ. ಆದರೆ ಅರ್ಧ ತುಂಬಿದ ಕೊಡವು ಬಹಳ ಶಬ್ದ ಮಾಡುತ್ತದೆ. ಅದೇ ರೀತಿ ಕೆಲವರು ತಮ್ಮ ಅಲ್ಪ ಸಾಮರ್ಥ್ಯದ ಕುರಿತು ಅಗ್ಗದ ಪ್ರಚಾರದಿಂದ ನಾನೇ ದೊಡ್ಡವನೆಂದು ಮೆರೆಯುತ್ತಾರೆ. 'ನೋಡಿದೆಯಾ! ನಾನು ಅವರನ್ನು ಹೇಗೆ ಬಾಯಿ ಮುಚ್ಚಿ ಸಿದೆ' ಎಂದು ಜಂಬ ಕೊಚ್ಚಿಕೊಳ್ಳುತ್ತಾರೆ. ಇಂತಹವರೊಡನೆ ಅನಗತ್ಯ ವಾದ- ವಿವಾದ ಮಾಡದೆ, ಇವರ ಸಹವಾಸವೇ ಬೇಡವೆಂದು ದೂರ ಸರಿದು ಮೌನವಾಗಿರು ವವರನ್ನು ಕಂಡ ಕೆಲವರು, ಕೆಣಕಿ ನಮ್ಮ ಸಾಮರ್ಥ್ಯದ ಬಗ್ಗೆ ಗೇಲಿ ಮಾಡಿ ಅವರೊಂದಿಗೆ ವಾದಿಸುವಂತೆ ಪ್ರಚೋದಿಸಿ ತಮಾಷೆ ನೋಡುತ್ತಾರೆ. ಒಮ್ಮೆ ಆನೆಯೊಂದು ನದಿಯಲ್ಲಿ ಸ್ನಾನ ಮಾಡಿಕೊಂಡು ಹೋಗುವ ಮಾರ್ಗದಲ್ಲಿ ಕೆಸರು ಮೆತ್ತಿಕೊಂಡ ಹಂದಿಯೊಂದು ಎದುರಾಯಿತು. ತಟ್ಟನೇ ಆನೆ ಪಕ್ಕಕ್ಕೆ ಸರಿದು, ಹಂದಿಗೆ ದಾರಿ ಮಾಡಿಕೊಟ್ಟಿತು. ಇದ ರಿಂದ ಆ ಹಂದಿಗೆ ಅಹಂಕಾರ ನೆತ್ತಿಗೇರಿ, ತನ್ನ ಗೆಳೆಯರೊಡನೆ 'ನೋಡಿ, ಆನೆಯೇ ನನಗೆ ಹೆದರಿ, ಪಕ್ಕಕ್ಕೆ ಸರಿಯಿತೆಂದರೆ ಅದಕ್ಕಿಂತ ನಾನೇ ಬಲಶಾಲಿ' ಎಂದು ಹೇಳುತ್ತಾ ಬೀಗಿತು. ಅದನ್ನು ಕೇಳಿಸಿ ಕೊಂಡ ಆನೆಯ ಗೆಳೆಯರು 'ಆ ಸಣ್ಣ ಹಂದಿಗೆ ಹೆದರುವಷ್ಟು ಬಲಹೀನನಾ ನೀನು' ಎಂದು ಹತಾಶೆಯನ್ನು ಹೊರಹಾಕಿದವು. ಅದಕ್ಕೆ ಆನೆ 'ನಾನು ಮನಸ್ಸು ಮಾಡಿದ್ದರೆ ಆ ಹಂದಿಯನ್ನು ಆ ಕ್ಷಣದಲ್ಲಿ ಕಾಲಿನಲ್ಲಿ ಹೊಸಕಿ ಹಾಕಿ ಬಿಡುತ್ತಿದ್ದೆ. ಆದರೆ ಅದರ ಮೈಯೆಲ್ಲಾ ಕೆಸರು, ಮುಟ್ಟಿದರೆ ನನ್ನ ಕಾಲೇ ಗಲೀಜಾಗುವುದೆಂದು ದೂರ ಸರಿದೆ' ಎಂದು ಹೇಳುವ ವಿವೇಕದ ಮಾತು ನಮ್ಮ ಮನಸ್ಸಿಗೆ ನಾಟಬೇಕು. ಹೀಗೆ ನಮ್ಮ ಬದುಕಿನಲ್ಲೂ ಕೆಲವರು ನಮ್ಮ ಸಾಮರ್ಥ್ಯದ ಬಗ್ಗೆ ಗೇಲಿ ಮಾಡುತ್ತ ಬೆನ್ನ ಹಿಂದೆ ಆಡಿಕೊಳ್ಳುತ್ತಾರೆ. ಹಾಗೇ ಅದನ್ನು ತಂದು ಕಿವಿಯಲ್ಲಿ ಊದಿ ದ್ವೇಷದ ಜ್ವಾಲೆಯನ್ನು ಹೊತ್ತಿಸಿದಾಗ ಉದ್ವೇಗ ಗೊಳ್ಳದೆ ಶಾಂತವಾಗಿರೋಣ. 'ಒಳ್ಳೆಯ ವರಾಗಿರಿ ಆದರೆ ಅದನ್ನು ಸಾಬೀತುಪಡಿ ಸುವಲ್ಲಿಯೇ ನಿಮ್ಮ ಜೀವನವನ್ನು ಮತ್ತು ಸಮಯವನ್ನು ವ್ಯರ್ಥ ಮಾಡಬೇಡಿ' ಎಂಬ ಬುದ್ಧನ ಮಾತಿನಂತೆ ನಾವು ಎಲ್ಲಾ ಸಂದರ್ಭದಲ್ಲೂ, ಎಲ್ಲರಿಗೂ, ಎಲ್ಲದಕ್ಕೂ ಪ್ರತಿಕ್ರಿಯಿಸುವ ಅರ್ಧ ಕೊಡವಾಗದೆ ಪೂರ್ಣ ತುಂಬಿದ ಕೊಡದಂತಾಗಿ ರುವುದು ಲೇಸಲ್ಲವೇ?

● ರವಿ ಕಂಗಳ. ಕೊಂಕಣಕೊಪ್ಪ

ಝೆನ್ ಕಥೆ

ರ್ಯೋಕಾನ್ ಎಂಬ ಝೆನ್ ಗುರು ಇದ್ದರು. ಅವರ ಬದುಕು ಅದೆಷ್ಟು ಸರಳ ಎಂದರೆ, ಬೆಟ್ಟವೊಂದರ ಬುಡದಲ್ಲಿ ಪುಟ್ಟ ಗುಡಿಸಲಿನಲ್ಲಿ ವಾಸವಿದ್ದರು. ಸನಿಹದ ಹಳ್ಳಿಯವರು ಏನಾದರೂ ತಿನ್ನಲು ನೀಡಿದರೆ ತಿನ್ನುತ್ತಿದ್ದರು; ಇಲ್ಲವಾದರೆ, ಹತ್ತಿರದಲ್ಲಿ ಹರಿಯುತ್ತಿರುವ ಹಳ್ಳದ ನೀರನ್ನು ಸೇವಿಸುತ್ತಿದ್ದರು. ಒಂದು ದಿನ ಒಬ್ಬ ಕಳ್ಳ ಇವರ ಗುಡಿಸಲಿನ ಬಳಿ ಬಂದ. ಆ ಸಮಯ ದಲ್ಲಿ ಇವರು ಸನಿಹದ ಬೆಟ್ಟದ ತುದಿಗೆ ಹೋಗಿ ಧ್ಯಾನ ಮಾಡುತ್ತಿದ್ದರು. ಕಳ್ಳನು ಗುಡಿಸಲಿನ ಒಳಗೆ ಪ್ರವೇಶಿಸಿ ಏನನ್ನಾ ದರೂ ಕದಿಯಬೇಕು ಎಂದು ಯೋಚಿಸಿದ. ಆದರೆ, ಅಲ್ಲೇನೂ ಇರಲಿಲ್ಲ! ಅಷ್ಟರಲ್ಲಿ ಝೆನ್ ಗುರು ಬೆಟ್ಟದಿಂದ ಇಳಿದು ಬಂದರು. ಮುಸ್ಸಂಜೆ ಹೊತ್ತು. ಕಳ್ಳನು ಗುಡಿಸಲಿನ ಬಳಿ ತಳಾಯಿಸುವುದನ್ನು ಕಂಡು, ಗುರುಗಳು ಕರೆದರು 'ಯಾರಪ್ಪಾ ನೀನು? ಕಳ್ಳನೆ?' ಎಂದು ಕೇಳಿದರು. ಕಳ್ಳನಿಗೆ ಉತ್ತರ ಹೇಳಲು ಹೊಳೆಯಲಿಲ್ಲ. ಗುರುಗಳು ಶಾಂತ ದನಿಯಲ್ಲಿ 'ನೀನು ಅಷ್ಟೊಂದು ದೂರದಿಂದ ಬಂದಿದೀಯಾ. ನಿನ್ನನ್ನು ನೋಡಿದರೇ ಗೊತ್ತಾಗುತ್ತದೆ, ಬೇರೆಯವರ ವಸ್ತುಗಳನ್ನು ತೆಗೆದುಕೊಂಡು ಹೋಗುವ ಅಭ್ಯಾಸ ನಿನಗೆ. ಆದರೇನು ಮಾಡುವುದು, ನನ್ನ ಗುಡಿಸಲಿನಲ್ಲಿ ಏನೂ ಇಲ್ಲ. ನನ್ನ ಹತ್ತಿರವೂ ಏನೂ ಇಲ್ಲ. ನಾಲ್ಕು ಬಾಳೆ ಹಣ್ಣು ಇದ್ದವು; ಆದರೆ ಅದನ್ನು ನಾನು ಮಧ್ಯಾಹ್ನ ತಿಂದೆ. ಇರಲಿ, ನನ್ನ ಹತ್ತಿರ ಇನ್ನೊಂದು ಪಂಚೆ ಇದೆ ಅದನ್ನೇ ತೆಗೆದುಕೊಂಡು ಹೋಗು. ಚಳಿಗೆ ಆಗುತ್ತೆ' ಎಂದು ಪಂಚೆಯನ್ನು ಕೊಟ್ಟರು. ಕಳ್ಳನಿಗೆ ನಿಜಕ್ಕೂ ಆಶ್ಚರ್ಯವಾಯಿತು. ಯಾವ ವಸ್ತುವೂ ಇಲ್ಲದೇ ಇವರು ಬದುಕು ಸಾಗಿಸುವುದಾದರೂ ಹೇಗೆ ಎಂಬ ವಿಸ್ಮಯ ಆತನಿಗೆ. ಪಂಚೆಯನ್ನು ಪಡೆದು ಕಣ್ಮರೆಯಾದ. ಝೆನ್ ಗುರುಗಳು ಗುಡಿಸಲಿನ ಮುಂಭಾಗದಲ್ಲಿದ್ದ ಕಲ್ಲಿನ ಮೇಲೆ ಕುಳಿತು ಆಗಸವನ್ನು ನೋಡುತ್ತಾ 'ಪಾಪ ಕಳ್ಳ. ಅವನಿಗೆ ಆಗಸದ ಚಂದ್ರನನ್ನಾದರೂ ಕೊಡಬಹುದಿತ್ತು' ಎಂದು ನಿಟ್ಟುಸಿರು ಬಿಟ್ಟರು.

● ಶಶಾಂಕ್ ಮುದೂರಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಹಳ್ಳಿ ನೆನಪಿಸುವ ಹೋಂ ಸ್ಟೇ ವಾಸ!

ನಗರ ಬದುಕಿನಲ್ಲಿ ಯಾಂತ್ರಿಕತೆ ತುಂಬಿದೆ; ಹಳ್ಳಿಯ ದಿನಚರಿಯಲ್ಲಿ ಸಹಜತೆ, ಸರಳತೆ ಕಾಣಿಸುತ್ತದೆ. ಅದಕ್ಕೇ ಇರಬಹುದೇ, ನಗರವಾಸಿಗಳು ಆಗಾಗ ಹಳ್ಳಿಯತ್ತ ಧಾವಿಸಿ, ಹೋಂ ಸ್ಟೇ ಅನುಭವಕ್ಕಾಗಿ ಕಾತರಿಸುತ್ತಿರುತ್ತಾರೆ?

● ಲಕ್ಷ್ಮೀಕಾಂತ್ ಎಲ್ ವಿ

ಈ ಬಣ್ಣದ ಬದುಕಿನಲ್ಲಿ ನಿತ್ಯ ಎಲ್ಲವೂ ಬದಲಾಗುತ್ತಿರುತ್ತದೆ. ಇಂತಹ ಬದಲಾದ ಜೀವನಶೈಲಿಯಲ್ಲಿ ಗಗನಚುಂಬಿ ಕಟ್ಟಡಗಳ ಬೃಹತ್ ನಗರಗಳು ನಮ್ಮ ಬದುಕಿನ ಅವಿಭಾಜ್ಯ ಭಾಗವಾಗಿದ್ದರೂ, ಗ್ರಾಮಗಳಲ್ಲಿರುವ ತಾಜಾ ಹಸಿರು, ನಿಸರ್ಗ ಮತ್ತು ಆತ್ಮೀಯತೆಯ ತಾಣ ನಮ್ಮನ್ನು ಆಕರ್ಷಿಸುತ್ತವೆ. ದುಡಿಯೋಕೆ ಬೆಂಗಳೂರು ಚೆಂದ, ಬದುಕೋಕೆ ಹಳ್ಳಿ ಚೆಂದ ಎಂಬ ಮಾತು, ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿಭಿನ್ನ ಗುಣಲಕ್ಷಣಗಳನ್ನು ತಿಳಿಸುತ್ತದೆ. ಬೆಂಗಳೂರಿನಂತಹ ನಗರಗಳು ಉದ್ಯೋಗಕ್ಕಾಗಿ ಹೆಚ್ಚು ಅವಕಾಶಗಳನ್ನು ಒದಗಿಸುತ್ತವೆ. ಆದರೆ ನಿಜವಾದ ಸಂತೋಷ ಮತ್ತು ನೆಮ್ಮದಿ ಹಳ್ಳಿಗಳಲ್ಲಿ ಅಡಗಿದೆ!

ಬೆಂಗಳೂರು ದೇಶದ ತಾಂತ್ರಿಕ ರಾಜಧಾನಿ; ಐಟಿ ಕಂಪೆನಿಗಳ ತಾಣ; ಮತ್ತು ಉದ್ಯಮಿಗಳ ಕನಸು. ಇತಿಹಾಸ, ಆಧುನಿಕತೆಯ ಸಂಯೋಜನೆಯಾದ ಈ ನಗರದಲ್ಲಿ ಬೃಹತ್ ಉದ್ಯೋಗದ, ಶಿಕ್ಷಣದ, ಆರೋಗ್ಯ ಸೇವೆಗಳ ಅವಕಾಶಗಳು ಇವೆ. ಉದ್ಯೋಗಕ್ಕಾಗಿ ತೀವ್ರ ಸ್ಪರ್ಧೆ, ನವೀನ ತಂತ್ರಜ್ಞಾನ, ಒತ್ತಡದಿಂದ ಕೂಡಿದ ಜೀವನಶೈಲಿ ಬೆಂಗಳೂರಿನಲ್ಲಿ ಸಾಮಾನ್ಯವಾಗಿದೆ. ಲಾಲ್‌ಬಾಗ್, ವಿವಿಧ ಪ್ರದೇಶಗಳ ಉದ್ಯಾನಗಳು ಮತ್ತು ಶಾಪಿಂಗ್ ಮಾಲ್‌ಗಳು ಇಲ್ಲಿ ಆಧುನಿಕ ಜೀವನಕ್ಕೆ ಒಂದಿಷ್ಟು ನೆಮ್ಮದಿಯನ್ನು ಕೊಡಲು ಸಹಾಯ ಮಾಡುತ್ತವೆ. ಆದರೆ ಇವುಗಳು ತಾತ್ಕಾಲಿಕ.

ಅದೃಷ್ಟ ಬಂತು ಅಂದರೆ, ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಳ್ಳುವುದು ಸುಲಭವಲ್ಲ. ಇಲ್ಲಿ ಘನವಾಗಿ ಕೆಲಸ ಮಾಡುವ ಜನತೆ ಒಮ್ಮೆಲೆ ಬೆಳಗುವುದಿಲ್ಲ; ಜೀವನವು ಕೆಲವೊಮ್ಮೆ ಒತ್ತಡಪೂರ್ಣವಾಗುತ್ತದೆ. ನಾಗರಿಕ ಸುಸಜ್ಜಿತ ಮೂಲಸೌಕರ್ಯಗಳ ಜೊತೆಗೆ ಇಂದಿನ ನಗರೀಕರಣದಲ್ಲಿ ಬರುವ ಟ್ರಾಫಿಕ್ ಜಾಮ್, ಹಾಗೂ ವಾತಾವರಣ ಮಾಲಿನ್ಯವು ಸಂಪೂರ್ಣವಾಗಿ ಸಮಾಧಾನದ ದಾರಿ ತೋರಿಸುತ್ತಿಲ್ಲ. ಈ ಕಾರಣಗಳಿಂದ ಬೃಹತ್ ನಗರದ ಉದ್ಯೋಗದ ಆಟದಲ್ಲಿ ಸೆರೆಹಿಡಿದಿರುವ ಜನ, ತಮ್ಮ ನೆಮ್ಮದಿಯ ನಿಜವಾದ ಆಸೆಗಳನ್ನು ಹಳ್ಳಿ ಬದುಕಿನಲ್ಲಿ ಹುಡುಕುತ್ತಾರೆ. ಆ ನಿಟ್ಟಿನಲ್ಲಿಯೇ ವೀಕೆಂಡ್ ಅಂತೇಳಿ ಹಳ್ಳಿಕಡೆ ಹೋಗಿ ಬರುವುದು ಸಾಮಾನ್ಯವಾಗಿದೆ.

ಹಳ್ಳಿಯಲ್ಲಿನ ನಿಸರ್ಗದ ನೆರಳು ಮತ್ತು ನೆಮ್ಮದಿ:

ಹಳ್ಳಿಯಲ್ಲಿನ ಜೀವನ ಒಂದು ರೀತಿಯಲ್ಲಿ ತಾಜಾ, ನಿಜವಾದ ಬದುಕು. ಇಲ್ಲಿಯ ಹೊಲಗಳು, ತಳಿರು ಬೆಳೆಗಳು, ಹರಿಯುವ ತೊರೆ, ಹಳ್ಳ, ನದಿಗಳು ಮತ್ತು ಸ್ವಚ್ಛ ವಾತಾವರಣ ಜೀವನಕ್ಕೆ ಅಗತ್ಯವಾದ ಶಕ್ತಿಯನ್ನು ಒದಗಿಸುತ್ತವೆ. ಹಳ್ಳಿಗಳಲ್ಲಿ ಇರುವ ಆತ್ಮೀಯ ಸಂಬಂಧಗಳು, ಸಹಾನುಭೂತಿ ಮತ್ತು ಪರಸ್ಪರ ಸಹಕಾರವು ಜೀವನಕ್ಕೆ ಸಮಾಧಾನವನ್ನು ನೀಡುತ್ತವೆ. ಎಲ್ಲಿ ಹೋದರೂ ಕೂಡ ಜೀವನದ ಗಡಿಬಿಡಿಯ ಜಂಜಾಟ ಇಲ್ಲದೆ ನಿಸರ್ಗದ ಸೌಂದರ್ಯ ಮತ್ತು ನೈಜತೆಯು ಜೀವನದ ತಾಜಾ ಭಾವನೆಗೆ ಹೊಸ ರೂಪ ನೀಡುತ್ತವೆ.

ಸ್ವಾಭಾವಿಕತೆಯ ತೇಜಸ್ಸು

ಹಳ್ಳಿಗಳ ಆಹಾರ ಪದ್ಧತಿ, ಮತ್ತು ಪರಂಪರೆಗಳನ್ನು ಸಾಕ್ಷಾತ್ಕಾರಗೊಳಿಸುವಾಗ ನಮ್ಮ ಜೀವನದ ಅರ್ಥ ಬೇರೆಯೇ ಆಗಿರುತ್ತದೆ. ವಾಸ್ತವಿಕ ಸಂಬಂಧಗಳು, ಊರಲ್ಲಿರುವ ಆಪ್ತರ ಜೊತೆಗಿನ ಒಡನಾಟ, ಹಳ್ಳಿಮನೆಯ ಪ್ರಾಂಗಣ, ಹಸಿರು ತೋಟಗಳ ನಡುವೆ ಬೆಳಗುವ ಬೆಳಕು ಇವೆಲ್ಲ ಹಳ್ಳಿಜೀವನವನ್ನು ಎಂದಿಗೂ ಮರೆಯುವಂತೆ ಮಾಡುವುದಿಲ್ಲ. ಆರೋಗ್ಯಯುತ ಜೀವನ ಶೈಲಿ, ವಿಶ್ರಾಂತಿ ಮತ್ತು ಪ್ರಕೃತಿಯ ಮಡಿಲಿನ ಸೌಂದರ್ಯವನ್ನು ಆನಂದಿಸಿ ಆಹ್ಲಾದಿಸಲು ಅವಕಾಶವಿದೆ. ಹಲವು ಜನರು ಹಳ್ಳಿಗಳಲ್ಲಿ ನೆಲೆ ನಿಂತು ಬೆಂಗಳೂರಿನಂತಹ ನಗರಗಳಲ್ಲಿ ಕೆಲಸ ಮಾಡುತ್ತಾ ದುಡಿಮೆಯನ್ನು ಕಂಡುಕೊಂಡು ಬದುಕಿನ ಬಂಡಿ ಸಾಗಿಸಿದ್ದಾರೆ. ನಗರ ಮತ್ತು ಹಳ್ಳಿಯ ಎರಡರ ನಡುವಿನ ಜಾಗತಿಕ ಮಟ್ಟದ ದಾರಿಯನ್ನು ಅತ್ಯಂತ ಜಾಗರೂಕರಾಗಿ ಹೊಂದಿಸಿಕೊಂಡು ಜೀವನ ಸಾಗಿಸಿದವರು ತಮ್ಮ ವೃತ್ತಿಜೀವನದ ಅಂತರಾಳವನ್ನು ನಗರದಲ್ಲಿ ನಿಭಾಯಿಸುತ್ತಾರೆ ಮತ್ತು ತಮ್ಮ ಜೀವನದ ಶಾಂತಿ, ನೆಮ್ಮದಿ, ಆರೋಗ್ಯವನ್ನು ಹಳ್ಳಿಗಳಲ್ಲಿ ಸಂತೃಪ್ತಗೊಳಿಸಿಕೊಳ್ಳುತ್ತಾರೆ. ಇದು ಒತ್ತಡದ ಕಾರ್ಯವನ್ನು ನಿಭಾಯಿಸಿ ಜೀವನದಲ್ಲಿನ ಆತ್ಮೀಯತೆ ಮತ್ತು ಪರಿಸರದ ಜೊತೆಜೊತೆಗೆ ಜೀವಿಸಲು ಸಹಕಾರ ಮಾಡುತ್ತದೆ. ನಗರ ಮತ್ತು ಹಳ್ಳಿಯೆಂಬ ಬದುಕಿನ ಸಮನ್ವಯ ಇಲ್ಲದೇ ಹೋದಲ್ಲಿ ಬದುಕಿನಲ್ಲಿ ನೆಮ್ಮದಿ ಇಲ್ಲದಂತಾಗುತ್ತದೆ. ಕೊನೆಗೆ ಹೋಮ್‌ಸ್ಟೇ, ರೆಸಾರ್ಟ್ ಸಂಸ್ಕೃತಿಯ ದಾಸರಾಗಿ ನೆಮ್ಮದಿ ಅರಸಬೇಕಾಗುತ್ತದೆ. ಈಚಿನ ವರ್ಷಗಳಲ್ಲಿ ಬೆಂಗಳೂರಿನ ಜನರು ಹೋಂ ಸ್ಟೇಗಳನ್ನು ಅಸಿಕೊಂಡು, ಮಲೆನಾಡು ಮತ್ತು ಕೊಡಗಿನ ಹಳ್ಳಿಗಳತ್ತ ಧಾವಿಸುವುದನ್ನು ಕಾಣಬಹುದು. ನಿಧಾನವಾಗಿ ಸಾಗುವ ನೆಮ್ಮದಿಯ ಬದುಕು ಹಳ್ಳಿಗಳಲ್ಲಿದೆ; ಆ ಹಳ್ಳಿಗಳ ವಾತಾವರಣದಲ್ಲಿರುವ ಹೋಂ ಸ್ಟೇಗಳಲ್ಲಿ ಅಂತಹದೊಂದು ವಾತಾವರಣವನ್ನು ಹುಡುಕುವ ತುಡಿತವೇ, ನಗರದ ಜನರು ಅಲ್ಲಿಗೆ ಹೋಗುವಂತೆ ಮಾಡುತ್ತದೆ. ಹೋಂ ಸ್ಟೇಗಳಲ್ಲಿನ ಹಳೆಯ ಅಡುಗೆಯನ್ನು, ಹಳ್ಳಿಯ ತಿಂಡಿಯನ್ನು ಸವಿಯುತ್ತಾ, ತಮ್ಮ ಬೇರುಗಳನ್ನು ನೆನಪಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹಳ್ಳಿಯ ಹಪಹಪಿಯೇ ಹೋಂ ಸ್ಟೇಗಳ ಜನಪ್ರಿಯತೆಗೂ ಒಂದು ಕಾರಣ ಎನ್ನಬಹುದೇನೋ!

ಅಹಂಕಾರದ ಮುಖಗಳು

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಅರ್ಜುನನು ಸಂಪೂರ್ಣವಾಗಿ ಅಹಂ ಕರ್ತ (ನಾನೇ ಕರ್ತೃ) ವೆಂಬ ಅಹಂಕಾರದಲ್ಲಿ ಮುಳುಗಿ ಹೋಗಿದ್ದಾನೆ ಎಂಬುದನ್ನು ಕೃಷ್ಣ ಗಮನಿಸುತ್ತಾನೆ. ಇದೇ ಅವನ ವಿಷಾದಕ್ಕೆ ಕಾರಣವಾಗಿದೆ. ಈ ಅಹಂಕಾರವನ್ನು ಮುರಿದು ಅಂತರಾತ್ಮನನ್ನು ತಲುಪಲು ಅರ್ಜುನನು ಸುಸಂಬದ್ಧ ಬುದ್ಧಿಯನ್ನು ಉಪಯೋಗಿಸಬೇಕೆಂದು ಅವನಿಗೆ ಉಪದೇಶಿಸುತ್ತಾನೆ.

ಗರ್ವ ಅಹಂಕಾರದ ಒಂದು ಸಣ್ಣ ಭಾಗವಾಗಿದೆ. ಜಯ/ ಗೆಲುವು/ ಲಾಭಗಳೆಂಬ ಸಂತೋಷದ ದ್ವಂದ್ವ ಹಾಗೂ ಖಿನ್ನತೆ, ಅಸಂತೋಷ, ಕೋಪಗಳೆಂಬ ಅಪಜಯ ಸೋಲು ನಷ್ಟಗಳೆಂಬ ನೋವಿನ ದ್ವಂದ್ವಗಳನ್ನು ವ್ಯಕ್ತಿ ಅನುಭವಿಸಿದಾಗ ಅದನ್ನು ಸೊಕ್ಕು ಎಂದು ಕರೆಯಲಾಗುತ್ತದೆ. ಉಳಿದವರು ಸಂತೋಷದ ದ್ವಂದ್ವವನ್ನು ಅನುಭವಿಸುತ್ತಿದ್ದರೆ ಅದು ಮತ್ಸರ ಹಾಗೂ ಅವರು ನೋವಿನ ದ್ವಂದ್ವ ಅನುಭವಿಸುತ್ತಿದ್ದರೆ ಅದು ಅನುಕಂಪ.

ನಾವು ಲೌಕಿಕ ಸಂಪತ್ತನ್ನು ಸಂಗ್ರಹಿಸುತ್ತಿದ್ದಾಗ ಅದು ಇರುತ್ತದೆ. ಅದನ್ನು ಬಿಟ್ಟಾಗಲೂ ಇರುತ್ತದೆ. ಅದು ಸಂಸಾರವನ್ನು ಹಾಗೂ ಸನ್ಯಾಸವನ್ನು ಚಾಲನೆಗೊಳಿಸುತ್ತದೆ. ಇದು ಸೃಷ್ಟಿ ಹಾಗೂ ನಾಶ ಎರಡಕ್ಕೂ ಕಾರಣವಾಗಿದೆ. ಅದು ಜ್ಞಾನ ಹಾಗೂ ಅಜ್ಞಾನ ಎರಡರಲ್ಲಿಯೂ ಇದೆ.ಅದು ಹೊಗಳಿಕೆಯಲ್ಲಿ ಹೆಚ್ಚಾಗುತ್ತದೆ ಹಾಗೂ ತೆಗಳಿಕೆಯಲ್ಲಿ ಕುಗ್ಗುತ್ತದೆ. ಈ ಎರಡು ಸ್ಥಿತಿಗಳು ನಮ್ಮನ್ನು ಇತರರ ಕುತಂತ್ರಕ್ಕೆ ಒಳಗಾಗುವಂತೆ ಮಾಡುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅಹಂಕಾರವು ಒಂದಲ್ಲ ಒಂದು ಅರ್ಥದಲ್ಲಿ ಪ್ರತಿ ಭಾವನೆಯಲ್ಲಿಯೂ ಇರುತ್ತದೆ ಹಾಗೂ ಈ ಭಾವನೆಗಳು ನಮ್ಮ ಬಾಹ್ಯ ನಡತೆಯ ಮೇಲೆ ಪ್ರಭಾವ ಬೀರುತ್ತವೆ.

ಅಹಂಕಾರವು ನಮ್ಮನ್ನು ಜಯ ಹಾಗೂ ಸಮೃದ್ಧಿಯ ಕಡೆಗೆ ಒಯ್ಯುವಂತೆ ತೋರಬಹುದು. ಆದರೆ ಇದು ಮದ್ಯವ್ಯಸನಿಯು ತಾನು ಎಲ್ಲರಿಗಿಂತ ಮೇಲಿದ್ದೇನೆ ಎಂದು ತಾತ್ಕಾಲಿಕವಾಗಿ ಭಾವಿಸಿದಂತಿದೆ.

ನಾನು, ನನಗೆ, ನನ್ನ, ನಾನೇ ಎಂಬವು ಅಹಂಕಾರದ ನಾಲ್ಕು ಕಾಲುಗಳು ಈ ನಾಲ್ಕು ಶಬ್ದಗಳನ್ನು ನಾವು ದಿನನಿತ್ಯದ ಸಂಭಾಷಣೆ ಮತ್ತು ವಿಚಾರಗಳಲ್ಲಿ ಉಪಯೋಗಿಸುವುದನ್ನು ಬಿಟ್ಟರೆ ಅಹಂಕಾರವನ್ನು ಬಹುಮಟ್ಟಿಗೆ ದುರ್ಬಲಗೊಳಿಸಲು ಸಾಧ್ಯ.

ನಾವು ಒಂದಲ್ಲ ಒಂದು ದ್ವಂದ್ವದೊಡನೆ ನಮ್ಮನ್ನು ಗುರುತಿಸಿ ಕೊಂಡರೆ ಅಹಂಕಾರ ಉದ್ಭವವಾಗುತ್ತದೆ. ಆದ್ದರಿಂದ ಇವೆರಡರ ಮಧ್ಯೆ ಇದ್ದು ಆಯ್ಕೆ ರಹಿತವಾಗಿದ್ದರೆ ಅಹಂಕಾರಕ್ಕೆ ಅವಕಾಶವೇ ಇರುವುದಿಲ್ಲ ವೆಂದು ಕೃಷ್ಣ ಅರ್ಜುನನಿಗೆ ಹೇಳುತ್ತಾನೆ (2.48) ಹಸಿದಾಗ ಊಟ ಮಾಡು, ಚಳಿಯಲ್ಲಿ ಬೆಚ್ಚಗಿನ ಬಟ್ಟೆ ಧರಿಸು, ಅವಶ್ಯವಿದ್ದಲ್ಲಿ ಹೋರಾಡು, ಅಗತ್ಯವಿದ್ದಾಗ ಭಾವನೆಗಳನ್ನು ಹೊಂದು ಆದರೆ ಅದಾವುದರೊಂದಿಗೆ ಗುರುತಿಸಿಕೊಳ್ಳಬೇಡ ಅದು ಬಾಲಿಶವಾಗುತ್ತದೆ.

ಈ ಬದುಕು ಭ್ರಮೆಯೇ?

ನಾವು ಈ ಬದುಕನ್ನು ಕಟ್ಟಿಕೊಳ್ಳುತ್ತೇವೆ ನಿಜ; ಆದರೆ, ಬದುಕು ಭ್ರಮೆ, ಮಾಯೆ ಎಂದೆ ಚಿಂತಕರು ಹೇಳಿದ್ದೇಕೆ?

● ಶಶಿಧರ್ ತಲ್ಲೂರಂಗಡಿ

ನಾನಿರುವುದು ಫಾರ್ಮಾ ಕಂಪೆನಿಯಲ್ಲಿ. ವೈದ್ಯರು ರೋಗಿಗೆ ನೀಡುವ ಔಷಧಿ ಚೀಟಿಯಲ್ಲಿ ನಾವು ಅನುಮೋದಿಸುವ ಮದ್ದಿದ್ದರೆ ಅದೇ ನಮಗೆ ಆ ಹೊತ್ತಿನ ತುತ್ತು. ಪ್ರಸಿದ್ಧ ವೈದ್ಯರೊಬ್ಬರ ಬಳಿ ಮಾತನಾಡುತ್ತಿದ್ದೆ. ಮಾರಾಟದಲ್ಲಿ ವಾರ್ಷಿಕ ಗುರಿ ಮುಟ್ಟಲು ಇನ್ನಷ್ಟು ಸಹಕಾರ ಮಾಡಬೇಕೆಂದು ವಿನಂತಿಸುತ್ತಿದ್ದೆ. 'ನಿಮ್ಮ ಸಹಕಾರವಿಲ್ಲದಿದ್ದರೆ ನಮಗದು ಬಹಳ ಕಷ್ಟ ಸರ್' ಎಂದೆ. 'ಅದೆಲ್ಲ ಸುಮ್ಮನೆ ಶಶಿಧರ್, ನಾನು ಬರುವ ಮುಂಚೆ ವೈದ್ಯಕೀಯ ಕ್ಷೇತ್ರ ಇರಲಿಲ್ವ! ನಾಳೆ ನಾನಿಲ್ಲವಾದರೂ ಇದು ಮುಂದುವರೆಯುವುದಿಲ್ವ! ನಾನು ನನ್ನಿಂದ ಅನ್ನೋದೆಲ್ಲ ಭ್ರಮೆಯಷ್ಟೆ, ಹೆದರ್ಬೇಡಿ ನನ್ನ ಸಹಕಾರ ಸದಾ ಇದೆ' ಎಂದರವರು.

ಆ ಕ್ಷಣಕ್ಕೆ ವೈದ್ಯರೆಂದಿದ್ದು ಸರಿ ಎನ್ನಿಸಿತು. ಹೌದು ಯಾರಿಲ್ಲವಾದರೂ ಈ ಪ್ರಪಂಚ ನಿಲ್ಲುವುದಿಲ್ಲ. ಏನಾಗಬೇಕೋ ಅದೆಲ್ಲವೂ ನಡೆಯುತ್ತಿರುತ್ತದೆ. ಯಾರನ್ನು ನಂಬಿ ಯಾರೂ ಇಲ್ಲ. ಹೌದು ಯಾರಿಲ್ಲದೆ ಪ್ರಪಂಚ ನಡೆಯುವುದು ಸರಿ ಆದರೆ ಅವರಿದ್ದಾಗ ಹೇಗೆ ನಡೆಯುತ್ತಿತ್ತೋ ಹಾಗೆಯೇ ನಡೆಯಲು ಸಾಧ್ಯವೇನು!

ಮಿತ್ರನೊಬ್ಬ ಬಹಳ ಕುಂದಿದ್ದ. ಮುಖದಲ್ಲಿ ಮೊದಲಿದ್ದ ಕಳೆಯಿರಲಿಲ್ಲ. ಏನಾಯ್ತೆಂದು ವಿಚಾರಿಸಿದಾಗ ತಿಳಿಯಿತು ಮೂರು ವರ್ಷಗಳಿಂದ ಇವನಿಲ್ಲದೆ ಜಗತ್ತೇ ಇಲ್ಲವೆಂಬಂತಿದ್ದ ಪ್ರೀತಿ ಕಳೆದ ಕೆಲವಷ್ಟು ದಿನಗಳಿಂದ ಆತನ ಜೊತೆಗಿಲ್ಲ. ನನ್ನನ್ನ ನಾನೇ ನಂಬಿದಷ್ಟು ನಂಬಿದವರಿಂದ ದ್ರೋಹವಾದ ಮೇಲೆ ಇನ್ನು ಈ ಪ್ರಪಂಚದಲ್ಲಿ ನಂಬುವುದಾದರೂ ಯಾರನ್ನು ಎಂಬ ಪ್ರಶ್ನೆ ಆತನನ್ನು ಕಾಡುತ್ತಿತ್ತು. 'ಎಲ್ಲವೂ ಭ್ರಮೆ'ಯೆಂಬ ವಾಸ್ತವದ ಅರಿವು ಆ ಕ್ಷಣಕ್ಕೆ ಅವನಿಗಾಗುತ್ತಿತ್ತು. ಇನ್ಯಾರೋ ಈತನ ಬದುಕಲ್ಲಿ ಬರಬಹುದು ಎಲ್ಲವೂ ಮತ್ತೆ ಮೊದಲಿನಂತಾಗಬಹುದು ಎಂಬ ನಂಬಿಕೆಯ ಮೇಲೆ ತನ್ನ ಹೆತ್ತವರ ಮನ ನೋಯಿಸಲಾಗದೆ ಆ ಹುಡುಗಿ ಆ ನಿರ್ಧಾರಕ್ಕೆ ಬಂದಿರಬಹುದು. ಸರಿಯೇ. ಆದರೆ ಬರುವ ಇನ್ನಾರೂ ಆಕೆಯ ಸ್ಥಾನವನ್ನು ತುಂಬಲು ಸಾಧ್ಯವೇನು!

ಕರಾವಳಿಯ ಯಕ್ಷಗಾನದ ಗಾಯನದಲ್ಲಿ ದಿ. ಕಾಳಿಂಗ ನಾವುಡರು ದೊಡ್ಡ ಹೆಸರು. ಆದರೆ, ದಿ. ಕಾಳಿಂಗ ನಾವುಡರು ಬರುವ ಮೊದಲೂ ಯಕ್ಷಗಾನವಿತ್ತು ಇತ್ತು. ಅವರಿದ್ದಾಗ ಉತ್ತುಂಗಕ್ಕೇರಿತ್ತು. ಅವರ ನಂತರವೂ ಇದೆ. ಆದರೆ ಈ ಕ್ಷಣಕ್ಕೂ ಯಕ್ಷಾಭಿಮಾನಿಗಳು ಅವರನ್ನು ನೆನಪಿಸಿಕೊಳ್ಳದ ದಿನವೇ ಇಲ್ಲ. ಅವರ ಸ್ಥಾನಕ್ಕೆ ಅವರೇ ಸರಿ. ಅಂತೆಯೇ ಅದೆಷ್ಟೋ ಮಹನೀಯರು ಇಂದಿಗೂ ಅಚ್ಚಳಿಯದೆ ಉಳಿದಿದ್ದಾರೆ. ಯಾವ ವಿಚಾರವಿದ್ದರೂ ಗಾಢವಾಗಿ ಮನಸ್ಸಿನ ಮೇಲೆ ಪರಿಣಾಮ ಬೀರಿದವರನ್ನು ದೂರವಿಟ್ಟು ಬದುಕುವುದು ಅಷ್ಟು ಸುಲಭದ ಮಾತಲ್ಲ. ಈ ಬದುಕೇ ಒಂದು ಭ್ರಮೆಯೆಂಬುದು ಎಷ್ಟು ನಿಜವೋ ನಾವು ಭ್ರಮೆಯಲ್ಲಿಯೇ ಜಾಗ ಮಾಡಿಕೊಂಡು ಬದುಕಬೇಕು ಎಂಬುದೂ ಅಷ್ಟೇ ಸತ್ಯ.

ಒಳ್ಳೆಯದು ಈ ಎಳ್ಳು

● ಡಾ.ಸುಧಾಕರ.ಜಿ.ಲಕ್ಕವಳ್ಳಿ.

ಸೆಸೇಮ್ ಅಥವಾ ಸೆಸಮುಮ್ ಇಂಡಿಕಮ್ ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ಎಳ್ಳು ತಾಂಜಾನಿಯಾ, ಮ್ಯಾನ್ಮಾರ್, ಭಾರತ ಮತ್ತು ಸುಡಾನ್ ಸೇರಿದಂತೆ ಪ್ರಪಂಚ ದಾದ್ಯಂತ ಉಷ್ಣವಲಯದ ಪ್ರದೇಶಗಳಲ್ಲಿ ಬೆಳೆಯುವ ಒಂದು ಹೂಬಿಡುವ ಸಸ್ಯ. ಇದು ಮನುಷ್ಯನಿಗೆ ತಿಳಿದಿರುವ ಅತ್ಯಂತ ಹಳೆಯ ಎಣ್ಣೆ ಬೀಜದ ಬೆಳೆ.

ಪೋಷಕಾಂಶಗಳಿಂದ ಸಮೃದ್ಧವಾದ ಹಾಗೂ ಆರೋಗ್ಯಕರ ಪ್ರಯೋಜನಗಳಿಂದ ಎಳ್ಳು ಆಯುರ್ವೇದದಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದೆ.

ಪ್ರಯೋಜನಗಳು

1. ಮೂಳೆಗಳ ರಚನೆ ಮತ್ತು ಬಲಿಷ್ಠತೆಗೆ ಇದರಲ್ಲಿನ ಕ್ಯಾಲ್ಸಿಯಂ ಮತ್ತು ಸತು ಬಹು ಪ್ರಯೋಜನಕಾರಿ.
2. ರಕ್ತದಲ್ಲಿನ ಸಕ್ಕರೆ ಮಟ್ಟ ಕಾಪಾಡಿಕೊಳ್ಳಲು ಇದು ನೈಸರ್ಗಿಕ ನಿಯಂತ್ರಕ ಎನಿಸಿದೆ.
3. ಮೆಗ್ನೀಸಿಯಮ್ ಅಂಶ ರಕ್ತದೊತ್ತಡ ಮತ್ತು ಅಧಿಕ ರಕ್ತದೊತ್ತಡವನ್ನು ತಡೆಯಲು ಸಹಾಯಕ.
4. ವಿಟಮಿನ್ ಇ,ಲಿಗ್ನಾನ್ಸ್ ಮತ್ತು ಇತರ ಉತ್ಕರ್ಷಣ ನಿರೋಧಕಗಳ ಉಪಸ್ಥಿತಿ ಅಪಧಮನಿಗಳಲ್ಲಿ ಪ್ಲೇಕ್ ಸಂಗ್ರಹ ತಡೆದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸುತ್ತದೆ.
5. ಮೆಗ್ನೀಸಿಯಮ್,ತಾಮ್ರ ಮತ್ತು ಕ್ಯಾಲ್ಸಿಯಂ ನಂತಹ ಅಗತ್ಯವಾದ ಖನಿಜಗಳನ್ನು ಒದಗಿಸುತ್ತವೆ.
6. ರುಮಟಾಯ್ಡ್ ನಂತಹ ಸಂಧಿವಾತದ ನೋವು ನಿವಾರಿಸಲು ಇದರಲ್ಲಿನ ತಾಮ್ರದ ಅಂಶ ಸಹಕಾರಿ.
7. ಉಸಿರಾಟದ ತೊಂದರೆಗಳನ್ನು ನಿವಾರಿಸಲು ಮೆಗ್ನೀಸಿಯಮ್ ಅಂಶ ಉಪಯುಕ್ತ.
8. ಕೂದಲು ಮತ್ತು ಚರ್ಮದ ಆರೋಗ್ಯಕ್ಕೆ ನಿಯಾಸಿನ್, ಥಯಾಮಿನ್, ಫೋಲಿಕ್ ಆಮ್ಲ,ರೈಬೋಫ್ಲಾವಿನ್ ಪಿರಿಡಾಕ್ಸಿನ್ ಮತ್ತು ವಿಟಮಿನ್ ಬಿ ಸಂಕೀರ್ಣಗಳ ಸಮೃದ್ಧ ಮೂಲ. ವಾರಕ್ಕೊಮ್ಮೆ ಎಳ್ಳಿನ ಎಣ್ಣೆಯಿಂದ ನಿಮ್ಮ ನೆತ್ತಿ ಮತ್ತು ದೇಹದ ಮಸಾಜ್ ಅನುಕೂಲಕರ.
9. ಮೊನೊಸಾಚುರೇಟೆಡ್ ಕೊಬ್ಬಿನ ಅಂಶವು ಕೆಟ್ಟ ಕೊಲೆಸ್ಟ್ರಾಲ್ ಮಟ್ಟ ಕಡಿತಗೊಳಿಸಿ ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ.
10. ಸೆಸಮಿನ್ ಮತ್ತು ಸೆಸಮಾಲ್ ಉತ್ಕರ್ಷಣ ನಿರೋಧಕಗಳು ಸ್ವತಂತ್ರ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯಿಂದ ಜೀವಕೋಶಗಳನ್ನು ರಕ್ಷಿಸಲು ಸಹಾಯಕ.
11. ಹಾರ್ಮೋನುಗಳ ಸಮತೋಲನವನ್ನು ಬೆಂಬಲಿಸುವ ಪೋಷಕಾಂಶಗಳಿಂದ ಇದು ಸಮೃದ್ಧ ಈಸ್ಟ್ರೊಜೆನ್ ಅನುಕರಿಸುವ ಫೈಟೊಸ್ಟ್ರೊಜೆನ್‌ಗಳನ್ನು ಹೊಂದಿರುತ್ತವೆ ಮತ್ತು ನಿರ್ದಿಷ್ಟವಾಗಿ ಋತುಬಂಧದ ಸಮಯದಲ್ಲಿ ಹಾರ್ಮೋನ್ ಮಟ್ಟವನ್ನು ನಿರ್ವಹಿಸಲು ಪರಿಣಾಮಕಾರಿ.
12. ಮಲಬದ್ಧತೆ ನಿವಾರಿಸಲು ಕಪ್ಪು ಎಳ್ಳಿನ ಕೊಬ್ಬಿನಾಮ್ಲ,ಫೈಬರ್ ಅಂಶ ಹಾಗೂ ತೈಲಗಳು ಅನುಕೂಲ.
13. ಎಳ್ಳಿನ ಎಣ್ಣೆಯಲ್ಲಿ ಸೆಸಮಿನಾಲ್ ಮತ್ತು ಸೆಸಮಾಲ್ ಇದ್ದು ಜೀವಕೋಶಗಳಿಗೆ ಉಂಟಾಗುವ ಹಾನಿಯನ್ನು ಕಡಿಮೆ ಮಾಡುತ್ತದೆ.
14. ವಿಟಮಿನ್ ಬಿ 6, ತಾಮ್ರ, ಸತು ಮತ್ತು ಕಬ್ಬಿಣದ ಇದರಲ್ಲಿದೆ.

ತಲೆಯ ಮೇಲೆ ಮರಿಯ ದೇಹ!

● ಅಜಯ್ ಅಂಚೆಪಾಳ್ಯ

ತಿಮಿಂಗಿಲವೊಂದು ತನ್ನ ಮರಿಯ ಶವವನ್ನು ತಲೆಯ ಮೇಲೆ ಹೊತ್ತು ತಿರುಗಾಡುತ್ತಿದೆ! ನಿಜ, ಅಮೆರಿಕದ ವಾಷಿಂಗ್ಟನ್ ಕರಾವಳಿಯಲ್ಲಿ, ಜೆ 35 ಎಂದು ವಿಜ್ಞಾನಿಗಳು ಹೆಸರಿಟ್ಟ ತಿಮಿಂಗಿಲವೊಂದು, ತನ್ನ ಮರಿಯನ್ನು ಕಳೆದ ಐದು ದಿನಗಳಿಂದ ಹೊತ್ತು ತಿರುಗುತ್ತಿದೆ. ದುರಂತವೆಂದರೆ, ಆ ಮರಿ ಮೃತ ಪಟ್ಟಿದೆ. ಸುಮಾರು 300 ಪೌಂಡ್ ತೂಕವಿರುವ ಆ ಮರಿಯನ್ನು ಹೊತ್ತು, ಆ ದೈತ್ಯ ತಿಮಿಂಗಿಲ ಸಮುದ್ರದಲ್ಲಿ ಅತ್ತಿತ್ತ ಓಡಾಡುತ್ತಿದೆ. ಆ ತಿಮಿಂಗಿಲದ ಬಂಧುಗಳು, ಅಲ್ಲೇ ಸನಿಹದಲ್ಲಿ ಸುಳಿದಾಡುತ್ತಿರುವ ದೃಶ್ಯವನ್ನು ಸಹ ವಿಜ್ಞಾನಿಗಳು ಗುರುತಿಸಿದ್ದಾರೆ.

ದುರಂತವೆಂದರೆ, ಇದೇ ತಿಮಿಂಗಿಲವು ಈ ರೀತಿ ಮಾಡುತ್ತಿರುವುದು ಇದು ಎರಡನೆಯ ಬಾರಿ. ಸುಮಾರು ಏಳು ವರ್ಷಗಳ ಹಿಂದೆ, ಅದರ ಮೊದಲ ಮರಿ ಸತ್ತಾಗಲೂ ಅದರ ಕಳೇಬರವನ್ನು ತಲೆಯ ಮೇಲೆ ಸುಮಾರು ಎರಡು ವಾರಗಳ ಕಾಲ ಹೊತ್ತು ತಿರುಗುತ್ತಿತ್ತು. ಈಗ ಅದೇ ತಿಮಿಂಗಿಲವು ತನ್ನ ಇನ್ನೊಂದು ಮರಿಯ ಕಳೇಬರವನ್ನು ಹೊತ್ತು ತಿರುಗುವ ದೃಶ್ಯವು ಮನಕಲಕುವಂತಿದೆ.

ಈ ಪ್ರಭೇದದ ತಿಮಿಂಗಿಲಗಳು (ಸದರ್ನ್ ರೆಸಿಡೆಂಟ್ ಕಿಲ್ಲರ್ ವೇಲ್) ಅಪಾಯದಂಚಿನಲ್ಲಿರುವ ಜೀವಿಗಳು; ಅಮೆರಿಕ ಮತ್ತು ಕೆನಡಾ ನಡುವಿನ ಸಮುದ್ರದಲ್ಲಿ ವಾಸಿಸುವ ಈ ಪ್ರಭೇದದ ತಿಮಿಂಗಿಲಗಳು ಈಗ ಕೇವಲ 73 ಮಾತ್ರ ಉಳಿದುಕೊಂಡಿವೆ. ಈ ಜೀವಿಗಳ ಚಲನ ವಲನಗಳನ್ನು ಅಲ್ಲಿನ ವಿಜ್ಞಾನಿಗಳು ನಿರಂತರವಾಗಿ ಗಮನಿಸುತ್ತಿದ್ದಾರೆ. ಏಳು ವರ್ಷಗಳ ಹಿಂದೆ ತನ್ನ ಮರಿಯನ್ನು ಕಳೆದುಕೊಂಡ ಈ ತಿಮಿಂಗಿಲವು ಈಗ ಪುನಃ ತನ್ನ ಮರಿಯನ್ನು ಕಳೆದುಕೊಂಡಿದ್ದು ಏಕೆ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರಕಿಲ್ಲ. ಆದರೆ, ಕಡಿಮೆ ಸಂಖ್ಯೆಯಲ್ಲಿರುವ ಈ ತಿಮಿಂಗಿಲಗಳ ಮರಿಯೊಂದು ಸತ್ತಿದ್ದು, ಪರಿಸರ ಪ್ರೇಮಿಗಳಲ್ಲಿ ಬೇಸರ ಮೂಡಿಸಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

08.01.2025 ಬುಧವಾರ

vishwavani.news

ದಿನ ದರ್ಶಿಕೆ

ಪುಷ್ಯ ಮಾಸ, ಶುಕ್ಲ ಪಕ್ಷ, ನವಮಿ ತಿಥಿ, ಅಶ್ವಿನಿ ನಕ್ಷತ್ರ, ಸಿದ್ಧ ಯೋಗ, ಕೌಲವ ಕರಣ, ಮೇಷ ಲಗ್ನ, ಧನು ರಾಶಿ, ಶಿಶಿರ ಋತು, ಉತ್ತರಾಯಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಚಳಿಗಾಲದಲ್ಲಿ ಜೀರ್ಣಕಾರಿ ಸಮಸ್ಯೆಗಳು ಹೆಚ್ಚಾಗಿ ಕಾಡಲಾರಂಭಿಸುತ್ತದೆ. ಆಗ ಏಲಕ್ಕಿಯನ್ನು ನಿಯಮಿತವಾಗಿ ಜಗಿಯುವುದರಿಂದ ಹೊಟ್ಟೆ ಉಬ್ಬುವುದು, ಗ್ಯಾಸ್ಟ್ರಿಕ್ ಮತ್ತು ಅಜೀರ್ಣವನ್ನು ನಿವಾರಿಸಲು ಸಹಾಯ ಮಾಡುತ್ತದೆ. ಜೀರ್ಣಕಾರಿ ಕಿಣ್ವಗಳ ಸ್ರವಿಸುವಿಕೆಯನ್ನು ಉತ್ತೇಜಿಸುತ್ತದೆ, ಜೀರ್ಣಕ್ರಿಯೆ ಮತ್ತು ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ. ಹಾಗಾಗಿ ಊಟದ ನಂತರ ಒಂದು ಏಲಕ್ಕಿಯನ್ನು ಅಗಿಯುವುದು ಎದೆಯುರಿ ಸಾಧ್ಯತೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಸೌಂದರ್ಯ ಸೂತ್ರ

ಚಳಿಗಾಲದಲ್ಲಿ ಸೇಬನ್ನು ತಿನ್ನುವುದರಿಂದ ಚರ್ಮದಲ್ಲಿ ಉಂಟಾಗುವ ಶುಷ್ಕತೆಯನ್ನು ಹೋಗಲಾಡಿಸುತ್ತಾ ಚರ್ಮವನ್ನು ತೇವಾಂಶದಿಂದ ಇಡಲು ಸಹಾಯ ಮಾಡುತ್ತವೆ. ನೈಸರ್ಗಿಕ ಆಮ್ಲಗಳು ಚರ್ಮದ ಸತ್ತ ಜೀವಕೋಶಗಳನ್ನು ತೆಗೆದು ಹಾಕುತ್ತಾ ಚರ್ಮದ ರಂಧ್ರಗಳನ್ನು ಸ್ವಚ್ಛ ಮಾಡುತ್ತವೆ ಮತ್ತು ಆರೋಗ್ಯಕರ ಮೈಬಣ್ಣವನ್ನು ಉತ್ತೇಜಿಸುವಲ್ಲಿ ಸಹಾಯ ಮಾಡುತ್ತವೆ. ಆದ್ದರಿಂದ ಸೇಬಿನ ನಿಯಮಿತ ಸೇವನೆಯಿಂದ ನಿಮ್ಮ ಚರ್ಮದ ವಿನ್ಯಾಸವನ್ನು ಸುಧಾರಿಸಬಹುದಾಗಿದೆ.

ದಿನ ಭವಿಷ್ಯ

ಮೇಷ ಹೊಸ ಪ್ರಯತ್ನಗಳು ಯಶಸ್ವಿಯಾಗಲಿವೆ. ಕಾರ್ಯಕ್ಷೇತ್ರದಲ್ಲಿ ಉತ್ತಮ ಮನ್ನಣೆ ಪಡೆಯಲು ಅವಕಾಶ ಸಿಕ್ಕೀತು.

ವೃಷಭ ಸನ್ನಿವೇಶಗಳನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯ ಇಂದು ಮೆರೆದೀತು. ಸಂಬಂಧವನ್ನು ಗಟ್ಟಿಮಾಡಲು ಯೋಗ್ಯ ಸಮಯ.

ಮಿಥುನ ಉದ್ಯೋಗ ಸಂಬಂಧಿತ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಾದಿ ಸ್ಪಷ್ಟವಾಗಲಿದೆ. ಹೊಸ ಶಕ್ತಿ, ಪ್ರೇರಣೆ ಕಾಣಿಸಿಕೊಳ್ಳುತ್ತದೆ.

ಕಟಕ ಕುಟುಂಬದೊಂದಿಗೆ ಸಮಯ ಕಳೆಯುವುದರಿಂದ ಮನಸ್ಸಿಗೆ ಸಂತೋಷ ಸಿಗುತ್ತದೆ. ಹೊಸ ಕೆಲಸಕ್ಕೆ ಸಹಕಾರಿಯ ಸಮಯ.

ಸಿಂಹ ಕಾರ್ಯಕ್ಷೇತ್ರದಲ್ಲಿ ಸೃಜನಶೀಲತೆ ಪ್ರಭಾವ ಬೀರುತ್ತದೆ. ಆತ್ಮವಿಶ್ವಾಸದಿಂದ ಉತ್ತಮ ಫಲಿತಾಂಶಗಳನ್ನು ಕಂಡುಕೊಳ್ಳಲು ಸಾಧ್ಯ.

ಕನ್ಯಾ ಕಲಾ ಕ್ಷೇತ್ರದಲ್ಲಿ ಇಂದು ಯಶಸು ಕಾಣುವಿರಿ. ಹೊಸ ಸ್ನೇಹಿತರಿಂದ ಪ್ರೇರಣೆ ದೊರಕುತ್ತದೆ. ದೀರ್ಘಕಾಲಿಕ ಲಾಭ ಸಾಧ್ಯ.

ತುಲಾ ಆರ್ಥಿಕ ಸ್ಥಿತಿಯಲ್ಲಿ ತೃಪ್ತಿಕರ ಬದಲಾವಣೆ ನೋಡುವಿರಿ. ಶ್ರಮ ಮತ್ತು ಪರಿಶ್ರಮವನ್ನು ಗುರುತಿಸುವವರಿಂದ ಮೆಚ್ಚುಗೆ ಗಳಿಸುವಿರಿ.

ವೃಶ್ಚಿಕ ವೃತ್ತಿಜೀವನದಲ್ಲಿ ಅಪೂರ್ವ ಪ್ರಗತಿ ಹೊಂದಲು ಅವಕಾಶ ಎದುರಾಗುತ್ತವೆ. ಕಠಿಣ ಪರಿಶ್ರಮದ ಫಲವನ್ನು ಇಂದು ಅನುಭವಿಸುವಿರಿ.

ಧನು ಗುರಿ ಸಾಧಿಸಲು ಹೆಚ್ಚು ಸ್ಫೂರ್ತಿಯುತ ದಿನ. ಉತ್ಸಾಹ, ಪರಿಶ್ರಮದಿಂದ ಯಶಸ್ಸು ತರುತ್ತದೆ.

ಮಕರ ಮನೆ ಮತ್ತು ಕುಟುಂಬದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಮನಸ್ಸಿಗೆ ಶಾಂತಿ ಮತ್ತು ಸಂತೋಷ ಲಭಿಸಲಿದೆ.

ಕುಂಭ ಹೊಸ ಯೋಜನೆಗಳ ಪ್ರಾರಂಭಕ್ಕೆ ಇಂದು ಉತ್ತಮ ದಿನ. ಆತ್ಮವಿಶ್ವಾಸ ಹೆಚ್ಚುತ್ತದೆ. ಸಕಾರಾತ್ಮಕ ಚಿಂತನೆಗಳಿಂದ ಉತ್ತಮ ಪ್ರಯೋಜನ ಪಡೆಯಿರಿ.

ಮೀನ ಪಠಣ, ಅಧ್ಯಯನದಲ್ಲಿ ಗಮನ ನೀಡಲು ಯೋಗ್ಯ ಸಮಯ. ಮುಂದಿನ ಗುರಿಗಳನ್ನು ಸಾಧಿಸಲು ಪ್ರೇರಣೆ ದೊರೆಯಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಅಂತಾರಾಷ್ಟ್ರೀಯ ಖ್ಯಾತ ಗಾಯಕ ಕಿಂಗ್ ಆಫ್ ರಾಕ್ ಆ್ಯಂಡ್ ರೋಲ್ ಎಂದೇ ಖ್ಯಾತರಾಗಿದ್ದ ಎಲ್ವಿಸ್ ಪ್ರೆಸ್ಲಿ ಅವರ ಹುಟ್ಟುಹಬ್ಬ
- ಖ್ಯಾತ ಕನ್ನಡ ಸಿನಿಮಾ ನಟ ಯಶ್ ಅವರ ಹುಟ್ಟುಹಬ್ಬ
- ಅಂತಾರಾಷ್ಟ್ರೀಯ ಟೈಪಿಂಗ್ ದಿನ

ಚಿತ್ರಸ್ಫೂರ್ತಿ



ಚೀನಾದಲ್ಲಿ ಮತ್ತೊಂದು ವೈರಸ್‌ನ ಹಾವಳಿ ಬಂದಿದೆ. ಮತ್ತೊಮ್ಮೆ ಲಾಕ್‌ಡೌನ್ ಮಾಡಬಹುದು ಎಂದು ಹೆದರಿರುವವರಿಗೆ. ಈ ಫೋಟೋ ಚೀನಾದ್ದೇ. ಇದು ಸೋಮವಾರದಿಂದ ಶುರುವಾಗಿರುವ ಹರ್ಬಿನ್ ಐಸ್-ಸ್ನೋ ವರ್ಲ್ಡ್ ಅನ್ನುವ ಹೆಸರಿನ ಕಾರ್ಯಕ್ರಮ ನಡೆಯುತ್ತದೆ. ಭರ್ಜರಿಯಾಗಿ ಜನರೂ ಸೇರಿದ್ದಾರೆ!

ಭಗವಂತನ ಪ್ರೇರಣೆ ಇದ್ದಲ್ಲಿ ಮಾತ್ರ ಕಾರ್ಯಪ್ರಾಪ್ತಿ!

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಶೋಕ ವನದಲ್ಲಿ ರಾವಣ... ಸೀತೆಯ ಮೇಲೆ ಕೋಪಗೊಂಡು, ಕತ್ತಿಯಿಂದ ಅವಳನ್ನು ಕೊಲ್ಲಲು ಮುಂದಾದಾಗ... ಹನುಮಂತನಿಗೆ ನಾನು ಯಾರಿಂದಾದರೂ ಖಡ್ಗವನ್ನು ಸೆಳೆದು ತಂದು ರಾವಣಾಸುರನ 'ಶಿರಚ್ಛೇದ ಮಾಡಬೇಕು' ಎನ್ನುವಷ್ಟು ಕೋಪ ಉಕ್ಕಿ ಬಂತು.

ಆದರೆ ಮರು ಕ್ಷಣದಲ್ಲಿ ಮಂಡೋದರಿ... ರಾವಣನ ಕೈ ಹಿಡಿದು ನಿಲ್ಲಿಸುವುದನ್ನು ಕಂಡನು! ಅವನಿಗೆ ಆಶ್ಚರ್ಯವಾಯಿತು. ಹನುಮಂತ ಯೋಚಿಸಿದ, 'ನಾನಿಲ್ಲಿ ಇಲ್ಲದಿದ್ದರೆ... ಸೀತಮ್ಮನನ್ನು ಕಾಪಾಡುವವರಾರು ಎಂದುಕೊಂಡಿದ್ದೆ ಬಹುಶಃ ಇದು ನನ್ನ ಭ್ರಮೆ! ಭಗವಂತ ಸೀತಾ ಮಾತೆಯನ್ನು ರಕ್ಷಿಸುವ ಕೆಲಸವನ್ನು ರಾವಣನ ಹೆಂಡತಿಗೆ ವಹಿಸಿದನು' ಆಗ ಹನುಮಂತನಿಗೆ ಅರ್ಥವಾಯಿತು, 'ಯಾರಿಂದ ಯಾವ ಕೆಲಸ ಆಗಬೇಕು... ಅವರ ಮೂಲಕ ಭಗವಂತ ಮಾಡುತ್ತಾನೆ' ಎಂದು.

ಮುಂದೆ ಹೋಗುತ್ತಾ ತ್ರಿಜಟಾ - 'ನೀನು ಲಂಕೆಗೆ ಬಂದು ಲಂಕೆಯನ್ನು ಸುಡುವ ಕನಸನ್ನು ಕಂಡೆ' ಎಂದು ಹನುಮಂತನಿಗೆ ಹೇಳಿದಳು. ಆದರೆ ಇದು ಹನುಮಂತನಿಗೆ ಪರಮ ಆಶ್ಚರ್ಯವೆನಿಸಿತು. ಏಕೆಂದರೆ ಭಗವಂತನು ಸೀತೆಯನ್ನು ನೋಡಲು ಮಾತ್ರ ಹೇಳಿದ್ದನು ಮತ್ತು ಲಂಕೆಯನ್ನು ಸುಡುವಂತೆ ಹೇಳಿರಲಿಲ್ಲ.

'ಲಂಕೆಯನ್ನು ಸುಡಲು ತನ್ನಿಂದ ಹೇಗೆ ಸಾಧ್ಯ...' ಎಂದು ಯೋಚಿಸಿದನು. ಆದರೆ ಇದನ್ನು ತನ್ನ ಕನಸಿನಲ್ಲಿ ಕಂಡೆ ಎಂದು ತ್ರಿಜಟಾ ಹೇಳಿದ್ದಾಳೆ. ಧರ್ಮ ಮೀಮಾಂಸೆಗೆ ಬಿದ್ದ ಹನುಮಂತ... 'ಈಗ ಏನು ಮಾಡಬೇಕು? ಸರಿ, ಭಗವಂತನ ಇಚ್ಛೆಯಂತೆ ಆಗಲಿ...' ಎಂದುಕೊಂಡನು. ರಾವಣನ ಸೈನಿಕರು ಹನುಮಂತನನ್ನು ಕೊಲ್ಲಲು ಓಡೋಡಿ ಬಂದಾಗ... ಹನುಮಂತ ಏನೂ ಮಾಡಲಿಲ್ಲ.

ಅವನು ಹಾಗೆಯೇ ಸುಮ್ಮನೆ ನಿಂತನು. ಆದರೆ ಆ ವೇಳೆಗೆ ವಿಭೀಷಣ ಬಂದ, ಆ ಸೈನಿಕರಿಗೆ ದೂತನನ್ನು ಕೊಲ್ಲುವುದು ಸರಿಯಲ್ಲ ಎಂದನು.

ಆಗ ಹನುಮಂತನಿಗೆ ಭಗವಂತ ತನ್ನನ್ನು ರಕ್ಷಿಸುವ ಹೊಣೆಯನ್ನು ವಿಭೀಷಣನ ಮೇಲಿರಿಸಿದ್ದಾನೆಂದು ಅರಿವಾಯಿತು.

ಅಚ್ಚರಿಯ ಪರಾಕಾಷ್ಠೆ ಎಂದರೆ ವಿಭೀಷಣ ಹೇಳಿದಾಗ... ರಾವಣನು ಒಪ್ಪಿ 'ಕೋತಿಯನ್ನು ಕೊಲ್ಲಬೇಡ. ಮಂಗಗಳು ತಮ್ಮ ಬಾಲವನ್ನು ಹೆಚ್ಚಾಗಿ ಪ್ರೀತಿಸುತ್ತವೆ. ಬಾಲಕ್ಕೆ ಬೆಂಕಿ ಹಚ್ಚಿರಿ' ಎಂದನು. ಆಗ ತ್ರಿಜಟಾಳ ಕನಸು ನನಸಾಗಲಿದೆ ಎಂದು ಹನುಮಂತನಿಗೆ ಹೆಚ್ಚು ಮನದಟ್ಟಾಯಿತು. 'ಒಂದು ವೇಳೆ ಭಗವಂತ ನನಗೆ ಹೇಳಿದ್ದರೆ... ನಾನು ಎಣ್ಣೆಯನ್ನು ಎಲ್ಲಿ ತರಬೇಕು, ಬಟ್ಟೆ ಎಲ್ಲಿ ಪಡೆಯಬೇಕು, ಬೆಂಕಿಯನ್ನು ಎಲ್ಲಿಂದ ತರುವುದು, ಲಂಕೆಯನ್ನು ಸುಡುವುದು ಯಾವಾಗ! ಆಲೋಚನೆಗಳ ಕೋಲಾಹಲದಲ್ಲಿ ಮುಳುಗಿ ಹೋಗಿರುತ್ತಿದ್ದೆ.' ವಿಸ್ಮಯಕಾರಿ ಸಂಗತಿಯೆಂದರೆ ಎಲ್ಲ ವ್ಯವಸ್ಥೆಗಳನ್ನು ರಾವಣನೇ ಮಾಡಿದನು. ರಾವಣಾಸುರನಿಂದ ಸಹ ತನ್ನ ಕೆಲಸ ಮಾಡಿಸಬಲ್ಲ ಅವನ ಒಡೆಯ ರಾಮನು ಲಂಕೆಯನ್ನು ನೋಡಿ ಬಾ ಎಂದು ಮಾತ್ರ ಅಪ್ಪಣೆ ಕೊಟ್ಟದ್ದು ಆಶ್ಚರ್ಯವೇ ಸರಿ!

ಒಮ್ಮೆ ಯೋಚಿಸಿ ನೋಡಿ ಮಾಡಿದ ಚಿಕ್ಕ ಕೆಲಸವನ್ನೇ ನಾನು ಮಾಡಿದ್ದು ಎಂದು ನೂರು ಬಾರಿ ಹೇಳುತ್ತಾ ಜತಾಯಿಸುವ ನಾವು, ಎಲ್ಲ ಭಗವಂತನ ದಯೆ ಎನ್ನುವ ವಿನಯವನ್ನು ತೋರಿಸುವುದನ್ನೇ ಮರೆಯುತ್ತೇವೆ. ಯಾರಿಗಾದರೂ ಸಹಾಯ ಮಾಡಿ ಅವರು ಆಜೀವ ಪರ್ಯಂತ ನಮಗೆ ಋಣಿಯಾಗಿರಬೇಕು ಎಂದು ಬಯಸುತ್ತೇವೆ. ಪದೇ ಪದೇ ಅದನ್ನ ನೂರು ಜನರ ಮುಂದೆ ಹೇಳುತ್ತಾ ನಮ್ಮ ಹಿರಿತನವನ್ನು ಮೆರೆಯುತ್ತೇವೆ. ಆದರೆ ಭಗವಂತನ ಪ್ರೇರಣೆ ಇಲ್ಲದೆ ಹೋದರೆ ಒಂದು ಹುಲ್ಲು ಕಡ್ಡಿಯನ್ನು ನಾವು ಅಲ್ಲಾಡಿಸಲು ಸಾಧ್ಯವಿಲ್ಲ. ಈ ಮಾತುಗಳು ನಮಗೆ ನೆನಪಿದ್ದಾಗ ಮಾತ್ರ ನಾವು ವಿನೀತರಾಗಿ ಬದುಕುವುದನ್ನು ಕಲಿಯುತ್ತೇವೆ.

ಜಗತ್ತಿನಲ್ಲಿ ನಡೆಯುವ ಎಲ್ಲವೂ ದೇವರ ಪ್ರಕಾರ ಅವನ ಆಣತಿಯಂತೆ ಮಾತ್ರ ನಡೆಯುತ್ತದೆ. ನಾವೆಲ್ಲರು ಅದಕ್ಕೆ ತಕ್ಕಂತೆ ನಡೆಯುತ್ತೇವೆ. ನಾವೆಲ್ಲರೂ ಕೇವಲ ನಿಮಿತ್ತ ಮಾತ್ರ. ಆದ್ದರಿಂದ

'ನಾನು ಮಾಡದಿದ್ದರೆ ಏನೂ ಆಗುವುದಿಲ್ಲ, ನಾನೇ ಶ್ರೇಷ್ಠ' ಎಂಬ ಭ್ರಮೆಗೆ ಖಂಡಿತ ನಾವು ಬೀಳುವುದು ಬೇಡ. ಎಲ್ಲವೂ ಭಗವಂತನ ಪ್ರೇರಣೆ ನಾವು ನಿಮಿತ್ತ ಮಾತ್ರ.

10ಸಾವಿರ ಕೀಟ ಪ್ರಬೇಧಗಳನ್ನು ಹೆಸರಿಸಿದ ಫ್ಯಾಬ್ರಿಯಾಸಿಸ್!

ಭೂಮಿಯ ಮೇಲೆ ಸಸ್ಯ, ಪ್ರಾಣಿ, ಪಕ್ಷಿ ಜಗತ್ತು ಹೇಗೋ ಹಾಗೇ ಕೀಟ ಜಗತ್ತೂ ಇದೆ. ಈ ಕೀಟ ಜಗತ್ತು ಬಲು ವಿಶೇಷವಾದುದು. ಇಂತಹ ಕೀಟಜಗತ್ತಿನ ಕುರಿತಾದ ಅಧ್ಯಯನಕ್ಕೆ 'ಎಂಟಮಾಲಜಿ'(ಕೀಟಶಾಸ್ತ್ರ) ಎಂದು ಕರೆಯಲಾಗುತ್ತದೆ.

ಇವರು 18 ನೇ ಶತಮಾನದ ಶ್ರೇಷ್ಠ ಕೀಟಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ ಡ್ಯಾನಿಶ್ ಕೀಟಶಾಸ್ತ್ರಜ್ಞ. ಸ್ವೀಡಿಷ್ ನೈಸರ್ಗಿಕವಾದಿ ಲಿನ್ನಿಯಸ್ ಅವರೊಂದಿಗೆ ಅಧ್ಯಯನ ಮಾಡಿದ ನಂತರ, ಇವರು ವಿಭಿನ್ನ ಬಗೆಯ ಕೀಟಗಳನ್ನು ವೀಕ್ಷಿಸಲು ಯುರೋಪ್ ಖಂಡವನ್ನು ಸಂಪೂರ್ಣವಾಗಿ ಸುತ್ತಿದರು. ಮತ್ತು ಅವರು ನೋಡಿದ ಎಲ್ಲ ಹೊಸ ಕೀಟ ಪ್ರಜಾತಿಗಳನ್ನು ವಿವರಿಸುವ ಅನೇಕ ಲೇಖನಗಳನ್ನು ಬರೆದರು. ಅವರು ಸುಮಾರು 10,000 ಜಾತಿಯ ಕೀಟಗಳನ್ನು ಹೆಸರಿಸಿದಲ್ಲದೇ, ವೈಜ್ಞಾನಿಕವಾಗಿ ವರ್ಗೀಕರಿಸಿದರು. ಅವರು ಅಭಿವೃದ್ಧಿಪಡಿಸಿದ ಕೀಟಗಳ ವರ್ಗೀಕರಣದ ವ್ಯವಸ್ಥೆಯು ಬಾಯಿಯ ರಚನೆಯನ್ನು ಆಧರಿಸಿದೆ (ರೆಕ್ಕೆಯ ಬದಲಿಗೆ). ತಮ್ಮ ಕಾಲಕ್ಕೆ ಪ್ರಗತಿಪರವಾದ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಹೈಬ್ರಿಡೈಸೇಶನ್‌ನಿಂದ ಹೊಸ ಜಾತಿಗಳು ಅಥವಾ ಪ್ರಭೇದಗಳನ್ನು ಉತ್ಪಾದಿಸಬಹುದು ಮತ್ತು ಪರಿಸರದ ರೂಪಾಂತರವು

ತಿಳಿಯೋಣ

● ಎಲ್.ಪಿ.ಕುಲಕರ್ಣಿ

ಅಂಗರಚನಾ ರಚನೆ ಅಥವಾ ಕಾರ್ಯದಲ್ಲಿನ ಬದಲಾವಣೆಗಳ ಮೇಲೆ ಪ್ರಭಾವ ಬೀರಬಹುದು ಎಂದು ಹೇಳಿದ ಆ ಕೀಟಶಾಸ್ತ್ರಜ್ಞರೇ ಜೋಹಾನ್ ಕ್ರಿಶ್ಚಿಯನ್ ಫ್ಯಾಬ್ರಿಸಿಯಸ್.

7ನೇ ಜನವರಿ 1745 ರಂದು ಷೆಲ್ಸ್‌ವಿಗ್‌ನ ಡಚಿಯಲ್ಲಿರುವ ಟೆಂಡರ್(ಈಗಿನ ಡೆನ್ಮಾರ್ಕ್)ನಲ್ಲಿ ಫ್ಯಾಬ್ರಿಸಿಯಸ್ ಜನಿಸಿದರು. ಇವರ ತಂದೆ ವೈದ್ಯರಾಗಿದ್ದರು. ಪ್ರಾರಂಭದಲ್ಲಿ ಆಲ್ಟೋನಾದ ಜಿಮ್ನಾಷಿಯಂನಲ್ಲಿ ಅಧ್ಯಯನ ಮಾಡಿದರ ಫ್ಯಾಬ್ರಿಸಿಯಸ್, 1762 ರಲ್ಲಿ ಕೋಪನ್ ಹ್ಯಾಗನ್ ವಿಶ್ವವಿದ್ಯಾಲಯ ಪ್ರವೇಶಿಸಿದರು. ನಂತರ ಅವರು ತಮ್ಮ ಸ್ನೇಹಿತ ಮತ್ತು ಸಂಬಂಧಿ ಜೊಹಾನ್ ಜೊಗಾ ಜೊತೆಯಾಗಿ ಉಪ್ಸಲಾಗೆ ಪ್ರಯಾಣ ಬೆಳೆಸಿದರು, ಅಲ್ಲಿ ಅವರು ಕಾರ್ಲ್ ಲಿನ್ನಿಯಸ್ ಅವರ ಅಡಿಯಲ್ಲಿ ಎರಡು ವರ್ಷಗಳ ಕಾಲ ಅಧ್ಯಯನ ಮಾಡಿದರು. ಹಿಂದಿರುಗಿದ ನಂತರ, ಅವರು ತಮ್ಮ ಸಿಸ್ಟಮಾ ಎಂಟೊಮೊಲೊಜಿಯಾದಲ್ಲಿ ಕೆಲಸವನ್ನು ಪ್ರಾರಂಭಿಸಿದರು. ಆ ಕೃತಿಯು ಅಂತಿಮವಾಗಿ 1775 ರಲ್ಲಿ ಪ್ರಕಟವಾಯಿತು. ಈ ಸಮಯದುದ್ದಕ್ಕೂ, ಅವರು ಫ್ರೆಡೆರಿಕ್ಸ್ ಆಸ್ಪತ್ರೆಯಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ ತಮ್ಮ ತಂದೆಯಿಂದ ಸಹಾಯಧನದ ಮೇಲೆ ಅವಲಂಬಿತರಾಗಿದ್ದರು.

1770 ರಲ್ಲಿ ಫ್ಯಾಬ್ರಿಸಿಯಸ್ ಕೋಪನ್ ಹ್ಯಾಗನ್‌ನಲ್ಲಿ ಪ್ರೊಫೆಸರ್ ಆಗಿ ನೇಮಕಗೊಂಡರು. ಮತ್ತು 1775 ಅಥವಾ 1776 ರಲ್ಲಿ, ಕಿಯೆಲ್ ವಿಶ್ವವಿದ್ಯಾನಿಲಯವು ನೈಸರ್ಗಿಕ ಇತಿಹಾಸ ಮತ್ತು ಅರ್ಥಶಾಸ್ತ್ರ ವಿಷಯಗಳ ಬೋಧನೆಗೆಂದು ಫ್ಯಾಬ್ರಿಸಿಯಸ್ ಅವರನ್ನು ಪ್ರೊಫೆಸರ್ ಆಗಿ ನೇಮಿಸಿತು. ಆಗ ಅವರಲ್ಲಿ ನೈಸರ್ಗಿಕ ಇತಿಹಾಸದ ವಸ್ತುಸಂಗ್ರಹಾಲಯ ಮತ್ತು ಸಸ್ಯೋದ್ಯಾನವನ್ನು ನಿರ್ಮಿಸುವುದಾಗಿ ಭರವಸೆ ನೀಡಿದರು.

ಕೀಲ್‌ನಲ್ಲಿದ್ದ ಸಮಯದಲ್ಲಿ, ಫ್ಯಾಬ್ರಿಸಿಯಸ್ ಅವರು ಜೋಸೆಫ್ ಬ್ಯಾಂಕ್ಸ್ ಮತ್ತು ಡ್ರು ಡ್ರುರಿಯಂತಹ ಬ್ರಿಟಿಷ್ ಕಲೆಕ್ಟರ್‌ಗಳ ಸಂಗ್ರಹಗಳನ್ನು ಅಧ್ಯಯನ ಮಾಡಲು ಬೇಸಿಗೆಯಲ್ಲಿ ಲಂಡನ್‌ಗೆ ಪದೇ ಪದೇ ಪ್ರಯಾಣಿಸುತ್ತಿದ್ದರು. ವೃತ್ತಿಜೀವನದ ಅಂತ್ಯದ ವೇಳೆಗೆ, ಫ್ಯಾಬ್ರಿಸಿಯಸ್ ತಮ್ಮ ಹೆಚ್ಚಿನ ಸಮಯವನ್ನು ಪ್ಯಾರಿಸ್‌ನಲ್ಲಿ ಕಳೆದರು. ಅಲ್ಲಿ ಅವರು ಜಾರ್ಜಸ್ ಕುವಿಯರ್ ಮತ್ತು ಪಿಯರ್ ಆಂಡ್ರೆ ಲ್ಯಾಟ್ರೀಲ್ ನಂತಹ ನೈಸರ್ಗಿಕವಾದಿಗಳನ್ನು ಆಗಾಗ ಭೇಟಿಯಾಗುತ್ತಾರೆ; ಅವರು ಫ್ರೆಂಚ್ ಕ್ರಾಂತಿಯ ಘಟನೆಗಳಲ್ಲಿ ಆಸಕ್ತಿ ಹೊಂದಿದ್ದರು. 1807 ರಲ್ಲಿ ಕೋಪನ್ ಹ್ಯಾಗನ್ ಮೇಲೆ ಬ್ರಿಟಿಷ್ ದಾಳಿಯ ಕುರಿತು ಕೇಳಿದ ನಂತರ, ಫ್ಯಾಬ್ರಿಸಿಯಸ್ ಕೀಲ್‌ಗೆ ಹಿಂದಿರುಗಿದರು. ಅಷ್ಟರಲ್ಲಾಗಲೇ ಅವರಿಗೆ ಆರೋಗ್ಯ ಕೈಕೊಟ್ಟಿತ್ತು. ದೀರ್ಘಕಾಲದ ಅನಾರೋಗ್ಯದಿಂದ 3 ಮಾರ್ಚ್ 1808 ರಂದು ತಮ್ಮ 63 ನೇ ವಯಸ್ಸಿನಲ್ಲಿ ನಿಧನರಾದರು. ಫ್ಯಾಬ್ರಿಸಿಯಸ್ ಅವರ ಮಗಳು ಪ್ಯಾರಿಸ್‌ನಲ್ಲಿ ಅಪಘಾತದಲ್ಲಿ ನಿಧನರಾದರು. ಆದರೆ ಅವರು ಇಬ್ಬರು ಗಂಡು ಮಕ್ಕಳುಪ್ರಾಣಾಪಾಯದಿಂದ ಪಾರಾಗಿ ಮುಂದೆ ಅವರಿಬ್ಬರೂ ವೈದ್ಯಕೀಯವನ್ನು ಅಧ್ಯಯನ ಮಾಡಿದರು.

ಫ್ಯಾಬ್ರಿಸಿಯಸ್ ಅವರು ವಿಕಸನೀಯ ವಿಚಾರಗಳನ್ನು ಚೆನ್ನಾಗಿ ತಿಳಿದಿರಲಿಲ್ಲ. ಮನುಷ್ಯ ಮಹಾನ್ ಮಂಗಗಳಿಂದ ಹುಟ್ಟಿಕೊಂಡಿದ್ದಾನೆ ಮತ್ತು ಅಸ್ತಿತ್ವದಲ್ಲಿರುವ ಜಾತಿಗಳ ಹೈಬ್ರಿಡೈಸೇಶನ್‌ನಿಂದ ಹೊಸ ಜಾತಿಗಳು ರೂಪುಗೊಳ್ಳಬಹುದು ಎಂದು ಅವರು ನಂಬಿದ್ದರು. ರೂಪವಿಜ್ಞಾನದ ಅಳವಡಿಕೆಯಿಂದ ಹೊಸ ಪ್ರಜಾತಿಗಳು ರೂಪುಗೊಳ್ಳಬಹುದು ಎಂಬ ಅವರ ನಂಬಿಕೆಯ ಕಾರಣದಿಂದ ಅವರನ್ನು 'ಲಾಮಾರ್ಕಿಸಂನ ಪಿತಾಮಹ' ಎಂದು ಕರೆಯಲಾಗುತ್ತದೆ. ಫ್ಯಾಬ್ರಿಸಿಯಸ್ ಪ್ರಜಾತಿಗಳ ಅಭಿವೃದ್ಧಿ ಮತ್ತು ಆಯ್ಕೆಯ ವಿದ್ಯಮಾನಗಳ ಮೇಲೆ ಪರಿಸರದ ಪ್ರಭಾವದ ಬಗ್ಗೆ ಬರೆದಿದ್ದಾರೆ.

ಪದಬಂಧ



ಎಡದಿಂದ ಬಲಕ್ಕೆ

2. ಸಿದ್ಧತೆ, ತಯಾರಿಗೆ ಮತ್ತೊಂದು ಹೆಸರು (3)
5. ವಿಶೇಷವಾದ ಅರ್ಥವುಳ್ಳ ಪದಪುಂಜ (4)
6. ಮೋಸದ ಬಲೆಯಿದು (4)
7. ಹಾಡೊಂದರ ಆರಂಭದಲ್ಲಿದ್ದು ನುಡಿಗೊಂದು ಸಲ ಪುನರಾವರ್ತನೆಯಾಗುವ ಭಾಗ (3)
10. ಅತ್ಯಂತ ಕೆಳಗಿನ ಅಥವಾ ನೀಚ ಎಂದರ್ಥ (3)
11. ಅರಸನಿಗೆ ಮಾಡುವ ಸೇವೆಯನ್ನು ಹೀಗೆನ್ನಬಹುದು (5)
12. ಮಗ ತಿರುಗಿ ನಿಂತಿರುವ ಹುಟ್ಟು (3)
13. ನಿರಂತರ ಎನ್ನುವ ಮತ್ತೊಂದು ಪದ (3)
17. ಉಂಬಳಿಯಾಗಿ ದೊರೆತ ಊರು (4)
18. ಯುದ್ಧ ಭೂಮಿ (4)
19. ಕಡೆಗೆ ದೊರೆತ ಒಂದು ಬಗೆಯ ಸಮುದ್ರ ಚಿಪ್ಪು (3)

ಎಡದಿಂದ ಬಲಕ್ಕೆ

1. ಅವನು ಯೋಗ್ಯವಾದವನು (4)
2. ಬಡಿಸಲು ಬೇಕಾಗುವ ಸೌಟು (3)
3. ಕೂಲಿಯ ಕೆಲಸ ಮಾಡುವವನು (3)
4. ಶ್ರೀಕೃಷ್ಣನ ಸಹೋದರ (4)
8. ರಾಮನಿಗೂ ಬೇಕು ಬಿಡುವು (3)
9. ಅಳೆಯುವ ಸಾಧನ (3)
10. ರಾಜ್ಯವೊಂದರ ದೊರೆ (3)
12. ಜನರಿಗೆ ಸಿಕ್ಕಿದ ಪ್ರೋತ್ಸಾಹ (4)
14. ಪಾಠ-ಪ್ರವಚನ ನಡೆವ ಕಕ್ಷೆ (4)
15. ದಯೆಗೆ ಮತ್ತೊಂದು ಹೆಸರು (3)
16. ಸೀಸೆ ಮುಂತಾದುವುಗಳ ಮುಚ್ಚಳ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತ್ರಾಸ 5. ಶಂಕೆ 6. ಕಾರಂಜಿ 7. ರಕ್ಷಕ 8. ಬಲ 9. ಕೆರಳು 11. ರವ 15. ಸುಹಾಸಿನಿ 16. ದಿಟ್ಟತನ 18. ರಿಪು 20. ಜವನ 22. ಅಂಗ 23. ರಾದ್ಧಾಂತ 24. ಗರತಿ 25. ನಾವೆ 26. ಮಸಿ

ಎಡದಿಂದ ಬಲಕ್ಕೆ: 2. ಸಕಾಲ 3. ಅಂಜಿಕೆ 4. ಕೊರಳು 5. ಶಂಕರ 8. ಬಳಸುದಾರಿ 10. ರಶ್ಮಿ 12. ವಚನಭಂಗ 13. ಹಾಸಿಗೆ 14. ಮಟ್ಟಸ 17. ಭಾವ 19. ಪುರಾವೆ 20. ಜತನ 21. ನಗದು 22. ಅಂತಿಮ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಚಿಟ್ಟೆ ಅಲ್ಲಲ್ಲಿ ಕೂತುಕೊಳ್ಳೊದು ಏಕಂತೆ?

ಚಿಟ್ಟೆ ಯಾವಾಗಲೂ ಒಂದು ರೀತಿಯ ಸಂತೋಷದ ಕುರುಹು. ಸಿನಿಮಾದಲ್ಲಿ ನಟಿ ಬರುವಾಗ ಚಿಟ್ಟೆಯನ್ನು ತೋರಿಸುತ್ತಾರೆ. ಅಥವಾ ಯಾರೋ ತಮ್ಮ ಪ್ರೀತಿಯ ಹುಡುಗಿಗೆ ಚಿಟ್ಟೆ ಎಂದು ಹೆಸರೂ ಇಡಬಹುದು. ಚಿಟ್ಟೆ ಯಾವಾಗಲೂ ಕಲರ್‌ಫುಲ್! ಆದರೆ ದಿನ ನೋಡುವ ಚಿಟ್ಟೆಯಲ್ಲಿ ಒಂದೇನಾದರೂ ಗಮನಿಸಿದ್ದೀರಾ? ಅದರ ದೇಹಕ್ಕಂತ ದೊಡ್ಡದಾಗಿ ರೆಕ್ಕೆಗಳಿರುತ್ತವೆ. ಹಾಗೆ ಅದು ಕೆಲವು ಹೂಗಳ ಮೇಲೆ ತುಂಬಾ ಸಮಯ ಕೂತು ಕೊಂಡರೆ, ಇನ್ನೂ ಕೆಲವು ಹೂಗಳ ಮೇಲೆ ಅದು ಜಾಸ್ತಿ ಸಮಯ ಇರುವುದಿಲ್ಲ. ಅದು ಏಕೆ ಗೊತ್ತಾ? ಅದು ರುಚಿ ನೋಡವುದು ಕಾಲಿಂದ.



ತುಂಬಾ ರುಚಿಯಾಗಿರುವ ಗಿಡವಿದ್ದರೆ, ಅದರ ಮೇಲೆ ಕೂತು ಮೊಟ್ಟೆಯಿಡುತ್ತೆ. ಹಾಗೇ ಅದರ ಅದರ ಪಾದಗಳು ತುಂಬಾ ಸೂಕ್ಷ್ಮವಾಗಿರುತ್ತದೆ. ಸಸ್ಯಗಳಿಂದ ಬಿಡುಗಡೆಯಾಗುವ ಕೆಲವು ರಾಸಾಯನಿಕಗಳ ಮೇಲೆ ಅದು ಮೊಟ್ಟೆಯಿಡುವುದರ ಭವಿಷ್ಯ ಇರುತ್ತದೆ. ಹಾಗೇ ಪಾತರಗಿತ್ತಿಯ ಗಾತ್ರ ಅತೀ ಚಿಕ್ಕದಾಗಿದ್ದರೂ, ಅದರ ಜೀವಿತಾವಧಿ ಸ್ವಲ್ಪ ಜಾಸ್ತಿಯೇ. ಕೆಲವು ಪಾತರಗಿತ್ತಿಗಳು ಕೆಲದಿನಗಳ ವರೆಗೂ ಬದುಕಿದರೆ, ಇನ್ನೂ ಕೆಲವು ವಾರಗಟ್ಟಲೇ ಬದುಕಬಹುದು!

ಪುಸ್ತಕ ಲೋಕ

ತತ್ರಾಣಿ

ಇದು ದೀಪಾ ಜೋಶಿ ಅವರು ಬರೆದಿರುವ ಗತ ಶತಮಾನದ ಉತ್ಕ್ರಾಂತಿ ಕಥನವುಳ್ಳ ಕಾದಂಬರಿಯಾಗಿದೆ. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾಗಿ, ಉತ್ತರಾರ್ಧದಲ್ಲಿ ಕೊನೆಗೊಳ್ಳುವ ನಡುವಿನ ಸುಮಾರು ಐವತ್ತು ವರ್ಷಗಳ ಕಥಾ ಜಗತ್ತು ದೀಪಾ ಜೋಶಿಯವರು ಈ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತದೆ. ಉತ್ತರ ಕರ್ನಾಟಕದ



ರಾಣೆಬೆನ್ನೂರು ಕೇಂದ್ರವಾಗುಳ್ಳ ಮಾಧ್ವ ವೈದಿಕ ಕುಟುಂಬವೊಂದರ ಬದುಕಿನ ಹೋರಾಟದ ಕಥೆ ಇಲ್ಲಿದೆ. ಹುಚ್ಚಾಚಾರರ್ ಸಾವಿನ ಸನ್ನಿವೇಶದಿಂದ ಆರಂಭವಾಗುವ ಈ ಕಥಾನಕವು, ಅವರ ಮಗ ಭುಜಂಗಾಚಾರರು ಬದುಕಿನ ಏಳುಬೀಳುಗಳ ಹೋರಾಟದಲ್ಲಿ ಸುದೀರ್ಘ ಬಾಳ ಯಾತ್ರೆಗಳಲ್ಲಿ, ತೀವ್ರ ಬಡತನ, ಸಾವು, ದುಃಖ, ಒದ್ದಾಟಗಳನ್ನು ಎದುರಿಸುತ್ತಾ, ಆ ಕುಲುಮೆಯಲ್ಲಿ ಬೆಂದು ಮಾಗುತ್ತಾ, ಎಂದೂ ಸಹನೆಯನ್ನು ಕಳೆದುಕೊಳ್ಳದೆ ಘನತೆಯಿಂದ ಬಾಳುತ್ತಲೇ ಸ್ಥಿತಪ್ರಜ್ಞ ಸ್ಥಿತಿಗೆ ತಲುಪುವ ಹಂತದಲ್ಲಿ ಅಂತ್ಯವಾಗುತ್ತದೆ. ಕಳೆದು ಹೋದ ಕಾಲಘಟ್ಟವೊಂದನ್ನು ಪುನರ್‌ಸೃಷ್ಟಿಸುವ ಕಾರ್ಯದಲ್ಲಿ ದೀಪಾ ಜೋಶೀಯವರು ತೋರಿದ ಸಂಯಮ, ಆ ಕಾಲದ ಶಾಸ್ತ್ರಗಳು ರೀತಿಮ ರಿವಾಜುಗಳು, ಸಾಮಾಜಿಕ ಸ್ಥಿತಿಗತಿಗಳು. ಮೊದಲಾದ ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸಿ, ಉತ್ತರ ಕರ್ನಾಟಕದ ಜವಾರಿ ಭಾಷೆಯಲ್ಲಿ ದಾಖಲಿಸಿದ ರೀತಿ ಅಪರೂಪದ್ದು.

ಕುಗ್ಗಿದಷ್ಟು ಬದುಕು ಮರಳುಗಾಡಿನಂತೆ!

● ವಾಣಿ ಮೈಸೂರು

ಮನಸಿನ ಮನಸ್ಥಿತಿ ತೀರಾ ಹದಗೆಟ್ಟಿದಾಗಲೇ ಮಾನಸಿಕವಾಗಿ ಕುಗ್ಗಿ ಹೋಗುವುದು ಹತ್ತಿರವಾದ ಕೆಲವೊಂದು ಸಂಬಂಧಗಳು ಬಿಟ್ಟು ಹೋದಾಗ ಪದೇ ಪದೇ ನೋವುಂಟು ಮಾಡಿದಾಗ ಮನಸು ತತ್ತರಿಸಿ ಹೋಗುತ್ತದೆ.

ಅರ್ಥ ಮಾಡಿಕೊಳ್ಳುವ ಮನೋಭಾವನೆ ಕುಸಿದು, ಗೌರವವಿಲ್ಲದೇ ಭಾವನೆಗಳು ಸೋತು ಸಂಬಂಧ ಕೈ ಮೀರಿ ದೂರ ಹೋಗಿರುತ್ತದೆ. ಆ ಸಂದರ್ಭದಲ್ಲಿ ಅವರು ಮಾಡಿದ್ದೂ ಅವರಿಗೆ ಸರಿ? ನಾನಂತು ಸೋಲುವ ಮಾತಿಲ್ಲ ನನ್ನ ತಪ್ಪು ಏನಿಲ್ಲ? ಎನ್ನುವ ಮನಸ್ಥಿತಿ ಸೃಷ್ಟಿ ಯಾಗಿರುವ ಸಂಬಂಧ ಮತ್ತೆ ಬೆಸೆಯವುದು ದೂರದ ಮಾತೆ. ಎಷ್ಟೇ ಸೋತು ಹಿಂದೆ ಹೋದರು ಅಂತಹ ಸಂಬಂಧ ಹೆಚ್ಚು ಕಾಲ ಬಾಳಲಾರದು.

ಏನೇ ಆಗಲಿ ಯಾರೇ ಹೋಗಲಿ ಒಂಟಿ ಎಂದು ಕುಗ್ಗದಿರು ಮನವೇ ಕುಗ್ಗಿದಷ್ಟು ಬದುಕು ಮರಳುಗಾಡಿನಂತೆ ಖಾಲಿ ಭಾವಗಳೇ ಮನೆ ಮಾಡಿ ಬಣ್ಣವಿಲ್ಲದ ಗೋಡೆಯ ಬದುಕಂತೆ ಬಿತ್ತರಿಸುತ್ತದೆ.

ಋಣಾತ್ಮಕ ಭಾವನೆಗಳು ಆಳವಾಗಿ ಸಂಬಂಧಗಳಲ್ಲಿ ಮುಳುಗಿ ಹೋದಷ್ಟು ನಮ್ಮ ಬದುಕು ಕತ್ತಲೆ ಮುಂದೆ ಜೀವನವಿಲ್ಲ ಹೀಗೆ ಸಾಲು ಸಾಲು ಋಣಾತ್ಮಕ ಚಿಂತನೆ ಧನಾತ್ಮಕ ಆಲೋಚನೆಗಳಿಗೆ ಅವಕಾಶ ಕೊಡದೆ ಇಷ್ಟೇ ಜೀವನ ಮುಂದೆ ಇರುವುದೆಲ್ಲ ಹೀಗೆ ಅಂದುಕೊಂಡೆ ಜೀವಿಸಿ ಬಿಡಬೇಕಾಗುತ್ತದೆ. ಸಾಗಿದಂತೆ ತಿರುವುಗಳು ಬದಲಾಗುತ್ತದೆ ಹೊಸ ಬೆಳಕು ಕಾಣುವ ಭರವಸೆ ಹುಡುಕಿ ಮುಂದೆ ಸಾಗಬೇಕು ಅಷ್ಟೇ

- ಮನಸಿಗೆ ಸಮಾಧಾನ ಸಿಗುವ ಕೆಲಸವನ್ನೇ ಮಾಡಬೇಕು
- ತೊರೆದು ಹೋದವರ ತಪ್ಪುಗಳ ಪಟ್ಟಿ ಮಾಡಿದಷ್ಟು ಮರೆತು ಮುಂದೆ ಸಾಗಲು ಸಾಧ್ಯ.
- ಮೀರಿದ ಭಾವನೆಗಳು ಸೋತಿದೆ ಒಪ್ಪಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು ಉತ್ತಮ
- ಮನಸು ಖುಷಿ ಯಾಗಿ ಇರಲು ಧನಾತ್ಮಕ ಆಲೋಚನೆಗಳು ಮಾಡುವುದೇ ಒಳಿತು
- ಜೀವನ ಯಾರಿದ್ದರು ಇಲ್ಲದೆ ಹೋದರು ನಿಲ್ಲದು ಎನ್ನುವ ಮಾತು ಅರ್ಥ ಮಾಡಿಕೊಳ್ಳಲೆ ಬೇಕು.

ಸಣ್ಣ ಖುಷಿಯು ಕೂಡ ಸುಂದರ ಬದುಕೇ ಅದನ್ನು ಕಂಡು ಕೊಳ್ಳುವ ಮನೋಭಾವ ಬೆಳೆಸಿ ಕೊಂಡಷ್ಟು ಬದುಕು ಚಂದ ನಮ್ಮನ್ನು ಅರ್ಥ ಮಾಡಿಕೊಳ್ಳದವರಿಗಾಗಿ ನಮ್ಮ ಸುಂದರ ಜೀವನವನ್ನು ಏಕೆ ಹಾಳು ಮಾಡಿಕೊಳ್ಳಬೇಕು. ಜೀವನದಲ್ಲಿ ಸಿಗುವ ಖುಷಿ ಪಡೆದು ಕೊಳ್ಳುವುದನ್ನು ಅರಿತು ಕೊಳ್ಳ ಬೇಕು ಅಷ್ಟೇ.

ನ್ಯಾನೋ ಕತೆಗಳು

ಅತಿ ಚಿಕ್ಕ ಬೇಡಿ

ಭಾರೀ ಕಟ್ಟುನಿಟ್ಟು, ಶಿಸ್ತಿನಿಂದ ಕಳ್ಳರಿಗೆ ಸಿಂಹಸ್ವಪ್ನರೆನಿಸಿದ್ದ ಡಿವೈಎಸ್ಪಿ ಸಾಹೇಬರ 25 ನೇ ವಿವಾಹ ವಾರ್ಷಿಕೋತ್ಸವದಂದು ಶೋಕೇಸಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ವಿಶೇಷವಾಗಿ ಕಾಣುವಂತೆ ಇರಿಸಿದ್ದ ವಜ್ರದ ಉಂಗುರದ ಬಗ್ಗೆ ಕೇಳಿದಾಗ ಅದು ನೂರಾರು ಜನ ಖದೀಮರ ಕೈಗೆ ಬೇಡಿ ಹಾಕಿದ್ದ ನನ್ನ ಬೆರಳಿಗೆ 25 ವರ್ಷಗಳ ಹಿಂದೆ ನನ್ನ ಮಾವ ಹಾಕಿದ ಜಗತ್ತಿನ ಅತ್ಯಂತ ಚಿಕ್ಕ ಬೇಡಿ ಎಂದರು!

ಸತ್ತವರು ಯಾರು?

ಮನೆಯ ನಾಯಿ ಬಹಳ ಹೊತ್ತಿನಿಂದ ಬೋರೆಂದು ಅಳುವುದನ್ನು ಕೇಳಿ ಬಾಲ್ಯದಲ್ಲಿ ಅಜ್ಜಿ ನಾಯಿಗಳು ಯಮನನ್ನು ನೋಡಿ ಅಳುತ್ತವೆಂದೂ, ಅಂದು ಮನೆಯಲ್ಲಿ ಯಾರಾದರೂ ಸಾಯುವರೆಂದೂ ಹೇಳುತ್ತಿದ್ದುದು ನೆನಪಾಗಿ ಒಳಗೆ ಹಾಸಿಗೆ ಹಿಡಿದು ಮಲಗಿದ್ದ ಅಪ್ಪ ಸಾಯಬಹುದೇ ಎಂದು ಯೋಚಿಸುತ್ತಿದ್ದ ಗೋವಿಂದನಿಗೆ ನಿದ್ದೆ ಬಂದುದೇ ಗೊತ್ತಾಗಲಿಲ್ಲ. ಮುಂಜಾನೆ ನಿದ್ರೆಯಲ್ಲಿ ಹೃದಯಾಘಾತದಿಂದ ಮರಣ ಹೊಂದಿದ ಗೋವಿಂದನ ಹಾಸಿಗೆಯ ಸುತ್ತ ಮನೆಮಂದಿಯೆಲ್ಲ ಗೋಳಾಡುತ್ತಿದ್ದರು.

ಸಿಳ್ಳೆಯ ರಹಸ್ಯ

ಹೊಸದಾಗಿ ಕೆಲಸಕ್ಕೆ ಸೇರಿದ್ದ ಅಡುಗೆಭಟ್ಟ ನಿಮಿಷಕ್ಕೆರಡು ಸಲ ಏನನ್ನಾದರೂ ಕದ್ದು ತಿನ್ನುತ್ತಾನೆನ್ನುವ ಕುರಿತು ಜಗಪತಿರಾಯರಿಗೆ ಸಂಶಯ! ಸಿಕ್ಕಿತ್ತು ಒಂದು ಉಪಾಯ. ಅಂದು ರೂಮಿನಲ್ಲಿ ಕುಳಿತು ಹರಟುತ್ತಿದ್ದ ಬಾಲ್ಯದ ಗೆಳೆಯ ಅಡುಗೆಮನೆಯಿಂದ ನಿಮಿಷಕ್ಕೆರಡು ಬಾರಿ ಕೇಳುತ್ತಿದ್ದ ಸಿಳ್ಳೆ ಶಬ್ದದ ಬಗ್ಗೆ ವಿಚಾರಿಸಿದಾಗ ತಮ್ಮ ಅಡುಗೆಭಟ್ಟನ ಬಾಯಿ ಚಪಲ ತಪ್ಪಿಸಲು ತಾವೇ ಹಾಗೆ ಮತ್ತೆ ಮತ್ತೆ ಶಿಳ್ಳೆ ಹೊಡೆಯುತ್ತಿರಲು ಆಜ್ಞಾಪಿಸಿದ್ದಾಗಿ ಹೇಳಿ ನಕ್ಕರು.

● ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಸಮಾಚಾರ ಸಣ್ಣದಲ್ಲ

ರಿಷಿ ಧವನ್ ನಿವೃತ್ತಿ

ದೆಹಲಿ: ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿ ಮುಗಿದ ಬೆನ್ನಲ್ಲೇ ಟೀಂ ಇಂಡಿಯಾದಿಂದ ನಿವೃತ್ತಿಯ ಮಾತುಗಳು ಕೇಳಿ ಬರುತ್ತಿವೆ. ಈ ಮಧ್ಯೆ ರಿಷಿ ಧವನ್ ನಿಯಮಿತ ಓವರ್‌ಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. 2016ರಲ್ಲಿ ಆಸ್ಟ್ರೇಲಿಯಾ ವಿರುದ್ಧ ತಮ್ಮ ಚೊಚ್ಚಲ ಏಕದಿನ ಪಂದ್ಯ ಆಡಿ, ಅದೇ ವರ್ಷ ಜಿಂಬಾಬ್ವೆ ವಿರುದ್ಧ ಚೊಚ್ಚಲ ಟಿ20 ಪಂದ್ಯ ಆಡಿದ್ದರು. ಭಾರತದ ಪರ 3 ಏಕದಿನ ಮತ್ತು ಏಕೈಕ ಅಂತಾರಾಷ್ಟ್ರೀಯ ಟಿ20 ಪಂದ್ಯ ಆಡಿದ್ದಾರೆ. ಮೂರು ಪಂದ್ಯಗಳ ಎರಡು ಇನ್ನಿಂಗ್ಸ್‌ನಲ್ಲಿ 12 ರನ್ ಗಳಿಸಿದ್ದರಲ್ಲದೇ, ಒಂದು ವಿಕೆಟ್ ಕೂಡ ಪಡೆದಿದ್ದಾರೆ. ಟಿ20 ಪಂದ್ಯದಲ್ಲಿ ಒಂದು ರನ್ ಹಾಗೂ ಒಂದು ವಿಕೆಟ್ ಉರುಳಿಸಿದ್ದಾರೆ. ರಿಷಿ ಧವನ್ 2013ರಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಲು ಆರಂಭಿಸಿದ್ದರು. 2013ರಲ್ಲಿ ಮುಂಬೈ ಇಂಡಿಯನ್ಸ್ ಭಾಗವಾಗಿದ್ದು ನಂತರ 2014ರಿಂದ 2024ರವರೆಗೆ ಪಂಜಾಬ್ ಕಿಂಗ್ಸ್ ಅಂತಿಮವಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ಪರ ಆಡಿದ್ದರು.

ಪ್ಲೇಯರ್ ಆಫ್ ದಿ ಮಂತ್: ಬುಮ್ರಾ ನಾಮನಿರ್ದೇಶನ

ದುಬೈ: ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಅವರನ್ನು 2024ರ ಡಿಸೆಂಬರ್ ತಿಂಗಳ ಐಸಿಸಿ ಪ್ಲೇಯತ್ ಆಫ್ ದಿ ಮಂತ್ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ. ಇತ್ತೀಚೆಗೆ ಮುಕ್ತಾಯಗೊಂಡ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಬುಮ್ರಾ ಮೂರು ಟೆಸ್ಟ್‌ಗಳಿಂದ 14.22ರ ಸರಾಸರಿಯಲ್ಲಿ 22 ವಿಕೆಟ್ ಪಡೆದಿದ್ದರು. ಒಟ್ಟಾರೆ 5 ಟೆಸ್ಟ್‌ಗಳಿಂದ ಅವರು 32 ವಿಕೆಟ್ ಗಳಿಸಿದ್ದರು. ಪ್ರಶಸ್ತಿಗಾಗಿ ಬುಮ್ರಾ ಅವರೊಂದಿಗೆ ಸ್ಪರ್ಧೆ ಒಡ್ಡಿರುವ ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮಿನ್ಸ್ ಮೂರು ಟೆಸ್ಟ್‌ಗಳಿಂದ 17.64ರ ಸರಾಸರಿಯಲ್ಲಿ 17 ವಿಕೆಟ್ ಪಡೆದಿದ್ದಾರೆ.

ಆಟದ ಪ್ರದರ್ಶನ ಮಾನದಂಡವಾಗಲಿ: ಭಜ್ಜಿ

ದೆಹಲಿ: ಭಾರತ ತಂಡದಲ್ಲಿ ಸೂಪರ್ ಸ್ಟಾರ್ ಸಂಸ್ಕೃತಿಯನ್ನು ಕೊನೆಗೊಳಿಸಬೇಕು, ಮುಂದಿನ ಸರಣಿಗಳಿಗೆ ಆಟಗಾರರನ್ನು ಆಯ್ಕೆ ಮಾಡುವಾಗ ಆಟಗಾರರ ಜನಪ್ರಿಯತೆಗಿಂತ ಅವರು ತೋರುವ ಪ್ರದರ್ಶನವೇ ಮಾನದಂಡವಾಗಬೇಕು ಎಂದು ಭಾರತ ತಂಡದ ಮಾಜಿ ಸ್ಪಿನ್ನರ್ ಹರ್ಭಜನ್ ಸಿಂಗ್ ಭಾರತೀಯ ಕ್ರಿಕೆಟ್ ಮಂಡಳಿಯನ್ನು ಒತ್ತಾಯಿಸಿದ್ದಾರೆ. ಭಾರತ ತಂಡದಲ್ಲಿ ಸೂಪರ್‌ಸ್ಟಾರ್ ಸಂಸ್ಕೃತಿ ಹೆಚ್ಚಾಗುತ್ತಿದೆ. ತಂಡಕ್ಕೆ ಸೂಪರ್‌ಸ್ಟಾರ್‌ಗಳ ಅಗತ್ಯವಿಲ್ಲ, ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡುವ ಆಟಗಾರರ ಅಗತ್ಯವಿದೆ. ಅಂತಹ ಆಟಗಾರರಿಂದಷ್ಟೇ ಭಾರತ ತಂಡ ಯಶಸ್ವಿಯಾಗಿ ಮುನ್ನಡೆಯಬಲ್ಲದು ಎಂದರು.

ರಾಜ್ಯ ತಂಡಕ್ಕೆ ಪಡಿಕ್ಕಲ್, ಪ್ರಸಿದ್ಧ್ ಕೃಷ್ಣ ಸೇರ್ಪಡೆ

ವಿಜಯ್ ಹಜಾರೆ ಟ್ರೋಫಿ ನಾಕೌಟ್‌ಗೆ ರಾಜ್ಯ ಸಜ್ಜು

ಬೆಂಗಳೂರು: ವಡೋದರದಲ್ಲಿ ಜನವರಿ 9ರಿಂದ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ದೇಶೀಯ ಏಕದಿನ ಟೂರ್ನಿಯ ನಾಕೌಟ್ ಪಂದ್ಯಗಳಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ತಂಡವನ್ನು ಪ್ರಕಟಿಸಿದೆ. 16 ಆಟಗಾರರ ತಂಡದಲ್ಲಿ ಮೂರು ಬದಲಾವಣೆ ಮಾಡಲಾಗಿದ್ದು ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯನ್ನಾಡಿದ ಎಡಗೈ ಬ್ಯಾಟರ್ ದೇವದತ್ ಪಡಿಕ್ಕಲ್ ಹಾಗೂ ವೇಗಿ ಪ್ರಸಿದ್ಧ ಕೃಷ್ಣ ತಂಡಕ್ಕೆ ಮರಳಿದ್ದ ಕಾರಣ ಹೆಚ್ಚಿನ ಬಲ ಬಂದಂತಾಗಿದೆ.

ಲೀಗ್ ಹಂತದ ಪಂದ್ಯದಲ್ಲಿ ಗಾಯದ ಸಮಸ್ಯೆಗೆ ತುತ್ತಾಗಿರುವ ವೇಗಿ ವೈಶಾಕ್ ವಿಜಯ್ ಕುಮಾರ್ ಜತೆಗೆ ಕಿಶನ್ ಎಸ್. ಬಿದರೆ ಮತ್ತು ಆಲ್‌ರೌಂಡರ್ ಮನೋಜ್ ಭಾಂಡಗೆ ಅವರನ್ನು ನಾಕೌಟ್ ಪಂದ್ಯಗಳಿಂದ ಕೈ ಬಿಡಲಾಗಿದೆ. ಇವರ ಸ್ಥಾನದಲ್ಲಿ ಯುವ ಆಲ್‌ರೌಂಡರ್ ಯಶೋವರ್ಧನ್ ಪರಂತಪ್ ಅವರನ್ನು ತಂಡಕ್ಕೆ ಸೇರಿಸಲಾಗಿದೆ.

ಸಿ-ಗುಂಪಿನಲ್ಲಿ ಆಡಿರುವ ಮಯಾಂಕ್ ಅಗರ್ವಾಲ್ ಸಾರಥ್ಯದ ಕರ್ನಾಟಕ ಆಡಿದ 7 ಪಂದ್ಯಗಳಲ್ಲಿ 6 ಗೆಲುವಿನೊಂದಿಗೆ 24 ಅಂಕ ಸಂಪಾದಿಸಿ ಅಗ್ರಸ್ಥಾನಿಯಾಗಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತ್ತು. ಮಯಾಂಕ್ ಅಗರ್ವಾಲ್ ಉತ್ತಮ ಫಾರ್ಮ್‌ನಲ್ಲಿ ಇರುವುದು ರಾಜ್ಯ ತಂಡದ ಶ್ರೀರಕ್ಷೆಯಾಗಿದೆ. ಹಾಗೆಯೇ ಈ ಸಲ ರಾಜ್ಯ ತಂಡದ ಬೌಲರ್‌ಗಳೂ ಉತ್ತಮ ಯಶಸ್ಸನ್ನು ಕಂಡುಕೊಂಡಿದ್ದಾರೆ.



ನಾಕೌಟ್ ಪಂದ್ಯಗಳ ವೇಳಾಪಟ್ಟಿ

ಪ್ರಿ ಕ್ವಾರ್ಟರ್‌ಫೈನಲ್-1	ಹರಿಯಾಣ-ಬಂಗಾಳ	ಜನವರಿ: 9
ಪ್ರಿ ಕ್ವಾರ್ಟರ್‌ಫೈನಲ್-2	ರಾಜಸ್ಥಾನ-ತಮಿಳುನಾಡು	ಜನವರಿ: 9
ಕ್ವಾರ್ಟರ್‌ಫೈನಲ್ಸ್-1	ಕರ್ನಾಟಕ-ಬರೋಡ	ಜನವರಿ-11
ಕ್ವಾರ್ಟರ್ ಫೈನಲ್-2	ಮಹಾರಾಷ್ಟ್ರ-ಪಂಜಾಬ್	ಜನವರಿ-11

ಕರ್ನಾಟಕ ತಂಡ: ಮಯಾಂಕ್ ಅಗರ್ವಾಲ್ (ನಾಯಕ), ಶ್ರೇಯಸ್ ಗೋಪಾಲ್ (ಉಪ ನಾಯಕ), ನಿಕಿನ್ ಜೋಸ್, ದೇವದತ್ ಪಡಿಕ್ಕಲ್, ಅನೀಶ್ ಕೆ.ವಿ, ಸ್ಮರಣ್ ಆರ್, ಶ್ರೀಜಿತ್ ಕೆಎಲ್ (ಕೀಪರ್), ಅಭಿನವ್ ಮನೋಹರ್, ಹಾರ್ದಿಕ್ ರಾಜ್, ಪ್ರಸಿದ್ಧ ಕೃಷ್ಣ, ಕೌಶಿಕ್ ವಿ, ವಿದ್ಯಾಧರ್ ಪಾಟೀಲ್, ಅಭಿಲಾಷ್ ಶೆಟ್ಟಿ, ಪ್ರವೀಣ್ ದುಬೆ, ಲವನೀತ್ ಸಿಸೋಡಿಯಾ (ಕೀಪರ್) ಹಾಗೂ ಯಶೋವರ್ಧನ್ ಪರಂತಪ್.

ಚಾಂಪಿಯನ್ಸ್ ಟ್ರೋಫಿ-ಇಂಗ್ಲೆಂಡ್ ವಿರುದ್ಧದ ಸರಣಿಗೂ ಆಯ್ಕೆ

ಟೀಮ್ ಇಂಡಿಯಾ: ಬದಲಾವಣೆ ಸಾಧ್ಯತೆ

ದೆಹಲಿ: ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಭಾರತ ತಂಡವು ಇಂಗ್ಲೆಂಡ್ ವಿರುದ್ಧ 8 ಪಂದ್ಯಗಳ ಸರಣಿ ಆಡಲಿದೆ. ಈ ಸರಣಿಯಲ್ಲಿ 5 ಟಿ20 ಮತ್ತು 3 ಏಕದಿನ ಪಂದ್ಯಳನ್ನಾಡಲಿದೆ. ಚಾಂಪಿಯನ್ಸ್ ಟ್ರೋಫಿಗೆ ಆಯ್ಕೆಯಾಗಲಿರುವ ಆಟಗಾರರಿಗೆ ಟಿ20 ಸರಣಿ ವೇಳೆ ವಿಶ್ರಾಂತಿ ನೀಡಲು ಬಿಸಿಸಿಐ ನಿರ್ಧರಿಸಿದೆ. ಅದರಂತೆ ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಟೀಮ್ ಇಂಡಿಯಾದಲ್ಲಿ ಮಹತ್ವದ ಬದಲಾವಣೆ ಆಗಲಿದೆ.

ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಯು ಜನವರಿ 22ರಿಂದ ಆರಂಭವಾಗಲಿದ್ದು, ಮೊದಲಿಗೆ 5 ಪಂದ್ಯಗಳ ಟಿ20 ಸರಣಿ ನಡೆಯಲಿದೆ. ಇದಾದ ಬಳಿಕ ಮೂರು ಮ್ಯಾಚ್‌ಗಳ ಏಕದಿನ ಸರಣಿಯನ್ನು ಆಡಲಾಗುತ್ತದೆ. ಇಂಗ್ಲೆಂಡ್ ವಿರುದ್ಧದ ಸರಣಿಯ ವೇಳೆ ಜಸ್‌ಪ್ರೀತ್ ಬುಮ್ರಾಗೆ ಸಂಪೂರ್ಣ ವಿಶ್ರಾಂತಿ ನೀಡುವುದು ಖಚಿತವಾಗಿದೆ.

ಹಾಗೆಯೇ ಮೊಹಮ್ಮದ್ ಸಿರಾಜ್‌ಗೆ 5 ಪಂದ್ಯಗಳ ಟಿ20 ಸರಣಿ ವೇಳೆ ವಿಶ್ರಾಂತಿ ನೀಡುವ ಸಾಧ್ಯತೆ ಹೆಚ್ಚಿದೆ. ಆದರೆ ಫಾರ್ಮ್ ಕಳೆದುಕೊಂಡಿರುವ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಏಕದಿನ ಸರಣಿಯ 3 ಪಂದ್ಯಗಳಲ್ಲೂ ಕಾಣಿಸಿಕೊಳ್ಳಬಹುದು. ಏಕದಿನ ಸರಣಿ ವೇಳೆ ಮೊಹಮ್ಮದ್ ಸಿರಾಜ್ ಕೂಡ ತಂಡಕ್ಕೆ ಆಗಮಿಸಲಿದ್ದಾರೆ.

ಮೊಹಮ್ಮದ್ ಶಮಿಯನ್ನು ಫಿಟ್‌ನೆಸ್ ಟೆಸ್ಟ್ ಬಳಿಕ ಏಕದಿನ ತಂಡಕ್ಕೆ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಶ್ರೇಯಸ್ ಅಯ್ಯರ್ ಹಾಗೂ ಕೆ.ಎಲ್ ರಾಹುಲ್ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಕಾಣಿಸಿಕೊಳ್ಳುವುದು ಬಹುತೇಕ ನಿಶ್ಚಿತ. ಯಶಸ್ವಿ ಜೈಸ್ವಾಲ್‌ರನ್ನು ಭಾರತ ಏಕದಿನ ತಂಡದ ಹೆಚ್ಚುವರಿ ಆರಂಭಿಕನಾಗಿ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರನ್ನು ಏಕದಿನ ತಂಡಕ್ಕೆ ಪರಿಗಣಿಸಲು ಬಿಸಿಸಿಐ ಆಯ್ಕೆ ಸಮಿತಿ ಚರ್ಚಿಸಿದೆ.

ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಕಾಣಿಸಿಕೊಳ್ಳಲಿರುವ ಬಹುತೇಕ ಆಟಗಾರರು ಚಾಂಪಿಯನ್ಸ್ ಟ್ರೋಫಿಗೂ ಆಯ್ಕೆಯಾಗಲಿದ್ದಾರೆ. ಜನವರಿ 12ರಂದು ಚಾಂಪಿಯನ್ಸ್ ಟ್ರೋಫಿ ಮತ್ತು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡವನ್ನು ಘೋಷಿಸುವ ಸಾಧ್ಯತೆಯಿದೆ.

ಟಿ-20 ವೇಳಾಪಟ್ಟಿ

1ನೇ ಟಿ-20	ಜನವರಿ 22	ಚೆನ್ನೈ
2ನೇ ಟಿ-20	ಜನವರಿ 25	ಕೋಲ್ಕತ್ತಾ
3ನೇ ಟಿ-20	ಜನವರಿ 28	ರಾಜ್‌ಕೋಟ್
4ನೇ ಟಿ-20	ಜನವರಿ 31	ಪುಣೆ
5ನೇ ಟಿ-20	ಫೆಬ್ರವರಿ 2	ಮುಂಬೈ

ಮಲೇಷ್ಯಾ ಓಪನ್ ಪ್ರಿ ಕ್ವಾರ್ಟರ್‌ಗೆ ಟ್ರೀಸಾ-ಗಾಯತ್ರಿ

ಕೌಲಾಲಂಪುರ: ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಇಲ್ಲಿ ಮಂಗಳವಾರ ಆರಂಭವಾದ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಿ ಕ್ವಾರ್ಟರ್ ಪ್ರವೇಶಿಸಿದರು.

ಮಹಿಳೆಯರ ಡಬಲ್ಸ್‌ನ ಮೊದಲ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಭಾರತದ ಆಟಗಾರ್ತಿಯರು 21-10, 21-10ರಿಂದ ಥಾಯ್ಲೆಂಡ್‌ನ ಓರ್ನಿಚಾ ಜೋಂಗ್ಸಾತಪೋನ್ಪರ್ನ್ ನತ್ತಯ ಸುಕಿರ್ತ ಸುವಾಚೈ ಅವರನ್ನು ಸುಲಭವಾಗಿ ಸೋಲಿಸಿ ಮುಂದಿನ ಸುತ್ತು ಪ್ರವೇಶಿಸಿದರು. ಲಖನೌನಲ್ಲಿ ಕಳೆದ ತಿಂಗಳು ನಡೆದ ಸೈಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ಚಾಂಪಿಯನ್ ಆಗಿರುವ ಟ್ರೀಸಾ ಮತ್ತು ಗಾಯತ್ರಿ ಜೋಡಿಗೆ ಶ್ರೇಯಾಂಕ ರಹಿತ ಥಾಯ್ಲೆಂಡ್ ಆಟಗಾರ್ತಿಯರು ಯಾವುದೇ ಹಂತದಲ್ಲಿ ಪ್ರತಿರೋಧವನ್ನು ತೋರಲಿಲ್ಲ. ಹಾಗಾಗಿ ಕೇವಲ 30 ನಿಮಿಷದಲ್ಲಿ ಪಂದ್ಯ ಮುಕ್ತಾಯವಾಯಿತು. ಭಾರತದ ಪಾಂಡಾ ಸಹೋದರಿಯಾದ ಋತುಪರ್ಣ ಮತ್ತು ಶ್ವೇತಪರ್ಣರವರು ಇಂದು ಕಣಕ್ಕಿಳಿಯಲಿದ್ದಾರೆ.

ಟೆಸ್ಟ್ ಸರಣಿ ಕ್ಲೀನ್ ಸ್ವೀಪ್ ಮಾಡಿಕೊಂಡ ದ.ಆಫ್ರಿಕಾ | 2-0 ಅಂತರದ ಸೋಲು

ದ.ಆಫ್ರಿಕಾ ವಿರುದ್ಧ ಪಾಕ್‌ಗೆ ಮುಖಭಂಗ

ಕೇಪ್‌ಟೌನ್: ರಯಾನ್ ರಿಕೆಲ್ಟನ್ (259 ರನ್) ಅವರ ದ್ವಿಶತಕ ಹಾಗೂ ಕಗಿಸೊ ರಬಾಡ (6 ವಿಕೆಟ್) ಅವರ ಮಾರಕ ಬೌಲಿಂಗ್ ದಾಳಿಯ ಸಹಾಯದಿಂದ ದಕ್ಷಿಣ ಆಫ್ರಿಕಾ ತಂಡವು ಎರಡನೇ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ಪಡೆದಿದೆ. ಆ ಮೂಲಕ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು ಆತಿಥೇಯ ದಕ್ಷಿಣ ಆಫ್ರಿಕಾ ತಂಡ 2-0 ಅಂತರದಲ್ಲಿ ಕ್ಲೀನ್ ಸ್ವೀಪ್ ಮಾಡಿಕೊಂಡಿತು.

ಇಲ್ಲಿನ ನ್ಯೂಲ್ಯಾಂಡ್ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ 421 ರನ್‌ಗಳ ಹಿನ್ನಡೆ ಅನುಭವಿಸಿದ್ದ ಕಾರಣ ಪಾಕಿಸ್ತಾನ ತಂಡ ಫಾಲೋ ಆನ್‌ಗೆ ಗುರಿಯಾಯಿತು, ಬಳಿಕ ದ್ವಿತೀಯ ಇನಿಂಗ್ಸ್‌ನಲ್ಲಿ 478 ರನ್‌ಗಳಿಗೆ ಆಲ್‌ಔಟ್ ಆಗಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡಕ್ಕೆ 58 ರನ್ ಗುರಿಯನ್ನು ನೀಡಿತ್ತು. ದಕ್ಷಿಣ ಆಫ್ರಿಕಾ ತಂಡ ವಿಕೆಟ್ ನಷ್ಟವಿಲ್ಲದೆ 7.1 ಓವರ್‌ಗಳಿಗೆ 61 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಆ ಮೂಲಕ ಇನ್ನೂ ಒಂದು ದಿನ ಬಾಕಿ ಇರುವಾಗಲೇ ಆತಿಥೇಯರು ಸರಣಿಯನ್ನು ಗೆದ್ದುಕೊಂಡಿತು.

ದಕ್ಷಿಣ ಆಫ್ರಿಕಾ ಪರ ದ್ವಿತೀಯ ಇನಿಂಗ್ಸ್‌ನಲ್ಲಿ ಡೇವಿಡ್ ಬೆಡಿಂಗ್‌ಹ್ಯಾಮ್ 30 ಎಸೆತಗಳಲ್ಲಿ ಅಜೇಯ 44 ರನ್ ಗಳಿಸಿದರೆ, ಏಡೆನ್ ಮಾರ್ಕ್ರಮ್ ಅಜೇಯ 14 ರನ್ ಗಳಿಸಿದರು. ಪ್ರಥಮ ಇನಿಂಗ್ಸ್‌ನಲ್ಲಿ ದ್ವಿಶತಕ ಬಾರಿಸಿದ್ದ ರಯಾನ್ ರಿಕೆಲ್ಟನ್ (259 ರನ್) ಅವರು ಸ್ನಾಯು ಸೆಳೆತಕ್ಕೆ ತುತ್ತಾದ ಕಾರಣ ಅವರ ಬದಲು 2ನೇ ಇನಿಂಗ್ಸ್‌ನಲ್ಲಿ ಬೆಡಿಂಗ್‌ಹ್ಯಾಮ್ ಬ್ಯಾಟ್ ಮಾಡಿದ್ದರು.

ಶಾನ್ ಮಸೂದ್ ಏಕಾಂಗಿ ಹೋರಾಟ: ಪಾಕಿಸ್ತಾನ ತಂಡದ ನಾಯಕ ಶಾನ್ ಮಸೂದ್ ಅವರು ದ್ವಿತೀಯ ಇನಿಂಗ್ಸ್‌ನಲ್ಲಿ ಶತಕವನ್ನು ಸಿಡಿಸಿದರು. ಅವರು ಎದುರಿಸಿದ್ದ 251 ಎಸೆತಗಳಲ್ಲಿ 145 ರನ್‌ಗಳನ್ನು ಕಲೆ ಹಾಕುವ ಜೊತೆಗೆ ಬಾಬರ್ ಅಝಮ್ (81 ರನ್) ಅವರ ಜೊತೆ ಮುರಿಯದ ಮೊದಲನೇ ವಿಕೆಟ್‌ಗೆ 205 ರನ್ ಗಳಿಸಿದರು, ಆ ಮೂಲಕ ಪಾಕಿಸ್ತಾನ ತಂಡಕ್ಕೆ ಭರ್ಜರಿ ಆರಂಭವನ್ನು ತಂದುಕೊಟ್ಟಿದ್ದರು. ಆದರೆ ಎರಡನೇ ಹೊಸ ಚೆಂಡಿನಲ್ಲಿ ಡೆಬ್ಯೂಟಂಟ್ ಕ್ವೇನಾ ಎಂಫಾಕಗೆ ವಿಕೆಟ್ ಒಪ್ಪಿಸಿದರು. ಶಾನ್ ವಿಕೆಟ್ ಒಪ್ಪಿಸಿದ ಕೇವಲ ಮೂರು ಎಸೆತಗಳ ಅಂತರದಲ್ಲಿ ಸೌದ್ ಶಕೀಲ್ ಎರಡನೇ ಸ್ಲಿಪ್‌ನಲ್ಲಿ ಕ್ಯಾಚ್ ಕೊಟ್ಟರು.

ಮೊಹಮ್ಮದ್ ರಿಝ್ವಾನ್ (41) ಹಾಗೂ ಸಲ್ಮಾನ್ ಅಘಾ (48) ಅವರು ಆರನೇ ವಿಕೆಟ್‌ಗೆ 88 ರನ್‌ಗಳನ್ನು ಕಲೆ ಹಾಕಿದ್ದರು. ಆದರೆ, ಈ ಜೋಡಿ ಸಿಕ್ಕ ಉತ್ತಮ ಆರಂಭದಲ್ಲಿ ದೊಡ್ಡ ಮೊತ್ತ ಕಲೆ ಹಾಕುವಲ್ಲಿ ವಿಫಲವಾಯಿತು.

ವಿಟಾಕೀಸ್

ಟೀಸರ್‌ನಲ್ಲಿ ಅಪಾಯವಿದೆ ಎಚ್ಚರಿಕೆ

ಶೀರ್ಷಿಕೆಯ ಮೂಲಕವೇ ಗಮನಸೆಳೆದಿರುವ ಅಪಾಯವಿದೆ ಎಚ್ಚರಿಕೆ ಚಿತ್ರದ ಮೋಷನ್ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿತ್ತು. ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿತ್ತು. ಬಳಿಕ ಬ್ಯಾಚುಲರ್ ಬದುಕು.. ಸಾಂಗ್ ಬಿಡುಗಡೆಗೊಳಿಸಿದ ಚಿತ್ರತಂಡ ಎಲ್ಲಾ ಬ್ಯಾಚುಲರ್ಸ್ ಬದುಕಿನ ಬವಣೆಗಳ ನೈಜತೆಯನ್ನು ತೋರಿಸಿಕೊಟ್ಟಿತು. ಈಗ ಟೀಸರ್ ಬಿಡುಗಡೆ ಯಾಗಿದ್ದು ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದೆ. ತಾಂತ್ರಿಕವಾಗಿ, ಕ್ರಿಯಾತ್ಮಕ ವಾಗಿ ಟೀಸರ್ ಅದ್ಭುತ ಎನಿಸುತ್ತದೆ. ಇದೊಂದು ಸಸ್ಪೆನ್ಸ್, ಹಾರರ್, ಥ್ರಿಲ್ಲರ್ ಸಿನಿಮಾವಾಗಿದ್ದು, ಅಭಿಜಿತ್ ತೀರ್ಥಹಳ್ಳಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಚಿತ್ರದ ಬಹುತೇಕ ಭಾಗವನ್ನು ಕತ್ತಲೆಯ ಕಾಡಿನಲ್ಲಿ ಚಿತ್ರೀಕರಿಸಿರುವುದು ವಿಶೇಷವಾಗಿದೆ. ಚಿತ್ರದ ಮೇಕಿಂಗ್, ಮ್ಯೂಸಿಕ್, ಲೋಕೇಶನ್ ಎಲ್ಲವು ಗಮನಸೆಳೆಯುತ್ತಿದೆ. ವಿ.ಜಿ.ಮಂಜುನಾಥ್ ಮತ್ತು ಪೂರ್ಣಿಮಾ.ಎಂ.ಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ. ಸುನಾದ್ ಗೌತಮ್ ಸಂಗೀತದ ಜತೆಗೆ ಛಾಯಾಗ್ರಹಣ ಎರಡೂ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕಿರುತೆರೆ ಖ್ಯಾತಿಯ ವಿಕಾಸ್ ಉತ್ತಯ್ಯ ನಾಯಕನಾಗಿ ನಟಿಸಿದ್ದು, ರಾಧಾ ಭಗವತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಾಘವ್ ಕೊಡಚಾದ್ರಿ, ಮಿಥುನ್ ತೀರ್ಥಹಳ್ಳಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಪಾಯವಿದೆ ಎಚ್ಚರಿಕೆ ಅದ್ಭುತವಾಗಿ ಮೂಡಿಬಂದಿದ್ದು, ಫೆಬ್ರವರಿ 7 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಗೂಢಚಾರಿ ಜತೆಯಾದ ವಮಿಕಾ

ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗುತ್ತಿರುವ ಸ್ಪೈ ಥ್ರಿಲ್ಲರ್ ಗೂಢಚಾರಿ 2 ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಮೊದಲ ಭಾಗ ಭರ್ಜರಿ ಯಶಸ್ಸಿನ ಖುಷಿಯಲ್ಲಿ, ಅದರ ಸೀಕ್ವೆಲ್ ಆಧರಿಸಿ ಮುಂದಿನ ಭಾಗವೂ ಮೂಡಿಬರುತ್ತಿದೆ. ಅಡಿವಿ ಶೇಷ್ ನಾಯಕ ನಾಗಿ ನಟಿಸುತ್ತಿದ್ದು, ಈ ಭಾಗದಲ್ಲಿಯೂ ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಲಿದ್ದಾರೆ. ಈಗ ನಟಿ ವಮಿಕಾ ಗಬ್ಬಿ ಸಿನಿಮಾದ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಈಗಾಗಲೇ ಪಂಜಾಬಿ, ಬಾಲಿವುಡ್, ತೆಲುಗು, ತಮಿಳು ಮತ್ತು ಮಲಯಾಳಂ ಸಿನಿಮಾಗಳಲ್ಲಿ ನಟಿಸಿರುವ ವಮಿಕಾ ಗಬ್ಬಿ, ಗೂಢಚಾರಿ ಚಿತ್ರತಂಡ ಸೇರಿದ್ದಾರೆ. ನಾನು ಈ ಸಿನಿಮಾದ ಭಾಗವಾಗಲು ತುಂಬ ಉತ್ಸುಕಳಾಗಿದ್ದೇನೆ. ಮೊದಲ ಭಾಗ ದೊಡ್ಡ ಮಟ್ಟದಲ್ಲಿ ಯಶಸು ಕಂಡಿದೆ. ತನ್ನದೆ ಆದ ಬೆಂಚ್‌ಮಾರ್ಕ್ ಸೃಷ್ಟಿಸಿದೆ. ಈಗ ಇದೇ ಟೀಮ್‌ನ ಜತೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಪಾರ್ಟ್ 2 ಮೂಲಕ ಪ್ರೇಕ್ಷಕನಿಗೆ ಮತ್ತಷ್ಟು ಹೊಸದನ್ನು ನೀಡಲಿದ್ದೇವೆ ಎಂದು ವಮಿಕಾ ಸಂತಸ ಹಂಚಿಕೊಂಡಿದ್ದಾರೆ. ಸ್ಪೈ ಥ್ರಿಲ್ಲರ್ ಗೂಢಚಾರಿ 2 ಚಿತ್ರದಲ್ಲಿ ಬಾಲಿವುಡ್ ನಟ ಇಮ್ರಾನ್ ಹಶ್ಮಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಮುರಳಿ ಶರ್ಮಾ, ಸುಪ್ರಿಯಾ ಯರ್ಲಗಡ್ಡ ಮತ್ತು ಮಧು ಶಾಲಿನಿ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ವಿನಯ್ ಕುಮಾರ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಇದು ಹೈಬಜೆಟ್ ಸಿನಿಮಾವಾಗಿದ್ದು, ಪೀಪಲ್ ಮೀಡಿಯಾ ಫ್ಯಾಕ್ಟರಿ, ಅಭಿಷೇಕ್ ಅಗರ್ವಾಲ್ ಆರ್ಟ್ಸ್ ಮತ್ತು ಎಕೆ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಟಿ.ಜಿ.ವಿಶ್ವಪ್ರಸಾದ್ ಮತ್ತು ಅಭಿಷೇಕ್ ಅಗರ್ವಾಲ್ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ಪಂಚ ಭಾಷೆಗಳಲ್ಲಿ ಮೂಡಿಬರುತ್ತಿರುವ ಗೂಢಚಾರಿ 2 ಈ ವರ್ಷವೇ ತೆರೆಗೆ ಬರಲಿದೆ.

ಮಾಸಾಂತ್ಯಕ್ಕೆ ರಾವುತನ ಓಟ

ಗಂಡುಗಲಿ ಕುಮಾರರಾಮನ ಕಾಲದ ಸಾಮಾನ್ಯ ಜನರ ಮತ್ತು ಸಾಧಕರ ಕಥೆ ಹೊತ್ತ ರಾವುತ ತೆರೆಗೆ ಸಿದ್ಧವಾಗಿದೆ. ರಾವುತ ಬಲು ವಿಭಿನ್ನ ಕಥೆಯನ್ನು ಒಳಗೊಂಡಿದೆ. ಐತಿಹಾಸಿಕ ಸಿನಿಮಾಗಳು ಎಂದರೆ ಆ್ಯಕ್ಷನ್ ಡ್ರಾಮಾ ಕಥೆಯನ್ನು ಕಾಣಬಹುದು. ಆದರೆ, ಇಲ್ಲಿ ಭಿನ್ ಕಥೆಯಿದೆ. ಸಾವಿನ ನಂತರ ಏನಾಗುತ್ತದೆ ಎನ್ನುವುದನ್ನು ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ. ಸಂಪೂರ್ಣ ಉತ್ತರ ಕರ್ನಾಟಕ ಶೈಲಿಯ ಸಂಸ್ಕೃತಿಯ ದೃಶ್ಯ ಚಿತ್ರಣ ಈ ಚಿತ್ರದಲ್ಲಿ ಬೆರೆತಿದೆ. ಸಿದ್ದು ವಜ್ರಪ್ಪ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಶ್ರೀ ವಿಶ್ವಕರ್ಮ ಸಿನಿಮಾಸ್‌ನಲ್ಲಿ ನಿರ್ಮಾಪಕ ಈರಣ್ಣ ಶುಭಾಷ್ ಬಡಿಗೇರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರಾಜ್ ಪ್ರವೀಣ್ ನಾಯಕನಾಗಿ ನಟಿಸಿದ್ದು, ಭವಾನಿ ಪುರೋಹಿತ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಾವುತ ಚಿತ್ರದ ಟ್ರೇಲರ್ ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ. ನಿರ್ಮಾಪಕ ಜಾಕ್ ಮಂಜು, ಶಾಲಿನಿ ಆರ್ಟ್ಸ್ ಸಂಸ್ಥೆಯ ಮುಖಾಂತರ ಈ ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದಾರೆ. ಜನವರಿ 31 ರಂದು ರಾವುತ ರಾಜ್ಯಾದ್ಯಂತ ತೆರೆಗೆ ಬರಲಿದೆ.

ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ ಪ್ರಕಟ

ಕನ್ನಡ ಚಿತ್ರರಂಗದ ಪ್ರಥಮ ಪ್ರಚಾರಕರ್ತ ದಿವಂಗತ ಡಿ.ವಿ.ಸುಧೀಂದ್ರ ಅವರ ರಾಘವೇಂದ್ರ ಚಿತ್ರವಾಣಿ ಸಂಸ್ಥೆಗೆ ಇಪ್ಪತ್ತೈದು ವರ್ಷ ತುಂಬಿದ ಹಿನ್ನೆಲೆ ಯಲ್ಲಿ ನೀಡುವ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದೆ. ಖ್ಯಾತ ಹಿನ್ನೆಲೆ ಗಾಯಕರಿಗೆ ನೀಡುವ ಡಾ.ರಾಜ ಕುಮಾರ್ ಪ್ರಶಸ್ತಿ ಈ ಬಾರಿ ಗಾಯಕಿ ಅನುರಾಧಾ ಭಟ್‌ಗೆ ಒಲಿದಿದೆ. ಯಜಮಾನ ಚಿತ್ರದ ಖ್ಯಾತಿಯ ಆರ್. ಶೇಷಾದ್ರಿ ಸ್ಮರಣಾರ್ಥ ಅತ್ಯುತ್ತಮ ನಿರ್ದೇಶಕರಿಗೆ ನೀಡುವ ಪ್ರಶಸ್ತಿ ನಿರ್ದೇಶಕ ಓಂಪ್ರಕಾಶ್ ರಾವ್ ಅವರಿಗೆ ಸಂದಿದೆ. ಹಿರಿಯ ನಟಿಯರಿಗೆ ನಿಡುವ ಡಾ.ಜಯಮಾಲಾ, ಎಚ್.ಎಂ.ರಾಮಚಂದ್ರ ಪ್ರಶಸ್ತಿ ಯನ್ನು ರೇಖಾರಾವ್ ಅವರು ಪಡೆದುಕೊಂಡಿದ್ದಾರೆ.

ಇದೇ 26ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಗಾಯಕಿ **ಅನುರಾಧಾ ಭಟ್**



ನಿರ್ದೇಶಕ **ಓಂಪ್ರಕಾಶ್ ರಾವ್**

ಹಿರಿಯ ನಟಿ **ರೇಖಾರಾವ್**



ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ **ಮೀನಾಕ್ಷಿ ಕೆ.ವಿ.ಜಯರಾಂ** ಹಿರಿಯ ಚಲನಚಿತ್ರ ನಿರ್ಮಾಪಕರು



ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ **ಅರ್ಜುನ್ ಜನ್ಯ** ಕೃಷ್ಣಂ ಪ್ರಣಯ ಸಖಿ



ನಿರ್ದೇಶಕ-ನಿರ್ಮಾಪಕ ನಿರ್ಮಾಪಕ ಕೆ.ವಿ.ಜಯರಾಂ ಪ್ರಶಸ್ತಿ **ಜಯಶಂಕರ್ ಆರ್ಯರ್** ಶಿವಮ್ಮ



ಚಿತ್ರ ಸಾಹಿತಿ ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ ಪ್ರಶಸ್ತಿ **ಚಂದ್ರಜಿತ್ ಬೆಳ್ಳಿಯಪ್ಪ** ಇಬ್ಬನಿ ತಬ್ಬಿದ ಇಳೆಯಲಿ



ಚೊಚ್ಚಲ ಚಿತ್ರದ ನಿರ್ದೇಶನಕ್ಕಾಗಿ ಬಿ.ಸುರೇಶ ಪ್ರಶಸ್ತಿ **ಉತ್ಸವ್ ಗೋನ್ವಾರ್** ಫೋಟೋ